"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

15ನೇ ಸೆಪ್ಟೆಂಬರ್ 2021
ಬುಧವಾರ

## ವಿಷಯಾನುಕ್ರಮಣಿಕೆ (Index)


1. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ.**

**ಕಲ್ಯಾಣ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿನ 41 ವಿಧಾನಸಭಾ ಕ್ಷೇತ್ರಗಳ ಶೈಕ್ಷಣಿಕ, ಆರೋಗ್ಯ, ಸಾಮಾಜಿಕ, ಆರ್ಥಿಕ ಹಾಗೂ ಇನ್ನಿತರೆ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯದೆ ಆರ್ಟಿಕಲ್ 371(ಜೆ) ಸಂಪೂರ್ಣವಾಗಿ ಅನುಷ್ಠಾನವಾಗದಿರುವ ಬಗ್ಗೆ.**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

2. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**432 – ರಾಜ್ಯದ ವಸತಿ ಮನೆಗಳಿಗೆ ಬಿಲ್ ಆಗದೇ ಇರುವ ಕುರಿತು.**
- ಶ್ರೀ ಕೆ.ಟಿ.ತಿಪ್ಪೇಸ್ವಾಮಿ (ಶ್ರೀ ಹೆಚ್.ಎಂ.ರಮೇಶ್‌ಗೌಡ ಪರವಾಗಿ)
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**458– ಕಂದಾಯ ನಿವೇಶನಗಳನ್ನು ನೋಂದಾಯಿಸಲು ಅನುಮತಿ ನೀಡುವ ಬಗ್ಗೆ.**
- ಶ್ರೀ ಕಾಂತರಾಜ್ (ಬಿಎಂಎಲ್)
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**385- ಲೋಕೋಪಯೋಗಿ ಇಲಾಖಾ ಗುಣಮಟ್ಟ ಹಾಗೂ ಕಾಮಗಾರಿಗಳ ಕುರಿತು**
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**435- ಗ್ರಾಮ ಪಂಚಾಯಿತಿಗಳಲ್ಲಿ ಶವ ಸಂಸ್ಕಾರಕ್ಕೆ ಅಗತ್ಯ ಸ್ಮಶಾನಗಳ ಕುರಿತು**
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**409 – ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸುವ ಕುರಿತು**
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**416- ಪಶುಸಂಗೋಪನೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕುರಿತು**
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**418- ಗ್ರಾಮ ಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳ ಜೇಷ್ಟತಾ ಪಟ್ಟಿಯನ್ನು ಒಗ್ಗೂಡಿಸುವ ಬಗ್ಗೆ.**
- ಶ್ರೀ ನಸೀರ್ ಅಹ್ಮದ್
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**463- ತಾಳಗುಪ್ಪ-ಹೊನ್ನಾವರ ರೈಲ್ವೆ ಮಾರ್ಗ ಜೋಡಣೆ ಪ್ರಸ್ತಾವನೆ ಕುರಿತು**
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**443- ಬೀದರ್ ಜಿಲ್ಲೆಯ ಇನಾಮ್ ಜಮೀನನ್ನು ಕೃಷಿಯೇತರ ಜಮೀನಾಗಿ (NA) ಮಾಡಿರುವ ಬಗ್ಗೆ**
- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**478- ರಾಜ್ಯದಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಬಗ್ಗೆ**
- ಶ್ರೀ ಎಸ್.ರವಿ
- ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**386- ಬೀದರ್ ಜಿಲ್ಲೆಯ ಪಶು ವಿಶ್ವವಿದ್ಯಾನಿಲಯ ಸಿಬ್ಬಂದಿಗಳ ಬಗ್ಗೆ**
- ಶ್ರೀ ವಿಜಯ ಸಿಂಗ್
- ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**3. ಪ್ರಕಟಣೆ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ತಜ್ಞ ವೈದ್ಯಾಧಿಕಾರಿ ಮತ್ತು ಸಾಮಾನ್ಯ ತಜ್ಞ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಇನ್ನಷ್ಟು ಕಾಲಾವಕಾಶ ನೀಡುವ ಬಗ್ಗೆ.**

- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ಕಳೆದ 2-3 ದಿನಗಳ ಹಿಂದೆ ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ವೈರಲ್ ಆಗಿರುವ ಬಗ್ಗೆ.**

- ಶ್ರೀ ಅರವಿಂದ ಕುಮಾರ ಅರಳಿ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಇ) ನೇಕಾರರ ಸಮೀಕ್ಷೆ ಹಾಗೂ ಪ್ರತ್ಯೇಕ ನೇಕಾರರ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತು**

- ಶ್ರೀ ಕೆ.ಸಿ. ಕೊಂಡಯ್ಯ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಈ) ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಒಂದೇ ಸಮುದಾಯದ 70 ಮಂದಿ ಆಯ್ಕೆಯಾಗಿರುವ ಬಗ್ಗೆ.**

- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಉ) ಗುಂಡ್ಲುಪೇಟೆ ತಾಲ್ಲೂಕು ಕಗ್ಗಳದ ಹುಂಡಿ ಗ್ರಾಮದಲ್ಲಿ ಸಂಸ್ಕರಿತ ಸುಗಂಧ ದ್ರವ್ಯ ಉತ್ಪಾದನಾ ಕಾರ್ಖಾನೆಯಿಂದ ಹೊರಹೊಮ್ಮುತ್ತಿರುವ ರಾಸಾಯನಿಕ ಯುಕ್ತ ದುರ್ವಾಸನೆಯಿಂದ ಗ್ರಾಮಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ.**

- ಶ್ರೀ ಸಂದೇಶ್ ನಾಗರಾಜು
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಊ) ಕೆ.ಪಿ.ಎಸ್.ಸಿ.ಗೆ ವಿಶೇಷ ಕಾಯಕಲ್ಪ ನೀಡುವ ಬಗ್ಗೆ.**

- ಶ್ರೀ ಯು.ಬಿ. ವೆಂಕಟೇಶ್
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಋ) ಮಂಡ್ಯ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ನೀಡದೇ ಇರುವ ಕುರಿತು.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಎ) ರಾಜ್ಯದ 34 ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೆ ವೇತನ ಬಿಡುಗಡೆಯಾಗದಿರುವ ಬಗ್ಗೆ.**

- ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ
- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಏ) ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು.**

- ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ವಿ.ಸೋಮಣ್ಣ (ವಸತಿ ಸಚಿವರು)

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿನ ಜಾನುವಾರುಗಳು ನಿಗೂಢವಾಗಿ ಸಾವನ್ನಪ್ಪುತ್ತಿರುವ ಕುರಿತು.**

- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ಬೆಳಗಾವಿ ಜಿಲ್ಲೆಯ ಹಿರೆಬಾಗೇವಾಡಿ ಗ್ರಾಮ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ಟೋಲ್ ಮತ್ತು ಕಾಮಗಾರಿಯ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ಮಾಡಿರುವ ಬಗ್ಗೆ.**

- ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

**6. ವರದಿಯನ್ನೊಪ್ಪಿಸುವುದು**

**7. ಅರ್ಜಿಗಳನ್ನೊಪ್ಪಿಸುವುದು**

**8. ಚುನಾವಣಾ ಪ್ರಸ್ತಾವಗಳು**

**9. <u>ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ</u>**

**ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು**

- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)
- ಶ್ರೀಕೆ.ಎ.ತಿಪ್ಪೇಸ್ವಾಮಿ
- ಶ್ರೀ ಆರ್.ಬಿ. ತಿಮ್ಮಾಪೂರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಪ್ರಕಾಶ್ ಕೆ. ರಾಥೋಡ್
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಚಿದಾನಂದ್ ಎಂ. ಗೌಡ

**10. ಗಮನ ಸೆಳೆಯುವ ಸೂಚನೆ**

**ಅ) ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ಶಿಕ್ಷಕರು/ಸಿಬ್ಬಂದಿಗಳಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಒದಗಿಸಲು ವಿಧೇಯಕಕ್ಕೆ ತಿದ್ದುಪಡಿ ತರಲು ಹಾಗೂ ವಿಲೀನಗೊಳಪಟ್ಟು ಆದೇಶವಾಗದಿರುವ 28 ಬೋಧಕೇತರ ಸಿಬ್ಬಂದಿ ಮತ್ತು 11 ಜನ ಉಪನ್ಯಾಸಕರಿಗೆ ವಿಲೀನಾತಿ ಆದೇಶ ಹೊರಡಿಸುವುದರ ಜೊತೆಗೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಂಡ 90 ಉಪನ್ಯಾಸಕರಿಗೆ ಬಿ.ಎಡ್., ವಿನಾಯಿತಿ ನೀಡಿ ಖಾಯಂ ಪೂರ್ವ ಅವಧಿ ಘೋಷಣೆ ಮಾಡಿ ಸರ್ಕಾರಿ ಸೌಲಭ್ಯ ಒದಗಿಸುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)
- ಶ್ರೀ ಅರುಣ ಶಹಾಪುರ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಸ್.ವಿ. ಸಂಕನೂರ
- ಶ್ರೀ ಕೆ.ಟಿ.ಶ್ರೀ ಕಂಠೇಗೌಡ
- ಶ್ರೀ ಚಿದಾನಂದ್ ಎಂ.ಗೌಡ

**ಆ) ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್, ಅಧ್ಯಕ್ಷರ/ಉಪಾಧ್ಯಕ್ಷರ ಚುನಾವಣೆ ನಡೆಸುವ ಕುರಿತು.**

- ಶ್ರೀ ಕೆ.ಸಿ. ಕೊಂಡಯ್ಯ
- ಶ್ರೀ ಬಿ.ಎ. ಬಸವರಾಜ(ನಗರಾಭಿವೃದ್ಧಿ ಸಚಿವರು)
- ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಅಲ್ಲಂ ವೀರಭದ್ರಪ್ಪ
- ಶ್ರೀ ಬಿ.ಕೆ.ಹರಿಪ್ರಸಾದ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ಅ) ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಹಾಗೂ ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಬಡ್ತಿ ಹೊಂದಿದ ಉಪನ್ಯಾಸಕರಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಬಡ್ತಿ ಪಡೆಯದೆ ಇರುವ ಉಪನ್ಯಾಸಕರಿಗೆ 10, 15, 20, 25 ವರ್ಷಗಳ ಕಾಲಮಿತಿ ಬಡ್ತಿ ಮಂಜೂರು ಮಾಡದೇ ಇರುವ ಕುರಿತು.**

- ಶ್ರೀ ಶಶೀಲ್ ಜಿ. ನಮೋಶಿ
- ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

(ಚರ್ಚೆಯನ್ನು ಮರುದಿನಕ್ಕೆ ಮುಂದೂಡಲಾಯಿತು)

**ಆ) ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳ ಗೌರವಧನವು ಅತ್ಯಂತ ಕಡಿಮೆ ಇರುವುದರಿಂದ ಸದರಿಯವರುಗಳ ಗೌರವಧನವನ್ನು ಪರಿಷ್ಕರಿಸಿ ನಿಗದಿಪಡಿಸುವುದರ ಜೊತೆಗೆ ಉಚಿತ ಬಸ್‌ಪಾಸ್ ಹಾಗೂ ಪಿಂಚಣಿ ಸೌಲಭ್ಯವನ್ನು ನೀಡುವುದರ ಕುರಿತು.**

- ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಸಿ.ಕೊಂಡಯ್ಯ
- ಡಾ: ತೇಜಸ್ವಿನಿ ಗೌಡ
- ಶ್ರೀ ಅಲ್ಲಂ ವೀರಭದ್ರಪ್ಪ

**<><><>**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

683/15-09-2021/10-30/bkp-ak

**ಕರ್ನಾಟಕ ವಿಧಾನ ಪರಿಷತ್ತು**

## ಬುಧವಾರ, 15ನೇ ಸೆಪ್ಟೆಂಬರ್ 2021

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ ( ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1. ನಿಯಮ 59ರ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ ಪ್ರಸ್ತಾವ**

**ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿನ 41 ವಿಧಾನಸಭಾ ಕ್ಷೇತ್ರಗಳ ಶೈಕ್ಷಣಿಕ, ಆರೋಗ್ಯ, ಸಾಮಾಜಿಕ, ಆರ್ಥಿಕ ಹಾಗೂ ಇನ್ನಿತರೆ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯದೆ ಆರ್ಟಿಕಲ್ 371(ಜೆ) ಸಂಪೂರ್ಣವಾಗಿ ಅನುಷ್ಠಾನವಾಗದಿರುವ ಬಗ್ಗೆ.**

--- - - -- - -

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದ 41 ವಿಧಾನಸಭಾ ಕ್ಷೇತ್ರದ ಶೈಕ್ಷಣಿಕ, ಆರೋಗ್ಯ, ಸಾಮಾಜಿಕ, ಆರ್ಥಿಕ ಇನ್ನೀತರೆ ಅಭಿವೃದ್ಧಿ ಕಾರ್ಯಗಳು ಸೂಕ್ತವಾಗಿ ನಡೆಯದೇ ಆರ್ಟಿಕಲ್ 371(ಜೆ) ಸಂಪೂರ್ಣವಾಗಿ ಅನುಷ್ಠಾನವಾಗಿರುವುದಿಲ್ಲ. ಸಾರ್ವಜನಿಕವಾಗಿ ಇದು ಅತ್ಯಂತ ಮಹತ್ವವಾಗಿರುವುದರಿಂದ ಮತ್ತು ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಬದುಕಿನ ಪ್ರಶ್ನೆ ಇರುವುದರಿಂದ ಆರ್ಟಿಕಲ್ 371(ಜೆ) ಅಕ್ಷರಶಃ ಪಾಲನೆಯಾಗಬೇಕಾಗಿರುವುದು ಅವಶ್ಯಕತೆ ಇರುವುದರಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 59 ರಡಿಯಲ್ಲಿ ಚರ್ಚಿಸಲು ಒಂದು ನಿಲುವಳಿ ಸೂಚನೆಯನ್ನು ತಮ್ಮ ಅವಗಾಹನೆಗಾಗಿ ತಂದಿದ್ದೇವೆ. ಆದ್ದರಿಂದ, ಇತರೆ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದು ಸಾರ್ವಜನಿಕವಾಗಿ ಬಹಳ ಮಹತ್ವದ ವಿಷಯವಾಗಿರುವುದರಿಂದ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಶ್ರೀಯುತ ಪಾಟೀಲ್ ರವರೆ, ಈ ವಿಚಾರವನ್ನು ನಿಯಮ 59ರಡಿಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಬದಲಾಗಿ ನಿಯಮ 68ರಡಿಯಲ್ಲಿ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಮುಂದು...**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(684) 15.09.2021 10.40 ಎಸ್‌ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 432**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಶ್ರೀ ಹೆಚ್.ಎಂ.ರಮೇಶ್‌ಗೌಡ ಪರವಾಗಿ):-** ಮಾನ್ಯ ಸಭಾಪತಿಯವರೇ, ಸುದೀರ್ಘವಾದ ಉತ್ತರವನ್ನು ಒದಗಿಸಲಾಗಿದೆ. 2018-19, 2019-20, 2020-21ರ ಅವಧಿಯಲ್ಲಿ ಹಲವಾರು ವಸತಿ ಯೋಜನೆಗಳಡಿಯಲ್ಲಿ ಮಂಜೂರಾಗಿರತಕ್ಕಂತಹ ಮನೆಗಳು ಸಾಕಷ್ಟು ರೀತಿಯಿಂದ ನೆನೆಗುದಿಗೆ ಬಿದ್ದಿದೆ. ಅದು ತಾಂತ್ರಿಕ ದೋಷ ಇರಬಹುದು, ಅನುದಾನ ಬಿಡುಗಡೆ ಇರಬಹುದು. ಇದಲ್ಲದೆ ಸರ್ಕಾರ ಕೊಡಬೇಕಾದ ಅನುದಾನ ಬಿಡುಗಡೆಯಾಗದಿರುವುದರಿಂದ ವಸತಿ ಯೋಜನೆಗಳು ವಿವಿಧ ಹಂತಗಳಲ್ಲಿವೆ. ಅನುದಾನ ಕೇಂದ್ರ ಸರ್ಕಾರದಿಂದ ಬರಬೇಕಾಗಿರಬಹುದು ಅಥವಾ ರಾಜ್ಯಸರ್ಕಾರದಿಂದ ಬರಬೇಕಾಗಿರಬಹುದು. ಇವುಗಳಿಗೆ ಸಂಬಂಧಪಟ್ಟಂತೆ ಫಲಾನುಭವಿಗಳಿಗೆ ಬಿಡುಗಡೆ ಮಾಡಬೇಕಾಗಿರುವ ಸಹಾಯಧನ ಮತ್ತು ತಾಂತ್ರಿಕ ಕೊರತೆಯನ್ನು ನಿವಾರಣೆ ಮಾಡುವಲ್ಲಿ ಸರ್ಕಾರ ಫಲಾನುಭವಿಗಳಿಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತಿದೆ, ಯಾರ ಮುಖೇನ ಸಹಾಯ ಮಾಡುತ್ತಿದೆ ಎನ್ನುವುದನ್ನು ಮಾನ್ಯ ವಸತಿ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಹಿರಿಯರಾದ ಮಾನ್ಯ ತಿಪ್ಪೇಸ್ವಾಮಿಯವರು ಹೇಳಿರುವ ವಿಚಾರಗಳನ್ನು ನಾವು ಕೂಲಂಕಷವಾಗಿ ಪರಿಶೀಲನೆ ಮಾಡಿ ಮನೆಗಳ ಫಲಾನುಭವಿಗಳ ಆಯ್ಕೆ ಪಟ್ಟಿಯಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅವಶ್ಯಕತೆ ಇರುವವರಿಗೆ ಮಾತ್ರ ಮನೆಗಳನ್ನು ಕೊಡುವಂತಹ ನಿಬಂಧನೆಯನ್ನು ಮಾಡಿದ್ದೇವೆ. ಅದಕ್ಕೆ ನಾವು ಜಾಹೀರಾತು ಮುಂತಾದವುಗಳನ್ನು ಮಾಡಿದ್ದರೂ ಸಹ ನಮಗೆ ತಾಂತ್ರಿಕವಾಗಿ ಬಂದದ್ದು ಸುಮಾರು 6

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ಮನೆಗಳು ಮಾತ್ರ. ಆರು ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದರೂ ಸಹ ಸುಮಾರು ನ್ಯೂನತೆಗಳಿದ್ದ ಕಾರಣ ಗ್ರಾಮೀಣ ಪ್ರದೇಶಗಳಲ್ಲಿ 6 ಲಕ್ಷ ಮನೆಯನ್ನು ನಿರ್ಮಾಣ ಮಾಡುವ ತೀರ್ಮಾನ ತೆಗೆದುಕೊಂಡು ಒಟ್ಟು 9 ಲಕ್ಷ 24 ಸಾವಿರ ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹೊಂದಿದ್ದೇವೆ. ಕೆಲವು ಕಡೆ ಫಲಾನುಭವಿಗಳ ಆಯ್ಕೆಯಲ್ಲಿ ಅಧಿಕಾರಿಗಳು ಮಾಡಿರುವ ಲೋಪಗಳ ಬಗ್ಗೆ ಇಲ್ಲಿ ಈಗಾಗಲೇ ಚರ್ಚೆಯಾಗಿದೆ. ಫಲಾನುಭವಿಗಳ ಆಯ್ಕೆ ಮಾಡುವುದಕ್ಕೆ ಜಿಪಿಎಸ್ ಇಲ್ಲದಿದ್ದ ಕಡೆ Vigil App ಮಾಡಿದ್ದೇವೆ. ನಂತರ geo-tagging ಮಾಡಿ ಪ್ರತಿಯೊಂದು ಮನೆಯಲ್ಲಿ ಒಂದು ಸೈಟ್ ಇದ್ದರೆ ಒಂದೇ ಬಾರಿ ಹಣವನ್ನು ಪಡೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಹತ್ತಾರು ಬಾರಿ ಹಣ ತೆಗೆದುಕೊಂಡಿರುವುದನ್ನು ಈ ಹಿಂದೆ ನಾವು ನೋಡಿದ್ದು, ಅದರಿಂದ ಇಂತಹ ಅನೇಕ ಲೋಪಗಳ ಬಗ್ಗೆ ನಾನು ಈ ಸದನದಲ್ಲಿ ಈಗ ಚರ್ಚಿಸಲು ಹೋಗುವುದಿಲ್ಲ. ಅದನ್ನು ಪುನರಾವರ್ತನೆ ಮಾಡುವ ಅವಶ್ಯಕತೆ ಇಲ್ಲ ಎನ್ನುವ ದೃಷ್ಟಿಯಿಂದ ನಾವು ಈಗಾಗಲೇ 2,53,000 ಮನೆಗಳನ್ನು ಪೂರ್ಣಗೊಳಿಸಿದ್ದೇವೆ. 2019-20ರಿಂದ 2020-21ರವರೆಗೆ ರೂ.4,433 ಕೋಟಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. 2018-19ರವರೆಗೆ ರೂ.5,300 ಕೋಟಿ ರೂಪಾಯಿಗಳನ್ನು ಕೂಡ ಅಂದಿನ ಸರ್ಕಾರ ಬಿಡುಗಡೆ ಮಾಡಿತ್ತು. ಒಟ್ಟಾರೆಯಾಗಿ ಹಿಂದಿನ ಒಂದು ವರ್ಷ ಮತ್ತು ನಮ್ಮ ಸರ್ಕಾರ ಬಂದ ಮೇಲೆ ಎರಡು ವರ್ಷಗಳಲ್ಲಿ ರೂ.9,734 ಕೋಟಿಗಳನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಇಂದಿರಾ ಯೋಜನೆ ಮಾದರಿಯ ಗ್ರಾಮಾಂತರ ಪ್ರದೇಶಗಳ ವಸತಿ ಯೋಜನೆಗಳಿಗೆ ರೂ.6,289 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಗರ ಪ್ರದೇಶಗಳಿಗೆ ರೂ.3,445 ಕೋಟಿಗಳನ್ನೊಳಗೊಂಡಂತೆ ಒಟ್ಟಾರೆಯಾಗಿ ರೂ.9,734 ಕೋಟಿಗಳನ್ನು ಬಿಡುಗಡೆ ಮಾಡಿದ್ದೇವೆ. 2,53,000 ಮನೆಗಳನ್ನು ನಮ್ಮ ಸರ್ಕಾರವು ಪೂರ್ಣಗಳಿಸಿರುತ್ತದೆ. ಹಿಂದೆ ಮಾಡಿರುವಂತಹ ಯೋಜನೆಗಳಿಗೂ ಸಹ ನಾವು ಹಣವನ್ನು ಕೊಟ್ಟಿದ್ದೇವೆ.

ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಮಾಹಿತಿಯನ್ನು ನಾನು ಒದಗಿಸಿದ್ದೇನೆ. ತಾಲ್ಲೂಕು ಕೇಂದ್ರಗಳಾಗಿರಬಹುದು, ಜಿಲ್ಲಾ ಕೇಂದ್ರಗಳಾಗಿರಬಹುದು, ಯಾವುದಕ್ಕೆ ಎಷ್ಟು ಕೊಟ್ಟಿದ್ದೇವೆ, ನಗರ ಪ್ರದೇಶಗಳಿಗೆ ಎಷ್ಟು ಕೊಟ್ಟಿದ್ದೇವೆ, ಯಾವ ಉದ್ದೇಶಕ್ಕಾಗಿ ಕೊಡಲಾಗಿದೆ ಎಲ್ಲವನ್ನೂ ಕೂಡ ಅನುಬಂಧದಲ್ಲಿ ಇಡಲಾಗಿದೆ.

ಮಂತ್ರಿಯಾಗಿ ನಾನು ಏನೆಲ್ಲಾ ಮಾಡಿದ್ದೇನೆಂಬ ದುರಹಂಕಾರದ ಮಾತನ್ನಾಡಲಿಕ್ಕೆ ನಾನು ತಯಾರಾಗಿಲ್ಲ. ಯಾರು ಬಹಳ ವರ್ಷಗಳಿಂದ ಅನಾನುಕೂಲದಲ್ಲಿದ್ದರೋ, ಯಾರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ needy ಇದ್ದಾರೆಯೋ ಹಾಗೂ ಹತ್ತಿಪ್ಪತ್ತು ಬಾರಿ ಆಗಿರುವಂತಹ ಅನೇಕ ಘಟನಾವಳಿಗಳು ಪುನರಾವರ್ತನೆಯಾಗದಂತೆ ನಾವು ಮಾಡಿದ್ದೇವೆ. Geo-tag ಅನ್ನು ಮಾಡಿದ ಮೇಲೆ latitude and lonitude ಅನ್ನು ತೆಗೆದರೆ ಗ್ರಾಮದ ಹೆಸರು, ಪಂಚಾಯ್ತಿಯ ಹೆಸರಿನ ಜೊತೆಗೆ ಎಲ್ಲಿ ಮನೆ ಕಟ್ಟುತ್ತಿದ್ದಾರೆ ಎನ್ನುವುದೂ ಬರುತ್ತದೆ. ಇದನ್ನು 10 ವರ್ಷಗಳ ಹಿಂದೆಯೇ ಅಳವಡಿಸಿದ್ದರೆ ರಾಜ್ಯದಲ್ಲಿ ಮನೆಗಳ ಅವ್ಯವಸ್ಥೆಯಾಗುತ್ತಿರಲಿಲ್ಲ. ನಮ್ಮ ಅಧಿಕಾರಿಗಳ ಬುದ್ಧಿವಂತಿಕೆಯಿಂದಾಗಿ ಇದರಲ್ಲಿ ಪಾರದರ್ಶಕತೆಯನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಹಿಂದೆ ನಿಂತು ಹೋಗಿದ್ದ ಕಾಮಗಾರಿಗಳ ಕುರಿತು ಸಾಕಷ್ಟು ಮಾಹಿತಿಯನ್ನು ನಾನು ಕೊಡಬಹುದು. ಅವುಗಳ ಅವಶ್ಯಕತೆ ಇಲ್ಲ. ಯಾರು ಫಲಾನುಭವಿಗಳಿದ್ದಾರೆಯೋ ಅವರ ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಸ್ತಾರವಾದ ಮಾಹಿತಿಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಕೆಲವೊಂದು ಸಮಸ್ಯೆಗಳನ್ನು ನಿವಾರಣೆ ಮಾಡುವಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ಪ್ರಮುಖವಾದ ಕ್ರಮಗಳನ್ನು ಕೈಗೊಂಡಿದೆ. ಈ ಹಿಂದೆ ಫಲಾನುಭವಿಗಳು ಆಯ್ಕೆಯಾಗಿದ್ದಾರೆ. ಅದು ತಪ್ಪೋ ಸರಿಯೋ ಗೊತ್ತಿಲ್ಲ. ಕೆಲವರು ಪಾಯವನ್ನು ತೆಗೆದಿದ್ದಾರೆ. ಅವರ ಹೆಸರು ಈಗ ಕೈಬಿಟ್ಟು ಹೋಗಿದೆ. ಅವರನ್ನು ಬೇರೆ ಬೇರೆ ರೀತಿಯಲ್ಲಿ ಅಂದರೆ ಕಾರ್ಯಕ್ರಮಗಳಡಿಯಲ್ಲಿ ಏನಾದರೂ ಜೋಡಿಸಲಾಗುತ್ತದೆಯೇ?

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿಯವರು ನನ್ನನ್ನೂ ಸೇರಿ ಎಲ್ಲರಿಗೂ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಹೇಳಿಕೊಟ್ಟವರು. ಉಪ ಸಮಿತಿಯನ್ನು ಮಾಡಿ 1,96,000 ಕುಟುಂಬಗಳನ್ನು ಗುರುತಿಸಿದ್ದೇವೆ. 20 ವರ್ಷಗಳ ಹಿಂದೆ foundation ಹಾಕಿದ್ದೇವೆಂದು ಹೇಳುತ್ತಾರೆ. ಅಲ್ಲಿ ಪರಿಶೀಲನೆ ಮಾಡಿದರೆ ನಾಲ್ಕು ಬಾರಿ ಅಲ್ಲಿ ಬಿಲ್ ಆಗಿರುತ್ತದೆ. ಇನ್ನು ಮುಂದೆ ಈ ರೀತಿಯಾಗಬಾರದು ಕಠಿಣವಾದ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ತಿಪ್ಪೇಸ್ವಾಮಿಯವರಲ್ಲಿ ವಿನಂತಿ ಮಾಡುತ್ತೇನೆ. ಆಗಿರುವ ತಪ್ಪುಗಳನ್ನು ತಿದ್ದಲು ಹೊರಟರೆ ಪುನಃ ತಪ್ಪುಗಳಾಗುತ್ತಲೇ ಇರುತ್ತವೆ. ಬಡವರ ಹೆಸರಿನಲ್ಲಿ ಸ್ವಲ್ಪ ಮಟ್ಟಿಗೆ ಪಾರದರ್ಶಕತೆಯನ್ನು ತರುವಂತಹ ಕೆಲಸವನ್ನು ಮಾಡಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ಸಹಕಾರವನ್ನು ನೀಡಬೇಕು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರು ಅರ್ಹ ಫಲಾನುಭವಿಗಳಿಗೆ 4 ಲಕ್ಷ ಮನೆಗಳನ್ನು ಕೊಡಲು ತೀರ್ಮಾನಿಸಿದ್ದಾರೆ. ಆಯಾ ಕ್ಷೇತ್ರದ ಜನಪ್ರತಿನಿಧಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯ್ತಿಗಳ ಜೊತೆಯಲ್ಲಿ ಸಂಪರ್ಕ ಮಾಡಿ ಫಲಾನುಭವಿಗಳ ಹೆಸರುಗಳನ್ನು ಕಳುಹಿಸಿಕೊಟ್ಟರೆ ಅವಶ್ಯಕತೆ ಇರುವವರನ್ನು ಪರಿಗಣಿಸಲಾಗುವುದು.

**ಪ್ರಶ್ನೆ ಸಂಖ್ಯೆ: 478**

**ಸಭಾಪತಿಯವರು:** ಮುಂದಿನ ಪ್ರಶ್ನೆ ಮಾನ್ಯ ಎಸ್.ರವಿಯವರದ್ದು. ಅವರು ಈಗ ಸದನದಲ್ಲಿ ಹಾಜರಿರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 458**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜು (ಬಿ.ಎಂ.ಎಲ್:-** ಮಾನ್ಯ ಸಭಾಪತಿಯವರೇ, ನಾನು ನಿವೇಶನಗಳ ರಿಜಿಸ್ಟ್ರೇಷನ್ ಬಗ್ಗೆ ಕಂದಾಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆನು. ಉತ್ತರದಲ್ಲಿ ಮಾನ್ಯ ಸಚಿವರು ಇ-ಖಾತಾ ಇರುವವರಿಗೆ ರಿಜಿಸ್ಟರ್ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ತಿಳಿಸಿದ್ದಾರೆ. ಗ್ರಾಮಠಾಣಾಕ್ಕೆ ಯಾರೂ ಇ-ಖಾತಾ ಕೊಡುವುದಿಲ್ಲ. 8-10 ವರ್ಷಗಳ ಹಿಂದೆ ಮಾಡಲಾದಂತಹ ರೆವಿನ್ಯೂ ನಿವೇಶನಗಳಿಗೆ ಇ-ಖಾತಾ ಕೊಡುತ್ತಿಲ್ಲ. ಸರ್ಕಾರಿ ಶುಲ್ಕವನ್ನು ಕಟ್ಟಿ ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದಾರೆ. ಅದಕ್ಕೂ ಇ-ಖಾತಾ ಕೊಡುತ್ತಿಲ್ಲ. ಅಣ್ಣ ತಮ್ಮಂದಿರು ಆಸ್ತಿಗಳನ್ನು ಭಾಗ ಮಾಡಿಕೊಂಡಿರುವವರಿಗೆ ಇ – ಖಾತಾ ಸಿಗುವುದಿಲ್ಲ ಹಾಗೂ ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟರ್ ಮಾಡುವುದಿಲ್ಲ. ಅಂತಹವರು ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋದಾಗ ಅಲ್ಲಿ ಅವರ ಶುಲ್ಕಗಳು ಸರ್ಕಾರಿ ಶುಲ್ಕಕ್ಕೂ ಹೆಚ್ಚಾಗಿರುತ್ತವೆ. ಒಂದು ನಿವೇಶನಕ್ಕೆ 25,000 ಕೊಡಿ, 50,000 ಕೊಡಿ, ಒಂದು ಲಕ್ಷ ಕೊಡಿ ಎಂದು ಕೇಳುತ್ತಾರೆ.

ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಅಕ್ರಮ-ಸಕ್ರಮ ಜಾರಿಗೊಳಿಸಬೇಕೆಂದು ವಿನಂತಿ ಮಾಡುತ್ತೇನೆ. ಬೆಂಗಳೂರಿನಲ್ಲಿ ಎ-ಖಾತಾ, ಬಿ-ಖಾತಾ ಎಂದು ರಿಜಿಸ್ಟ್ರೇಷನ್ ಮಾಡುತ್ತಿದ್ದಾರೆ. ಗ್ರಾಮಠಾಣಾಗಳ ನಿವೇಶನಗಳಾಗಿರಬಹುದು, ಹತ್ತಾರು ವರ್ಷಗಳ ಹಿಂದಿನ ರೆವಿನ್ಯೂ ನಿವೇಶನಗಳಾಗಿರಬಹುದು. ಸರ್ಕಾರಿ ಶುಲ್ಕವನ್ನು ಪಾವತಿಸಿ ರಿಜಿಸ್ಟ್ರೇಷನ್ ಮಾಡಿಸಿಕೊಂಡವರು ಮುಂದೆ ತಮ್ಮ ಅವಶ್ಯಕತೆಗನುಗುಣವಾಗಿ ಮಾರಬೇಕೆಂದರೆ ತುಂಬಾ ಸಮಸ್ಯೆಯಾಗುತ್ತದೆ. ಅಂತಹ ನಿವೇಶನಗಳನ್ನು ರಿಜಿಸ್ಟರ್ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು. ಸರ್ಕಾರವು ರಿಜಿಸ್ಟ್ರೇಷನ್ ಅನ್ನು ನಿಲ್ಲಿಸುತ್ತದೆ ಪುನಃ ಬಿಡುತ್ತದೆ.

**(...ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(685) 15-09-2021, 10.50 KG RN

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕಾಂತರಾಜ್ (ಬಿಎಂಎಲ್) ಮುಂದು:-**

ಮತ್ತೆ registration ಮಾಡುವುದನ್ನು ನಿಲ್ಲಿಸುತ್ತಾರೆ. ಇಲ್ಲಿ ಏನಾಗಿದೆ ಎಂದರೆ, Toll ನಲ್ಲಿ ಲಂಚ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಯಾವ ರೀತಿ ಮಾಡುತ್ತಾರೋ ಆ ರೀತಿ ಆಗಿದೆ. ಮೊದಲು ಐದು ಸಾವಿರ ಪಡೆದುಕೊಂಡು ಮಾಡುತ್ತಿದ್ದರು. ಮತ್ತೆ ನಿಲ್ಲಿಸುತ್ತಾರೆ. ಮತ್ತೆ ಪ್ರಾರಂಭ ಮಾಡಿದಾಗ ಹತ್ತು ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಮತ್ತೆ ಇನ್ನೊಂದು ಸಾರಿ ನಿಲ್ಲಿಸುತ್ತಾರೆ. ಮತ್ತೆ ಪ್ರಾರಂಭವಾದಾಗ 25 ಸಾವಿರ ರೂಪಾಯಿ ಕೊಡಬೇಕು. ಈ ವಿಷಯ ಮಾನ್ಯ ಸಚಿವರಿಗೂ ಚೆನ್ನಾಗಿ ಗೊತ್ತಿರುತ್ತದೆ ನಾವು ಇದನ್ನು ಹೇಳಬೇಕಾಗಿಲ್ಲ. ಅದಕ್ಕೆ ದಯಮಾಡಿ ಸರ್ಕಾರ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಕಂದಾಯ ನಿವೇಶನಗಳು ಎಂದರೆ, unauthorize ಆಗಿ ವ್ಯವಸಾಯ ಮಾಡುತ್ತಿರುವಂತಹ ಜಮೀನುಗಳಲ್ಲಿ ಬಡಾವಣೆಗಳನ್ನು ಮಾಡಿ ಅದನ್ನು registration ಮಾಡಿಸುತ್ತಾರೆ. ಅದನ್ನು ಕಂದಾಯ ಇಲಾಖೆಯ revenue site ಎಂದು mention ಆಗಿದೆ. ಸರ್ಕಾರದ ಆದೇಶಗಳು ಮತ್ತು ಸರ್ಕಾರದ approval ಇಲ್ಲದೇ ಮಾಡುವಂಥದ್ದು. ಗ್ರಾಮ ಪಂಚಾಯಿತಿಗಳಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಇರುವಂತಹ ದಾಖಲೆಗಳ ಮೇಲೆ ಮಾಡುವಂಥದ್ದು. ಈ ಹಿಂದೆ ಮಾನ್ಯ ಹೆಚ್.ಡಿ.ದೇವಗೌಡರವರು ಇದ್ದಂತಹ ಕಾಲದಲ್ಲಿಯೂ ಸಹ ಈ revenue site ಗಳನ್ನು regularize ಮಾಡಬೇಕೆಂದು ಒಂದು circular ಅನ್ನು Bengaluru Corporation ವ್ಯಾಪ್ತಿಯಲ್ಲಿ ಮಾಡಿದ್ದರು. ಈ ನಿವೇಶನಗಳಿಗೆ 10 ಸಾವಿರ ರೂಪಾಯಿಗಳ betterment charges ಕಟ್ಟಿ ಎಂದು ಮಾಡಿದ್ದರು. ಇದೆಲ್ಲಾ ಆದಮೇಲೆ ಈ ವಿಷಯ ನ್ಯಾಯಾಲಯಕ್ಕೆ ಹೋಯಿತು. ನ್ಯಾಯಾಲಯ ಈ ರೀತಿ ಮಾಡುವುದು ತಪ್ಪು ಎಂದು ಆದೇಶ ಮಾಡಿದ ಮೇಲೆ, ಅದು ನಿಂತು ಹೋಯಿತು. ಇದಾದ ಮೇಲೆ ಸರ್ಕಾರ ಇದಕ್ಕೆ ಒಂದು ಕಾಯಿದೆಯನ್ನು ಮಾಡಬೇಕೆಂದು ನಗರಾಭಿವೃದ್ಧಿ ಇಲಾಖೆಯಲ್ಲಿ ಅಕ್ರಮ ಸಕ್ರಮ ಕಾಯಿದೆಯನ್ನು ಜಾರಿಗೆ ತರಬೇಕೆಂದು ತೀರ್ಮಾನಿಸಿ, ಈ ಕಾಯಿದೆಯನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿಯೂ ಮಾಡಿದ್ದೇವೆ. ಇದಕ್ಕೆ ಇಲ್ಲಿಯೂ ಸಹ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ. ಈ ಕಾಯಿದೆಯಾದ ಮೇಲೆಯೂ ಸಹ ಇದು ನ್ಯಾಯಾಲಯಕ್ಕೆ ಹೋಯಿತು. ಈಗ ಈ ಪ್ರಕರಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

Supreme Court ನಲ್ಲಿದೆ. ಈಗ ಇದು stay ಆಗಿ ನಿಂತಿದೆ. Supreme Court ನಲ್ಲಿ stay ಆಗಿ ನಿಂತಿರುವುದರಿಂದ ಯಾವುದು ಅಕ್ರಮವಾಗಿದೆ ಅದನ್ನು ಸಕ್ರಮ ಮಾಡುವುದಕ್ಕೆ ಆಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋದಾಗ ಮಾನ್ಯ ರಾಜೀವ್ ಚಂದ್ರಶೇಖರ್‌ರವರ ಜೊತೆಗೆ ಮಾತನಾಡಿ ಇದಕ್ಕೆ ಏನಾದರೊಂದು ತೀರ್ಮಾನ ಬಂದರೆ, ಲಕ್ಷಾಂತರ ಜನ, ಬೆಂಗಳೂರು ನಗರ ಒಂದೇ ಅಲ್ಲ, ಹುಬ್ಬಳಿ-ಧಾರವಾಡ ಮತ್ತು ಗುಲ್ಬರ್ಗಾ, ಎಲ್ಲೆಲ್ಲಿ ನಗರ ಪ್ರದೇಶಗಳು ಇವೆಯೂ ಅಂತಹ ಕಡೆಗಳಲ್ಲಿ ಆ ನಗರಗಳ ಸುತ್ತಮುತ್ತ ಒಂದು ಕೀಲೋಮೀಟರ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಅದಕ್ಕೆ ಸರ್ಕಾರದ facility ಗಳನ್ನು ಪಡೆಯುತ್ತಿದ್ದಾರೆ. ಅಲ್ಲಿ ನೀರು, ರಸ್ತೆ ಎಲ್ಲವೂ ಆಗುತ್ತಿದೆ. ಆದರೆ, ಅವುಗಳನ್ನು regularize ಮಾಡುವುದಕ್ಕೆ ಆಗುತ್ತಿಲ್ಲ. ಅದು Supreme Court ನಲ್ಲಿ ಇರುವುದರಿಂದ, ಈ ರೀತಿಯದ್ದನ್ನು ಸದ್ಯಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಸಹ ಸತತವಾಗಿ ಪ್ರಯತ್ನಗಳನ್ನು ಹಾಕುತ್ತಿದ್ದೇವೆ. ಆ ಕೇಸಿನಿಂದ ಹೊರಗಡೆ ಬಂದು ಸಾರ್ವಜನಿಕರಿಗೆ ಸಹಾಯ ಮಾಡಬೇಕೆಂದು ನಮ್ಮ ಅಭಿಪ್ರಾಯವು ಸಹ ಇದೆ. ಇದಕ್ಕೆ ನಮ್ಮ ವಿರೋಧ ಇಲ್ಲ. ಇದನ್ನು ಮಾಡಬೇಕೆಂಬ mood ನಲ್ಲಿದ್ದೇವೆ. ಇದನ್ನು ಮಾಡಬೇಕೆಂದು ಬಹಳ ಪ್ರಯತ್ನವನ್ನು ಹಾಕಿದ್ದೇವೆ. ಅವರು ಒಂದು ವಾರದ ಸಮಯ ಕೇಳಿದ್ದಾರೆ. ಒಂದು affidavit ಅನ್ನು Supreme Court ಗೆ ಹಾಕಿ ಎಂದು ಹೇಳಿದ್ದಾರೆ. ಅವರ ಜೊತೆಗೂ ಮಾತನಾಡಿ Supreme Court ಗೆ affidavit ಹಾಕುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನ್ಯಾಯಾಲಯದಿಂದ ತೀರ್ಮಾನ ಬಂದ ನಂತರ ತಿಳಿಸಿ. ಶ್ರೀಮತಿ ಭಾರತಿ ಶೆಟ್ಟಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಕಾಂತರಾಜ್ (ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾದ ಪ್ರಶ್ನೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, RDPR and Revenue Department ಗೆ ಸಂಬಂಧಪಟ್ಟಿದ್ದ ವಿಷಯ ಇದು. ಹಾಗಾಗಿ half an hour discussion ಅವಕಾಶ ಕೊಡಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಇದರಿಂದ ಗ್ರಾಮೀಣಾ ಭಾಗದ ಜನರಿಗೆ ತೊಂದರೆಯಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಮಯ ಇಲ್ಲ. ಕಾಂತರಾಜ್‌ರವರು ಕೇಳಿದ್ದಾರೆ. ನೀವು Question Hour ನಲ್ಲಿ ಕೇಳುವಂತಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ಸಾರ್ವಜನಿಕ ಮಹತ್ವದ ವಿಷಯ. ಹಾಗಾಗಿ ಸಮಯ ಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಭೋಜೇಗೌಡರವರೇ, ಕಾಂತರಾಜ್‌ರವರು ಕೇಳಿದ್ದಾರೆ. ನೀವು ಏಕೆ ಮಧ್ಯೆ ಬರುತ್ತೀರಿ, ಕುಳಿತುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ದಯವಿಟ್ಟು ಅವಕಾಶ ಕೊಡಿ.

**ಸಭಾಪತಿಯವರು:-** ಶ್ರೀಕಂಠೇಗೌಡರವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ನ್ಯಾಯಾಲಯದಲ್ಲಿರುವಂತಹ ವಿಷಯವನ್ನು ಒಂದೊಂದು ಬಾರಿ ಚರ್ಚೆ ಮಾಡಬಾರದೆಂದು ನಮ್ಮ ಕಾನೂನು ಇದೆ. ಅದಕ್ಕೆ ನ್ಯಾಯಾಲಯದ ಬಗ್ಗೆ ವಿಚಾರ ಮಾಡಿ ಹೇಳಿ. ಕಾಂತರಾಜ್‌ರವರೇ, ತಾವು ಮಾತನಾಡಿ.

**ಶ್ರೀ ಕಾಂತರಾಜು (ಬಿಎಂಎಲ್) :-** ಮಾನ್ಯ ಸಭಾಪತಿಯವರೇ, ನ್ಯಾಯಾಲಯದಲ್ಲಿ ಕಂದಾಯ ನಿವೇಶನ ಇರುವಂತಹ revenue site ಗಳ ಕೇಸ್‌ಗಳು ಇರಬಹುದು. ಅದಕ್ಕೆ ಸರ್ಕಾರ ಒಂದು ಕಾನೂನನ್ನು ರೂಪಿಸಿ register ಮಾಡುವಂತೆ ಮಾಡಬಹುದು. ಗ್ರಾಮಠಾಣಾದಲ್ಲಿ 40-50 ವರ್ಷಗಳಿಂದ ಖಾತೆ ಇರುವಂಥದ್ದನ್ನು register ಮಾಡಿಕೊಳ್ಳುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಿ. ಇಲಾಖೆಯವರು register ಮಾಡುವುದನ್ನು ನಿಲ್ಲಿಸುತ್ತಾರೆ. ಆದರೆ, ಅಕ್ರಮವಾಗಿ Sub-Registrar ರವರು register ಮಾಡುತ್ತಿದ್ದಾರೆ. ಅಧಿಕಾರಿಗಳು ಹಣ ತೆಗೆದುಕೊಂಡು ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಕೊನೆಯ ಪಕ್ಷ ಗ್ರಾಮ ಠಾಣಾಗಳಲ್ಲಿ 40-50

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳಿಂದ ಖಾತೆ ಇರುವಂಥವುಗಳನ್ನು register ಮಾಡಿಕೊಡುವುದಕ್ಕೆ ಸರ್ಕಾರ direction ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಬಡವರಿಗೆ ತೊಂದರೆಯಾಗಿದೆ. ಇದರಿಂದ ಶ್ರೀಮಂತರಿಗೆ ತೊಂದರೆಯಾಗಿಲ್ಲ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಗ್ರಾಮ ಠಾಣಾದಲ್ಲಿ ಇರುವಂಥದಕ್ಕೆ ಯಾವುದೇ ರೀತಿಯ ತಕರಾರು ಇಲ್ಲ. ನಾವು Hundred percent ಮಾಡಿಕೊಡುತ್ತೇವೆ. ಅದರ ಬಗ್ಗೆ ಯಾವುದೇ ತಕರಾರು ಇಲ್ಲ. ಈಗ ಶ್ರೀ ಶಿವರಾಮಕಾರಂತರವರ ಹೆಸರಿನಲ್ಲಿ BDA layout ಅನ್ನು ಮಾಡಲಾಗಿದೆ. ಅದನ್ನು ಸುಮಾರು 4 ರಿಂದ 5 ಸಾವಿರ ಎಕರೆಗಳ ಪ್ರದೇಶದಲ್ಲಿ ಮಾಡಲಾಗಿದೆ. ಇದರಲ್ಲಿಯೂ ಸಹ registration ಆಗಿರುವುದಕ್ಕೆ Supreme Court ನಮಗೆ warning ಮಾಡಿದೆ. ಯಾರು ಯಾರು ಮಾಡಿದ್ದಾರೆ ಅವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದೆ. ಈಗ ಒಂದು ವಾರದ ಹಿಂದೆ 5 ಜನ Sub-Registrar ಗಳನ್ನು suspend ಮಾಡಿದ್ದೇನೆ. ಹಾಗಾಗಿ, Supreme Court ನಲ್ಲಿ ಎರಡು ಕೇಸ್‌ಗಳು ಇವೆ. ಒಂದು ಶಿವರಾಮಕಾರಂತ ಬಡಾವಣೆಯಲ್ಲಿ ಮಾಡಿರುವಂತಹ revenue site ಗಳ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾವು ಈ ರೀತಿ ಕ್ರಮ ತೆಗೆದುಕೊಂಡಿದ್ದೇವೆಂದು Supreme Court ಗೆ affidavit ಹಾಕಿದ್ದೇವೆ. ಇದನ್ನು ಮಾಡಬೇಕಾದರೆ, BDA layout ನಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಉಳಿದಂತಹ ಏರಿಯಾಗಳು ಏನಿವೆ, ನಗರ ಪ್ರದೇಶಗಳ border ಗಳಲ್ಲಿ ಕಟ್ಟಿಕೊಂಡಿದ್ದಾರೆ. ಸಂಸಾರ ದೊಡ್ಡದಾದ ಮೇಲೆ, ಅಣ್ಣ ತಮ್ಮಂದಿರು ಹೊಲ, ಗದ್ದೆಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದನ್ನು ನಾವು regularize ಮಾಡುವುದಕ್ಕೆ Act ಮಾಡಿದ್ದೇವೆ. ಜೆಡಿಎಸ್ ಸರ್ಕಾರ ಇದ್ದಾಗಲೂ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಮಾಡಿದ್ದಾರೆ. ನಾವು ನೀವು ಎಲ್ಲರೂ ಒಪ್ಪಿಗೆ ಮಾಡಿದ್ದೇವೆ. ಅದರ ವಿರುದ್ಧ Supreme Court ಗೆ Appeal ಹೋಗಿದ್ದಾರೆ. ಅದಕ್ಕೆ stay ಕೊಟ್ಟಿದ್ದಾರೆ. ಇದರಿಂದ ನಮ್ಮ ಕೈಕಟ್ಟಿ ಹಾಕಿದಂತೆ ಆಗಿದೆ. ಇದು ಆಗಬೇಕು. ಇದರಿಂದ ಸುಮಾರು 10-15 ಲಕ್ಷ ಜನರಿಗೆ ಸಹಾಯವಾಗುತ್ತದೆ. ಅಲ್ಲದೇ, betterment charges ಕಟ್ಟುವುದರಿಂದ ಸರ್ಕಾರಕ್ಕೂ ಸಹ ಇದರಿಂದ ಆದಾಯ ಬರುತ್ತದೆ. ಇದರಿಂದ ಬೆಂಗಳೂರು ನಗರದಿಂದ 5 ರಿಂದ 6 ಸಾವಿರ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಇದರಿಂದ ನಗರಸಭೆ ಮತ್ತು ಪುರಸಭೆಗಳಿಗೆ ಬೇಕಾದಷ್ಟು ಆದಾಯ ಬರುತ್ತದೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಾವು ಚರ್ಚೆ ಮಾಡುತ್ತಿದ್ದೇವೆ. ಆದಷ್ಟು ಶೀಘ್ರದಲ್ಲಿ ಇದಕ್ಕೆ ಒಂದು ಪರಿಹಾರ ಬರುತ್ತದೆ. ಅದು ಬಂದ ಮೇಲೆ site registration guarantee ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 385**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಲ್ಲಿ ಅಧಿಕಾರಿಗಳು ಇಲಾಖಾ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆ ಮಾಡುವ ಸಂಬಂಧ ಒಂದು ಆದೇಶವನ್ನು ದಿನಾಂಕ 22-07-2014 ರಂದು ಹೊರಡಿಸಿದ್ದಾರೆ. ಅದೇರೀತಿ ಮುಂದುವರಿದು ಗುಣಮಟ್ಟವನ್ನು ಕಾಪಾಡಿಕೊಳ್ಳಲು 3ನೇ ವ್ಯಕ್ತಿಯ ತಪಾಸಣೆ, ತಜ್ಞರನ್ನು ಒಳಗೊಂಡ ಸಮಾಲೋಚಕರನ್ನು ನೇಮಿಸಿಕೊಂಡು ಅವರ ಸಲಹೆಗಳನ್ನು ಪಡೆದು ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ. ಸರ್ಕಾರದ ಆದೇಶ ಸಂಖ್ಯೆ ಲೋಇ.64 ಎಇಪಿ ದಿನಾಂಕ 03-11-2008 ರಲ್ಲಿ ಡಾ:ಸಿ.ಎಸ್.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯನ್ನು ರಚಿಸಿದ್ದಾರೆ. ಸದರಿ ಕಾರ್ಯಪಡೆಯು ದಿನಾಂಕ 12-09-2012 ರಂದು ಮಧ್ಯಂತರ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿದ್ದಾರೆ. ಹಾಗಾದರೆ, ಅದರ ಮಧ್ಯಂತರ ವರದಿ ಏನಾಯಿತು? ಈ ವರದಿ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳಿಗೆ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯನವರ ಜಯಂತಿ. ಇವತ್ತು Engineers' Day. ಆಡಳಿತಾತ್ಮಕ ಮತ್ತು ತಾಂತ್ರಿಕ ಸುಧಾರಣೆಯಲ್ಲಿ ಗುಣಮಟ್ಟ ಸುಧಾರಣೆಯಾಗಬೇಕಾದರೆ, ಇನ್ನು ಅಂತಿಮ ವರದಿ ಸಹ ಬಂದಿಲ್ಲ. ಆಗಲೇ ಅದನ್ನು ನಿಲ್ಲಿಸಿದ್ದಾರೆ. ಇದರ ಸಹ ಕಾರ್ಯದರ್ಶಿಯಾಗಿರುವಂತಹ ಶ್ರೀ ರವೀಂದ್ರನಾಥ್‌ರವರ ಅಧ್ಯಕ್ಷತೆಯಲ್ಲಿ ಇದು ಮರು ಅಸ್ತಿತ್ವ ಪಡೆದರೆ ಇದು ಬಹಳ ಒಳ್ಳೆಯ ತಾಂತ್ರಿಕ ಮತ್ತು ಆಡಳಿತಾತ್ಮಕ ಸುಧಾರಣೆ ಖಂಡಿತ ಆಗುತ್ತದೆ. ಇವತ್ತು ಮಾನ್ಯ ಸರ್.ಎಂ.ವಿಶ್ವೇಶ್ವರಯ್ಯರವರ ನೆನಪಿನಲ್ಲಿ ಇದನ್ನು ಸರ್ಕಾರ ಪ್ರಾರಂಭ ಮಾಡಬೇಕು. ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿರುವಂತೆ, ಇದನ್ನು ಪ್ರಾರಂಭ ಮಾಡಿ ಅನುಷ್ಠಾನಕ್ಕೆ ತಂದರೆ ಆಗುತ್ತದೆ. 3ನೇ ವ್ಯಕ್ತಿಯ ತಪಾಸಣೆ, ತಜ್ಞರನ್ನು ಒಳಗೊಂಡ ಸಮಾಲೋಚಕರನ್ನು ನೇಮಿಸಿಕೊಂಡು ಅವರ ಸಲಹೆಗಳನ್ನು ಪಡೆದು ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತದೆಂದು ಒಂದು ಕಡೆ ಹೇಳಿದ್ದಾರೆ. ಹಾಗಾಗಿ, ತಜ್ಞರ ಸಮಿತಿಯು ಕೊಟ್ಟಂತಹ ವರದಿಯನ್ನು ಉಪಯೋಗ ಮಾಡದಿದ್ದರೆ, ಮತ್ತೆ ಅಂತಿಮ ವರದಿಯನ್ನು ನಿರೀಕ್ಷೆ ಮಾಡದಿದ್ದರೆ, ಇನ್ನೊಮ್ಮೆ ಸಮಿತಿಯನ್ನು ಚಾಲನೆ ಮಾಡದಿದ್ದರೆ ಏನು ಪ್ರಯೋಜನ?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, KRDCL, KSHIP ಮತ್ತು World Bank ಸಲುವಾಗಿ PPP Projects ಏನಿದೆ, ಇಲ್ಲಿ Third Party Inspection ಅಗತ್ಯ ಇದೆ ಎನ್ನುವುದಕ್ಕಾಗಿ Third Party Inspection ಅನ್ನು ನಾವು ಹಮ್ಮಿಕೊಳ್ಳುತ್ತಿದ್ದೇವೆ. ಎರಡನೆಯದಾಗಿ, ಮಾನ್ಯ ಸದಸ್ಯರು ಗುಣಮಟ್ಟದ ಬಗ್ಗೆ ಕೇಳಿದ್ದಾರೆ. 2012 ರಲ್ಲಿ ಡಾ:ಸಿ.ಎಸ್.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಯನ್ನು ರಚನೆ ಮಾಡಲಾಗಿದೆ. ಇದರ ಉದ್ದೇಶ ಏನೆಂದರೆ, ಸಾರ್ವಜನಿಕ ವಲಯದ ಕಾಮಗಾರಿಗಳ ಗುಣಮಟ್ಟವನ್ನು ಹೆಚ್ಚಿಸಲು ನವೀನ ತಂತ್ರಜ್ಞಾನವನ್ನು ಇಲಾಖೆಗೆ ಹಸ್ತಾಂತರ ಮಾಡುವುದಕ್ಕೆ ಮತ್ತು ತಿಳುವಳಿಕೆ ಕೊಡುವುದಕ್ಕೆ ಈ ಕಾರ್ಯಪಡೆಯನ್ನು ನೇಮಕ ಮಾಡಲಾಗಿದೆ. ಅವರು ಸುಮಾರು 83 ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ 44 ಆಡತಾತ್ಮಕ ಮತ್ತು 39 ತಾಂತ್ರಿಕ ಶಿಫಾರಸ್ಸುಗಳು ಇದ್ದವು. ಇದರಲ್ಲಿ ಮುಖ್ಯವಾಗಿ ನೀರಾವರಿ ಇಲಾಖೆಗೆ ಮತ್ತು Urban Development ಇಲಾಖೆಗೆ ಹೆಚ್ಚಿಗೆ ಸಂಬಂಧಪಟ್ಟಂತಹವು ಇದ್ದವು.

**(ಮುಂದು.,) .**

**(686) 15-09-2021 (11.00) ಎಂವಿ-ಆರ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಸಿ.ಪಾಟೀಲ್ (ಮುಂದು...):-**

ಲೋಕೋಪಯೋಗಿ ಇಲಾಖೆಗೆ ಕೊಟ್ಟಂತಹ 30 ಶಿಫಾರಸುಗಳಲ್ಲಿ, ಬಹುತೇಕ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತಂದಿದ್ದೇವೆ. ಮತ್ತೇನಾದರೂ ಅನಿಸಿಕೆಗಳು ಇದ್ದರೆ, ಮಾನ್ಯ ಸದಸ್ಯರೊಂದಿಗೆ ಚರ್ಚೆ ಮಾಡಿ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಅದನ್ನು ಮರು ನಿರ್ಮಾಣ ಮಾಡುವುದಕ್ಕೆ ಸಾಧ್ಯ ಇಲ್ಲವೇ?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಂದೆ ಅದನ್ನು ಮರು ನಿರ್ಮಾಣ ಮಾಡುವ ಸಾಧ್ಯತೆ ಇಲ್ಲ. ಆದರೆ, ಅದನ್ನು ವಿಚಾರ ಮಾಡುತ್ತೇವೆ. ಈಗಾಗಲೇ ಅವರು ಕೊಟ್ಟಂತಹ ಶಿಫಾರಸುಗಳನ್ನು ಬಹುತೇಕ ಶೇಕಡಾ 100ಕ್ಕೆ 99ರಷ್ಟನ್ನು ಅನುಷ್ಠಾನಕ್ಕೆ ತಂದಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇನ್ನು ವರದಿಯೇ ಬಂದಿಲ್ಲ. ಈಗ ಬಂದಿರುವುದು ಕೇವಲ ಮಧ್ಯಂತರ ವರದಿ. ಇವರು ಈಗ ಇದನ್ನು ಕೊಟ್ಟರೆ, ತಜ್ಞರು ಮೂರನೇ ವ್ಯಕ್ತಿಗಳಾಗುತ್ತಾರೆ. ಈಗ ಇವರ ಬಳಿ ಇರುವುದು ಸರ್ಕಾರದ ಅಧಿಕಾರಿಗಳನ್ನು ಒಳಗೊಂಡವರೇ ಅದರ ಗುಣಮಟ್ಟವನ್ನು ನೋಡಿಕೊಳ್ಳುವುದು. ಅಂದರೆ, ಅದಕ್ಕೆ ಜಲ್ಲಿ ಮತ್ತು ಸಿಮೆಂಟ್ ಅನ್ನು ಎಷ್ಟು ಹಾಕಬೇಕು ಎಂಬುದನ್ನು ಅಧಿಕಾರಿಗಳೇ ನೋಡಿಕೊಳ್ಳುತ್ತಾರೆ. ಇಲ್ಲಿಗೆ ಮೂರನೇ ವ್ಯಕ್ತಿಗಳ ಪ್ರವೇಶವಿಲ್ಲ. ಈಗ ಮೂರನೇ ವ್ಯಕ್ತಿ ಎಂದರೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯ ರಚನೆಯಾಗಬೇಕು. ಸಮಿತಿಯವರು ಕೊಟ್ಟ ವರದಿಯ ಆಧಾರದ ಮೇಲೆ ಪ್ರಾರಂಭ ಮಾಡಿದರೆ, ಖಂಡಿತವಾಗಿ ತಾಂತ್ರಿಕ ಮತ್ತು ಆಡಳಿತಾತ್ಮಕ ಗುಣಮಟ್ಟವನ್ನು ನಿರೀಕ್ಷಿಸಬಹುದು.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, World Bank Project ಗಳಿಗೆ ಮಾತ್ರ third party inspection ಇದೆ. ಶ್ರೀ ವಿಶ್ವನಾಥ್‌ರವರು ಕೊಟ್ಟಂತಹ ವರದಿಗಳನ್ನು ಮತ್ತು ಮಾನ್ಯ ಸದಸ್ಯರ ಕಳಕಳಿ ಏನಿದೆ, ಆ ಎಲ್ಲಾ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಇದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಅದು ಮಧ್ಯಂತರ ವರದಿ. ಆದರೆ, ಇನ್ನು ಪೂರ್ಣ ವರದಿ ಬಂದಿಲ್ಲ. ಇವತ್ತಿನ ದಿವಸ 'ದಿವಂಗತ ಸರ್.ಎಂ.ವಿಶ್ವೇಶ್ವರಯ್ಯನವರ ಜಯಂತಿ', 'Engineers' Day' ಇದೆ. ಅದಕ್ಕೆ ಅವರ ನೆನಪಿಗಾಗಿ ಇದನ್ನು ಪ್ರಾರಂಭ ಮಾಡಿದರೆ, ನಾವು ಅಂತಿಮ ವರದಿಯನ್ನು ಕೂಡ ತೆಗೆದುಕೊಳ್ಳಬಹುದಲ್ಲವೇ?

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರ ಅಂತಿಮ ವರದಿಯನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಸಮಿತಿಯೇ ಇಲ್ಲವೆಂದರೆ, ಅಂತಿಮ ವರದಿ ಎಲ್ಲಿಂದ ಬರುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 46**

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ನೀಡಲು ಮಾನ್ಯ ಮುಜರಾಯಿ ಸಚಿವರು ಸಮಯಾವಕಾಶವನ್ನು ಕೇಳಿದ್ದಾರೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ಮುಜರಾಯಿ ಮತ್ತು ಹಜ್ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ, ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸಿಕೊಳ್ಳುವುದಕ್ಕೆ ಸ್ವಲ್ಪ ಕಾಲಾವಕಾಶ ಕೇಳಿದ್ದೇವೆ. ಈ ಅಧಿವೇಶನ ಮುಗಿವುದರೊಳಗೆ ಮಾಹಿತಿ ಒದಗಿಸುತ್ತೇವೆ.

**ಸಭಾಪತಿಯವರು:-** ನೀವು ಒಂದು ತಿಂಗಳ ಸಮಯವನ್ನು ಕೇಳಿದ್ದೀರಿ. ಈಗ ನಿಮಗೆ ಯಾರೋ ಅಧಿಕಾರಿ ಬರೆದುಕೊಡುತ್ತಾರೆ. ಇಂದಿನ ಅಧಿವೇಶನ ಒಂದು ತಿಂಗಳು ನಡೆಯುತ್ತದೆಯೇ? ಮುಂದಿನ ವಾರದ ಒಳಗೆ ಉತ್ತರವನ್ನು ಕೊಡಬೇಕು. ಇದಕ್ಕೆ ಒಂದು ತಿಂಗಳು ಆಗುವುದಿಲ್ಲ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಮಾನ್ಯ ಎನ್.ರವಿಕುಮಾರ್‌ರವರು ಕೇಳುವ ಪ್ರಶ್ನೆಗಳಿಗೇ ಈ ರೀತಿಯಾಗುತ್ತದೆ.

**ಪ್ರಶ್ನೆ ಸಂಖ್ಯೆ: 404**
**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿದ್ದರು.)**

**ಶ್ರೀ ಸೋಮಣ್ಣ:-** ಮಾನ್ಯ ಸಭಾಪತಿಯವರೆ, ನಮ್ಮ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ, ಅದು ಕಂದಾಯ ಇಲಾಖೆಗೆ ಹೋಗಿತ್ತು. ಆ ಪ್ರಶ್ನೆ ನಮಗೆ ನಿನ್ನೆಯ ದಿವಸ ಬಂದಿದೆ. ಅದಕ್ಕೆ ಎರಡು ದಿವಸದಲ್ಲಿ ಉತ್ತರ ಒದಗಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 386**
**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿದ್ದರು.)**

**ಪ್ರಶ್ನೆ ಸಂಖ್ಯೆ: 353**
**(ಈ ಹಂತದಲ್ಲಿ ಮಾನ್ಯ ಸದಸ್ಯರು ಗೈರು ಹಾಜರಿದ್ದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 435**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಶವ ಸಂಸ್ಕಾರಗಳಿಗೆ ಅಗತ್ಯ ಸ್ಮಶಾನಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಹೆಚ್ಚಾಗಿ ನೀರಾವರಿ ತಾಲ್ಲೂಕುಗಳು ಇರುವುದರಿಂದ ಮಾರುಕಟ್ಟೆ ಬೆಲೆ ನೀಡುತ್ತೇವೆಂದು ಹೇಳುತ್ತಿರುವುದರಿಂದ ಸ್ಮಶಾನಕ್ಕೆ ಜಾಗ ಸಿಗುತ್ತಿಲ್ಲ. ಅದಕ್ಕೆ ಮಾನ್ಯ ಸಚಿವರು ಸ್ಮಶಾನಕ್ಕೆ ಜಾಗ ನೀಡಲು ಏನು ಮಾಡುತ್ತಾರೆಂದು ಉತ್ತರ ನೀಡಬೇಕೆಂದು ಅವರಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಕೇಳಿದ ಉಪ ಪ್ರಶ್ನೆಗೆ ಅಷ್ಟೇ ಉತ್ತರ ನೀಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ನಾವು ಈಗಾಗಲೇ Sub-Registrar guidance value ಏನಿದೆ ಅದಕ್ಕಿಂತ ಮೂರು ಪಟ್ಟು ಜಾಸ್ತಿ ಪರಿಹಾರ ಕೊಡುತ್ತೇವೆಂದು ತಿಳಿಸಿದ್ದೇವೆ. ಅವರು ಅದಕ್ಕೂ ಒಪ್ಪಿಲ್ಲವೆಂದರೆ, ಆಗ ಜಿಲ್ಲಾಧಿಕಾರಿಗಳು ಅದರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದರೆ, ಆದ್ಯತೆಯ ಮೇರೆಗೆ ಅದನ್ನು ತಕ್ಷಣ ಪರಿಗಣಿಸುತ್ತೇವೆ. ಈಗ ಸರ್ಕಾರದ ಆದ್ಯತೆ ಏನೆಂದರೆ, ನಾನು ಎಲ್ಲಾದರೂ ಜಿಲ್ಲೆಗಳ ರಿವ್ಯೂ ಮಾಡಿದರೆ, ಕಡ್ಡಾಯವಾಗಿ ಪ್ರತಿಯೊಂದು ಗ್ರಾಮಕ್ಕೂ ಒಂದು ಸ್ಮಶಾನ ಇರಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. ನಾನು ಯಾವುದೇ ಸಭೆಗಳಿಗೆ ಹೋದರು, ಮೊದಲು ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಮೂರು ವರ್ಷದಲ್ಲಿ ಸುಮಾರು 26 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದಕ್ಕೆ ಇನ್ನು ಹೆಚ್ಚಾದರೂ ಸಹ ಇನ್ನು ಹಣವನ್ನು ಬಿಡುಗಡೆ ಮಾಡುತ್ತೇವೆ. ನಮ್ಮ ಆದ್ಯತೆ ಪ್ರತಿಯೊಂದು ಗ್ರಾಮಕ್ಕೂ ಸಹ ಸ್ಮಶಾನ ಇರಬೇಕು. ಗ್ರಾಮಗಳಲ್ಲಿ ಸರ್ಕಾರಿ ಜಮೀನು ಇದ್ದರೆ, ಅದನ್ನು ಜಿಲ್ಲಾಧಿಕಾರಿಗಳೇ ಮಾಡಬಹುದು. ಖರಾಬು ಜಮೀನು ಇದ್ದರೆ ಮಾತ್ರ ನಮ್ಮ ವ್ಯಾಪ್ತಿಗೆ ಬರುತ್ತದೆ. ಅದಕ್ಕೆ ಪ್ರಸ್ತಾವನೆ ಸಲ್ಲಿಸಿದರೆ, ಅದನ್ನು ತಕ್ಷಣ ಅನುಮೋದನೆ ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹೆಚ್ಚಿನ ದರವಾದರೆ, ಅದರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದರೆ, ತಕ್ಷಣ ಅದನ್ನು ಅನುಮೋದನೆ ಮಾಡಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಸ್ಮಶಾನ ಇಲ್ಲದೇ ಇರುವ ತಾಲ್ಲೂಕುಗಳ ಒಟ್ಟು ಸಂಖ್ಯೆ 372. ಅದರಲ್ಲಿ ವಿಶೇಷವಾಗಿ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಹುಕ್ಕೇರಿ ಮತ್ತು ಗೋಕಾಕ್ ತಾಲ್ಲೂಕುಗಳಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸ್ಮಶಾನಗಳು ಇಲ್ಲದೇ ಇರುವುದು ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ನೀಡಿದ್ದಾರೆ. ನನ್ನ ವಿಚಾರವೇನೆಂದರೆ, ಚಿಕ್ಕೋಡಿ, ಅಥಣಿ ಮತ್ತು ರಾಯಬಾಗ್ ಈ ಭಾಗಗಳಲ್ಲಿ ನೀರಾವರಿ ಕ್ಷೇತ್ರವಿರುವುದರಿಂದ, ಇವರು ಏನು ದರವನ್ನು ನಿಗದಿಪಡಿಸಿದ್ದಾರೆ, ಆ ದರದಲ್ಲಿ ಜಾಗವನ್ನು ಖರೀದಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ದಯವಿಟ್ಟು ಜಿಲ್ಲಾಧಿಕಾರಿಗಳು ಇದಕ್ಕೆ ಒಂದು ಸಭೆ ಕರೆದು, ಎಲ್ಲೆಲ್ಲಿ ಸ್ಮಶಾನಗಳು ಇಲ್ಲ. ಅಂತಹ ಕಡೆಗಳಿಗೆ ಸರ್ಕಾರ ವಿಶೇಷ ಪ್ರಸ್ತಾವನೆಗಳನ್ನು ತರಿಸಿಕೊಳ್ಳಬೇಕು ಎಂಬುದು ನನ್ನ ವಿನಂತಿ. ವಿಶೇಷವಾಗಿ ಖಾನಾಪೂರ ಪಶ್ಚಿಮಘಟ್ಟ ಪ್ರದೇಶವಾಗಿರುವುದರಿಂದ ಅಲ್ಲಿ ಅರಣ್ಯ ಪ್ರದೇಶವಿದೆ. ಅಲ್ಲಿ ಗಾವಠಾಣಾ ಮತ್ತು ಗಾವ್‌ಠಾಣಾ ಇಲ್ಲ. ಇವತ್ತು ಖಾಸಗಿ ಜಮೀನಿನ ಜನರು ಹೆಚ್ಚು ಹಣವನ್ನು ನೀಡಿದರೆ ಜಾಗ ಕೊಡುತ್ತೇವೆಂದು ಒತ್ತಾಯ ಮಾಡುತ್ತಿದ್ದಾರೆ. ಸ್ಮಶಾನ ಇಲ್ಲದೇ ಸಾರ್ವಜನಿಕರು ಅನೇಕ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಮೊನ್ನೆ ಅವರಿಗೆ ಸ್ಮಶಾನ ಸಿಕ್ಕಿಲ್ಲವೆಂದು ಮೆರವಣಿಗೆ ಮೂಲಕ ಬಂದು ದೇಹವನ್ನು ಗ್ರಾಮಪಂಚಾಯಿತಿ ಮುಂದೆ ಇಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ರೀತಿಯಾಗಬಾರದು ಎಂಬುದು ನನ್ನ ಮನವಿ. ಅದಕ್ಕೆ ಹೆಚ್ಚುವರಿಯಾಗಿ ಹಣ ಕೊಡುವುದಕ್ಕೆ ಸರ್ಕಾರ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಒಂದು ಸಭೆ ಮಾಡಿ, ಎಲ್ಲೆಲ್ಲಿ ಸ್ಮಶಾನಗಳು ಇಲ್ಲ ಮತ್ತು ಎಲ್ಲಿ ಕೊರತೆ ಇದೆ. ಆ ಕೊರತೆಯನ್ನು ನೀಗಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಬೆಳಗಾವಿ ಜಿಲ್ಲೆಯಲ್ಲಿ ಸುಮಾರು 816 ಸ್ಮಶಾನಗಳಿವೆ. ಆದರೆ, 372 ಗ್ರಾಮಗಳಲ್ಲಿ ಸ್ಮಶಾನಗಳು ಇಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ನೀರಾವರಿ ಪ್ರದೇಶ ಹೆಚ್ಚಾಗಿರುವುದರಿಂದ, ಅಲ್ಲಿ ಯಾವುದೇ ಸರ್ಕಾರಿ ಜಮೀನು ಸಿಗುತ್ತಿಲ್ಲ. ಆದರೆ, ಬೆಳಗಾವಿಯಲ್ಲಿ ಏನು ತೊಂದರೆ ಇಲ್ಲ. ಬೆಳಗಾವಿಯ ಎರಡು ಗ್ರಾಮಗಳಿಗೆ ಮಾತ್ರ ಸ್ಮಶಾನವಿಲ್ಲ. ಉಳಿದ ಗ್ರಾಮಗಳಿಗೆ ಸ್ಮಶಾನಗಳಿವೆ. ಕಾಗವಾಡದಲ್ಲಿ ಶೇಕಡಾ 100ರಷ್ಟು ಸ್ಮಶಾನಗಳಿವೆ. ಅಲ್ಲಿ ಯಾವುದೇ ಸಮಸ್ಯೆ ಇಲ್ಲ. ಖಾನಾಪೂರದಲ್ಲಿ ಮಾತ್ರ ಜಾಸ್ತಿ ಸಮಸ್ಯೆ ಇದೆ. ಹುಕ್ಕೇರಿಯಲ್ಲಿ ಎರಡು ಕಡೆಗಳಲ್ಲಿ ಸಮಸ್ಯೆ ಇದೆ. ಹೆಚ್ಚಾಗಿ ನೀರಾವರಿ ಜಮೀನು ಮತ್ತು ಅರಣ್ಯ ಪ್ರದೇಶವಿರುವುದರಿಂದ ಅಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ವಿಶೇಷ ಸಭೆ ಮಾಡಿ, ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 409**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಲಂಬಾಣಿ ತಾಂಡ ಮತ್ತು ಭೋವಿ ಹಟ್ಟಿಯ ನಾಲ್ಕು ಹಳ್ಳಿಗಳು, 1909ರಲ್ಲಿ ಮಹಾರಾಜರು ಇದ್ದಾಗ, ಈ ತಾಂಡಗಳನ್ನು ಗ್ರಾಮಗಳೆಂದು ಪರಿವರ್ತನೆ ಮಾಡಿದರು. ಒಂದು ಬಾರಿ ಆ ಕಡೆ ಡಾ||ರಾಜ್‌ಕುಮಾರ್‌ರವರು ದೇವಸ್ಥಾನಕ್ಕೆ ಹೋಗಬೇಕಾದರೆ, ಅವರಿಗೆ ದಾರಿ ಇರಲಿಲ್ಲ. ಅದಕ್ಕೆ 1980ರಲ್ಲಿ ಇದಕ್ಕೆ ಒಂದು ಕಾಲು ದಾರಿಯನ್ನು ಮಾಡಿದ್ದಾರೆ. ಆದರೆ, ಇಲ್ಲಿಯವರೆವಿಗೂ ಆ ಗ್ರಾಮಗಳಲ್ಲಿ ಕಟ್ಟಿರುವಂತಹ ಮನೆಗಳಿಗೆ ಹಕ್ಕುಪತ್ರ ಮತ್ತು ಯಾವುದೇ ರೀತಿಯ ಸೌಲಭ್ಯಗಳನ್ನು ನೀಡಿಲ್ಲ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇದಕ್ಕೆ ಕಾನೂನಿನಲ್ಲಿ ಸಾಕಷ್ಟು ಅವಕಾಶಗಳು ಇದ್ದರೂ ಸಹ, ಅಧಿಕಾರಿಗಳ ವಿಳಂಬದಿಂದ ವಿಶೇಷವಾಗಿ ಲಂಬಾಣಿ ತಾಂಡಗಳು ಮತ್ತು ಭೋವಿ ಹಟ್ಟಿಗಳ ನಾಲ್ಕು ಹಳ್ಳಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಿ, ಅವರು ಮನೆಗಳನ್ನು ಕಟ್ಟುವುದಕ್ಕೆ ಸೌಲಭ್ಯವನ್ನು ಒದಗಿಸಿಕೊಡಬೇಕು. ಹಿಂದಿನ ಸರ್ಕಾರ ತಾಂಡ ಮತ್ತು ಭೋವಿ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಬೇಕೆಂದು ಕಾಯ್ದೆಯನ್ನು ತಂದಿದ್ದಾರೆ. ಕಾನೂನು ಪರವಾಗಿರುವ ದಾಖಲೆಗಳನ್ನು ನೀಡಿ, ಅದನ್ನು ಅಧಿಕಾರಿಗಳು ಪರಿಶೀಲನೆ ಮಾಡಿದರೂ ಸಹ, ಕೆಲವು ಹಳ್ಳಿಗಳನ್ನು ಕಂದಾಯ ಗ್ರಾಮ ಮಾಡುವುದಕ್ಕೆ ಆ ಜಾಗ ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆಂದು ಹೇಳುತ್ತಾರೆ. ಮತ್ತೆ ಕೆಲವರು ಎರಡು ಹಳ್ಳಿಗಳಲ್ಲಿ ಸರ್ಕಾರದ ಜಮೀನು ಇದ್ದೆಯೆಂದು ಹೇಳುತ್ತಾರೆ.

**(ಮುಂದು...**

(687) 15.09.2021 11.10 LL-VK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ. ರಾಥೋಡ್**(ಮುಂದು...)

ಒಂದು ಹಳ್ಳಿ ಅರಣ್ಯ ಇಲಾಖೆಗೆ ಬರುತ್ತದೆ. ಆದರೆ, ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ, ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ, ಅರಣ್ಯ ಇಲಾಖೆಯಲ್ಲಿ ಇದನ್ನು ಕಂದಾಯ ಗ್ರಾಮವಾಗಿ ಪರಿವರ್ತನೆ ಮಾಡಬಹುದೆಂದು ಕಾನೂನು ತಿದ್ದುಪಡಿಯಾಗಿದೆ. ಇದರ ಜೊತೆಗೆ, ಕಂದಾಯ ಇಲಾಖೆಯಲ್ಲಿಯೂ ಸಹ ಈಗಾಗಲೇ ತಿದ್ದುಪಡಿ ಮಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವರುಗಳಿಗೆ ಅವಕಾಶ ಮಾಡಿಕೊಡಬೇಕೆಂದು ಸಾಕಷ್ಟು ಕಾನೂನುಗಳು ಇದ್ದರೂ ಸಹ ಅಧಿಕಾರಿಗಳ ವಿಳಂಬ ನೀತಿಯಿಂದ ಇವರಿಗೆ ಯಾವುದೇ ರೀತಿಯ ಅನುಕೂಲಗಳು ಸಿಗುತ್ತಿಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ, ಮಳವಳ್ಳಿ ತಾಲ್ಲೂಕಿನ ಮಣಿಗಾರನಕಟ್ಟೆ-ಹೊಸದೊಡ್ಡಿ, ಬಸವನಗೌಡದೊಡ್ಡಿ, ದಾಲನಕಟ್ಟೆ ಎಂಬ ತಾಂಡಾ ಇರುವಂಥದ್ದು ನಿಜ. ಇದು ಅರಣ್ಯ ಇಲಾಖೆಯ ಸರ್ವೆ ನಂ:01ರಲ್ಲಿ ಅರಣ್ಯ ಭೂಮಿ ಎಂದು ನೋಟಿಫೈಡ್ ಆಗಿದೆ. ಈಗಾಗಲೇ ಅಲ್ಲಿನ ಗ್ರಾಮ ಪಂಚಾಯಿತಿಯ ಸಮಿತಿ ಏನಿದೆ ಅಂದರೆ, ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಇರುವಂತಹ ಕಾನೂನುಗಳ ಅಡಿಯಲ್ಲಿ ಗ್ರಾಮ ಪಂಚಾಯಿತಿಯ ಅರಣ್ಯ ಮಟ್ಟದ ಹಕ್ಕು ಸಮಿತಿ ಎಂದು ಎಲ್ಲಾ ಕಡೆಗಳಲ್ಲಿಯೂ ಇದೆ. ಆ ಹಕ್ಕು ಸಮಿತಿಯಲ್ಲಿ ಇವರಿಗೆ ಕೊಡಬೇಕೆಂದು ತೀರ್ಮಾನ ಆಗಿದೆ. ಅದು ಒಳ್ಳೆಯದು. ಅದರಿಂದಾಗಿ, ಪ್ರಸ್ತುತ ಅಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಹಾಗಾಗಿ, ಈಗ ಆ ವಿಷಯ ಉಪ ವಿಭಾಗಾಧಿಕಾರಿ ಮಟ್ಟದ ಒಂದು ಹಕ್ಕು ಸಮಿತಿ ಇದ್ದು, ಅಲ್ಲಿಗೆ ಹೋಗುತ್ತದೆ. ಪ್ರಾರಂಭದಲ್ಲಿ ಗ್ರಾಮ ಮಟ್ಟದಲ್ಲಿ ತೀರ್ಮಾನವಾದ ನಂತರ ಯಾವುದೇ ಸಮಸ್ಯೆ ಇರುವುದಿಲ್ಲ. ಈ ಬಗ್ಗೆ ನಾನು ಉಪ ವಿಭಾಗಾಧಿಕಾರಿ ಹೇಳಿ, ಆ ತಾಂಡಾವನ್ನು ಕಂದಾಯ ಗ್ರಾಮವಾಗಿ ತಕ್ಷಣ ಘೋಷಣೆ ಮಾಡಬೇಕೆಂದು ಸೂಚನೆ ನೀಡುತ್ತೇನೆ. ಇದರ ಜೊತೆಗೆ, ಇನ್ನೊಂದು ತಾಂಡಾ ಸರ್ಕಾರಿ ಜಾಗದಲ್ಲಿರುವುದರಿಂದ ಅದನ್ನು ಕಂದಾಯ ಗ್ರಾಮ ಎಂದು ಘೋಷಣೆ ಮಾಡುವುದಕ್ಕೆ ಯಾವುದೇ ಸಮಸ್ಯೆ ಇರುವುದಿಲ್ಲ. ಅದನ್ನೂ ಕಂದಾಯ ಗ್ರಾಮ ಎಂದು ಘೋಷಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸುಮಾರು 1400 ತಾಂಡಾಗಳನ್ನು ಕಂದಾಯ ಗ್ರಾಮ ಎಂದು ಘೋಷಣೆ ಮಾಡುವುದಕ್ಕೆ ನೋಟಿಫಿಕೇಷನ್ ಮಾಡಿರುತ್ತೇವೆ. ಅವುಗಳಲ್ಲಿ 803 ಗ್ರಾಮಗಳಿಗೆ ಈಗಾಗಲೇ ಅಧಿಸೂಚನೆ ಸಹ ಹೊರಡಿಸಲಾಗಿರುತ್ತದೆ. ನನ್ನ ಮೊದಲ ಆದ್ಯತೆ ಏನೆಂದರೆ, ಕಂದಾಯ ಗ್ರಾಮಗಳನ್ನು ಎಲ್ಲಾ ಕಡೆ ಘೋಷಣೆ ಮಾಡುವುದಾಗಿದೆ. ಆ ರೀತಿ ಮಾಡದೇ ಇದ್ದರೆ, ಅವರಿಗೆ ಯಾವುದೇ ಸೌಲಭ್ಯಗಳು ಅಂದರೆ, ಆಸ್ಪತ್ರೆ, ಶಾಲೆಗಳು, ರಸ್ತೆ ಅಥವಾ ಇನ್ನಿತರ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ. ಆದುದರಿಂದ, ಆ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದನ್ನು ನಾವು ಆದಷ್ಟು ಶೀಘ್ರದಲ್ಲಿ ಮಾಡುತ್ತೇವೆ. ಈ ಬಗ್ಗೆ ಕಂದಾಯ ಗ್ರಾಮಗಳನ್ನು ಘೋಷಣೆ ಮಾಡಬೇಕೆಂದು ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳೆದ 2 ತಿಂಗಳ ಹಿಂದೆಯೇ ಪತ್ರ ಬರೆದಿರುತ್ತೇನೆ. ಆದುದರಿಂದ, ಈ ಲಂಬಾಣಿ ತಾಂಡಾ ಏನಿದೆ, ಅದಕ್ಕೆ ವಿಶೇಷ ಆದ್ಯತೆ ಕೊಟ್ಟು, ಅರಣ್ಯ ಇಲಾಖೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಗದಲ್ಲಿರುವ ತಾಂಡಾ ಮತ್ತು ಸರ್ಕಾರಿ ಜಾಗದಲ್ಲಿರುವ ತಾಂಡಾಗಳನ್ನು ಕಂದಾಯ ಗ್ರಾಮವಾಗಿ ಘೋಷಣೆ ಮಾಡುವುದಕ್ಕೆ ನಾನು ಸೂಚನೆಯನ್ನು ನೀಡುತ್ತೇನೆ. ಈ ವಿಷಯದಲ್ಲಿ ಯಾವುದೇ ತೊಂದರೆ ಇರುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಬಹಳ ಸಮಾಧಾನವಾದಂತಹ ಉತ್ತರ ಬಂದಿರುತ್ತದೆ. ಆದರೆ, ನಾನು ಒತ್ತಾಯ ಮಾಡುವುದೇನೆಂದರೆ, ಲಂಬಾಣಿ ತಾಂಡಾಗಳಾಗಲಿ, ಭೋವಿ ಹಟ್ಟಿಗಳಾಗಲಿ ಅವುಗಳನ್ನು ಕಂದಾಯ ಗ್ರಾಮಗಳೆಂದು ಘೋಷಣೆ ಮಾಡುತ್ತೇವೆಂದು ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ನಮ್ಮ ರಾಜ್ಯದಲ್ಲಿ ಈಗಾಗಲೇ 1400 ತಾಂಡಾಗಳನ್ನು ಕಂದಾಯ ಗ್ರಾಮ ಎಂದು ಘೋಷಣೆ ಮಾಡಿದ್ದೇವೆಂದು ಸಹ ಉತ್ತರ ನೀಡಿರುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಒಟ್ಟಾರೆಯಾಗಿ ಸುಮಾರು 5000 ತಾಂಡಾಗಳು ಇರುತ್ತವೆ. ಸರ್ಕಾರ ಇದನ್ನು ಕೂಡಲೇ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಿ, ಅವರಿಗೆ ಯಾವ ಸೌಲಭ್ಯಗಳು ಸಿಗಬೇಕು ಅವುಗಳನ್ನು ನೀಡಬೇಕೆಂದು ಪ್ರಿನಂತಿ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ನೀಡಿದ್ದು, ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಆದರೆ, ಇದುವರೆವಿಗೂ ಸರ್ಕಾರ ಸರ್ವೆ ಮಾಡಿ ತಾಂಡಾಗಳನ್ನು ಗುರುತಿಸಿ, ಅಧಿಕೃತವಾಗಿ ಇಷ್ಟು ತಾಂಡಾಗಳು ನಮ್ಮ ರಾಜ್ಯದಲ್ಲಿವೆ ಎಂದು ಉತ್ತರ ನೀಡಿರುತ್ತಾರೆ, ಅದರಲ್ಲಿ ಸಾಕಷ್ಟು ತಾಂಡಾಗಳು ಕೈಬಿಟ್ಟು ಹೋಗಿರುತ್ತೇವೆ. ಈ ಬಗ್ಗೆ ಮಾನ್ಯ ಪಶುಸಂಗೋಪನೆ ಸಚಿವರಿಗೂ ಸಹ ಗೊತ್ತಿದೆ. ಆ ಎಲ್ಲಾ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಿ, ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮನವಿಗೆ ನಾವು ಸಕರಾತ್ಮಕವಾಗಿ ಸ್ಪಂದಿಸುತ್ತೇವೆ. ಏಕೆಂದರೆ, ಲಂಬಾಣಿ ತಾಂಡಾಗಳು ಬಹಳ ತುಳಿತಕ್ಕೆ ಒಳಗಾದಂತಹ ಜನ. ಅವರಿಗೆ ನಾಗರಿಕ ಸೌಲಭ್ಯ ಸಿಗಬೇಕು. ಅದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದಕ್ಕೆ ನಾವು ಹೆಚ್ಚಿನ ಪ್ರಾಧಾನ್ಯತೆ ನೀಡಿ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:416**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಪಶುಸಂಗೋಪನಾ ಇಲಾಖೆಯಲ್ಲಿ ಮುಖ್ಯ ಪಶುವೈದ್ಯರು, ಹಿರಿಯ ಪಶುವೈದ್ಯರು, ಪಶುವೈದ್ಯರು ಮತ್ತು ಇತರೆ ಸಿಬ್ಬಂದಿಯ ಎಷ್ಟು ಹುದ್ದೆಗಳು ಮಂಜೂರಾಗಿವೆ, ಎಷ್ಟು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇರುತ್ತವೆ ಎಂಬ ಬಗ್ಗೆ ಮಾಹಿತಿ ಕೇಳಿದ್ದೆನು. ಅದಕ್ಕೆ ಸವಿಸ್ತಾರವಾದ ಒಂದು ದೊಡ್ಡ ಪುಸ್ತಕ ರೂಪದಲ್ಲಿ ಉತ್ತರ ನೀಡಿರುತ್ತಾರೆ. ನನ್ನ ಪ್ರಶ್ನೆಗೆ ಎಷ್ಟು ಹುದ್ದೆಗಳು ಮಂಜೂರಾಗಿವೆ, ಎಷ್ಟು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇರುತ್ತವೆ ಎಂಬ ಬಗ್ಗೆ ಜಿಲ್ಲಾವಾರು ಕ್ರೋಢೀಕರಣ ಮಾಡಿ ಮಾಹಿತಿ ನೀಡಬೇಕಾಗಿತ್ತು. ಆದರೆ, ನನಗೆ ಕೊಟ್ಟಿರುವ ಮಾಹಿತಿಯನ್ನು ಓದುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ಓದಲು Microscope ಬೇಕಾಗುತ್ತದೆ. ಹಾಗಾಗಿ, ನಾನು ಕೇಳಿರುವ ಮಾಹಿತಿಯನ್ನು ಓದುವ ರೂಪದಲ್ಲಿ ನೀಡಿದರೆ ಅನುಕೂಲವಾಗುತ್ತಿತ್ತು. ಇದನ್ನು ಓದುವುದು ಬಹಳ ಕಷ್ಟದ ಕೆಲಸ. ಆದುದರಿಂದ, ಈ ಬಗ್ಗೆ ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಆದರೂ ಕೂಡ ನಾನು ಪ್ರಯತ್ನ ಮಾಡಿ, ಕೆಲವೊಂದು ಅಂಶಗಳನ್ನು ಗುರುತಿಸಿರುತ್ತೇನೆ. ನನಗೆ ಜಿಲ್ಲಾವಾರು ಮಾಹಿತಿ ನೀಡಬೇಕಾಗಿತ್ತು.

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡುವುದಕ್ಕೆ ಅವಕಾಶ ನೀಡಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ತಾಲ್ಲೂಕುವಾರು ಒಟ್ಟು ಮಾಹಿತಿಯನ್ನು ನೀಡಬೇಕೆಂದು ಮಾನ್ಯ ಸಚಿವರು ತಮ್ಮ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಅದರಂತೆ, ಹಾವೇರಿ ಜಿಲ್ಲೆಯಲ್ಲಿ ಹಿರಿಯ ಪಶುವೈದ್ಯರ 24 ಹುದ್ದೆಗಳು ಮಂಜೂರಾಗಿದ್ದು, 13 ಹುದ್ದೆಗಳನ್ನು ತುಂಬಿದ್ದು, 11 ಖಾಲಿ ಉಳಿದಿರುತ್ತವೆ. ಪಶುವೈದ್ಯರ 51 ಮಂಜೂರಾದ ಹುದ್ದೆಗಳಿದ್ದು, 17 ಹುದ್ದೆಗಳನ್ನು ತುಂಬಿದ್ದು, 34 ಹುದ್ದೆಗಳು ಖಾಲಿ ಉಳಿದಿರುತ್ತವೆ. ಅದೇ ರೀತಿ, ಕಾರವಾರ ಜಿಲ್ಲೆಯಲ್ಲಿ ಹಿರಿಯ ಪಶುವೈದ್ಯರ 37 ಹುದ್ದೆಗಳು ಮಂಜೂರಾಗಿದ್ದು, 16 ಹುದ್ದೆಗಳನ್ನು ತುಂಬಿದ್ದು, 21 ಹುದ್ದೆಗಳು ಖಾಲಿ ಇರುತ್ತವೆ. ಪಶುವೈದ್ಯರ 47 ಹುದ್ದೆಗಳು ಮಂಜೂರಾಗಿದ್ದು, 3 ಹುದ್ದೆಗಳನ್ನು ತುಂಬಿದ್ದು, 44 ಹುದ್ದೆಗಳು ಖಾಲಿ ಉಳಿದಿರುತ್ತವೆ. ನನ್ನ ಪ್ರಶ್ನೆ ಏನೆಂದರೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಡೀ ರಾಜ್ಯದಲ್ಲಿರುವ ಹುದ್ದೆಗಳನ್ನು ಕ್ರೋಡೀಕರಣ ಮಾಡಿದರೆ ಹಿರಿಯ ಪಶುವೈದ್ಯರ ಹುದ್ದೆ ಇರಬಹುದು ಅಥವಾ ಪಶುವೈದ್ಯರು ಇರಬಹುದು ಅದರಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುತ್ತವೆ. ಇಷ್ಟೊಂದು ಖಾಲಿ ಹುದ್ದೆಗಳನ್ನು ಇಟ್ಟುಕೊಂಡು ಇವೊತ್ತಿನ ದಿವಸ ಪಶುಗಳಿಗೆ ಇಲಾಖೆಯಿಂದ ಯಾವ ರೀತಿ ವೈದ್ಯಕೀಯ ಸೌಲಭ್ಯ ಕೊಡುವುದಕ್ಕೆ ಸಾಧ್ಯವಿದೆ? ಎರಡನೆಯದಾಗಿ, ಖಾಲಿ ಇರುವಂತಹ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇರುತ್ತವೆ? ಸಮಯಕ್ಕೆ ಸರಿಯಾಗಿ ಪಶುಗಳಿಗೆ ಚಿಕಿತ್ಸೆ ಕೊಡದೇ ಇದ್ದರೆ ಅವುಗಳು ಸತ್ತು ಹೋಗುತ್ತವೆ. ಇದರಿಂದಾಗಿ, ರೈತರಿಗೆ ತೊಂದರೆ ಆಗುತ್ತದೆ. ಇದರಿಂದಾಗಿ, ಕೃಷಿ ಚಟುವಟಿಕೆಗಳು ನಿಂತುಬಿಡುತ್ತವೆ. ಅಲ್ಲದೇ, ಪ್ರಸ್ತುತ ಖಾಲಿ ಇರುವಂತಹ ಹುದ್ದೆಗಳು ಬಹಳ ವರ್ಷಗಳಿಂದಲೂ ಸಹ ಖಾಲಿ ಇರುತ್ತವೆ. ಈ ಬಗ್ಗೆ ನಾನು ಸಹ ಸದನದಲ್ಲಿ ಬಹಳಷ್ಟು ಪ್ರಶ್ನೆ ಕೇಳಿರುತ್ತೇನೆ. ಪ್ರಸ್ತುತ ಇರುವಂತಹ ಹುದ್ದೆಗಳನ್ನು ತಾತ್ಕಾಲಿಕವಾಗಿ ಏಜೆನ್ಸಿ ಮುಖಾಂತರ ಅಥವಾ ಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಿದ್ದಾರೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಒಂದು ವೇಳೆ ಆ ರೀತಿ ಭರ್ತಿ ಮಾಡದೇ ಇದ್ದರೆ, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅನುಮತಿ ತೆಗೆದುಕೊಳ್ಳಬೇಕು. ಒಂದು ವೇಳೆ ಅನುಮತಿ ತೆಗೆದುಕೊಂಡಿದ್ದರೆ ಎಷ್ಟು ಹುದ್ದೆಗಳನ್ನು ತುಂಬಲಾಗಿರುತ್ತದೆ. ಇದರ ಜೊತೆಗೆ, ಈ ಹುದ್ದೆಗಳಿಗೆ ಭರ್ತಿ ಮಾಡುವುದಕ್ಕೆ time-bound ಇಲ್ಲದೇ planning ಮಾಡಿದ್ದಾರೆಯೇ ಎಂಬ ಬಗ್ಗೆ ದಯಮಾಡಿ ಉತ್ತರ ನೀಡಬೇಕು.

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ. ಸಂಕನೂರರವರು ನಾವು ನೀಡಿರುವ ಉತ್ತರ ಓದುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಆ ಉತ್ತರ ಬಹಳ ಸ್ಪಷ್ಟವಾಗಿದೆ. ಆದಾಗ್ಯೂ, ಈ ಬಗ್ಗೆ ನಾನು ಅಧಿಕಾರಿಗಳಿಗೆ ತಿಳಿಸಿ, ಹೊಸ ಲಿಸ್ಟ್ ಕೊಡುವುದಕ್ಕೆ  ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು ರಾಜ್ಯದ ಎಲ್ಲಾ ಕಡೆಗಳಲ್ಲಿ ಪಶುವೈದ್ಯಕೀಯ ಸಿಬ್ಬಂದಿಗಳ ವಿವಿಧ ಹುದ್ದೆಗಳು ಖಾಲಿ ಇವೆಯೆಂದು ಹೇಳಿರುತ್ತಾರೆ. ಅವುಗಳು ಬಹಳ ದಿವಸಗಳಿಂದ ಖಾಲಿ ಇರುತ್ತವೆ. ನಾನು ಅಧಿಕಾರಕ್ಕೆ ಬಂದ ಕೂಡಲೇ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸದರಿ ಹುದ್ದೆಗಳನ್ನು ನೇಮಕಾತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ನೇರ ನೇಮಕಾತಿ ಹುದ್ದೆಗಳ ಕಡತವು ಆರ್ಥಿಕ ಇಲಾಖೆಯಲ್ಲಿದ್ದು, ಆ ಹುದ್ದೆಗಳಿಗೆ ಅನುಮತಿ ಸಿಕ್ಕ ನಂತರ, ಆದ್ಯತೆ ಮೇರೆಗೆ ಶೀಘ್ರಗತಿಯಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರೆ ಜೊತೆಗೆ, 600 ಪಶುವೈದ್ಯರ ಹುದ್ದೆಗಳ ಭರ್ತಿ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಕಡತವು ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುತ್ತದೆ. ಈ ಬಗ್ಗೆ ಎಲ್ಲರಿಗೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿರುತ್ತದೆ. ಈ ಹುದ್ದೆಗಳು ಕಳೆದ 20 ವರ್ಷಗಳಿಂದ ಖಾಲಿ ಇರುತ್ತವೆ. ಆದರೆ, ನಾನು ಅಧಿಕಾರಕ್ಕೆ ಬಂದ ನಂತರ, ಕಲ್ಯಾಣ ಕರ್ನಾಟಕ ಯೋಜನೆಯಡಿಯಲ್ಲಿ ಸದರಿ ಹುದ್ದೆಗಳನ್ನು ನೇಮಕಾತಿ ಮಾಡಿರುತ್ತೇನೆ. ಇದರ ಜೊತೆಗೆ, ಪ್ರಾಣಿ ಸಹಾಯವಾಣಿ ಕೂಡ ಪ್ರಾರಂಭಿಸಲಾಗಿರುತ್ತದೆ. ಇದರ ಮುಖಾಂತರ ರಾಜ್ಯದ ಯಾವ ಭಾಗದಿಂದ ಜಾನುವಾರುಗಳ ಚಿಕಿತ್ಸೆ ಬಗ್ಗೆ ಕರೆ ಬರುತ್ತದೆ, ಅಲ್ಲಿಗೆ ವೈದ್ಯರು ತುರ್ತಾಗಿ ಹೋಗಿ ಚಿಕಿತ್ಸೆ ನೀಡುವುದಕ್ಕೆ ವ್ಯವಸ್ಥೆ ಮಾಡಲಾಗಿರುತ್ತದೆ. ಈ ವಿಷಯದಲ್ಲಿ ಮಾನ್ಯ ಸಂಕನೂರರವರ ಕಾಳಜಿ ನಮಗೆ ಅರ್ಥವಾಗಿರುತ್ತದೆ. ಮುಂಬರುವ ದಿನಗಳಲ್ಲಿ ಖಾಲಿ ಹುದ್ದೆಗಳ ಮಂಜೂರಾತಿಗೆ ಆರ್ಥಿಕ ಇಲಾಖೆಯಿಂದ ಕಡತ ಅನುಮೋದನೆಯಾದ ನಂತರ ಶೀಘ್ರಗತಿಯಲ್ಲಿ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಆರ್ಥಿಕ ಇಲಾಖೆಯು ಸರ್ಕಾರವನ್ನು ಬಿಟ್ಟು ಇರುವುದಿಲ್ಲ. ಮಾನ್ಯ ಸಚಿವರು ಆಗಲೇ ಉತ್ತರ ನೀಡುತ್ತಾ, ಸದರಿ ಹುದ್ದೆಗಳು 20 ವರ್ಷಗಳಿಂದ ಖಾಲಿ ಇದೆಯೆಂದು ಹೇಳಿರುತ್ತಾರೆ. ಈ ರೀತಿಯಾದರೆ ಹೇಗೆ? ಅದಕ್ಕಾಗಿ, ಮಾನ್ಯ ಸಚಿವರು ಸಭೆ ಮಾಡಿ, ಆ ಸಭೆಗೆ ಆರ್ಥಿಕ ಇಲಾಖೆಯವರನ್ನು ಕರೆಯಿಸಿ, ಅವರಿಗೆ ಆದೇಶ ನೀಡಬೇಕು. ಇಲ್ಲದೇ ಹೋದರೆ, ರೈತರಿಗೆ ತೊಂದರೆಯಾಗುವುದಿಲ್ಲವೇ? ಇದರ ಜೊತೆಗೆ, ನಾನು ಸದರಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಕನಿಷ್ಠ ಪಕ್ಷ ಏಜೆನ್ಸಿ ಮುಖಾಂತರ ಅಥವಾ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಶಿಕ್ಷಣ ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ, ಅಲ್ಲಿ ಸದರಿ ಹುದ್ದೆಗಳನ್ನು ಏಜೆನ್ಸಿ ಮುಖಾಂತರ ಅಥವಾ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಳ್ಳುತ್ತಾರೆ. ದಯಮಾಡಿ, ಪಶುಸಂಗೋಪನಾ ಇಲಾಖೆಯಲ್ಲಿ ಆ ರೀತಿಯ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಆಗ್ರಹ ಮಾಡುತ್ತೇನೆ.

(ಮುಂದು...)

(688) 15.09.2021 11.20 YL-VK (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಆಯಿತು. ಮಾನ್ಯ ಸಚಿವರಿಗೆ ಉತ್ತರ ನೀಡಲು ಅವಕಾಶ ನೀಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಈಗಾಗಲೇ ಮಾಧ್ಯಮಗಳಲ್ಲಿ, ಪತ್ರಿಕೆಗಳಲ್ಲಿ ರೈತರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಾಕಷ್ಟು ವರದಿ ಬಂದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸಚಿವರೆ ತಾವು ಉತ್ತರವನ್ನು ನೀಡಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಈಗಾಗಲೇ 600 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯಲ್ಲಿ ಕಡತ ಇದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಬೇರೆ-ಬೇರೆ ಇಲಾಖೆಗಳಿಗೆ ನೌಕರರನ್ನು deputation ಮಾಡಲಾಗಿದ್ದು, ಮೊದಲು ಅವರನ್ನು ಅವರವರ ಮಾತೃ ಇಲಾಖೆಗೆ ವಾಪಸ್ಸು ಕರೆಯಿಸಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಎಲ್ಲಾ ನೌಕರರನ್ನು ಹಿಂಪಡೆಯಲಾಗಿದೆ. ಈಗಾಗಲೇ ಎರಡೂ-ಮೂರು ಜನ ಬಂದಿದ್ದು, ಇನ್ನೂ ಕೆಲವರು ಬರುತ್ತಿದ್ದಾರೆ.

**ಸಭಾಪತಿಯವರು:-** ಆಯಿತು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾಗಿ ಉತ್ತರವನ್ನು ನೀಡಲಿಲ್ಲ. ಕೊನೆ ಪಕ್ಷ 20 ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಅಗತ್ಯವಿರುವ ಕಡೆ ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಿ. ಶಿಕ್ಷಣ ಇಲಾಖೆಯಲ್ಲಿ ಆ ರೀತಿ ಮಾಡುತ್ತಾರೆ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಆರ್ಥಿಕ ಇಲಾಖೆಯ ಸಚಿವರೊಂದಿಗೆ ಸಭೆ ಸೇರಿಸಿ ಮಾತನಾಡಿ. ಮಾನ್ಯ ಸಚಿವರ ಮಾತನ್ನು ಆರ್ಥಿಕ ಇಲಾಖೆಯವರು ಕೇಳುವುದಿಲ್ಲವೇ?

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, 600 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯಲ್ಲಿ ಕಡತ ಇದೆ. ಈಗಾಗಲೇ ಪ್ರಕ್ರಿಯೆಯಲ್ಲಿದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ರಾಜ್ಯಕ್ಕೆ ಕೇವಲ 600 ಹುದ್ದೆಗಳನ್ನು ಭರ್ತಿ ಮಾಡಿಕೊಂಡರೆ ಎಲ್ಲಿ ಸಾಕಾಗುತ್ತದೆ.

**(ಗೊಂದಲ)**

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನೇಮಕ ಮಾಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೊನೆ ಪಕ್ಷ ಪಶುಗಳ ಸಲುವಾಗಿ ಹೊರಗುತ್ತಿಗೆ ಮೇಲಾದರೂ ನೌಕರರನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಈ ಸಂಬಂಧ ಏನು ಮಾಡುತ್ತೀರಿ ಎಂದು ಸ್ಪಷ್ಟವಾಗಿ ತಿಳಿಸಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆ ಒಳ್ಳೆಯದಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 418**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ವಿವರವಾಗಿ ಸಲ್ಲಿಸಿದ್ದು, ಕರಡು ಅಧಿಸೂಚನೆಯನ್ನು ಸಹ ಪ್ರಕಟಿಸಲಾಗಿರುತ್ತದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ದಯವಿಟ್ಟು ಈ ತಾರತಮ್ಯವನ್ನು ಎಷ್ಟು ದಿವಸಗಳೊಳಗೆ ಬಗೆಹರಿಸಲಾಗುತ್ತದೆ ಎಂಬುದನ್ನು ತಿಳಿಸಿದರೆ ಸೂಕ್ತವಾಗುತ್ತದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ದ್ವಿತೀಯ ದರ್ಜೆ ಸಹಾಯಕರುಗಳ ವೇತನವು ಒಂದೇ ಶ್ರೇಣಿಯದ್ದಾಗಿದ್ದು, ಬಡ್ತಿ ನೀಡುವ ಸಂದರ್ಭದಲ್ಲಿ ಅವರ ವೇತನವನ್ನು equal consider ಮಾಡಿ, ನೀಡಬೇಕೆನ್ನುವಂಥ ತೀರ್ಮಾನವನ್ನು ಈಗಾಗಲೇ ಸರ್ಕಾರ ತೆಗೆದುಕೊಂಡಿದೆ. ಅದಕ್ಕೆ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಅಧಿಸೂಚನೆ ಹೊರಡಿಸುವುದು ಬಾಕಿ ಇದೆ. ಅಧಿಸೂಚನೆ ಹೊರಡಿಸುವ ಮೊದಲು ಕಾನೂನು ಪ್ರಕಾರ ಏನೇನು ಆಕ್ಷೇಪಣೆ ಇದೆ ಎಂಬುದನ್ನು ಕೇಳಬೇಕಾಗಿದೆ. ಹಾಗಾಗಿ ಆಕ್ಷೇಪಣೆ ಬಗ್ಗೆ ಕೇಳಲಾಗುತ್ತಿದ್ದು, ಅದಾದ ತಕ್ಷಣವೇ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗುವುದು.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಆಕ್ಷೇಪಣೆಯನ್ನು ಸಹ ಕೇಳಲಾಗಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಹೌದು. ಬಂದಿದೆ. ಕೆಲವರು ಪರವಾಗಿದ್ದರೆ, ಕೆಲವರು ವಿರೋಧವಾಗಿ ಅಹವಾಲುಗಳನ್ನು ವ್ಯಕ್ತಪಡಿಸಿದ್ದಾರೆ. ಅವೆರಡನ್ನೂ ನೋಡಿಕೊಂಡು ಒಂದೇ ಜೇಷ್ಠತಾ ಪಟ್ಟಿ ಇರುವುದರಿಂದ ಸಮಾನ ವೇತನವನ್ನು ಪರಿಗಣಿಸಬೇಕೆಂದು ಸರ್ಕಾರ ನಿಲುವು ತೆಗೆದುಕೊಂಡಿದ್ದು, ನಾನು ಸಹ ಒಪ್ಪಿಕೊಂಡಿದ್ದೇನೆ. ಕಡತವನ್ನು ಕಳುಹಿಸಬೇಕಾಗಿದ್ದು, ಆದಷ್ಟು ಬೇಗ ಮಾಡಲಾಗುವುದು.

**ಶ್ರೀ ನಸೀರ್ ಅಹ್ಮದ್:-** ಆಯಿತು.

**ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರವರ ಪ್ರಶ್ನೆ ಸಂಖ್ಯೆ 415 ಕ್ಕೆ ಮಾನ್ಯ ಕಂದಾಯ ಸಚಿವರು 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ. ಆದರೆ, 15 ದಿವಸಗಳವರೆಗೆ ಸದನ ನಡೆಯುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಹೌದು.

**ಸಭಾಪತಿಯವರು:-** ಹಾಗಾಗಿ ಮಾನ್ಯ ಸಚಿವರೆ ಮುಂದಿನ ವಾರದೊಳಗೆ ಉತ್ತರವನ್ನು ತರಿಸಿಕೊಡಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬಿ.ಬಿ.ಎಂ.ಪಿ. ಯಲ್ಲಿ ಕಳೆದ 25 ವರ್ಷಗಳಿಂದ ಎಷ್ಟು ಕೆರೆಗಳು ಇದ್ದವು; ಪ್ರಸ್ತುತ ಎಷ್ಟು ಕೆರೆಗಳಿವೆ; ಎಷ್ಟೆಷ್ಟು ಕೆರೆಗಳು ಒತ್ತುವರಿಯಾಗಿದೆ ಎಂದು ಸಂಪೂರ್ಣವಾದಂಥ ಮಾಹಿತಿಯನ್ನು ಕೇಳಿದ್ದಾರೆ. ಯಾವುದಾದರೂ ಒಂದಕ್ಕೆ ಸೀಮಿತವಾಗಿದ್ದರೆ ಅಥವಾ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಮಾತ್ರ ಪ್ರಶ್ನೆಯನ್ನು ಕೇಳಿದ್ದರೆ ಉತ್ತರವನ್ನು ನೀಡಬಹುದಾಗಿತ್ತು. ಹಾಗಾಗಿ ಆ ಹಂತದಿಂದ ಈ ಹಂತದವರೆಗೂ ಯಾವ್ಯಾವ ಸಂದರ್ಭದಲ್ಲಿ ಎಲ್ಲೆಲ್ಲಿ ಕೆರೆಗಳನ್ನು ತೆರವುಗೊಳಿಸಿದ್ದಾರೆ ಎಂಬುದರ ಕುರಿತು ಮಾಹಿತಿಯನ್ನು ಕೇಳಿರುವುದರಿಂದ ಸ್ವಲ್ಪ ಸಮಯವನ್ನು ನೀಡಿದರೆ ಮಾಡಬಹುದು. ಒಂದು ವೇಳೆ ತಾವು ಪ್ರಾಯೋಗಿಕವಾಗಿ ಯಾವುದಾದರೂ ಒಂದು ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿ ಕೇಳಿದರೆ, ಮುಂದಿನ ವಾರದೊಳಗೆ ಉತ್ತರವನ್ನು ಒದಗಿಸುವಂಥ ಕೆಲಸ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಪ್ರಯತ್ನ ಮಾಡಿ. ನಂತರ ಉತ್ತರವನ್ನು ಒದಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ: 463

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಚಾರವನ್ನು ಬಹಳಷ್ಟು ತಿಳಿದುಕೊಂಡಿದ್ದಾರೆ. ದಿವಂಗತರುಗಳಾದ ಟಿ.ಬಿ.ಚಂದ್ರಶೇಖರ್, ಬಂಗಾರಪ್ಪ, ದೇವರಾಜ್ ನಾಯಕ್‌ರವರು ಸತತವಾಗಿ ಶಿವಮೊಗ್ಗ-ತಾಳಗುಪ್ಪ ಮತ್ತು ತಾಳಗುಪ್ಪ-ಹೊನ್ನಾವರಕ್ಕೆ ಪಾರ್ಲಿಮೆಂಟ್‌ನಲ್ಲಿ ರೈಲ್ವೆ ಮಾರ್ಗ ಕಲ್ಪಿಸಬೇಕೆಂದು ಪ್ರತಿ ರೈಲ್ವೆ ಬಜೆಟ್‌ನ ಭಾಷಣದ ಸಂದರ್ಭದಲ್ಲಿ ಬೇಡಿಕೆಯನ್ನಿಟ್ಟಿರುವುದನ್ನು ಮಾನ್ಯ ಸಚಿವರು ಗಮನಿಸಿದ್ದಾರೆ. ದಿ|| ಟಿ.ಬಿ.ಚಂದ್ರಶೇಖರ್‌ರವರು ಸತತವಾಗಿ 1980ನೇ ಸಾಲಿನಿಂದ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದು, 2010ನೇ ಸಾಲಿನಲ್ಲಿ ಸರ್ವೆ ಆಗುತ್ತದೆ. ಆ ಸರ್ವೆಯಲ್ಲಿ ಶಿವಮೊಗ್ಗ-ತಾಳಗುಪ್ಪ broad gauge line ಹಾಕಿದೆ ಹಾಗೆಯೇ ತಾಳಗುಪ್ಪ-ಹೊನ್ನಾವರದವರೆಗೂ 82 ಕಿಲೋ ಮೀಟರ್ ಲೈನ್ ಹಾಕಬೇಕೆಂಬುದರ ಸರ್ವೆ ರಿಪೋರ್ಟ್ ಅದರೊಳಗೆ ಇದೆ. ಇದರಿಂದಾಗಿ ಮಂಗಳೂರು, ಕಾರವಾರ, ಮುಂಬೈ ಮತ್ತು ಗೋವಾಕ್ಕೆ ಹೋಗಲು ಬಹಳ ಅನುಕೂಲವಾಗುತ್ತದೆ ಎನ್ನುವಂಥ ವಿಚಾರವನ್ನು ಸರ್ವೆಯ ವರದಿಯಲ್ಲಿ ತಿಳಿಸಿದ್ದಾರೆ. ತದನಂತರ ಮಾಜಿ ರೈಲ್ವೆ ಸಚಿವರಾದಂಥ ಶ್ರೀ ಡಿ.ವಿ.ಸದಾನಂದಗೌಡರು ಈ ಯೋಜನೆಗೆ ಯಾವುದೇ ಆಡಚಣೆಗಳಿದ್ದರೆ ಆದಷ್ಟು ಬೇಗ ಬಗೆಹರಿಸಿ, ಮುಂದೆ ತೆಗೆದುಕೊಂಡು ಹೋಗಲಾಗುವುದು ಎಂದು ತಿಳಿಸಿದ್ದರು. 2016ನೇ ಸಾಲಿನಲ್ಲಿ ರೈಲ್ವೆ ಸಚಿವರಾಗಿದ್ದಂತಹ ಶ್ರೀ ಸುರೇಶ್ ಪ್ರಭಾಕರ್ ಪ್ರಭುರವರು ರೈಲ್ವೆ ಮಾರ್ಗಕ್ಕಾಗಿಯೇ ಸುಮಾರು 2500 ಕೋಟಿ ರೂಪಾಯಿಯನ್ನು ಘೋಷಣೆ ಮಾಡಿ, ಹೊನ್ನಾವರ-ಸಿದ್ದಾಪುರಕ್ಕೂ ಸುಮಾರು 320 ಕೋಟಿ ರೂಪಾಯಿಗಳಷ್ಟು ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಮಾನ್ಯ ಸಚಿವರು ರೈಲ್ವೆ ಮಂಡಳಿಗೆ ಯಾವುದೇ ಪ್ರಸ್ತಾವನೆಯು ಬಂದಿಲ್ಲ, ರೈಲ್ವೆ ಮಂಡಳಿಯು ಮಂಜೂರು ಮಾಡಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅವರ ಪಕ್ಷದಿಂದಲೇ 25 ಜನ ಲೋಕಸಭಾ ಸದಸ್ಯರಾಗಿದ್ದಾರೆ, ಸಚಿವರಾಗಿ ಅವರು ಇದ್ದಾರೆ. ಹಾಗಾಗಿ ಆದಷ್ಟು ಬೇಗ ಈ ಯೋಜನೆಯನ್ನು ಪೂರ್ಣಗೊಳಿಸಿ. ಏಕೆಂದರೆ, ಉತ್ತರ ಕರ್ನಾಟಕಕ್ಕೆ ಹೋಗಬೇಕಾದರೆ ಹುಬ್ಬಳ್ಳಿಗೆ ಹೋಗಿ ಹೋಗಬೇಕು. ಇಲ್ಲದಿದ್ದರೆ ಶಿವಮೊಗ್ಗಕ್ಕೆ ಹೊಸ ವಿಮಾನ ನಿಲ್ದಾಣ ನಿರ್ಮಾಣವಾಗುತ್ತಿದ್ದು, ಅಲ್ಲಿಗೆ ಹೋಗಿ ಉತ್ತರ ಕರ್ನಾಟಕಕ್ಕೆ ಹೋಗಬೇಕು, ತಾಳಗುಪ್ಪಕ್ಕೆ ಹೋಗಿ ಹೊನ್ನಾವರಕ್ಕೆ ಹೋಗಬೇಕಾಗುತ್ತದೆ ಅಥವಾ ಮಂಗಳೂರಿಗೆ ಹೋಗಿ ಹೊನ್ನಾವರಕ್ಕೆ ಹೋಗಬೇಕಾಗುವುದರಿಂದ ಸುಮಾರು 100-150 ಕಿಲೋ ಮೀಟರ್ ಸುತ್ತಾಡಿಕೊಂಡು ಹೋಗಬೇಕಾಗುತ್ತದೆ. ಈ ಒಂದು ಯೋಜನೆಯನ್ನು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ರೀತಿ ಮುಂದೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ ಎಂಬುದನ್ನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಹಿರಿಯರಾದಂಥ ಮಾನ್ಯ ಸದಸ್ಯರು ಅವರ ಭಾವನೆಯನ್ನು ವ್ಯಕ್ತಪಡಿಸುತ್ತಾ, ಅವರ ಅನುಭವವನ್ನು ಹಂಚಿಕೊಂಡಿದ್ದಾರೆ. ತಾಳಗುಪ್ಪ-ಹೊನ್ನಾವರ ರೈಲ್ವೆ ಮಾರ್ಗವು ಸುಮಾರು 82 ಕಿಲೋ ಮೀಟರ್ ದೂರದ ಯೋಜನೆಯಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಹಿರಿಯರ ಅಪೇಕ್ಷೆ ಮತ್ತು ಆ ಭಾಗದ ಜನರ ನೋವು ಏನಿತ್ತು, ಅದಕ್ಕಾಗಿ ನಾನು ಸಹ 3 ದಿವಸಗಳಿಂದ ಸಾಕಷ್ಟು ಬೆಳಕನ್ನು ಚೆಲ್ಲುವಂಥ ಪ್ರಯತ್ನವನ್ನು ಮಾಡಿದ್ದೇನೆ. ಸುಮಾರು 82 ಕಿಲೋ ಮೀಟರ್‌ಗೆ ಸರ್ವೇ ಮಾಡಿ, ಆ ಸರ್ವೇ ವರದಿಯನ್ನು ಈಗಾಗಲೇ ಕಳುಹಿಸಲಾಗಿದೆ. 50:50 ಅನುಪಾತದಲ್ಲಿ ಮಾಡುವಂಥ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದರ ಜೊತೆಗೆ ಅಂದಿನ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಮತ್ತು ತದನಂತರ ಅಧಿಕಾರಕ್ಕೆ ಬಂದ ಸರ್ಕಾರದ ಸಂದರ್ಭದಲ್ಲಿ 09 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಅವುಗಳಲ್ಲಿ ಮುನಿರಾಬಾದ್-ಮೆಹಬೂಬ್ ನಗರ, ತುಮಕೂರು-ರಾಯದುರ್ಗ, ಚಿಕ್ಕಮಗಳೂರು-ಬೇಲೂರು, ಬಾಗಲಕೋಟೆ-ಕುಡುಚಿ, ಗದಗ-ವಾಡಿ, ತುಮಕೂರು-ದಾವಣಗೆರೆ, ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರು, ಬೇಲೂರು-ಹಾಸನ, ಧಾರವಾಡ-ಬೆಳಗಾವಿ ಈ ರೀತಿಯಾಗಿ 09 ಯೋಜನೆಗಳನ್ನು ಕೈಗೆತ್ತಿಕೊಂಡಾಗ ಅಂದಿನ ಸಚಿವರಾದಂಥ ದಿ|| ಸುರೇಶ್ ಅಂಗಡಿಯವರು ಸ್ವತಃ ಅವರೇ ಎರಡೂ-ಮೂರು ಸಭೆಗಳನ್ನು ನಡೆಸಿ, ಇವುಗಳಿಗೆ ಆದ್ಯತೆ ನೀಡಬೇಕೆನ್ನುವ ದೃಷ್ಟಿಯಿಂದ ಪ್ರಯತ್ನ ಮಾಡಿದರು. ಒಂದು ಸಮಸ್ಯೆಯೇನೆಂದರೆ, ಹಿಂದೆ ಇದ್ದಂಥ ಸರ್ಕಾರವಾಗಲಿ ಅಥವಾ ನಮ್ಮ ಸರ್ಕಾರವಾಗಲಿ 50:50 ಅನುಪಾತದಲ್ಲಿ ಏನು ಮಾಡಲಾಗುತ್ತಿದೆ, ಭೂಸ್ವಾಧೀನ ಏನಿತ್ತು, ಅದನ್ನು 4 ರಷ್ಟು ಅಧಿಕವಾಗಿ ಮಾಡಿದ್ದರಿಂದ ರಾಜ್ಯ ಸರ್ಕಾರಕ್ಕೆ ದೊಡ್ಡ ಹೊರೆಯಾಗುತ್ತಿದೆ. ಭೂಸ್ವಾಧೀನಕ್ಕಾಗಿ ಸುಮಾರು 3500 ಕೋಟಿ ರೂಪಾಯಿಗೂ ಮೇಲ್ಪಟ್ಟು ಹಣವನ್ನು ನೀಡಬೇಕಾಗಿದೆ. ಅವುಗಳೆಲ್ಲವನ್ನೂ ಪ್ರಾರಂಭ ಮಾಡಬೇಕೆನ್ನುವ ದೃಷ್ಟಿಯಿಂದಾಗಿ ಸುಮಾರು 10,000 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ನೀಡಬೇಕಾಗಿದೆ. ವಿಶೇಷವಾಗಿ ತಾಳಗುಪ್ಪ-ಹೊನ್ನಾವರಕ್ಕೆ ಸಂಬಂಧಿಸಿದಂತೆ ಬೆಳಗ್ಗೆ ಸಹ ರೈಲ್ವೆ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಇನ್ನು 15-20 ದಿವಸಗಳೊಳಗೆ ಒಂದು ಸಭೆಯನ್ನು ಮಾಡಿ, ತೀರ್ಮಾನ ಕೈಗೊಳ್ಳಲಾಗುವುದು. ಸಾಧ್ಯವಾದರೆ, ಮಾನ್ಯ ಸದಸ್ಯರು ಸಹ ಆ ಸಭೆಯಲ್ಲಿ ಪಾಲ್ಗೊಳ್ಳಬಹುದು. ಹುಬ್ಬಳ್ಳಿ ಮತ್ತು ಹೊನ್ನಾವರ ಯೋಜನೆಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಸಿದಂತೆ ಸುಮಾರು 131 ಕಿಲೋ ಮೀಟರ್ ದೂರದ ಸುಮಾರು 2845 ಕೋಟಿ ರೂಪಾಯಿಗಳ ಯೋಜನೆಯಾಗಿದ್ದು, ಈಗಾಗಲೇ 28 ಕಿಲೋ ಮೀಟರ್ ದೂರದವರೆಗೂ ರೈಲ್ವೆ ಮಾರ್ಗವನ್ನು ನಿರ್ಮಿಸಲಾಗಿದೆ. ಆದಾದ ನಂತರ Western Ghatsನ ಕೆಲವು ಪರಿಸರವಾದಿಗಳು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ತಾಳಗುಪ್ಪ-ಹೊನ್ನಾವರ 8-10 ಕಿಲೋ ಮೀಟರ್ ಹೊರತುಪಡಿಸಿದರೆ, ಉಳಿದೆಲ್ಲವೂ Western Ghats ನಲ್ಲಿ ಬರುವುದರಿಂದ ನಾನು ಮತ್ತು ಪ್ರಧಾನ ಕಾರ್ಯದರ್ಶಿಯವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಸಹ ಚರ್ಚೆ ಮಾಡಿ, ಈ ಸಂಬಂಧ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತರುವಂಥ ಪ್ರಯತ್ನ ಮಾಡಲಾಗುವುದು. ಯಾವುದೇ ಸರ್ಕಾರದ ಸಮಯದಲ್ಲಿ ಇರಲಿ, ಯಾವ್ಯಾವ ಯೋಜನೆಗಳು ನೆನೆಗುದಿಗೆ ಬಿದ್ದಿವೆ, ಅವುಗಳನ್ನು ಅವಶ್ಯಕತೆಗೆ ಅನುಗುಣವಾಗಿ ಕಲ್ಪಿಸಬೇಕು. ಲೋಕಸಭಾ ಸದಸ್ಯರಾಗಲಿ, ರಾಜ್ಯಸಭಾ ಸದಸ್ಯರಾಗಲಿ, ಶಾಸಕರಿಗೆ ಮತ್ತು ಜನಪ್ರತಿನಿಧಿಗಳಿಗೆ ಜನರ ಒತ್ತಡ ಬಂದಿದ್ದು, ಈ 9 ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಅದರ ಜೊತೆಗೆ ತಾಳಗುಪ್ಪ-ಹೊನ್ನಾವರವು ಸೇರ್ಪಡೆಯಾಗುತ್ತದೆ. ಈ ಎಲ್ಲಾ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ತಕ್ಷಣವೇ ಯಾವ್ಯಾವ ರೀತಿ ಕಾರ್ಯರೂಪಕ್ಕೆ ತರಬಹುದೋ, ಆ ಪ್ರಯತ್ನವನ್ನು ಮಾಡುವಾಗ ಸಂಬಂಧಪಟ್ಟ ಇಲಾಖಾಧಿಕಾರಿಗಳೊಂದಿಗೆ ಕುಳಿತು ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತಂದು, ಈ ಕೆಲಸಕ್ಕೆ ಆದ್ಯತಾನುಸಾರ ಕ್ರಮವಹಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು.

(ಮುಂದು...)

(689) 15.09.2021/11.30/ ಎಸ್‌ಕೆ- ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಚಿವರು ಏನೊಂದು ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಹುಬ್ಬಳ್ಳಿ-ಅಂಕೋಲಾ ರೈಲ್ವೆ ಲೈನ್‌ಗೆ ಬಹಳಷ್ಟು ಅಡೆತಡೆಗಳಿವೆ. ಮಾನ್ಯ ಸಚಿವರು ಹೇಳಿದ ಹಾಗೇ ಪರಿಸರ ವಿವಾದವಿರುವುದರಿಂದ, ಈ ಕೊಂಕಣ ರೈಲ್ವೆಯವರು ತಾಳಗುಪ್ಪ-ಹೊನ್ನಾವರ ರೈಲ್ವೆ ಮಾರ್ಗವನ್ನು ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಆಸಕ್ತಿಯನ್ನು ತೋರಿಸಿದ್ದಾರೆ. ತಾಳಗುಪ್ಪ-ಹೊನ್ನಾವರ ರೈಲ್ವೆ ಮಾರ್ಗದ ವಿಚಾರ ಬಂದಾಗ, ಅಲ್ಲಿ ಪರಿಸರವಾದಿಗಳ ಅಡಚಣೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏಕೆಂದರೆ, ರೈಲ್ವೆ ಮಾರ್ಗವನ್ನು ಸುರಂಗ ಮಾರ್ಗದಲ್ಲಿ ತೆಗೆದುಕೊಂಡು ಹೋಗುವಂತಹ ಯೋಜನೆಯನ್ನು ಕೊಟ್ಟಿದ್ದಾರೆ. ಅದರಿಂದ ತಾಳಗುಪ್ಪ-ಹೊನ್ನಾವರಕ್ಕೆ ರೈಲ್ವೆ ಮಾರ್ಗವನ್ನು ಮಾಡಿದಾಗ, ಮಂಗಳೂರು, ಕಾರವಾರ, ಭಟ್ಕಳ, ಹೊನ್ನಾವರ ಬಹಳಷ್ಟು ಸಣ್ಣ ಮತ್ತು ದೊಡ್ಡ ಬಂದರುಗಳಿಗೆ ಅನುಕೂಲವಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಿ ಈ ಒಂದು ಯೋಜನೆಗೆ ಎಷ್ಟು ಹಣವನ್ನು ಇಡುತ್ತಾರೆ ಎಂಬುದರ ಬಗ್ಗೆ ಮಾನ್ಯ ಸಚಿವರಿಗೆ ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನನಗಿಂತಲೂ ಮಾನ್ಯ ಹರಿಪ್ರಸಾದ್‌ರವರಿಗೆ ಈ ವಿಚಾರದ ಬಗ್ಗೆ ಸಾಕಷ್ಟು ಮಾಹಿತಿಯಿದೆ. ಈಗತಾನೇ ನಾನು ಹೊಸದಾಗಿ ಸಚಿವನಾಗಿ ಬಂದಿದ್ದೇನೆ. ಈ ವಿಚಾರದ ಬಗ್ಗೆ ನಾನು ಅಧಿಕಾರಿಗಳನ್ನು ಕರೆಯುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ದಿವಂಗತರಾದ ಮಾನ್ಯ ಜಾಫರ್ ಶರೀಫ್‌ರವನ್ನು ನೆನಪಿಸಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ರೈಲ್ವೆಯಲ್ಲಿ ಏನಾದರೂ ಬಹಳ ದೊಡ್ಡ ಕ್ರಾಂತಿಕಾರಿ ಬದಲಾವಣೆಗಳನ್ನು ಕರ್ನಾಟಕ ರಾಜ್ಯದಲ್ಲಿ ತಂದಿದ್ದು ಎಂದರೆ, ದಿವಂಗತರಾದ ಮಾನ್ಯ ಜಾಫರ್ ಶರೀಫ್‌ರವರು. ಅವರು ಕೊಂಕಣ ರೈಲ್ವೆ ತರುವಂತಹ ಸಂದರ್ಭದಲ್ಲಿ ಸಾಕಷ್ಟು ಕರ್ನಾಟಕ ರಾಜ್ಯದಲ್ಲಿರುವ ಬೇರೆ ಬೇರೆ ಪ್ರದೇಶಗಳನ್ನು ಲಿಂಕ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದೇ ದೃಷ್ಟಿಯಿಂದ ತಾಳಗುಪ್ಪ-ಹೊನ್ನಾವರ ರೈಲ್ವೆ ಮಾರ್ಗವನ್ನು ತೆಗೆದುಕೊಳ್ಳುವುದಕ್ಕೆ ಕೊಂಕಣ ರೈಲ್ವೆಯವರು ತಯಾರಿದ್ದಾರೆ. ಆ ವಿಚಾರದಲ್ಲಿ ಮಾನ್ಯ ಸಚಿವರು ಏನು ಹೆಜ್ಜೆಯನ್ನು ಇಟ್ಟಿದ್ದಾರೆ ಎಂಬ ಬಗ್ಗೆ ತಿಳಿಸಿದರೆ ಒಳ್ಳೆಯದು ಇತ್ತು.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಈ ಸದನ ಮುಗಿದ ಮೇಲೆ, ಇದಕ್ಕೆ ನಾನು ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಸಭೆಗೆ ಕರೆದು, ಸುರಂಗ ಮಾರ್ಗ ಯಾವ ರೀತಿ ಮಾಡಬೇಕು ಹಾಗೂ ಇದಕ್ಕೆ ಯಾವ ರೀತಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂಬ ಆದ್ಯತೆಯ ಜೊತೆಯಲ್ಲಿ ಒಂದು time bound programme ಅನ್ನು ಕೂಡ ನಾವು ಮಾಡಬೇಕಾಗುತ್ತದೆ. ಸುಮಾರು ವರ್ಷಗಳಿಂದ ಅನೇಕ ಯೋಜನೆಗಳು ಹಾಗೇ ಇರುವುದನ್ನು ನಾನು ನೋಡುತ್ತಿದ್ದೇನೆ. ಎಷ್ಟು ವರ್ಷಗಳಿಂದ ಇರುವಂತಹ ಯೋಜನೆಗಳು, ಅವು ಹಾಗೆಯೇ ಇವೆ. ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹದ್ದರಲ್ಲಿ ನಾನು ಮತ್ತು ನಮ್ಮ ಕಾರ್ಯದರ್ಶಿಗಳ ಜೊತೆಯಲ್ಲಿ ಬೆಳಗ್ಗೆ ತುಂಬಾ ಹೊತ್ತು ಚರ್ಚೆ ಮಾಡಿದ್ದೇವೆ. ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯನ್ನು ಕರೆಯುವಾಗ, ಮಾನ್ಯ ಸದಸ್ಯರು ಉಪಯುಕ್ತವಾದಂತಹ ಸಲಹೆಗಳನ್ನು ಕೂಡ ಸಾಧ್ಯವಾದರೆ ಕೊಡಬಹುದು. ಇಲ್ಲವಾದರೆ, ಮಾನ್ಯ ಸದಸ್ಯರನ್ನು ಸಭೆಗೆ ಕರೆದು, ಅದರ ಬಗ್ಗೆ ಚರ್ಚೆ ಮಾಡುತ್ತೇವೆ. ನಾನು ಮಾನ್ಯ ಮುಖ್ಯಮಂತ್ರಿ ಮತ್ತು ರೈಲ್ವೆ ಸಚಿವರ ಜೊತೆ ಚರ್ಚೆ ಮಾಡುತ್ತೇನೆ. ಮೊನ್ನೆ ತಾನೇ ಕೆಲವು ವಿಚಾರಗಳ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾನ್ಯ ರೈಲ್ವೆ ಸಚಿವರನ್ನು ಕೂಡ ಭೇಟಿ ಮಾಡಿದ್ದೇವೆ. ಅದರ ಜೊತೆಯಲ್ಲಿ ಇದನ್ನು ಸಹ ಪರಿಗಣಿಸಿ, ಆದ್ಯತೆಯ ಮೇಲೆ ಈ ಯೋಜನೆಗಳು ಆಗಬೇಕಾಗಿದೆ. ದಿವಂಗತರಾದ ಮಾನ್ಯ ಜಾಫರ್ ಶರೀಫ್‌ರವರು ರೈಲ್ವೆ ಇಲಾಖೆಗೆ ಬಹಳಷ್ಟು ದೊಡ್ಡ ಕೊಡುಗೆಯನ್ನು ಕೊಟ್ಟಿರುವುದನ್ನು ನಾನು ಚಿಕ್ಕವನಿಂದಾಗಿ ನೋಡಿದ್ದೇನೆ. ಅಂತಹ ಒಂದು ವ್ಯವಸ್ಥೆಯನ್ನು ನಾವು ಏನಾದರೊಂದು ಮಾಡಬೇಕೆನ್ನುವ ಬಯಕೆ ನಮ್ಮದಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಇದರ ಬಗ್ಗೆ ಆಸಕ್ತಿಯನ್ನು ವಹಿಸಿದ್ದಾರೆ. ಈ ಕೆಲಸವನ್ನು ಆದ್ಯತೆಯ ಮೇರೆಗೆ ಮಾಡುವುದರ ಬಗ್ಗೆ ಪ್ರಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಸಭೆ ಮಾಡುವಾಗ, ಮಾನ್ಯ ಹರಿಪ್ರಸಾದ್‌ರವರನ್ನು ಸಭೆಗೆ ಕರೆಯಿರಿ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 443**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಈ ಉತ್ತರದ ಬಗ್ಗೆ ನನಗೆ ಗೊಂದಲ ಉಂಟಾಗಿದೆ. ಕಳೆದ ಮೂರು ಬಾರಿ ಅಧಿವೇಶನದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾದ ಇನಾಂ ಜಮೀನನ್ನು ಯಾರಿಗೂ ಕೊಟ್ಟಿಲ್ಲವೆಂದು ಕಳೆದ ಒಂದು ಅಧಿವೇಶನದಲ್ಲಿ ಹೇಳಿದ್ದರು. ಈ ಸಲ ಅದರ ಪಟ್ಟಿಯನ್ನು ಕೊಟ್ಟಿರುವುದು ಅದೊಂದು. ಎರಡನೇಯದಾಗಿ, ಬೀದರ್ ನಗರದ ಕುಂಬಾರವಾಡ ಸರ್ವೆ ನಂಬರ್ 35 ಇನಾಂ ಜಮೀನಾಗಿದ್ದು, ಈ ಜಮೀನನ್ನು ಕೃಷಿಯೇತರ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರು. ಆರ್.ಸಿ.ಯವರು ವಿಚಾರಣೆಗೆ ಹಾಕಿದ್ದಾರೆ. ಅದು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಈಗ ಅದರ ಬಗ್ಗೆ ಕೇಳಿದರೆ, ಅದು ಪರಭಾರೆ ಆಗಿದೆ. ಅದು ಪರಭಾರೆಯಾಗುವುದಕ್ಕೆ, ಇಂತಿಷ್ಟು ಸಮಯ ಇರುತ್ತದೆ ಅಥವಾ regrant ಆದ ಮೇಲೆ, ಅದನ್ನು ಪರಭಾರೆ ಮಾಡಬೇಕೆಂದು ಹೇಳುತ್ತಾರೆ. ಅದು regrant ಆಗಲಾರದೇ, ಅದು ಪರಭಾರೆ ಹೇಗಾಯಿತು? 2019 ರಲ್ಲಿ ಮಾನ್ಯ ವಿಭಾಗೀಯ ಆಯುಕ್ತರು ತನಿಖೆಗೆ ಆದೇಶ ಮಾಡಿದ್ದಾರೆ. ಅದರ ನಂತರ ಇಲ್ಲಿಯವರೆಗೆ ಲೇಔಟ್ ಮಾಡಿ, ಮಾರಾಟ ಮಾಡುತ್ತಿರುವುದು ಹೇಗೆ? 1972-73 ರಲ್ಲಿ ಇನಾಂ ಜಮೀನುದಾರರ ಹೆಸರು ಶ್ರೀ ದಶಪ್ಪ ಅಡೆಪ್ಪಾ ಕಲ್ಲಪ್ಪ ಎಂಬುವವರ ಹೆಸರಿನಲ್ಲಿ ಇರುತ್ತದೆ. ಅದು 1973-74 ರಲ್ಲಿ ಬೇರೆಯವರ ಹೆಸರಿನಲ್ಲಿ ವರ್ಗಾವಣೆಯಾಗುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ಎಂಬುದರ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಬೀದರ್ ನಗರದ ಕುಂಬರವಾಡ ಸರ್ವೆ ನಂಬರ್ 35 ರಲ್ಲಿ 3 ಎಕರೆ 32 ಗುಂಟೆ ಇನಾಂ ಜಮೀನಾಗಿದ್ದು, ಶ್ರೀ ಲಾಲಪ್ಪ ಬಿನ್ ರಾಮಪ್ಪ ಪರಿಶಿಷ್ಟ ಜಾತಿಯವರು ಇನಾಂದಾರರಾಗಿರುತ್ತಾರೆ. ಅದಾದ ಮೇಲೆ 1983-84 ರಲ್ಲಿ ಭೂ ನ್ಯಾಯ ಮಂಡಳಿಯ ಆದೇಶದ ಪ್ರಕಾರ ಶ್ರೀ ಶಂಕರ್‌ರಾವ್ ತಂದೆ ಕಲ್ಲಪ್ಪಾ ಪುಲೆಕರ ರವರು ಕುರಬ ಜಾತಿಗೆ ಸೇರಿದವರು. ಅವರು ಇದಕ್ಕೆ ಗೇಣಿದಾರರು ಎಂದು ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನವಾಗುತ್ತದೆ. ಇನಾಂದಾರ ಯಾರು ಇರುತ್ತಾರೋ, ಅವರು ಇದಕ್ಕೆ ಪ್ರಶ್ನೆ ಮಾಡಿ, ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೋಗಿರುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಉಚ್ಚ ನ್ಯಾಯಾಲಯವು ಭೂ ನ್ಯಾಯ ಮಂಡಳಿ ಮಾಡಿದಂತಹ ಆದೇಶವನ್ನು ಎತ್ತಿ ಹಿಡಿದಿದ್ದು, ಆ ಕುರುಬ ಜನಾಂಗದೊಬ್ಬ ಶ್ರೀ ಕಲ್ಲೇಶಪ್ಪನವರ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಮಾಡಿದೆ. ಇದಾದ ಮೇಲೆ ಅವರ ಮಕ್ಕಳ ಹೆಸರಿಗೆ ಇದನ್ನು ಖಾತೆ ಮಾಡಲಾಗಿದೆ. ಹದಿನೈದು ವರ್ಷಗಳು ಮುಗಿದಿರುವುದರಿಂದ, ಸರ್ಕಾರದ ಅನುಮತಿಯನ್ನು ಪಡೆದು ಅವರು ಅದನ್ನು ಪರಿವರ್ತನೆ ಮಾಡಿ, ಲೇಔಟ್ ಮಾಡಿದ್ದಾರೆ. ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಭೂನ್ಯಾಯ ಮಂಡಳಿಯ ಆದೇಶಗಳಾಗಿರುವುದರಿಂದ ಯಾವುದೇ ಉಲ್ಲಂಘನೆಯಾಗಿಲ್ಲವೆಂದು ಮಾನ್ಯ ಜಿಲ್ಲಾಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. ಶ್ರೀಮತಿ ನಿರ್ಮಲಾ ಎನ್ನುವವರು ಇದು ಇನಾಂ ಜಮೀನು ಎಂದು ದೂರನ್ನು ಕೊಟ್ಟಿದ್ದಾರೆ. ಮಾನ್ಯ ನ್ಯಾಯಾಲಯದ ಆದೇಶವಾದ ಮೇಲೆ, ಅದು ಆ ರೀತಿಯಾಗುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಅವರು ನೀಡಿರುವಂತಹ ಮನವಿ ಏನಿದೆಯೋ, ಅದನ್ನು ನಾವು ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗದವರಿಗೆ ಕೊಟ್ಟಿದ್ದೇವೆ. ಹದಿನೈದು ದಿನಗಳೊಳಗಾಗಿ ಮಾನ್ಯ ಪ್ರಾದೇಶಿಕ ಆಯುಕ್ತರು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಅಂತಿಮ ಆದೇಶವನ್ನು ಹೊರಡಿಸುತ್ತಾರೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಡಿಸೆಂಬರ್ 2020 ರಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಇವರಿಗೆ ದಾಖಲಾತಿಗಳನ್ನು ಒದಗಿಸಿದ್ದೇನೆ. ಇಲ್ಲಿಯವರೆಗೂ ತನಿಖೆ ಪ್ರಾರಂಭ ಮಾಡಿಲ್ಲ. ಅವರು ಯಾರು ಜಾಗವನ್ನು ತೆಗೆದುಕೊಂಡಿದ್ದಾರೋ, ಅವರು ಮಾರಾಟ ಮಾಡುತ್ತಿದ್ದಾರೆ. ಆದರೆ ಎಲ್ಲ ಕೆಲಸ ನಡೆಯುತ್ತಿದೆ. ಆದರೆ ಈಗ ಮಾನ್ಯ ನ್ಯಾಯಾಲಯದಲ್ಲಿ ಇದೆ ಎಂದು ಹೇಳುತ್ತಿದ್ದಾರೆ. ಭೂ ನ್ಯಾಯ ಮಂಡಳಿಯವರು ಇವರ ಹೆಸರಿಗೆ ಹೇಗೆ ಮಾಡುವುದಕ್ಕೆ ಸಾಧ್ಯ? 1972-73 ರಲ್ಲಿ ಇನಾಂದಾರರ ಹೆಸರಿನಲ್ಲಿ ಇರುತ್ತದೆ. 1973-74 ರಲ್ಲಿ ಮತ್ತೆ ಇವನ ಹೆಸರಿಗೆ ಆಗುತ್ತದೆ. 1988 ರಲ್ಲಿ ಭೂನ್ಯಾಯ ಮಂಡಳಿ ಮಾಡಿದ್ದು ಎಂದು ಹೇಳುತ್ತಿದ್ದೀರಿ. ಆದರೆ 1974 ರಲ್ಲಿ ಪಹಣಿ ಹೇಗೆ ಬಂತು? ಇದು ಹೇಗಾಯಿತು? ಇದು ಮೋಸ ನಡೆಯುತ್ತಿದೆ. ಬಡವರಿಗೆ ಇಲ್ಲಿ ಅನ್ಯಾಯವಾಗುತ್ತಿದೆ. ಇದನ್ನು ತಡೆಯಿರಿ ಎಂದು ಕಳೆದ ಬಾರಿ ಅಧಿವೇಶನದಲ್ಲಿ ಹೇಳಿದ್ದರೂ ಕೂಡ ಮಾನ್ಯ ಸಚಿವರು ಇದರ ಬಗ್ಗೆ ಕ್ರಮ ಕೈಗೊಂಡಿಲ್ಲವೆಂಬ ಬಗ್ಗೆ ನನ್ನ ಆರೋಪಣೆಯಾಗಿದೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಹೇಳಿರುವಂತೆ, ಮಾನ್ಯ ಉಚ್ಚ ನ್ಯಾಯಾಲಯವು ಕುರುಬ ಜನಾಂಗದ ಪರ 2005 ರಲ್ಲಿ ಆದೇಶವನ್ನು ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಭೂ ಪರಿವರ್ತನೆ, ಅದಾದ ಮೇಲೆ ಹದಿನೈದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳವರೆಗೆ ಪರಭಾರೆ ಮಾಡಬಾರದೆಂಬ ನಿಯಮ ಏನಿದೆಯೋ, ಆ ನಿಯಮವನ್ನೆಲ್ಲಾ ಪಾಲನೆ ಮಾಡಿದ್ದಾರೆ. ಇಷ್ಟಾದರೂ ಕೂಡ, ಅವರು ದೂರು ಕೊಟ್ಟ ಮೇಲೆ ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ಇವರಿಗೆ ಗಮನಹರಿಸುವುದಕ್ಕೆ ಹೇಳಿದ್ದೇನೆ. ಹದಿನೈದು ದಿನಗಳೊಳಗಾಗಿ, ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ಅವರು ಇದರ ಬಗ್ಗೆ ತೀರ್ಪುನ್ನು ಕೊಡುತ್ತಾರೆ.

**ಸಭಾಪತಿಯವರು:-** ಆಯಿತು.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ,ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮ ಮಾತನ್ನು ಸಾಕು ಮಾಡಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾದೇಶಿಕ ಆಯುಕ್ತರು ನಿರ್ಣಯ ತೆಗೆದುಕೊಳ್ಳುವವರೆಗೆ ಭೂ ಪರಿವರ್ತನೆ ಮಾಡಿರುವುದನ್ನು ತಡೆದು, ಅದನ್ನು ಹಿಂಪಡೆದುಕೊಳ್ಳಬೇಕೆಂಬ ಬಗ್ಗೆ ನನ್ನ ಅಗ್ರಹವಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಇದರ ಬಗ್ಗೆ ಏನು ಹೇಳುತ್ತೀರಾ?

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಭೂ ಪರಿವರ್ತನೆ ಆಗಿ ಹೋಗಿ ಬಿಟ್ಟಿದೆ. ಅದನ್ನು ತಡೆ ಹಿಡಿಯುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವಾಗಿರುವುದರಿಂದ ಅದನ್ನು ನಾವು ತಡೆಹಿಡಿಯುವುದಕ್ಕೆ ಬರುವುದಿಲ್ಲ. ಆದರೆ ಇವರು ಕೊಟ್ಟಿರುವಂತಹ ಅರ್ಜಿಯನ್ನು ತೆಗೆದುಕೊಂಡು, ಅದನ್ನು ಪರಿಶೀಲನೆ ಮಾಡಿ, ಹದಿನೈದು ದಿನಗಳಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಏನೊಂದು ವರದಿಯನ್ನು ಕೊಡುತ್ತಾರೋ, ಆ ವರದಿಯ ಮೇಲೆ ಪ್ರಾದೇಶಿಕ ಆಯುಕ್ತರು ಅಂತಿಮ ತೀರ್ಪುನ್ನು ಕೊಡುತ್ತಾರೆ. ಅದು ಅಂತಿಮ ತೀರ್ಪು ಬಂದಮೇಲೆ ಮತ್ತೆ ಅಪೀಲಿಗೆ ಹೋಗುವುದಾದರೆ, ಹೋಗಬಹುದು. ನಾವು ಕಾನೂನಿನ ಅಡಿಯಲ್ಲಿ ಏನು ಮಾಡಬೇಕೋ, ಅಷ್ಟು ಮಾತ್ರ ಮಾಡಿದ್ದೇವೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ್ ಅರಳಿಯವರೇ ತಮ್ಮ ಮಾತನ್ನು ಸಾಕು ಮಾಡಿ. ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ರವಿಯವರೇ ಸದನಕ್ಕೆ ಯಾರು ತಡ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡಿ ಬರುತ್ತೀರೋ, ನಾನು ಅವರ ಪ್ರಶ್ನೆಯನ್ನು ತೆಗೆದುಕೊಳ್ಳುವುದಿಲ್ಲ. ದಯವಿಟ್ಟು, ಅರ್ಥ ಮಾಡಿಕೊಳ್ಳಿ. ಮಾನ್ಯ ರವಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 478**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ರಾಜ್ಯದಲ್ಲಿರುವ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಬೀದರ್ ಜಿಲ್ಲೆಯಲ್ಲಿ 01 ಪಶು ವೈದ್ಯಕೀಯ ವಿಶ್ವವಿದ್ಯಾಲಯವು ಇದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹೊಸ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳನ್ನು ತೆರೆಯುವ ಯೋಜನೆ ಸರ್ಕಾರದಲ್ಲಿ ಇದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿರುವ ಖಾಲಿ ಇರುವಂತಹ ಹುದ್ದೆಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆಯನ್ನು ಕೇಳಿದ್ದೆ. ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿರುವ ಮಂಜೂರಾಗಿರುವಂತಹ ಹುದ್ದೆಗಳ ಸಂಖ್ಯೆ 915 ಮತ್ತು ಖಾಲಿ ಇರುವಂತಹ ಹುದ್ದೆಗಳು 460 ಇವೆ. ಅಂದರೆ ಶೇಕಡ 50 ರಷ್ಟು ಖಾಲಿ ಇದೆ. ನಮ್ಮ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳು ಇರಬಹುದು. ಆದರೆ ನಾವು ಸಿಲ್ಕ್ ಮಿಲ್ಕ್ . . .

(ಮುಂದು)

(690) 15.09.2021,11.40, ಟಿಸಿಹೆಚ್-ಬಿಎನ್ಎಸ್ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಕೊರೋನಾದ ಸಂದರ್ಭದಲ್ಲೂ ಕೂಡ ಜನರ ಕೈ ಹಿಡಿದಿರುವುದು ಮಿಲ್ಕ್. ನಮ್ಮ ಬಮೂಲ್ ಘಟಕದಲ್ಲೇ ಪ್ರತಿ ದಿನ ಸುಮಾರು 18 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಆ ಇಲಾಖೆಯಲ್ಲಿ ಈಗ 460 ಹುದ್ದೆಗಳು ಖಾಲಿ ಇದ್ದರೆ ಕೆಲಸ ಹೇಗೆ ನಡೆಯುತ್ತದೆ? ಮಾನ್ಯ ಸಚಿವರು ಕೂಡ ಡೈರಿ ಮಾಡತಕ್ಕಂಥವರು. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಹೈನುಗಾರಿಕೆಯನ್ನೇ ಜನ ನಂಬಿಕೊಂಡಿದ್ದಾರೆ. ಬೃಹತ್ ಪ್ರಮಾಣದಲ್ಲಿ ಶೇ.50ರಷ್ಟು ಹುದ್ದೆಗಳು ಖಾಲಿ ಇವೆ. ಸರ್ಕಾರ ಈ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಆ ಉದ್ಯಮ ಹೇಗೆ ಉಳಿಯುತ್ತದೆ; ರೈತರು ಬದುಕಲು ಹೇಗೆ ಸಾಧ್ಯ? ಮತ್ತೆ 460 ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಒಂದು ರಾಜ್ಯದಲ್ಲಿ ಬೀದರ್ ವಿಶ್ವವಿದ್ಯಾಲಯ ಇರತಕ್ಕಂಥದ್ದು. ಅದರ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯಾಪ್ತಿಯೊಳಗೆ ಎಷ್ಟು ಪಶುವೈದ್ಯಕೀಯ ಕಾಲೇಜುಗಳು ರಾಜ್ಯದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿವೆಯೆಂದು ದಯಮಾಡಿ ಹೇಳಬೇಕು. ಆಮೇಲೆ ಯಾವ್ಯಾವ ಕಾಲೇಜುಗಳಿಗೆ ನಿಗದಿ ಮಾಡಿರತಕ್ಕಂಥ ಸಂಖ್ಯೆ ಎಷ್ಟು? ವರ್ಷಾವಾರು ಯಾವ್ಯಾವ ಕಾಲೇಜುಗಳಲ್ಲಿ ಅಡ್ಮಿಷನ್ ಮಾಡಿಕೊಂಡು ಹೊರ ಬರುತ್ತಿರುವ ಪಶುವೈದ್ಯರ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ, ಸದರಿ ವಿಶ್ವವಿದ್ಯಾಲಯದಿಂದ ವರ್ಷಕ್ಕೆ ಒಟ್ಟು 340 ಪಶು ವೈದ್ಯರುಗಳು ಪದವಿ ಪಡೆದು ಹೊರಬರುತ್ತಿರುತ್ತಾರೆ ಎಂದು ಉತ್ತರ ಕೊಟ್ಟಿದ್ದಾರೆ. ಈಗ ರಾಜ್ಯಾದ್ಯಂತ ವ್ಯಾಸಂಗ ಮುಗಿಸಿ ಹೊರಗೆ ಬರತಕ್ಕಂಥ ಪಶುವೈದ್ಯರುಗಳಿಗೆ ನಮ್ಮ ರಾಜ್ಯದಲ್ಲಿ ಬಹಳ ಬೇಡಿಕೆ ಇದೆ. ಅವರ ಪೈಕಿ ಕೆಲವರು ಕಮರ್ಷಿಯಲ್ ಬ್ಯಾಂಕ್‌ನಲ್ಲಿ ಫೀಲ್ಡ್ ಆಫೀಸರ್‌ಗಳಾಗಿ ನೇಮಕಗೊಳ್ಳುತ್ತಿದ್ದಾರೆ. ಕೆಲವರು ಕೆ.ಎ.ಎಸ್., ಆಫೀಸರ್‌ಗಳಾಗಿ, ಕೆಲವರು ಬಯೋಟೆಕ್ ಕಂಪನಿಗಳಿಗೆ, ಕೆಲವರು pharmaceuticals ನಲ್ಲಿ ಔಷಧಿ ತಯಾರಿಕೆಗೆ, ಕೆಲವರು ವಿದೇಶಗಳಿಗೆ ಹೋಗುತ್ತಾರೆ, ಕೆಲವರು ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾರೆ. ಈ ರೀತಿಯಾಗಿ ಬೇರೆ ಬೇರೆ ಕಡೆಗಳಿಗೆ ಹೋಗುತ್ತಿದ್ದಾರೆ. ಆದ್ದರಿಂದ ದಯಮಾಡಿ ಸರ್ಕಾರ ಹೊಸ ಪಶುವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಏನಾದರು ಅವಕಾಶ ಮಾಡಿಕೊಡಬೇಕು. ಇದರ ಜೊತೆಗೆ ನೀವು ಯಾವ್ಯಾವ ಕಾಲೇಜ್‌ಗಳಿಗೆ 35-40 intake ತೆಗೆದುಕೊಳ್ಳುತ್ತಿದ್ದಾರೆ. ಈ intake ನ್ನು ಜಾಸ್ತಿ ಮಾಡಿಕೊಳ್ಳತಕ್ಕಂಥ ಅವಕಾಶ ಏನಾದರೂ ದಯಮಾಡಿ ಮಾಡುತ್ತಾರೆಯೇ? ಇದಾದ ನಂತರ ನನ್ನದು ಒಂದು ಉಪ ಪ್ರಶ್ನೆ ಇದೆ. ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಕೇಳುತ್ತೇನೆ.

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ರವಿಯವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಕೂಡ ದೇಶೀಯ ಗೋವನ್ನು ಹಾಗೂ ಬುಲ್ಸ್‌ನ್ನೂ ಕೂಡ ಸಾಕುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು. ಎಲ್ಲಾ ಎಂ.ಎಲ್.ಸಿ.ಗಳು ಈ ರೀತಿ ಮಾಡಿದರೆ ದೇಶಕ್ಕೆ ಬಹಳ ಒಳ್ಳೆಯದು ಆಗುತ್ತದೆ. ಮಾನ್ಯ ಸದಸ್ಯರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೊ ಅದಕ್ಕೆ ನಾವು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಪ್ರತಿ ಪ್ರಶ್ನೆಗಳು ಈ ವಿಷಯದ ಮೇಲೆಯೇ ಇದೆ. ಅದಕ್ಕಾಗಿ ನಾನು priority ಮೇಲೆ ಮಾನ್ಯ ಸಿ.ಎಂ.ರವರ ಜೊತೆ ಚರ್ಚೆ ಮಾಡುತ್ತಿದ್ದೇನೆ. ಆಮೇಲೆ ಆದಷ್ಟು ಬೇಗನೆ recruitment ನಡೆಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಎರಡನೆಯದಾಗಿ, ಬೆಂಗಳೂರು, ಬೀದರ್, ಶಿವಮೊಗ್ಗ, ಹಾಸನ ಮತ್ತು ಗದಗ್‌ನಲ್ಲಿ ಪಶುವೈದ್ಯಕೀಯ ಕಾಲೇಜ್‌ಗಳಿವೆ. ಮಾನ್ಯ ಎಸ್.ರವಿಯವರೇ ಇಲ್ಲೆಲ್ಲಾ, ಶೀಘ್ರದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

recruitment ಮಾಡಲು ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಎಸ್.ರವಿಯವರು ಸ್ವತಃ ಹಸುಗಳನ್ನು ಸಾಕುತ್ತಿದ್ದಾರೆ. ಅದಕ್ಕೆ ನಮಗೆ ಬಹಳ ಖುಷಿ ಇದೆ. ಹಾಗಾಗಿ, ನಾನು ನಿಮ್ಮ ಜಿಲ್ಲೆಗೆ ಬಂದಾಗ, ತಮ್ಮ ಗೋಶಾಲೆಗೆ ಬರುತ್ತೇನೆ. ತಾವು ಯಾವ ರೀತಿ ಮಾಡಿದ್ದೀರಿ, ತಮ್ಮ ಗೋಶಾಲೆಯನ್ನು ನೋಡಿಕೊಂಡು ಮುಂದಕ್ಕೆ ಮಾಡುತ್ತೇವೆ. ಆಮೇಲೆ ಸಾಕಷ್ಟು ಹುದ್ದೆಗಳು ಖಾಲಿ ಇದೆ. ನಾವು ಅವಶ್ಯಕತೆಯಿರುವ ಕಡೆ ಡಾಕ್ಟರ್‌ಗಳಿಗೆ incharge ಕೊಡುತ್ತಿದ್ದೇವೆ. ಆಮೇಲೆ ಪ್ರಾಣಿ ಸಹಾಯವಾಣಿ ಕೇಂದ್ರಗಳನ್ನು ಮಾಡಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ನಾನು ಸಚಿವನಾದ ನಂತರ, ದೇಶದಲ್ಲಿ ಪ್ರಥಮ ಬಾರಿಗೆ 'ಪ್ರಾಣಿ ಸಹಾಯವಾಣಿ' ಕೇಂದ್ರವನ್ನು ಪ್ರಾರಂಭ ಮಾಡಿದ್ದೇವೆ. ಆ ಮುಖಾಂತರ ಜನ ಫೋನ್ ಮಾಡಿದರೆ, ನಮ್ಮ ಡಾಕ್ಟರ್‌ಗಳು ಅಟೆಂಡ್ ಮಾಡುತ್ತಾರೆ. ಎಲ್ಲೆಲ್ಲಿ ಕೊರತೆ ಇದೆ, ಎಲ್ಲೆಲ್ಲಿ ಡಿಮಾಂಡ್ ಇದೆಯೊ ಅಲ್ಲಿಗೆ ಹೋಗಿ ಅಟೆಂಡ್ ಮಾಡುತ್ತಿದ್ದೇವೆ. ಅದಕ್ಕಾಗಿ ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಮಾಡುತ್ತೇನೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಕಾಲೇಜ್‌ಗಳಲ್ಲಿ intake ಜಾಸ್ತಿ ಮಾಡಿದರೆ ಹೊರಬರತಕ್ಕಂಥ ಡಾಕ್ಟರ್‌ಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಸರ್ಕಾರ ಅದಕ್ಕೆ ಅವಕಾಶ ಮಾಡಬೇಕು. ಇದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು. ಆಮೇಲೆ ಹಸುಗಳಿಗೆ ಕಾಲುಬಾಯಿ ಜ್ವರ ಒಮ್ಮೆ ಬಂದು ಹೋದರೆ ಹಸು ಮರಣ ಹೊಂದಬಹುದು. ಈ ಮೊದಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಶೇ.60-40 ರೇಷಿಯೋದಲ್ಲಿ ಹಣ ವಿನಿಯೋಗ ಮಾಡಿ ಮಾಡುತ್ತಿತ್ತು. 6 ತಿಂಗಳಿಗೊಮ್ಮೆ ಅದನ್ನು ಮಾಡಬೇಕಾಗಿತ್ತು. ಈ ಬಾರಿ ಅದು ಕಂಪ್ಲೀಷನ್ ಆಗಿಲ್ಲ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಹಸುಗಳಿಗೆ ಕಾಲುಬಾಯಿ ಜ್ವರ ಬಂದರೆ ಅದಕ್ಕೆ ಚಿಕಿತ್ಸೆ ನೀಡಲು ಕೊನೆಪಕ್ಷ ಡಾಕ್ಟರ್‌ಗಳೇ ಇಲ್ಲ. ಅರೆ ತಾಂತ್ರಿಕ ಸಿಬ್ಬಂದಿಯನ್ನಾದರೂ ಉಪಯೋಗಿಸಿಕೊಂಡು ಅದನ್ನು ಕಂಪ್ಲೀಷನ್ ಮಾಡಬೇಕು. ಇಲ್ಲವೆಂದರೆ ಕಾಲುಬಾಯಿ ಜ್ವರ ವ್ಯಾಪಕವಾಗಿ ಹರಡಿದರೆ ನಿಜಕ್ಕೂ ಬಹಳ ದೊಡ್ಡ ಹೊಡೆತ ಬೀಳುತ್ತದೆ. ಸರ್ಕಾರ ಅದಕ್ಕೆ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕು. ಮತ್ತೆ intake ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೋ ಹೇಳಲಿ.

**ಸಭಾಪತಿಯವರು:-** ಶ್ರೀ ಪ್ರಭು ಬಿ.ಚವ್ಹಾಣ್‌ರವರೇ, ಮಾನ್ಯ ಎಸ್.ರವಿಯವರು intake in colleges ಬಗ್ಗೆ ಕೇಳುತ್ತಿದ್ದಾರೆ ಅದರ ಬಗ್ಗೆ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಅದಕ್ಕೆ ಪ್ರಯತ್ನ ಮಾಡುತ್ತೇವೆ. ಆಮೇಲೆ ಈ ವರ್ಷ ಕೋವಿಡ್-19 ಬಂದಂಥ ಸಂದರ್ಭದಲ್ಲಿ ಕಾಲುಬಾಯಿ ಜ್ವರಕ್ಕೆ ಕೇಂದ್ರ ಸರ್ಕಾರದಲ್ಲಿat a time ಮಾಡಬೇಕಾಗಿತ್ತು ಮಾಡಿಲ್ಲ. ನಾನು ನಮ್ಮ ಇಲಾಖೆಯಲ್ಲಿ recruitment ಗೆ ಪ್ರಯತ್ನ ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.386**
**(ಉತ್ತರ ಲಗತ್ತಿಸಿದೆ)**

**ಶ್ರೀ ವಿಜಯ ಸಿಂಗ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಹುದ್ದೆಗಳ ವಿವರಗಳನ್ನೂ ಕೂಡ ಕೊಟ್ಟಿದ್ದಾರೆ. ಖಾಲಿ ಇರುವ ಹುದ್ದೆಗಳ ಪೈಕಿ, 616 ಹುದ್ದೆಗಳಿಗೆ ದಿನಾಂಕ 11.12.2019 ರಂದು ನೀಡಿರುವ ಅನುಮತಿಯ ಪ್ರಕಾರ ನೇಮಕಾತಿ ಮಾಡಲಾಗುವುದೆಂದು ಹೇಳಿದ್ದಾರೆ. ಆದರೆ ಆ ಹುದ್ದೆಗಳನ್ನು ಇನ್ನೂ ತುಂಬಿಲ್ಲ. ಅವರು ಕೋವಿಡ್-19 ಕಾರಣದಿಂದ ಹುದ್ದೆಗಳನ್ನು ತುಂಬಿಲ್ಲವೆಂದು ಹೇಳಿದ್ದಾರೆ. ಈಗ ಕೋವಿಡ್-19 ಬಂದು ಸುಮಾರು ಎರಡು ವರ್ಷ ಆಯಿತು. ನಾವು ಕೋವಿಡ್-19 ಜೊತೆ ಇರುವುದಕ್ಕೆ ರೆಡಿಯಾಗಿರಬೇಕು. ಅದಕ್ಕಾಗಿ ತಾವು ದಯವಿಟ್ಟು ಈ ಹುದ್ದೆಗಳನ್ನು ಆದಷ್ಟು ಬೇಗನೆ ತುಂಬಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ಮತ್ತೆ ಇಲ್ಲಿ ವಿಶ್ವವಿದ್ಯಾಲಯದ ದೈನಂದಿನ ಚಟುವಟಿಕೆಗಳಲ್ಲೂ ಕಷ್ಟವಾಗುತ್ತಿರುವುದರಿಂದ, ಆ ಹುದ್ದೆಗಳನ್ನು ಆದಷ್ಟು ಬೇಗನೆ ತುಂಬಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುತ್ತೇನೆ.

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಜಯಸಿಂಗ್‌ರವರು ನಮ್ಮ ಜಿಲ್ಲೆಯ ವಿಧಾನಪರಿಷತ್ತಿನ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಹಲವಾರು ವರ್ಷಗಳಿಂದ ನಮ್ಮ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇವೆ. ಅದಕ್ಕಾಗಿ ನಾನು ಮಾನ್ಯ ಎಲ್ಲಾ ಶಾಸಕರಿಗೂ ಒಂದೇ ಉತ್ತರ ನೀಡಬಯಸುತ್ತೇನೆ. ನಾನು ಕೂಡ ಅದಕ್ಕಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ಸಂಬಂಧ ಆರ್ಥಿಕ ಇಲಾಖೆಯಲ್ಲಿ ಫೈಲ್ ಇದೆ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಾನು ಈ ಇಲಾಖೆಗೆ ಸಚಿವರಾಗಿ ಬಂದ ನಂತರ, 'ಪಶು ಸಂಜೀವಿನಿ', 'ಪ್ರಾಣಿ ಸಹಾಯವಾಣಿ', 'ಪ್ರಾಣಿ ಕಲ್ಯಾಣ ಮಂಡಳಿ'ಯನ್ನು ಪ್ರಾರಂಭ ಮಾಡಿದ್ದೇನೆ. ನಾನು ಪ್ರತಿ ಜಿಲ್ಲೆಗೂ ಹೋಗುತ್ತಿದ್ದೇನೆ. ಪ್ರತಿ ಜಿಲ್ಲೆಯಲ್ಲೂ ಗೋಶಾಲೆಯನ್ನು ಕೂಡ ಸ್ಥಾಪನೆ ಮಾಡುತ್ತಿದ್ದೇವೆ. ಈ ರೀತಿಯ ಕಾರ್ಯಗಳನ್ನೆಲ್ಲಾ ಮಾಡುತ್ತಿದ್ದೇವೆ. ಆದರೆ ಕೋವಿಡ್-19 ಬರೀ ನಮಗೆ ಮಾತ್ರವಲ್ಲದೇ ಇಡೀ ಜಗತ್ತಿಗೆ ಬಂದಿದೆ, ಇದು ತಮಗೂ ಕೂಡ ಗೊತ್ತಿದೆ. ಸ್ವಲ್ಪ ಪ್ರಯತ್ನ ಆಗುತ್ತಿದೆ. ಮುಂದಿನ ಸಭೆಯಲ್ಲಿ ಚರ್ಚೆ ಮಾಡಿ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೋವಿಡ್-19. . .

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಸು, ಹುಲಿ ಮತ್ತು ಸಿಂಹಗಳಿಗೆ ಕೋವಿಡ್-19 ಬಂದಿತ್ತೆ. ಏಕೆಂದರೆ ಮಾನ್ಯ ಸಚಿವರು ಉತ್ತರ ಕೊಡಲಿ.

**ಸಭಾಪತಿಯವರು:-** ಮಾನ್ಯ ಗೋಪಾಲಸ್ವಾಮಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿಜಯ ಸಿಂಗ್:-** ಮಾನ್ಯ ಸಚಿವರೇ, ಬೀದರ್ ನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯವನ್ನು ಮಾಡಿದ್ದೀರಿ. ಆದರೆ ಆ ಪಶುವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳೇ ಇಲ್ಲ. ಈ ರೀತಿಯಾದರೆ ಅದು ಹೇಗೆ implement ಆಗುತ್ತದೆ?

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಾವು ಬೇರೆ ಬೇರೆ ಕಡೆ incharge ಕೊಡುತ್ತಿದ್ದೇನೆ. ಬೀದರ್‌ನಿಂದ ಮತ್ತು ಗದಗ್‌ನಿಂದ ಹಾಗೂ ಇನ್ನುಳಿದ ಕಡೆ incharge ಕೊಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ದಿನಾಂಕ 15ನೇ ಸೆಪ್ಟೆಂಬರ್ 2021ರಂದು ಒಟ್ಟು 132 ಪ್ರಶ್ನೆಗಳ ಪೈಕಿ, 55 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3.ಪ್ರಕಟಣೆ**

**ಸಭಾಪತಿಯವರು:-** ಇವತ್ತು ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳೆಂದರೆ, ಡಾ.ಸಿ.ಎನ್.ಅಶ್ವಥ್ ನಾರಾಯಣ, ಮಾನ್ಯ ಉನ್ನತ ಶಿಕ್ಷಣ ಸಚಿವರು ಇವರು ಅನುಮತಿಯನ್ನು ಪಡೆದುಕೊಂಡಿದ್ದಾರೆ; ಮಾನ್ಯ ಆನಂದ್ ಸಿಂಗ್, ಮಾನ್ಯ ಪರಿಸರ ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವರು; ಡಾ.ಕೆ.ಸುಧಾಕರ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು; ಶ್ರೀ ಉಮೇಶ್ ಕತ್ತಿ, ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅರಣ್ಯ ಸಚಿವರು; ಶ್ರೀ ಬಿ.ಸಿ.ನಾಗೇಶ್, ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಸಕಾಲ ಸಚಿವರು; ಶ್ರೀ ವಿ.ಸುನೀಲ್ ಕುಮಾರ್, ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಸದನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಹಾಜರಿರಬೇಕಾದ ಅಧಿಕಾರಿಗಳೆಂದರೆ, ಡಾ.ಬಸವರಾಜು.ಎಸ್, ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು; ಶ್ರೀ ಮೊಹಮದ್ ಮೊಹಿಸಿನ್, ಆಯುಕ್ತರು ಮತ್ತು ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆ, ಕಂದಾಯ ಇಲಾಖೆ; ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ; ಶ್ರೀಮತಿ ಕೆ.ಭಾನುಮತಿ, ಸರ್ಕಾರದ ಅಪರ ಕಾರ್ಯದರ್ಶಿಗಳು, ಕಂದಾಯ ಇಲಾಖೆ.

ಮಧ್ಯಾಹ್ನದಿಂದ ಮುಕ್ತಾಯವಾಗುವವರೆಗೆ ಹಾಜರಿರಬೇಕಾದ ಅಧಿಕಾರಿಗಳೆಂದರೆ, ಶ್ರೀ ಹೆಚ್.ಬಸವರಾಜೇಂದ್ರ, ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ; ಶ್ರೀ ಕೆ.ಪಿ.ಮೋಹನ್ ರಾಜ್, ನೋಂದಣಿ ಮಹಾ ಪರಿವೀಕ್ಷಕರು ನೋಂದಣಿ ಮತ್ತು ಮುದ್ರಾಂಕ ಕಂದಾಯ ಇಲಾಖೆ; ಶ್ರೀ ಶಂಕರಗೌಡ ದೊಡ್ಡಮನಿ, ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಪಶುಸಂಗೋಪನಾ ಇಲಾಖೆ; ಶ್ರೀಮತಿ ವಿಜಯ ಕುಮಾರಿ, ಸರ್ಕಾರದ ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ವಿಷಯ:- ತಜ್ಞ ವೈದ್ಯಾಧಿಕಾರಿ ಮತ್ತು ಸಾಮಾನ್ಯ ತಜ್ಞ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಇನ್ನಷ್ಟು ಕಾಲಾವಕಾಶ ನೀಡುವ ಬಗ್ಗೆ.

-----

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶ ಕಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ 692 ತಜ್ಞ ವೈದ್ಯರು ಮತ್ತು 1048 ಸಾಮಾನ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿ ಕಳೆದ ಮೇ ಮತ್ತು ಜೂನ್ ತಿಂಗಳಿನಲ್ಲಿ ಅವರಿಗೆ ನೇಮಕಾತಿ ಆದೇಶಗಳನ್ನು ನೀಡಲಾಗಿರುವುದು ಸರಿಯಷ್ಟೇ. ಈ ಪೈಕಿ, 17 ಮಂದಿ ತಜ್ಞ ವೈದ್ಯರು ಮತ್ತು 35 ಸಾಮಾನ್ಯ ಕರ್ತವ್ಯ ವೈದಾಧಿಕಾರಿಗಳು ಉನ್ನತ ವ್ಯಾಸಂಗವನ್ನು ಮಾಡುತ್ತಿದ್ದು, ಕೋವಿಡ್-19 ಕಾರಣದಿಂದ ಇವರ ಉನ್ನತ ವ್ಯಾಸಂಗದ ಅವಧಿಯು ಕೂಡ ವಿಸ್ತರಣೆಗೊಂಡಿರುವುದರಿಂದ ಇವರುಗಳು ಕರ್ತವ್ಯಕ್ಕೆ ಹಾಜರಾಗಲು ಕಷ್ಟ-ಸಾಧ್ಯವಾಗಿರುತ್ತದೆ. ಇದರಿಂದ ಕರ್ತವ್ಯಕ್ಕೆ ಹಾಜರಾಗುವ ವೈದ್ಯರ ಉನ್ನತ ವ್ಯಾಸಂಗಕ್ಕೆ ಅಡ್ಡಿ ಉಂಟಾಗಲಿದೆ. ಸರ್ಕಾರಿ ಆಸ್ಪತ್ರೆಯತ್ತ ತಜ್ಞ ವೈದ್ಯರ ನಿರಾಸಕ್ತಿ ಮೇಲ್ನೋಟಕ್ಕೆ ಕಂಡರೂ, ಮೂಲ ಕಾರಣ ಅವರ ಉನ್ನತ ವ್ಯಾಸಂಗದ ಅವಧಿಯು ಕೋವಿಡ್-19 ಹಾವಳಿಯಿಂದ ಕೊಂಚ ವಿಸ್ತರಣೆಯಾಗಿರುವುದಾಗಿದೆ. ಆದುದರಿಂದ ಸದರಿ ತಜ್ಞ ವೈದ್ಯಾಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಲು ನಿಗದಿಪಡಿಸಿದ್ದ ಕೊನೆಯ ದಿನವಾದ ಜೂನ್ 16ನ್ನು ವಿಸ್ತರಿಸಿ, ಇನ್ನಷ್ಟು ಕಾಲಾವಕಾಶ ಮಾಡಿಕೊಡುವಂತೆ ಸಲ್ಲಿಸಿರುವ ಮನವಿಗಳನ್ನು ಪರಿಗಣಿಸುವ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚಿಸಲು ಬಯಸುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಿ ಅವರಿಂದ ಉತ್ತರ ಪಡೆದುಕೊಂಡು ಒದಗಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(691)15.9.2021/11.50/ಎಂ.ಎಂ-ಜಿ.ಆರ್**

(ಸಭಾಪತಿಯವರ ಉಪಸ್ಥಿತಿ)

**ಆ) ವಿಷಯ:- ಕಳೆದ 2-3 ದಿನಗಳ ಹಿಂದೆ ಯಾದಗಿರಿ ಜಿಲ್ಲೆಯಲ್ಲಿ ಮಹಿಳೆಯ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ವೈರಲ್ ಆಗಿರುವ ಬಗ್ಗೆ.**

- - - - -

**ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಯಾದಗಿರಿ ಜಿಲ್ಲೆಯಲ್ಲಿ ಆದಂತಹ ಘಟನೆ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕೆ ತಮಗೆ ಅಭಿನಂದನೆಗಳು. ಕಳೆದ 2-3 ದಿವಸಗಳಿಂದ ಒಂದು ವಿಡಿಯೋ ಯಾದಗಿರಿ ಜಿಲ್ಲೆಯಲ್ಲಿ ಮೊಬೈಲ್‌ನಲ್ಲಿ ವೈರಲ್ ಆಗಿದ್ದನ್ನು ಗಮನಿಸಿದ ಸಾರ್ವಜನಿಕರು ಬೆಚ್ಚಿಬಿದ್ದಿದ್ದಾರೆ. ಈ ವಿಡಿಯೋದಿಂದ ಅಲ್ಲಿನ ಜನರು ಸ್ವಲ್ಪ ಕತ್ತಲಾದರೆ ಭಯ ಪಡುತ್ತಿದ್ದಾರೆಂದು 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಹಾಗೂ ಸುವರ್ಣ ಟಿ.ವಿ ಯಲ್ಲಿ ವರದಿಯಾಗಿದೆ. ಈ ವಿಡಿಯೋದಲ್ಲಿ ಒಂಟಿ ಮಹಿಳೆಯನ್ನು ನಿರ್ವಸ್ತ್ರ ಮಾಡಿ ಕಬ್ಬಿನ ಜಲ್ಲೆಯಿಂದ ಥಳಿಸುತ್ತಿರುವ 4-5 ಜನರು ದೌರ್ಜನ್ಯ ಮಾಡುತ್ತಿರುವುದು ಹಾಗೂ ಮಹಿಳೆಯು ರಕ್ಷಣೆ ಕೋರಿ ಗೋಗರಿಯುವ ದೃಶ್ಯ ಸಾರ್ವಜನಿಕರನ್ನು ತಲ್ಲಣಗೊಳಿಸಿದೆ. ಈ ಘಟನೆ ಜರುಗಿದ್ದು ಯಾದಗಿರಿ-ಶಹಾಪೂರ ಹೆದ್ದಾರಿಯ ಮೇಲೆ ಎಂದು ಊಹೆ ಮಾಡಲಾಗುತ್ತಿದೆ. ಆ 4-5 ಜನರಲ್ಲಿ ಒಬ್ಬನು ಈ ದೌರ್ಜನ್ಯದ ದೃಶ್ಯವನ್ನು ಮೊಬೈಲಿನಲ್ಲಿ ಸೆರೆ ಹಿಡಿದು ಆ ಮಹಿಳೆಯನ್ನು ತೋರಿಸಿ ಕೇಕೆ ಹಾಕುತ್ತಿರುವ ದೃಶ್ಯ ಜಿಲ್ಲೆಯ ಜನರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಈ ಒಂದು ವಾತಾವರಣ ತಿಳಿಗೊಳಿಸಬೇಕಾದರೆ ವೈರಲ್ ಆದ ವಿಡಿಯೋ ಯಾರದು? ಇದರಲ್ಲಿ ದೌರ್ಜನ್ಯಕ್ಕೆ ಒಳಗಾದ ಆ ಮಹಿಳೆ ಯಾರು? ದೌರ್ಜನ್ಯ ನಡೆಸಿದ ಈ 4-5 ಜನರು ಯಾರು? ಎಂಬುವುದನ್ನು ಪೊಲೀಸರು ಪತ್ತೆ ಹಚ್ಚಿ ಅವರಿಗೆ ತಕ್ಕ ಶಿಕ್ಷೆ ವಿಧಿಸಿ ಯಾದಗಿರಿ ಜಿಲ್ಲೆಯ ಜನರಲ್ಲಿರುವ ಆತಂಕವನ್ನು ದೂರ ಮಾಡುವಂತೆ ಮಾನ್ಯ ಗೃಹ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಇ) ವಿಷಯ:- ನೇಕಾರರ ಸಮೀಕ್ಷೆ ಹಾಗೂ ಪ್ರತ್ಯೇಕ ನೇಕಾರರ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತು

- - - -

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿದ್ದಕ್ಕೆ ಅನುವು ಮಾಡಿಕೊಟ್ಟ ತಮಗೆ ಧನ್ಯವಾದಗಳು. ರಾಜ್ಯಾದ್ಯಂತ ನೇಯ್ಗೆ ಉದ್ಯಮವನ್ನು ನಂಬಿಕೊಂಡಿರುವ ಲಕ್ಷಾಂತರ ಜನರ ದಶಕದ ನಿರೀಕ್ಷೆಯಾದ ನೇಕಾರರ ಸಮೀಕ್ಷೆಗೆ ಜವಳಿ ಇಲಾಖೆ ಮುಂದಾಗಿರುವುದು ನೇಕಾರಿಕೆ ಅವಲಂಬಿಸಿರುವ ಜನರಲ್ಲಿ ಆಶಾಭಾವನೆ ಮೂಡಿದೆ. ರಾಜ್ಯಾದ್ಯಂತ ನೇಕಾರಿಕೆಯನ್ನು ನೇರವಾಗಿ ನಂಬಿಕೊಂಡಿರುವ ಸುಮಾರು 7.5 ಲಕ್ಷ ಜನರಿದ್ದು, ಉಪ ಉದ್ಯಮಗಳನ್ನು ಅವಲಂಬಿಸಿ ಮತ್ತಷ್ಟು ಜನ ಬದುಕು ಕಟ್ಟಿಕೊಂಡಿದ್ದಾರೆ. ಇವರಿಗೆ ಕನಿಷ್ಠ ಗುರುತಿನ ಚೀಟಿ ಇಲ್ಲದ ಕಾರಣ ಸಮಸ್ಯೆ ಎದುರಿಸುತ್ತಿದ್ದರು. ಹೀಗಾಗಿ ಗಣತಿ ಆಧರಿಸಿ ಗುರುತಿನ ಚೀಟಿ ನೀಡಿದ್ದಲ್ಲಿ ಹೆಚ್ಚು ಅನುಕೂಲವಾಗಲಿದೆ.

ಕಳೆದ ವರ್ಷ ಕೋವಿಡ್-19 ಸಮಯದಲ್ಲಿ ಸಹಾಯಧನ ಕೋರಿ 56,773 ಜನ ನೇಕಾರರು ಅರ್ಜಿ ಸಲ್ಲಿಸಿದ್ದು, ಲಕ್ಷಾಂತರ ನೇಕಾರರಿದ್ದರೂ ಸರಕಾರದ ಮಾನದಂಡಗಳನ್ನು ಈಡೇರಿಸಲಾಗದ ಕಾರಣ ಸಹಾಯಧನವನ್ನು ಪಡೆಯಲಾಗದ ದುಸ್ಥಿತಿ ರಾಜ್ಯದಲ್ಲಿದೆ. ಸರಕಾರ ಕೂಡಲೇ ಗಣತಿ ಕಾರ್ಯವನ್ನು ರಾಜ್ಯಾದ್ಯಂತ ಕೈಗೆತ್ತಿಕೊಂಡು ನೇಕಾರರ ನೆರವಿಗೆ ಧಾವಿಸಬೇಕು. ತನ್ಮೂಲಕ ಬಹಳ ವರ್ಷಗಳ ಬೇಡಿಕೆಯಾದ ಪ್ರತ್ಯೇಕ ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಸಹ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಜವಳಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ(ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:- ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಒಂದೇ ಸಮುದಾಯದ 70 ಮಂದಿ ಆಯ್ಕೆಯಾಗಿರುವ ಬಗ್ಗೆ.**

- - - - -

**ಶ್ರೀ ಹಣಮಂತ ರುದ್ರಪ್ಪ ನಿರಾಣಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ 12.09.2021ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ "ಒಂದೇ ಸಮುದಾಯದ 70 ಮಂದಿಗೆ ಎಫ್‌ಡಿಎ ಅರ್ಹತೆ" ಎಂಬ ಅಡಿಬರಹದಲ್ಲಿ ಪ್ರಕಟವಾದ ಕೆ.ಪಿ.ಎಸ್.ಸಿ ನೇಮಕಾತಿಯಲ್ಲಿ ಹಲವಾರು ಲೋಪದೋಷಗಳು ಹಾಗೂ ಪ್ರಶ್ನೆ ಪತ್ರಿಕೆ ಸೋರಿಕೆಯಾಗುತ್ತಿದ್ದರೂ ಸಹ ಯಾವುದೇ ಕ್ರಮವಾಗುತ್ತಿಲ್ಲ. ಜನವರಿ 2021ರಂದು ಎಫ್.ಡಿ.ಎ ಅರ್ಹತಾ ಪರೀಕ್ಷೆ ನಿಗದಿಪಡಿಸಲಾಗಿತ್ತು, ಅದರ ಪ್ರಶ್ನೆ ಪತ್ರಿಕೆಯು ಸೋರಿಕೆಯಾಗಿತ್ತು. ಆ ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ಕೆ.ಪಿ.ಎಸ್.ಸಿ ಆಯೋಗದ ಅಧಿಕಾರಿ/ಸಿಬ್ಬಂದಿ ವರ್ಗ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಭಾಗಿಯಾಗಿದ್ದರು, ತದನಂತರ ಆಯೋಗವು ಪರೀಕ್ಷೆ ಮುಂದೂಡಿಸಿ ಫೆಬ್ರುವರಿಯಲ್ಲಿ ಪರೀಕ್ಷೆ ನಡೆಸಿ ಇತ್ತೀಚಿಗೆ ಬಿಡುಗಡೆ ಮಾಡಿದ ಅರ್ಹತಾ ಪಟ್ಟಿಯಲ್ಲಿ ಒಂದೇ ಕೇಂದ್ರದಲ್ಲಿ ಒಂದೇ ಸಮುದಾಯದ 70 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಹಾಗೂ ಈ ಅಕ್ರಮದಲ್ಲಿ ಆಯೋಗದವರೇ ನೇರವಾಗಿ ಭಾಗಿಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಪತ್ರಿಕಾ ವರದಿಯಾಗಿದೆ. ಹಾಗೂ ಪ್ರತಿಭಾವಂತ ಅಭ್ಯರ್ಥಿಗಳು ಕೆ.ಪಿ.ಎಸ್.ಸಿ ಆಯೋಗದ ಮೇಲೆ ನಂಬಿಕೆ ಕಳೆದುಕೊಳ್ಳುವಂತಾಗಿದೆ ಮತ್ತು ಸಾವಿರಾರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ/ಅಭ್ಯರ್ಥಿಗಳಿಗೆ ವಂಚನೆಯಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುಬಯಸುತ್ತೇನೆ. ಈಗಾಗಲೇ ಐ.ಬಿ.ಪಿ.ಎಸ್ ಪರೀಕ್ಷೆ, ಸ್ಟಾಫ್ ಸೆಲೆಕ್ಷನ್ ಪರೀಕ್ಷೆ, ಆರ್.ಆರ್.ಬಿ ಪರೀಕ್ಷೆ, ಹಾಗೂ ಸೇನೆ ಪರೀಕ್ಷೆಗಳು ಆನ್‌ಲೈನ್ ಮೂಲಕ ಅಂದರೆ ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸುವುದರ ಮೂಲಕ ಯಶಸ್ವಿಯಾಗಿವೆ, ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ಪರಿಚಯಿಸುವುದರ ಮೂಲಕ ಪರೀಕ್ಷೆಯಲ್ಲಿನ ಅಕ್ರಮಗಳು ಮತ್ತು ವಾಮಮಾರ್ಗಗಳನ್ನು ತಡೆಗಟ್ಟಲು ಸಾಧ್ಯವಾಗುತ್ತದೆ. ಇದು ನೇಮಕಾತಿ ಮೇಲೆ ಅಭ್ಯರ್ಥಿಗಳ ವಿಶ್ವಾಸ ಹೆಚ್ಚಿಸುತ್ತದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆ ಮೂಲಕ ಫಲಿತಾಂಶವನ್ನು ಬೇಗನೆ ನೀಡುವುದರ ಮೂಲಕ ಅಭ್ಯರ್ಥಿಗಳ ಕಾಯುವಿಕೆಯನ್ನು ಮತ್ತು ಹುದ್ದೆಗಳ ಕೊರತೆಯನ್ನು ನೀಗಿಸಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಸರ್ಕಾರವು ಮತ್ತು ಆಯೋಗವು ನಡೆಸುವ ನೇಮಕಾತಿಗೆ

ಸಂಬಂಧಿಸಿದ ಎಲ್ಲ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಲು ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ:- ಗುಂಡ್ಲುಪೇಟೆ ತಾಲ್ಲೂಕು ಕಗ್ಗಳದ ಹುಂಡಿ ಗ್ರಾಮದಲ್ಲಿ ಸಂಸ್ಕರಿತ ಸುಗಂಧ ದ್ರವ್ಯ ಉತ್ಪಾದನಾ ಕಾರ್ಖಾನೆಯಿಂದ ಹೊರಹೊಮ್ಮುತ್ತಿರುವ ರಾಸಾಯನಿಕ ಯುಕ್ತ ದುರ್ವಾಸನೆಯಿಂದ ಗ್ರಾಮಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ.**

- - - - -

**ಶ್ರೀ ಸಂದೇಶ್ ನಾಗರಾಜು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಕಗ್ಗಳದ ಹುಂಡಿ ಬಳಿ ಸ್ಥಾಪಿತವಾಗಿರುವ ಚೀನಾ ಮೂಲಕ ಚೆಂಡು ಹೂವು ಸಂಸ್ಕರಿತ ಸುಗಂಧ ದ್ರವ್ಯ ಉತ್ಪಾದನಾ ಕಾರ್ಖಾನೆಯು ಪರಿಸರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸದೆ ಉತ್ಪಾದನಾ ಕಾರ್ಯಾಚರಣೆ ಮಾಡುತ್ತಿರುವುದರಿಂದ, ಘಟಕದಿಂದ ಹೊರಹೊಮ್ಮುತ್ತಿರುವ ರಾಸಾಯನಿಕಯುಕ್ತ ದುರ್ವಾಸನೆಯಿಂದ, ಕಗ್ಗಳದ ಹುಂಡಿ, ತ್ರಿಯಂಬಕಪುರ, ತೆರಕಣಾಂಬಿ, ದೇಪಾಪುರ ಮೊದಲಾದ ಗ್ರಾಮಗಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಕಾರ್ಖಾನೆಯಿಂದ ಹೊರಬರುತ್ತಿರುವ ಕೆಟ್ಟ ದುರ್ವಾಸನೆಯಿಂದ ಹೊಟ್ಟೆ ತೊಳಸು, ತಲೆಸುತ್ತು, ವಾಕರಿಕೆ ಉಂಟಾಗುತ್ತಿದ್ದು, ಕೆಲವೊಮ್ಮೆ ಉಸಿರಾಟಕ್ಕೂ ತೊಂದರೆಯಾಗುತ್ತಿದೆ. ರೈತಾಪಿ ಜನರಿಗೆ ಹೊಲಗದ್ದೆಗಳಲ್ಲಿ ಕೆಲಸ ಮಾಡಲು ತೊಂದರೆಯಾಗಿದೆ. ಜಾನುವಾರುಗಳಿಗೂ ಇದರಿಂದ ತೊಂದರೆಯಾಗುತ್ತಿದೆ. ಈ ಬಗ್ಗೆ ದಿನಾಂಕ 24ನೇ ಆಗಸ್ಟ್ 2021ರಂದು ಗುಂಡ್ಲುಪೇಟೆ ನಗರದಲ್ಲಿ ರೈತಾಪಿ ಜನರು ಭಾರೀ ಪ್ರತಿಭಟನೆ ನಡೆಸಿ, ಮೆರವಣಿಗೆ ಮಾಡಿ, ಕಾರ್ಖಾನೆಯನ್ನು ಮುಚ್ಚುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ತಾಲ್ಲೂಕು ಆಡಳಿತವೂ ಕೂಡಾ ಈ ಬಗ್ಗೆ ಕಾರ್ಖಾನೆಗೆ ಎಚ್ಚರಿಕೆ ನೀಡಿದ್ದರೂ, ಉತ್ಪಾದನಾ ಘಟಕದ ಆಡಳಿತ ಮಂಡಲಿಯವರು ಈ ಬಗ್ಗೆ ಗಮನ ಹರಿಸಿಲ್ಲ. ಅಧಿಕಾರಿಗಳು ತಪಾಸಣೆಗೆ ಬಂದಾಗ ರಾಸಾಯನಿಕ ಸಿಂಪಡಿಸಿ ವಾಸನೆ ಬರದಂತೆ ಮಾಡಲಾಗುತ್ತದೆ. ಆದರೆ ಮತ್ತೆ ಕಾರ್ಖಾನೆಯಿಂದ ಅದೇ ದುರ್ವಾಸನೆ ಹೊರಡುತ್ತಿದೆ. ಈಚೆಗೆ ಗಾಳಿ ಜೋರಾಗಿ ಬೀಸುತ್ತಿರುವುದರಿಂದ ಗ್ರಾಮಸ್ಥರಿಗೆ, ಜನ ಜಾನುವಾರುಗಳಿಗೆ ದುರ್ವಾಸನೆಯಿಂದ ತೊಂದರೆಯಾಗುತ್ತಿದೆ. ಈ ಬಗ್ಗೆ ಮತ್ತೆ ನಿನ್ನೆ ದಿವಸ ದಿನಾಂಕ 13-9-2021ರಂದು ರೈತಾಪಿ ಜನರು, ರೈತಮುಖಂಡರು ಈ ಬಗ್ಗೆ ಪತ್ರಿಕೆಗಳ ಮೂಲಕ ಮತ್ತೆ ಈ ವಿಷಯವನ್ನು ಸುವಾಸನಾ ದ್ರವ್ಯ ಉತ್ಪಾದನಾ ಘಟಕದ ಹಾಗೂ ಸರ್ಕಾರದ ಗಮನಕ್ಕೆ ತಂದು, ಈ ಬಗ್ಗೆ ಸೂಕ್ತ ಕ್ರಮಕ್ಕೆ ಒತ್ತಾಯಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಕಾರಣ ಕೂಡಲೇ ಈ ಬಗ್ಗೆ ಪರಿಸರ ಇಲಾಖೆಯವರು ಗಮನಹರಿಸಿ, ಪರಿಸರ ಇಲಾಖೆಯ ಉನ್ನತ ಅಧಿಕಾರಿಗಳನ್ನು, ಪರಿಸರ ತಜ್ಞರನ್ನು, ಕಾರ್ಖಾನೆಗೆ ಕಳುಹಿಸಿ ತಪಾಸಣೆ ನಡೆಸಿ, ಪರಿಸರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ, ಪರಿಸರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವ ಮೂಲಕ, ದುರ್ವಾಸನೆ ಹೊರಬರದ ರೀತಿಯಲ್ಲಿ ಉತ್ಪಾದನೆ ಮಾಡುವಂತೆ ಎಚ್ಚರಿಕೆ ಹಾಗೂ ಸೂಚನೆ ನೀಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ವಿಷಯ:- ಕೆ.ಪಿ.ಎಸ್.ಸಿ.ಗೆ ವಿಶೇಷ ಕಾಯಕಲ್ಪ ನೀಡುವ ಬಗ್ಗೆ.**

- - - -

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ನಾನು ಪ್ರತಿಬಾರಿ ಸದನದಲ್ಲಿ ಪ್ರಸ್ತಾಪಿಸುತ್ತಲೇ ಬಂದಿದ್ದೇನೆ. ವಿಧಾನಸೌಧಕ್ಕೆ ಕೂಗಳತೆ ದೂರದಲ್ಲಿರುವ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯವೈಖರಿಯನ್ನು ನಿಯಂತ್ರಿಸುವ ಕೆಲಸವನ್ನು ಈ ಸರ್ಕಾರ ಮಾಡುತ್ತಿಲ್ಲ. ಇದಕ್ಕೆ ಹೊಸದಾಗಿ ಸೇರ್ಪಡೆ ಎಂಬಂತೆ ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ವರದಿಯಾದ "ಮೌಲ್ಯ ಕಳೆದುಕೊಂಡ ಕೆ.ಪಿ.ಎಸ್.ಸಿ" ಎಂಬ ವರದಿಯೇ ಸಾಕ್ಷಿ.

ಕಳೆದ ಹತ್ತು ವರ್ಷಗಳಲ್ಲಿ ನೇಮಕಾತಿ ಪ್ರಕ್ರಿಯೆಗಳು ಜರುಗಿರುವುದು ಮೂರು ಪ್ರಕರಣಗಳಲ್ಲಿ ಮಾತ್ರ. 2017-18ನೇ ಬ್ಯಾಚ್‌ನಲ್ಲಿ 106 ಕೆಎಎಸ್ ಅಧಿಕಾರಿಗಳ ನೇಮಕಕ್ಕೆ 2019ರಿಂದ ಪ್ರಕ್ರಿಯೆ ಪ್ರಾರಂಭಗೊಂಡು ನಿಧಾನಗತಿಯಲ್ಲಿ ಪೂರ್ವಭಾವಿ ಪರೀಕ್ಷೆ ನಡೆದು 2021ರ ಫೆಬ್ರವರಿಯಲ್ಲಿ ಮೇನ್ಸ್ ಪರೀಕ್ಷೆ ಮುಗಿದಿದೆ. ಆದರೆ ಇದರ ಮೌಲ್ಯಮಾಪನ ಇನ್ನೂ ಶುರುವಾಗದ ಕಾರಣ ನೇಮಕಾತಿಗೆ ಇನ್ನೆಷ್ಟು ಕಾಲಾವಧಿ ಕಾಯಬೇಕೋ ಎನ್ನುವುದು ಅಭ್ಯರ್ಥಿಗಳ ಪ್ರಶ್ನೆಯಾಗಿದೆ. ಕೇಂದ್ರದ ಲೋಕಸೇವಾ ಆಯೋಗ 06 ತಿಂಗಳಿನಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುತ್ತಿದ್ದರೆ, ಕೆ.ಪಿ.ಎಸ್.ಸಿ ಮಾತ್ರ ನಿಧಾನಗತಿಯಲ್ಲಿ ಸಾಗುತ್ತಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಈ ನಡುವೆ ಡಿಜಿಟಲ್ ಮೌಲ್ಯಮಾಪನದಲ್ಲಿ ಗೋಲ್ ಮಾಲ್ ಆಗಿರುವುದನ್ನು ಪ್ರಶ್ನಿಸಿ ಹೈಕೋರ್ಟಿನಲ್ಲಿ ಸಲ್ಲಿಸಿರುವ ಅರ್ಜಿ ಬಾಕಿ ಇರುವುದನ್ನೂ ನೆಪ ಹೇಳಲಾಗುತ್ತಿದೆ. ಇದರ ಜೊತೆಗೆ 2017-18, 2018-19, 2019-2020 ಮತ್ತು 2021ರಲ್ಲಿ ಕೆಎಎಸ್ ಅಧಿಕಾರಿಗಳ ಸುಮಾರು ಒಂದು ಸಾವಿರ ಹುದ್ದೆಗಳು ಖಾಲಿ ಇದ್ದರೂ ನೇಮಕಾತಿಗೆ ಅಧಿಸೂಚನೆ ಹೊರಡಿಸುವುದಕ್ಕೆ ಸರ್ಕಾರ ಅನುಮತಿ ನೀಡಿಲ್ಲ. ಸರ್ಕಾರದ ಧೋರಣೆಗಳನ್ನು ಖಂಡಿಸಿ ಹಾಗೂ ಆಯೋಗದ ವಿಳಂಬ ನೀತಿಯಿಂದ ಅಭ್ಯರ್ಥಿಗಳು ಕೆ.ಪಿ.ಎಸ್.ಸಿ ಸಹವಾಸವೇ ಬೇಡವೆಂದು ಯು.ಪಿ.ಎಸ್.ಸಿ ಕಡೆ ಹೋಗುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಕಾರಣ, ಎಲ್ಲ ವಿಚಾರಗಳ ಬಗ್ಗೆ ಪರಿಶೀಲಿಸಿ, ಕೆಪಿಎಸ್.ಸಿ.ಗೆ ವಿಶೇಷ ಕಾಯಕಲ್ಪ ರೂಪಿಸುವಂಥ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳುವುದೇ ಎಂಬ ಬಗ್ಗೆ ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೊಡಿಸುತ್ತೇನೆ.

(ಮುಂದು)

(692) 15-09-2021/ 12-00/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಖ) ವಿಷಯ: ಮಂಡ್ಯ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳಿಗೆ ಸೇವಾ ಭದ್ರತೆ ನೀಡದೇ ಇರುವ ಕುರಿತು.**

***

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಡ್ಯ ವಿಶ್ವವಿದ್ಯಾನಿಲಯದ ಉಪನ್ಯಾಸಕರುಗಳ ವೇತನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ 2019-20ನೇ ಶೈಕ್ಷಣಿಕ ಸಾಲಿನಿಂದಲೂ ಅತಿಥಿ ಉಪನ್ಯಾಸಕರುಗಳಾಗಿ ಕೆಲಸ ನಿರ್ವಹಿಸುತ್ತಿರುವ ಉಪನ್ಯಾಸಕರು ಇದ್ದು, ಯು.ಜಿ.ಸಿ ನಿಯಮಾವಳಿಗಳಂತೆ ಎಲ್ಲಾ ಅರ್ಹತೆಗಳನ್ನು ಹೊಂದಿದ್ದರೂ ಸಹ ಇವರಿಗೆ ಯಾವುದೇ ಸೇವಾ ಭದ್ರತೆಯಾಗಲಿ, ಸರಿಯಾದಂತಹ ಮಾಸಿಕ ವೇತನವಾಗಲಿ ನೀಡುತ್ತಿಲ್ಲ. ಇವರಿಗೆ ಕಳೆದ 7 ತಿಂಗಳುಗಳಿಂದ ವೇತನ ಬಾಕಿ ಇರುತ್ತದೆ. ಈ ಬಗ್ಗೆ ಅತಿಥಿ ಉಪನ್ಯಾಸಕರುಗಳು ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆಯನ್ನು ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಹ ಸಲ್ಲಿಸಿರುತ್ತಾರೆ. ಕೋವಿಡ್-19ರ ಸಂದರ್ಭದಲ್ಲಿ ಈ ಅತಿಥಿ ಉಪನ್ಯಾಸಕರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದು, ತುಂಬಾ ತೊಂದರೆಯನ್ನು ಅನುಭವಿಸಿರುತ್ತಾರೆ. ಆದರೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕರೋನಾದ ಪರಿಸ್ಥಿತಿಯಲ್ಲೂ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಪಾಠ-ಪ್ರವಚನಗಳನ್ನು ನಡೆಸಿಕೊಟ್ಟಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದುದರಿಂದ, ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಶೈಕ್ಷಣಿಕ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರು ಉತ್ತಮವಾಗಿ ನಿರ್ವಹಿಸುತ್ತಾ ಬಂದಿರುತ್ತಾರೆ ಹಾಗೂ ಇವರುಗಳಿಗೆ ವಯೋಮಿತಿ ಮೀರುತ್ತಿರುವ ಕಾರಣದಿಂದ ಇವರುಗಳಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡಿ, ಸೇವಾ ಭದ್ರತೆಯನ್ನು ನೀಡುವುದರ ಜೊತೆಗೆ ಮುಂದಿನ ಶೈಕ್ಷಣಿಕ ವರ್ಷವಾದ 2021-22ನೇ ಸಾಲಿನಲ್ಲಿ ಇವರ ಸೇವೆಯನ್ನು ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಮುಂದುವರೆಸಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಎ) ವಿಷಯ: ರಾಜ್ಯದ 34 ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೆ ವೇತನ ಬಿಡುಗಡೆಯಾಗದಿರುವ ಬಗ್ಗೆ.**

***

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ "ಸಂಕಷ್ಟದಲ್ಲಿ ವಿಶೇಷ ಶಾಲೆಗಳ ಸಿಬ್ಬಂದಿ" ಎಂಬ ಶೀರ್ಷಿಕೆಯ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಅಂಧ, ಅಂಗವಿಕಲ, ವಿಶೇಷ ಚೇತನ ಮಕ್ಕಳಿಗೆ ಪಾಠ ಮಾಡುತ್ತಿರುವ ರಾಜ್ಯದ 34 ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೆ, ಕಳೆದ ಆರು ತಿಂಗಳಿನಿಂದ ವೇತನ ಬಿಡುಗಡೆಯಾಗಿಲ್ಲ. ಈ ಶಿಕ್ಷಕರ ಕುಟುಂಬಗಳು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ. ಈ ವಿಶೇಷ ಶಾಲೆಗಳನ್ನು ರಾಜ್ಯದ ಅನುದಾನ ಸಂಹಿತೆ 1982ರಡಿಯಲ್ಲಿ ಅನುದಾನಕ್ಕೆ ಒಳಪಡಿಸಲಾಗಿದೆ. ಸಾವಿರಾರು ವಿಶೇಷ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದ್ದರೂ ಇವರಿಗೆ ಸರಿಯಾದ ಸಂಬಳ ಸಿಗದೇ ಪರದಾಡುವ ಸ್ಥಿತಿ ಬಂದಿದೆ. ಕೋವಿಡ್‌ನಂತಹ ಕಠಿಣ ಸಂದರ್ಭದಲ್ಲೂ ಸಹ ವಿಶೇಷ ಮಕ್ಕಳ ಶಿಕ್ಷಣ ಕುಂಠಿತವಾಗದಂತೆ ವಿಡಿಯೋ, ಆಡಿಯೋ ಮೂಲಕ ಪಾಠ ಮಾಡುವ ಕೆಲಸವನ್ನು ಸಹ ಮಾಡಲಾಗಿದೆ. ಅಲ್ಲದೆ ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯು ಈ ಸಿಬ್ಬಂದಿಗಳ ಖಾತೆಗೆ ನೇರವಾಗಿ ವೇತನ ನೀಡುವಂತೆ ಆದೇಶ ಮಾಡಿದ್ದರೂ ಸಹ ಅದನ್ನು ಅಧಿಕಾರಿಗಳು ಜಾರಿಗೊಳಿಸಿಲ್ಲ. ಅನುದಾನ ಬಿಡುಗಡೆಯಾಗಿ ಶಾಲಾವಾರು ಬಂದರೆ ಒಂದಿಷ್ಟು ವ್ಯವಹಾರ ಗಿಟ್ಟುತ್ತದೆ ಎಂಬ ಕಾರಣಕ್ಕೆ ಆರ್ಥಿಕ ಇಲಾಖೆಯ ಆದೇಶವನ್ನು ಇಲಾಖೆಯ ಅಧಿಕಾರಿಗಳು ಪಾಲಿಸಿಲ್ಲ ಎಂಬ ದೂರುಗಳಿವೆ. ಅಲ್ಲದೆ ಈ ಶಾಲೆಗಳಲ್ಲಿ ಕೆಲಸ ಮಾಡಿ ನಿವೃತ್ತರಾದ ಸಿಬ್ಬಂದಿಗಳಿಗೆ ಪಿಂಚಣಿಯನ್ನು ನೀಡುವಂತೆ 2013 ರಲ್ಲಿ ಆದೇಶವಾಗಿದ್ದರೂ ಸಹ ಇಲ್ಲಿಯವರೆವಿಗೆ ಈ ವಿಶೇಷ ಅನುದಾನಿತ ಶಾಲೆಗಳ ನಿವೃತ್ತ ಸಿಬ್ಬಂದಿಗಳಿಗೆ ಪಿಂಚಣಿಯನ್ನು ನೀಡಿಲ್ಲ ಎಂಬ ವಿಷಯವನ್ನು ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸಚಿವರ ಗಮನ ಸೆಳೆಯುತ್ತಾ ಈ ಬಗ್ಗೆ ಸೂಕ್ತ ಹಾಗೂ ಶೀಘ್ರ ಕ್ರಮ ಕೈಗೊಳ್ಳುವಂತೆ ಕೋರುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಗೈರು ಹಾಜರಾಗಿದ್ದಾರೆ.

**ಎ) ವಿಷಯ: ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು.**

***

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ' ಹಿಂಪಡೆಯಬೇಕು ಎಂದು ಒತ್ತಾಯಿಸಿ ವಿಧಾನಸೌಧಕ್ಕೆ ದಿನಾಂಕ:14-09-2021ರ ಮಂಗಳವಾರ ಮುತ್ತಿಗೆ ಹಾಕಲು ಯತ್ನಿಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿರುವ ವಿಚಾರವು ಶೋಚನೀಯ ವಿಚಾರವಾಗಿರುವ ಬಗ್ಗೆ ಸದನದಲ್ಲಿ ಶೂನ್ಯವೇಳೆಯ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿರುವುದಕ್ಕಾಗಿ ವಂದನೆಗಳನ್ನು ತಿಳಿಸುತ್ತೇನೆ.

ಮಂಗಳೂರು, ತುಮಕೂರು, ಮೈಸೂರು, ಕಲಬುರ್ಗಿ, ದಾವಣಗೆರೆ, ಬೀದರ್ ಜಿಲ್ಲೆಗಳು ಸೇರಿದಂತೆ ರಾಜ್ಯದ ಹಲವು ಕಾಲೇಜುಗಳ 400 ಕ್ಕೂ ಹೆಚ್ಚು ವಿದ್ಯಾರ್ಥಿಗಳ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ 'ರಾಷ್ಟ್ರೀಯ ಶಿಕ್ಷಣ ನೀತಿಯು ಆರ್.ಎಸ್.ಎಸ್., ಬಿಜೆಪಿ ಹುನ್ನಾರ ಹಾಗೂ ಶಿಕ್ಷಣದ ಹಕ್ಕು ಹತ್ತಿಕ್ಕುವ ತಂತ್ರ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸುವ ವಿದ್ಯಾರ್ಥಿಗಳ ಮೇಲೆ ಲಾಠಿಯನ್ನು ಬೀಸಿದರು. ಸುಮಾರು 50 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದರು.

ರಾಷ್ಟ್ರೀಯ ಶಿಕ್ಷಣ ನೀತಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲಿಸರು ನಡೆಸಿದ ದೌರ್ಜನ್ಯ ಅಮಾನವೀಯ ಕೃತ್ಯ. ವಿದ್ಯಾರ್ಥಿಗಳಿಗೆ ರಕ್ತಸ್ರಾವ ಆಗುವ ರೀತಿ ಪೊಲೀಸರು ಲಾಠಿ ಪ್ರಹಾರ ಮಾಡಿರುವುದು ಹಾಗೂ ಅವರ ಈ ರೀತಿ ಪೈಶಾಚಿಕವಾಗಿ ವರ್ತಿಸಿರುವುದು ವಿಷಾದನೀಯ ಸಂಗತಿ. ಸಾರ್ವಜನಿಕರನ್ನು ರಕ್ಷಣೆ ಮಾಡುವ ಕರ್ತವ್ಯವಾಗಿದ್ದರೂ, ರಕ್ಷಿಸಬೇಕಾದ ಆರಕ್ಷಕರೇ, ದಬ್ಬಾಳಿಕೆಯನ್ನು ನಡೆಸಿರುವುದು ಖಂಡನೀಯ ವಿಷಯವಾಗಿರುವ ವಿಚಾರವನ್ನು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಒಂದು ನಿಮಿಷ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಪೊಲೀಸರು ವಿದ್ಯಾರ್ಥಿಗಳ ಮೇಲೆ ಅಮಾನವೀಯವಾಗಿ ವರ್ತಿಸಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಕುಳಿತುಕೊಳ್ಳಿ. ಯಾವುದೂ ಕಡತಕ್ಕೆ ಹೋಗಬಾರದು.

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು. ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬಂದರೆ ಚರ್ಚೆ ಮಾಡಬಹುದು.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಈ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಹಾಗಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳಿ. ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ? ನನ್ನ ಮಾತನ್ನು ತಾವು ಕೇಳುವುದಿಲ್ಲ. ನಾನು ಹೇಳುವುದೇನೆಂದರೆ, ಈ ವಿಷಯವನ್ನು ಬೇರೆ ರೀತಿಯಲ್ಲಿ ಕೊಡಿ. ಆಗ ಇದನ್ನು ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ: ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕಿನ ಕೀಲಾರ ಗ್ರಾಮದಲ್ಲಿನ ಜಾನುವಾರುಗಳು ನಿಗೂಢವಾಗಿ ಸಾವನ್ನಪ್ಪುತ್ತಿರುವ ಕುರಿತು.**

* * *

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ:14-09-2021ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಪಶು ಸಂಗೋಪನೆ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಆ) ಬೆಳಗಾವಿ ಜಿಲ್ಲೆಯ ಹಿರೆಬಾಗೇವಾಡಿ ಗ್ರಾಮ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ಟೋಲ್ ಮತ್ತು ಕಾಮಗಾರಿಯ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ಮಾಡಿರುವ ಬಗ್ಗೆ.**

* * *

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ದಿನಾಂಕ:14-09-2021ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರೇ ತಾವು ಕುಳಿತುಕೊಳ್ಳಿ.

**6. ವರದಿಯನ್ನೊಪ್ಪಿಸುವುದು**

**ಶ್ರೀಮತಿ ಭಾರತಿ ಶೆಟ್ಟಿ (ಸದಸ್ಯರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ):-** 15ನೇ ವಿಧಾನಸಭೆಯ 2020-21ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 37ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**7. ಅರ್ಜಿಗಳನ್ನೊಪ್ಪಿಸುವುದು**

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,

ಅ) ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಕಾನೂನುಗಳನ್ನು ಉಲ್ಲಂಘಿಸುತ್ತಿರುವ ಕುರಿತು.

ಆ) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಜಂಬೂರು ಪ್ರಾಥಮಿಕ ಸಹಕಾರ ಸಂಘಕ್ಕೆ ಹಾಸನ ಜಿಲ್ಲಾ ಕೇಂದ್ರ ಬ್ಯಾಂಕ್ ನಿಯಮಿತದ ಸದಸ್ಯತ್ವವನ್ನು ನೀಡದೆ ಇರುವ ಕುರಿತು.

ಈ ಎರಡು ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಅರ್ಜಿಗಳನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಚುನಾವಣಾ ಪ್ರಸ್ತಾವಗಳು**

**ಶ್ರೀ ವಿ.ಸೋಮಣ್ಣ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೆ,

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 259(1) ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 250(1) ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 349(2) ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 261(1) ನೇ ನಿಯಮದ ಅನುಸಾರವಾಗಿ ಈ ಸಭೆ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 245(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 248 ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ಯಮಗಳ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಋ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 254(1) ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ರಚನಾ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 264 ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

(ಮುಂದು)

**(693) 12:10 ಎಸ್‌ಪಿಆರ್-ಎಂಡಿ 15/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಸೋಮಣ್ಣ(ಮುಂದು):-**

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ 267ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಐ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಅಧಿನಿಯಮ 1994 ಕಲಂ 21(1)ರ ರೀತ್ಯಾ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 9. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ

**ವಿಷಯ:- ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು**

* * *

**ಶ್ರೀ ಎಸ್.ಆರ್.ಪಾಟೀಲ್(ಮಾನ್ಯ ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ನಾಡಿನ ಪ್ರತಿಷ್ಠಿತ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಯಲ್ಲಿ ಕುಂಠಿತ ಪ್ರಗತಿಯಾಗಿದೆ. ಈ ದೃಷ್ಟಿಯಿಂದ ಸರ್ಕಾರವು ಈ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕೆನ್ನುವ ಉದ್ದೇಶದಿಂದ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 59 ರಡಿ ನಾನು ಮತ್ತು ನನ್ನ ಸ್ನೇಹಿತರು ದಿನಾಂಕ 13/09/2021 ರಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು. ತಾವು ಪೀಠದಿಂದ ಅದನ್ನು ಪರಿವರ್ತನೆ ಮಾಡಿ, ನಿಯಮ 68 ರಡಿ ಚರ್ಚಿಸಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ವಿಶೇಷವಾದ ಅಭಿನಂದನೆ ಮತ್ತು ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಒಟ್ಟು 3 ಹಂತಗಳಿವೆ. 1964 ನೇ ಇಸ್ವಿಯಲ್ಲಿ ಹಿಂದಿನ ಪ್ರಧಾನ ಮಂತ್ರಿಗಳಾದ ದಿವಂಗತ ಲಾಲ್ ಬಹಾದೂರ್ ಶಾಸ್ತ್ರಿಯವರಿಂದ ಈ ಯೋಜನೆಗೆ ಶಂಕುಸ್ಥಾಪನೆಯನ್ನು ನೆರವೇರಿಸಲಾಯಿತು. ಆಗ ಅವರು ರೈಲ್ವೆ ಮಂತ್ರಾಲಯದ ಸಚಿವರಾಗಿದ್ದರು. ಈ ಯೋಜನೆಯು ಎರಡು ಅಣೆಕಟ್ಟುಗಳ ನಿರ್ಮಾಣ ಕಾಮಗಾರಿಯನ್ನು ಹೊಂದಿದ್ದು, ಆ ಪೈಕಿ ಒಂದನ್ನು ನಾರಾಯಣಪುರದಲ್ಲಿನ ಬಸವ ಸಾಗರ ಜಲಾಶಯದಲ್ಲಿ ಹಾಗೂ ಮತ್ತೊಂದನ್ನು ಆಲಮಟ್ಟಿ ಜಲಾಶಯವನ್ನು ನಿರ್ಮಿಸಲು ಯೋಜಿಸಲಾಗಿತ್ತು. ದಿವಂಗತ ಲಾಲ್ ಬಹಾದೂರ್ ಶಾಸ್ತ್ರಿಯವರು ಈ ಯೋಜನೆಗೆ ಅಡಿಗಲ್ಲು ಹಾಕಿದಾಗಿನಿಂದ ಇಲ್ಲಿಯವರೆಗೆ ಸುಮಾರು ಆರು ದಶಕಗಳು ಗತಿಸಿವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ಮತ್ತು ಸಚಿವರು ಸದನದಲ್ಲಿ ಗುಂಪುಗೂಡಿಕೊಂಡು ಮಾತನಾಡುತ್ತಿದ್ದರು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವ ಸಂದರ್ಭದಲ್ಲಿ ಸದನವು ಯಾವ ರೀತಿಯಾಗಿದೆ ಎಂದು ತಾವು ನೋಡಬೇಕು. ಇದು ಸದನವೋ ಅಥವಾ ಸಂತೆಯೋ ತಿಳಿಯದಂತಾಗಿದೆ. ಮಂತ್ರಿಗಳೇ ಈ ರೀತಿ ಮಾಡಿದರೆ ಹೇಗೆ? ಬಹಳ ಮಹತ್ವದ ನೀರಾವರಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸುತ್ತಿದ್ದಾರೆ. ಶ್ರೀ ವಿ.ಸೋಮಣ್ಣರವರು ಹಿರಿಯ ಸಚಿವರಾಗಿದ್ದಾರೆ. ದಯಮಾಡಿ ಎಲ್ಲಾ ಸದಸ್ಯರುಗಳು ಇದಕ್ಕೆ ಸಹಕರಿಸಬೇಕು.

**ಸಭಾಪತಿಯವರು:-** ಶ್ರೀ ಮರಿತಿಬ್ಬೇಗೌಡರವರಿಗೆ ಅಭಿನಂದನೆಗಳು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಎರಡು ಆಣೆಕಟ್ಟುಗಳನ್ನು ನಿರ್ಮಿಸುವ ಯೋಜನೆ ಇದಾಗಿದ್ದು, ಒಟ್ಟು 3 ಹಂತಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಬೇಕಾಗಿದೆ. ಕೃಷ್ಣಾ ನ್ಯಾಯಾಧೀಕರಣವು ಯೋಜನೆಯ 1 ಮತ್ತು 2 ಹಂತದ ಕಾಮಗಾರಿಗಳಿಗೆ ಒಟ್ಟಾರೆಯಾಗಿ 173 ಟಿ.ಎಂ.ಸಿ. ಪ್ರಮಾಣದ ನೀರನ್ನು ಹಂಚಿಕೆ ಮಾಡಿದೆ. ಹೀಗೆ ಹಂಚಿಕೆ ಮಾಡಿದ ನೀರಿನಿಂದ ಉತ್ತರ ಕರ್ನಾಟಕ ಭಾಗದ ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳ ಒಟ್ಟಾರೆ 15,47,500 ಎಕರೆ ಪ್ರದೇಶಗಳಿಗೆ ಈಗಾಗಲೇ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪೂರ್ಣಗೊಂಡಿರುವ ಯೋಜನೆಯ 1 ಮತ್ತು 2 ಹಂತಗಳ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿಲ್ಲ. ಯೋಜನೆಯ 1 ಮತ್ತು 2 ಹಂತಗಳಲ್ಲಿ ಅತ್ಯಂತ ಫಲವತ್ತಾದ 2,73,793 ಎಕರೆ ಭೂಮಿ, ಇದು ಗಂಗಾ ನದಿ ಜಲಾನಯನ ಪ್ರದೇಶಕ್ಕೆ ಸರಿಸಮಾನದ ಫಲವತ್ತತೆಯನ್ನು ಹೊಂದಿದೆ. ಇಷ್ಟು ಗಾತ್ರದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದರ ಜೊತೆಗೆ 78,854 ಕಟ್ಟಡಗಳನ್ನೂ ಸಹ ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಒಟ್ಟು 176 ಗ್ರಾಮಗಳು ಮುಳುಗಡೆಯಾಗಿದ್ದು, 136 ಪುರ್ನವಸತಿ ಕೇಂದ್ರಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಯೋಜನೆಯ ಮೂರನೇ ಹಂತವು ಇವತ್ತಿನ ಚರ್ಚೆಯ ಪ್ರಮುಖ ವಿಷಯವಾಗಿದೆ. ಕೃಷ್ಣಾ ಜಲವಿವಾದ ನ್ಯಾಯಾಧೀಕರಣವು ದಿನಾಂಕ 30/12/2010 ರಂದು ಮಹಾರಾಷ್ಟ್ರ, ಕರ್ನಾಟಕ ಮತ್ತು ಅವಿಭಜಿತ ಆಂಧ್ರ ಪ್ರದೇಶ ರಾಜ್ಯಗಳ ನಡುವಿನ ಜಲ ವಿವಾದಕ್ಕೆ ಅಂತಿಮ ತೀರ್ಪನ್ನು ನೀಡಿರುತ್ತದೆ. ಪ್ರಸ್ತುತ ಆಂಧ್ರ ಪ್ರದೇಶ ರಾಜ್ಯವು ವಿಭಜನೆಗೊಂಡು ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಾಗಿವೆ. ನ್ಯಾಧೀಕರಣದ ಆದೇಶವು ಹೊರಬಿದ್ದು ಈಗ್ಗೆ ಒಂದು ದಶಕವು ಕಳೆದಿದ್ದು, ಅದರನ್ವಯ 3 ಹಂತದ ಯೋಜನೆಗೆ 130 ಟಿ.ಎಂ.ಸಿ.ಯಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರು ಹಂಚಿಕೆಯಾಗಿದೆ. ಆಲಮಟ್ಟಿ ಜಲಾಶಯದ ಎತ್ತರವನ್ನು 519.6 ಮೀಟರ್‌ಗಳಿಂದ 524.256 ಮೀಟರ್‌ಗಳಿಗೆ ಏರಿಸಲು ನ್ಯಾಯಾಧೀಕರಣವು ಅನುಮತಿಸಿದೆ. 130 ಟಿ.ಎಂ.ಸಿ.ಯಷ್ಟು ನೀರನ್ನು ಬಳಸಿಕೊಳ್ಳಲು ಈಗಾಗಲೇ ಅವಕಾಶ ದೊರೆತಿದ್ದು, ಇದರಿಂದ 14,85,413 ಎಕರೆ ವಿಸ್ತೀರ್ಣದ ಪ್ರದೇಶಗಳಿಗೆ ನೀರಾವರಿ ನೀಡುವ ಯೋಜನೆಯಾಗಿದೆ. ನ್ಯಾಯಾಧೀಕರಣದ ತೀರ್ಪನ್ನು ನಾವು ಸದುಪಯೋಗ ಮಾಡಿಕೊಂಡರೆ, ಸುಮಾರು 15 ಲಕ್ಷ ಎಕರೆ ಪ್ರದೇಶಗಳಿಗೆ ನೀರಾವರಿಯಾಗುವ ಬೃಹತ್ ಯೋಜನೆ ಇದಾಗಿದೆ. ಬಹುತರವಾಗಿ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ, ಇದು ಕೇವಲ ಉತ್ತರ ಕರ್ನಾಟಕ ಭಾಗವನ್ನು ಶ್ರೀಮಂತಗೊಳಿಸುವ ಯೋಜನೆಯಾಗಿರದೇ, ಇಡೀ ರಾಜ್ಯದ ಮತ್ತು ರಾಷ್ಟ್ರದ ವರಮಾನ ಹೆಚ್ಚಾಗುವ ಅತ್ಯಂತ ಪ್ರತಿಷ್ಠಿತವಾದ ನೀರಾವರಿ ಯೋಜನೆಯಾಗಿರುತ್ತದೆ. ಉತ್ತರ ಕರ್ನಾಟಕ ಪ್ರಮುಖ ಏಳು ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ ಮತ್ತು ಗದಗ ಜಿಲ್ಲೆಗಳ 15 ಲಕ್ಷ ಎಕರೆ ಪ್ರದೇಶಗಳಿಗೆ ನೀರಾವರಿಯಾಗುವ ಯೋಜನೆ ಇದಾಗಿದೆ.

**(ಈ ಹಂತದಲ್ಲಿ ಉಪಸಭಾಪತಿಗಳು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಸಚಿವರಾದ ಶ್ರೀ ಸಿ.ಸಿ.ಪಾಟೀಲ್‌ರವರು ಗದಗ ಜಿಲ್ಲೆಯವರಾಗಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಈ ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದರು. ಪ್ರಸ್ತುತ ಶ್ರೀ ಗೋವಿಂದ ಕಾರಜೋಳರವರು ಈ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಆ ಸಂದರ್ಭದಲ್ಲಿ ಅಂದರೆ ದಿನಾಂಕ 24/01/2012 ರಂದು ಈ ಯೋಜನೆಯ ವೆಚ್ಚ 17,207 ಕೋಟಿ ರೂಪಾಯಿಗಳಾಗಿದ್ದು,ಅದಕ್ಕೆ ಅನುಮೋದನೆ ದೊರೆತಿತ್ತು. ಪ್ರಸ್ತುತ ನಾವು 2021 ನೇ ಇಸ್ವಿಯಲ್ಲಿದ್ದು, ಯೋಜನೆಗೆ ಅನುಮೋದನೆ ದೊರೆತು 9 ವರ್ಷಗಳು ಕಳೆದಿವೆ. 2017 ನೇ ಇಸ್ವಿಯಲ್ಲಿ ಯೋಜನೆಯ ವೆಚ್ಚವನ್ನು ಪರಿಷ್ಕರಿಸಿ, ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅದರನ್ವಯ 51,148.94 ಕೋಟಿ ರೂಪಾಯಿಗಳಾಗಿತ್ತು. ಪ್ರಸ್ತುತ ಯೋಜನೆಯ ವೆಚ್ಚವು ಅಂದಾಜು 52 ಸಾವಿರ ಕೋಟಿ ರೂಪಾಯಿಗಳಷ್ಟಾಗಿದೆ ಎಂದು ನಾವು ಭಾವಿಸೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಇಂದಿನ ದಿನಕ್ಕೆ ಯೋಜನೆಯ ವೆಚ್ಚವನ್ನು ಲೆಕ್ಕ ಹಾಕಿದಾಗ, ಅದು 65 ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(694) 12.20 15-09-2021 ಸಿಎಸ್/ಎಂಡಿ**

**ಶ್ರೀ ಎಸ್. ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, 2017ರಿಂದ ಈಗ ನಾವು 2021ನೇ ಸಾಲಿನಲ್ಲಿದ್ದೇವೆ. 2017ರಲ್ಲಿದ್ದ 50,000 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಈಗ 2021ಕ್ಕೆ 65,000 ಕ್ಕೆ ಬಂದಿದೆ. ಹೀಗೆ ಬಿಟ್ಟುಕೊಂಡು ಹೋದರೆ ಇದು ಮುಂದಕ್ಕೆ 1 ಲಕ್ಷ ಕೋಟಿ ಆಗಬಹುದು. ಏಕೆಂದರೆ ನ್ಯಾಯಾಧೀಕರಣದ ಆದೇಶ ಬಂದೇ 10 ವರ್ಷ ಆಗಿದೆ. ಆ ದೃಷ್ಟಿಯಿಂದ ಈ ಯೋಜನೆಯನ್ನು ನಾವು ಬೇಗನೇ ಕೈಗೆತ್ತಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ಯೋಜನೆಯ 1ನೇ ಹಂತ, 2ನೇ ಹಂತ, 3ನೇ ಹಂತ ಪೂರ್ಣಗೊಂಡರೆ ಉತ್ತರ ಕರ್ನಾಟಕದ ಒಟ್ಟು ಕ್ಷೇತ್ರ 30,32,613 ಎಕರೆ ಪ್ರದೇಶಕ್ಕೆ ನೀರಾವರಿ ದೊರೆಯುವಂತಹ ಬಹಳ ದೊಡ್ಡ ನೀರಾವರಿ ಯೋಜನೆಯಾಗಿದ್ದು, ಇದು ರಾಷ್ಟ್ರದಲ್ಲಿಯೇ ಬಹು ದೊಡ್ಡ ಯೋಜನೆ ಎಂದರೆ ತಪ್ಪಾಗಲಾರದು. ಉತ್ತರ ಕರ್ನಾಟಕ ಬಹಳ ಹಿಂದುಳಿದಿದೆ, ಪ್ರಾದೇಶಿಕ ಅಸಮಾನತೆ ಆಗಿದೆ, ಎನ್ನುವುದನ್ನು ಈ 3ನೇ ಹಂತವನ್ನು ಪೂರ್ಣಗೊಳಿಸುವುದರಿಂದ ಹೋಗಲಾಡಿಸಬಹುದು. ಸುಮಾರು 30 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಆದರೆ ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯ ಕೂಗನ್ನು ಹೋಗಲಾಡಿಸಬಹುದು. ಇದರ ಬಗ್ಗೆ ನಮಗೆಲ್ಲರಿಗೂ ರಾಜಕೀಯ ಇಚ್ಛಾಶಕ್ತಿ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಸನ್ಮಾನ್ಯ ಸಭಾಪತಿಗಳೇ, ಈ ಯೋಜನೆಯ 1ನೇ ಮತ್ತು 2ನೇ ಹಂತದ ಯೋಜನೆಯಲ್ಲಿ ನಾವು ಈಗಾಗಲೇ 2ಲಕ್ಷದ 73 ಸಾವಿರ ಎಕರೆ ಫಲವತ್ತಾದ ಭೂಮಿಯನ್ನು ಕಳೆದುಕೊಂಡಿದ್ದೇವೆ. ಈ ಯೋಜನೆಯ 3ನೇ ಹಂತವನ್ನು ಪೂರ್ಣಗೊಳಿಸಬೇಕಾದರೆ ಇನ್ನೂ 1 ಲಕ್ಷ 33 ಸಾವಿರ ಎಕರೆಯಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ 20 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಈ 20 ಹಳ್ಳಿಗಳಲ್ಲಿರುವ ಕಟ್ಟಡಗಳಿಗೆ ಪರಿಹಾರ ಕೊಟ್ಟು ಅವರಿಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಬೇಕಾಗುತ್ತದೆ. ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್, ಸಾರ್ವಜನಿಕ ಕಟ್ಟಡಗಳನ್ನು ಕಟ್ಟಿಕೊಟ್ಟು, ಈ 20 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ.

ಮಾನ್ಯ ಸಭಾಪತಿಗಳೇ, ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ನವ ನಗರದಲ್ಲಿರುವ ಪುನರ್ ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂ ಸ್ವಾಧೀನ ಇಲಾಖೆಯ ಕಚೇರಿಯಲ್ಲಿ ಆಯುಕ್ತರು ಮತ್ತು ಇತರೆ ವಿವಿಧ ಹಂತಗಳಲ್ಲಿನ ಅನೇಕ ಹುದ್ದೆಗಳು ಖಾಲಿಯಿವೆ. ರಾಷ್ಟ್ರೀಯ ವರಮಾನವನ್ನು ಹೆಚ್ಚು ಮಾಡಬೇಕಾದ ಈ ಇಲಾಖೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯುಕ್ತರ ಹುದ್ದೆ ಖಾಲಿಯಿದೆ. ಮಹಾ ವ್ಯವಸ್ಥಾಪಕರು, ಉಪ ಮಹಾವ್ಯವಸ್ಥಾಪಕರು ಇಲ್ಲ, ವಿಶೇಷ ಜಿಲ್ಲಾಧಿಕಾರಿಗಳ 2 ಹುದ್ದೆಗಳಲ್ಲಿ 1 ಹುದ್ದೆ ಖಾಲಿಯಿದೆ. ಮುಖ್ಯ ಲೆಕ್ಕಾಧಿಕಾರಿಗಳ ಹುದ್ದೆಯಲ್ಲಿ 1 ಲೆಕ್ಕಾಧಿಕಾರಿಯ ಹುದ್ದೆ ಖಾಲಿಯಿದೆ. ಮಂಜೂರಾತಿ ಆದಂತಹ ಹುದ್ದೆಗಳು 855, ಅದರಲ್ಲಿ ಎಲ್ಲಾ ಹುದ್ದೆಗಳಿವೆ, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹೀಗೆ ಆಯುಕ್ತರಿಂದ ಅಟೆಂಡರ್‌ವರೆಗೆ 855 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 395 ಹುದ್ದೆಗಳನ್ನು ತುಂಬಿದ್ದು, ಉಳಿದ ಹುದ್ದೆಗಳು ಖಾಲಿಯಿವೆ. ಕರ್ನಾಟಕ ರಾಜ್ಯಕ್ಕೆ ಅಲೋಕೇಟ್ ಆಗಿರುವ 130 ಟಿಎಂಸಿ ನೀರಿಗಾಗಿ ಡ್ಯಾಂ ಅನ್ನು ಎತ್ತರಿಸಿ, 3ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಬೇಕಾಗಿದ್ದು, ಇಂತಹ ಕೆಲಸವನ್ನು ನಿರ್ವಹಿಸಬೇಕಾದ ಒಂದು ಇಲಾಖೆಯಲ್ಲಿ 460 ಹುದ್ದೆಗಳು ಖಾಲಿಯಿವೆ. ಶೇಕಡ 58% ರಷ್ಟು ಹುದ್ದೆಗಳು ಖಾಲಿಯಿವೆ. ಆಶ್ಚರ್ಯದ ಸಂಗತಿ ಎಂದರೆ ಇಲಾಖೆಯಲ್ಲಿ ಅಧಿಕಾರಿಗಳಿಲ್ಲದೇ ಯೋಜನೆಯನ್ನು ಹೇಗೆ ಪೂರ್ಣಗೊಳಿಸುವುದು? ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿ, ಸೂಕ್ತ ಅನುದಾನವನ್ನು ಬಿಡುಗಡೆ ಮಾಡಿದರೆ ಕೆಲಸ ಆಗುತ್ತದೆ. ಅನುದಾನಕ್ಕಿಂತ ಮೊದಲು ಹುದ್ದೆಗಳನ್ನು ಭರ್ತಿ ಮಾಡಬೇಕು, ಇದನ್ನೆಲ್ಲ ಗಮನಿಸಿದರೆ ಇದು ಉತ್ತರ ಕರ್ನಾಟಕ ಭಾಗಕ್ಕೆ ಸರ್ಕಾರಗಳು, ಅದು ಯಾವುದೇ ಪಕ್ಷದ ಸರ್ಕಾರವಾಗಲೀ ತೋರಿಸಿರುವ ನಿರ್ಲಕ್ಷ್ಯ ಎನ್ನುವುದು ಎದ್ದು ಕಾಣುತ್ತದೆ. Irrespective of any political party, today I am impartial.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಗಳೇ, ಉತ್ತರ ಕರ್ನಾಟಕ ಭಾಗಕ್ಕೆ ಎಲ್ಲಾ ಸರ್ಕಾರಗಳು ನಿರ್ಲಕ್ಷ್ಯವನ್ನು ತೋರಿವೆ, ಎನ್ನುವ ಮಾನ್ಯ ವಿರೋಧ ಪಕ್ಷದ ನಾಯಕರ ಮಾತಿಗೆ ನನ್ನ ಸಹಮತವಿದೆ. Irrespective of any political party ಚರ್ಚೆ ಆಗಬೇಕು. ಇಷ್ಟು ಹುದ್ದೆಗಳು ಖಾಲಿಯಿರುವುದಕ್ಕೆ ಇದೊಂದೇ ಸರ್ಕಾರ ಕಾರಣವಲ್ಲ. It is not only because of this Government. I appreciate his statement.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೇ, ನಾನು ಸಹ ಅದೇ ಮಾತುಗಳನ್ನು ಹೇಳುತ್ತಿರುವುದು. ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಸೀಮಾಂಧ್ರ ಮತ್ತು ತೆಲಂಗಾಣ ಎಂದು ಎರಡು ರಾಜ್ಯಗಳಾಗಿ ವಿಭಜನೆ ಹೊಂದಿದವು. Undivided Andhra Pradesh state has been divided into two states. ಈಗಷ್ಟೆ ಹೊಸದಾಗಿ ಸೃಷ್ಟಿಯಾಗಿ ಕಣ್ಣು ತೆರೆದಿರುವ ತೆಲಂಗಾಣ ರಾಜ್ಯದಲ್ಲಿ "ಕಾಲೇಶ್ವರ ಏತ ನೀರಾವರಿ ಯೋಜನೆ" ಕೈಗೊಳ್ಳಲಾಯಿತು. ಆ ಯೋಜನೆಯ ಬಗ್ಗೆ ಈ ರೀತಿ ಬರೆದಿದ್ದಾರೆ. *"The Kaleshwar Lift*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Irrigation Project (KLIP) is a multipurpose lift irrigation project on the Godavari river. Currently the world's largest multistage lift irrigation project.* ಇಡೀ ಪ್ರಪಂಚದಲ್ಲಿಯೇ ಬಹಳ ದೊಡ್ಡ ಏತ ನೀರಾವರಿ ಯೋಜನೆ ಇದು. ತೆಲಂಗಾಣ ರಾಜ್ಯದವರ ರಾಜಕೀಯ ಇಚ್ಛಾಶಕ್ತಿಯನ್ನು ನಾನು ಮೆಚ್ಚುತ್ತೇನೆ. ನಾನು ಅಕ್ಕಪಕ್ಕದ ರಾಜ್ಯಗಳ ಬೆಳವಣಿಗೆಗಳನ್ನು ಕೂಡ ನೋಡಬೇಕಾಗುತ್ತದೆ. ಅದನ್ನು ಬಿಟ್ಟು ಬಾವಿ ಕಪ್ಪೆಯ ತರಹ ನಾನೇ ಶ್ರೇಷ್ಠ ಎಂದು ಇರಬಾರದು. ತೆಲಂಗಾಣದ ಕಾಲೇಶ್ವರ ಏತ ನೀರಾವರಿ ಯೋಜನೆ 280 ಟಿಎಂಸಿ ನೀರಿನ ಯೋಜನೆಯಾಗಿದ್ದು 13 ಜಿಲ್ಲೆಗಳಿಗೆ ಫಲಪ್ರದವಾಗುವಂತಹ ಒಂದು ಯೋಜನೆ. ಈ ಯೋಜನೆಯ ವೆಚ್ಚ 1 ಲಕ್ಷದ 20 ಸಾವಿರ ಕೋಟಿ ರೂಪಾಯಿಗಳು. 2016ರಲ್ಲಿ ಅಡಿಗಲ್ಲನ್ನು ಹಾಕಿ, ಈ ಯೋಜನೆಯ ಶಂಕುಸ್ಥಾಪನೆ ಮಾಡುವ ದಿವಸವೇ ಈ ಯೋಜನೆ ಯಾವಾಗ ಪ್ರಾರಂಭ ಆಗುತ್ತದೆ ಎನ್ನುವ ದಿನಾಂಕವನ್ನು ಸಹ ಶಂಕುಸ್ಥಾಪನೆಯ ಆಹ್ವಾನ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಸಣ್ಣಪುಟ್ಟ ಕಾಮಗಾರಿ ಆದರೆ ಇಂತಹ ದಿವಸ 6 ತಿಂಗಳು ಮಾಡುತ್ತೇವೆ ಎಂದು ಹೇಳಬಹುದು. ಆದೆ ಇದೊಂದು ದೊಡ್ಡ ಯೋಜನೆಯಾಗಿದ್ದು, 2016ರಲ್ಲಿ ಈ ಕಾಮಗಾರಿ ಪ್ರಾರಂಭಗೊಂಡಿದ್ದು, 2019ರ ಜೂನ್ 21 ರಂದು ಪೂರ್ಣಗೊಂಡಿದೆ. 1 ಲಕ್ಷದ 20 ಸಾವಿರ ಕೋಟಿ ರೂಪಾಯಿಗಳಲ್ಲಿ ವರ್ಷದ ಅವಧಿಯಲ್ಲಿ ಈ ಯೋಜನೆ ಸಂಪೂರ್ಣಗೊಂಡಿದೆ. ಇದು ಪ್ರಪಂಚದಲ್ಲಿಯೇ ಅತಿ ದೊಡ್ಡ multipurpose lift irrigation scheme. ನಾನು ದಾಖಲೆ ಸಮೇತ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನಮ್ಮ ನೀರಾವರಿ ಯೋಜನೆಯ ಬಗ್ಗೆ ನ್ಯಾಯಾಧೀಕರಣ ತೀರ್ಪು ನೀಡಿ 10 ವರ್ಷಗಳಾಗಿವೆ. ಅಣೆಕಟ್ಟಿನ ಎತ್ತರವನ್ನು ಎತ್ತರಿಸಲಿಕ್ಕೆ ಒಪ್ಪಿಗೆಯನ್ನು ನೀಡಿದ್ದಾರೆ. ಇದಕ್ಕೆ ತೊಂದರೆಗಳು ಇವೆ, ಅವುಗಳನ್ನು ಸ್ವಲ್ಪದರಲ್ಲಿಯೇ ಪರಿಹರಿಸಿಕೊಳ್ಳಬಹುದು. ತೆಲಂಗಾಣ ರಾಜ್ಯದವರು 1 ಲಕ್ಷದ 20 ಸಾವಿರ ಕೋಟಿ ರೂಪಾಯಿಯ ಯೋಜನೆಯನ್ನು ೩ ವರ್ಷಗಳಲ್ಲಿ ಮುಗಿಸಿದ್ದಾರೆ. ನಮ್ಮ ಯೋಜನೆ ಮಾನ್ಯ ಕಾರಜೋಳರವರು ಹೇಳಿದ ಹಾಗೆ 65 ಸಾವಿರ ಕೋಟಿ ರೂಪಾಯಿಗಳದ್ದು, ಅವರದ್ದು 1 ಲಕ್ಷದ 20 ಸಾವಿರ ಕೋಟಿ ರೂಪಾಯಿ. ನಮ್ಮ ಯೋಜನೆಗಿಂತ ದುಪ್ಪಟ್ಟು ಹಣವನ್ನು ಅವರು ವ್ಯಯ ಮಾಡಿದ್ದಾರೆ. Cost wise it is double the amount of our project cost. Justice Brijesh Kumar report ಬಂದು ಈಗಾಗಲೇ 10 ವರ್ಷ ಸರಿದು ಹೋಗಿದೆ. ಇನ್ನೂ ಅಣೆಕಟ್ಟನ್ನು ಎತ್ತರಿಸುವ ವಿಚಾರವೇ ಇಲ್ಲ, ಹರ ಇಲ್ಲ, ಶಿವ ಇಲ್ಲ ಎನ್ನುವಂತಾಗಿದೆ. ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಶೇಖರ್‌ರವರು ಮಾಡಿರುವ ಕೆಲಸವನ್ನು ನಾವು ಒಪ್ಪಿಕೊಳ್ಳಬೇಕು. ಒಳ್ಳೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸವನ್ನು ಯಾರೇ ಮಾಡಲಿ, ನಮ್ಮ ಶತ್ರುಗಳು ಮಾಡಿದರೂ ಸಹ ಅದನ್ನು ಮೆಚ್ಚಬೇಕು. ಅವರು ನಮ್ಮ ನೆರೆಯ ರಾಜ್ಯದವರು, ಅವರ ನೆರಳಾದರೂ ನಮ್ಮ ರಾಜ್ಯದ ಮೇಲೆ ಬೀಳಲಿ.

(ಮುಂದು)

(695)/15-9-2021/12-30/ಎಲ್ಎಂ/ಎಕೆ

**ಶ್ರೀ ಎಸ್.ಆರ್.ಪಾಟೀಲ್**(ಮುಂದು):-

1.20,000 ಕೋಟಿ ರೂಪಾಯಿಗಳ ಯೋಜನೆಯನ್ನು ಮೂರು ವರ್ಷದಲ್ಲಿ ಪೂರ್ಣಗೊಳಿಸಿ ೧೩ ಜಿಲ್ಲೆಗಳಿಗೆ ಫಲಪ್ರದವಾಗುವಂತೆ ಮಾಡಿದ್ದಾರೆ. ಇದರಲ್ಲಿ irrigation, power generation, transportation ಕೂಡಾ ಇದೆ. ಇಂತಹ ಜಗತ್ತಿಗೆ ದೊಡ್ಡದಾಂತಹ ಯೋಜನೆಯನ್ನು ನಿನ್ನೆ-ಮೊನ್ನೆ ಹುಟ್ಟಿದಂತಹ ರಾಜ್ಯ ಇಷ್ಟು ವೇಗವಾಗಿ ಯೋಜನೆಯನ್ನು ಪೂರ್ಣಗೊಳಿಸಿರುವುದನ್ನು ನಾವು ಮೆಚ್ಚಿಕೊಳ್ಳಬೇಕು. ಅವರನ್ನು ಹೊಗಳಬೇಕು ಎಂದು ನಾನು ಹೇಳುತ್ತಿಲ್ಲ, ತುಲನಾತ್ಮಕವಾಗಿ ಹೇಳುತ್ತಿದ್ದೇನೆ. ನಮ್ಮ boundary ಗೆ ಹತ್ತಿರವಾಗಿರುವಂತಹ ರಾಜ್ಯ ಮಾಡಿರುವ ಕೆಲಸದ ಬಗ್ಗೆ ಉದಾಹರಣೆಯನ್ನು ಕೊಟ್ಟಿದ್ದೇನೆ. ನಮ್ಮ ನಿರ್ಲಕ್ಷ್ಯ ಧೋರಣೆ ಬಗ್ಗೆ ಹೇಳುತ್ತೇನೆ, ಒಂದು ಮತ್ತು ಎರಡನೆ ಹಂತದ ಕಾಮಗಾರಿ ಮುಗಿದಿದೆ. ೧೩ ಲಕ್ಷ ಎಕರೆ ಭೂಮಿ ನೀರಾವರಿಯಾಗಿದೆ. ಇನ್ನು ೧೫ ಲಕ್ಷ ಎಕರೆ ನೀರಾವರಿಯಾಗುವಂತಹ ವ್ಯವಸ್ಥೆ ಮೂರನೇ ಹಂತದಲ್ಲಿದೆ. ೨.೬೩,೦೦೦ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಂಡು ಒಂದು ಮತ್ತು ಎರಡನೇ ಯೋಜನೆಯನ್ನು ಮಾಡಲಾಗಿದೆ. ಮೂರನೇ ಹಂತಕ್ಕೆ ಕೇವಲ ೧.೩೦,೦೦೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಅಂದರೆ ಕೇವಲ 1/3 ರಷ್ಟು ೩೩% ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಈಗ ಎರಡು-ಮೂರಂಶದಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಇನ್ನು ಒಂದು ಮೂರಂಶದಷ್ಟು ಮಾತ್ರ ಮೂರನೇ ಹಂತದ ಯೋಜನೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು. ಇಷ್ಟು ಕೆಲಸವಾದರೆ ನಮ್ಮ ೧೫ ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತದೆ. ಒಂದು ಮತ್ತು ಎರಡನೇ ಹಂತದಲ್ಲಿ ೧೭೬ ಗ್ರಾಮಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ೧೩೬ ಲಕ್ಷ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಇವತ್ತು ಅಲ್ಲಿಯ ಜನರನ್ನು ಸ್ಥಳಾಂತರಗೊಳಿಸಲಾಗಿದೆ. ಈಗ ಕೇವಲ ೮% ರಷ್ಟು ಅಂದರೆ ಸುಮಾರು ೨೦ ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು.

ಒಂದು ಮತ್ತು ಎರಡನೇ ಹಂತದ ಯೋಜನೆಗೆ ಬಾಗಲಕೋಟಿ ನಗರವನ್ನು ಹಿಡಿದು ೭೮,೦೦೦ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈಗ ಅಂದಾಜು ೨೦ ಹಳ್ಳಿಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸುಮಾರು ೧೦,೦೦೦ ಕಟ್ಟಡಗಳು ಬರಬಹುದು. ಆಗ ೭೮,೦೦೦ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡು ಪರಿಹಾರವನ್ನು ಕೊಡಲಾಗಿದೆ. ಈಗ ಸುಮಾರು ೧೦,೦೦೦ ಕಟ್ಟಡಗಳು ಅಂದರೆ ಅಂದಾಜು ೮% ಕಟ್ಟಡಗಳಿಗೆ ಪರಿಹಾರವನ್ನು ಕೊಡುವುದು ಉಳಿದಿದೆ. ಈ ಯೋಜನೆಗೆ ಈಗಾಗಲೇ ೯೨% ಕೆಲಸವಾಗಿದೆ. ೯೨% ಹಳ್ಳಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಡ್ಯಾಂನ ಎತ್ತರವನ್ನು ೫೧೯.೬ ರಿಂದ ೫೨೪.೨೫೬ ಮೀಟರ್ ಎತ್ತರಿಸಲು ಹಣ ವ್ಯಯವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಯಾವುದೇ ರೀತಿಯ ಹಣ ವ್ಯಯವಾಗುವುದಿಲ್ಲ. ಆಗ ೫೨೪.೨೫೬ ಮೀಟರ್ ಎತ್ತರಿಸಲು ಗೇಟ್‌ಗಳನ್ನು ಅಳವಡಿಸಲಾಗಿತ್ತು, ಆದರೆ ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ Central Water Commission ನವರು ಮಧ್ಯೆ ಬಂದಿದ್ದರಿಂದ ೫೨೪.೨೫೬ ಮೀಟರ್‌ನಿಂದ ೫೧೯.೨ ಮೀಟರ್‌ಗೆ ಗೇಟ್ ಅನ್ನು ಕಟ್ ಮಾಡಲಾಯಿತು. ಅಷ್ಟು ಎತ್ತರದ ಗೇಟ್‌ಗಳನ್ನು ಕಟ್ ಮಾಡಿದರು. ಈಗ ಆ ಗೇಟ್‌ಗಳನ್ನು ಕೂಡಿಸಲು ೧೫ ದಿವಸ ಇಲ್ಲಾ ಒಂದು ತಿಂಗಳ ಸಮಯ ಸಾಕು. ಇದಕ್ಕೆ ಹೆಚ್ಚು ಹಣವು ಬೇಕಾಗಿಲ್ಲ. ಕೇವಲ ೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕು. ಕಟ್ ಮಾಡಿರುವ ಗೇಟ್‌ಗಳನ್ನು ಕೂಡಿಸುವುದು ಅಷ್ಟೆ. ಇದರಲ್ಲಿ ಏನು ತೊಂದರೆ ಇದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಯಾವುದೇ ಖರ್ಚು ಆಗುವುದಿಲ್ಲ. ಕೆಲವರು ಇಷ್ಟು ದೊಡ್ಡ ಡ್ಯಾಂ ಕಟ್ಟಬೇಕಾದರೆ ಹೆಚ್ಚು ಹಣಬೇಕು ಎಂದು ಹೇಳಬಹುದು. ಆದರೆ ಡ್ಯಾಂ ಕಟ್ಟಿಯಾಗಿದೆ, ಆದರೆ ನಮ್ಮ ದುರ್ದೈವ Central Water Commission ನವರು ಮುಂದೆ ನಿಂತು ಗೇಟ್ ಕಟ್ ಮಾಡಿಸಿದರು.

**ಶ್ರೀ ಗೋವಿಂದ ಎಂ.ಕಾರಜೋಳ**:- ಅದು ನಮ್ಮ ದುರ್ದೈವ ಅಲ್ಲ, ಪದ ಬಳಕೆಯ ತಪ್ಪಿನಿಂದ ಗೇಟ್ ಕಟ್ ಆಗಿರುವುದು. ನಮ್ಮ ಮಂತ್ರಿಗಳಿಂದಲೇ ಆಗಿರುವುದು, ನಾನು ಆಗ ಆಡಳಿತ ಪಕ್ಷದಲ್ಲಿ ಇದ್ದವನು.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ, ಒಬ್ಬ ಮಂತ್ರಿಗಳ ಹೇಳಿಕೆಯಿಂದ ಆಗಿರುವುದು. ಈಗ ಅವರು ನಮ್ಮ ಮಧ್ಯೆ ಇಲ್ಲ. ನಮ್ಮನ್ನು ಅಗಲಿ ಹೋದವರ ಮಾತನಾಡುವುದು ಬೇಡ. ಅವರ ಬಗ್ಗೆ ಗೌರವದಿಂದಲೇ ಮಾತನಾಡಬೇಕು ಎನ್ನುವ ಉದ್ದೇಶದಿಂದ ಆ ಸಚಿವರ ಹೆಸರನ್ನು ನಾನು ಹೇಳುವುದಿಲ್ಲ. ಮಾನ್ಯ ಸಚಿವರಾದ ಕಾರಜೋಳರವರಿಗೆ ಗೊತ್ತಿದೆ. ಅವರು ಅನುಭವಿ ಹಿರಿಯ ರಾಜಕಾರಣಿಗಳು. ಅವರಿಗೂ ಎಲ್ಲವೂ ಗೊತ್ತಿದೆ. ಅದಕ್ಕಾಗಿ ಆ ವಿಷಯವನ್ನು ಇಲ್ಲಿ ನಾನು ಹೇಳುವುದಿಲ್ಲ. ೧೫ ಲಕ್ಷ ಎಕರೆ ನೀರಾವರಿಯಾಗುವಂತಹ ಮೂರನೇ ಹಂತದ ಯೋಜನೆ ಇದು. Ground water ಅಂದರೆ ಡ್ಯಾಂನಲ್ಲಿ ನೀರು ನಿಂತರೆ, ಕಾಲುವೆಗಳಲ್ಲಿ ನೀರು ಹರಿದು ಹೋದರೆ ಅಂತರ್ಜಲ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೃದ್ಧಿಯಾಗುತ್ತದೆ. ಇದರಿಂದ ೬೦ ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡಿಕೊಳ್ಳಬಹುದು. ಅಂದರೆ ೭೫ ಲಕ್ಷ ಎಕರೆ ಭೂಮಿ ನೀರಾವರಿಯಾಗಬಹುದು. ಉತ್ತರ ಕರ್ನಾಟಕದ ಇಂಚು-ಇಂಚು ಭೂಮಿ ಕೂಡಾ ನೀರಾವರಿಯಾಗುವಂತಹ ಬೃಹತ್ ಯೋಜನೆಯಾಗಿದೆ. 'Regional Imbalance' ಎಂದು ಶತ-ಶತಮಾನಗಳಿಂದ ಹೇಳುತ್ತಿದ್ದೇವೆ ಅದನ್ನು ಈ ಯೋಜನೆಯಿಂದ ನಿವಾರಿಸಬಹುದು. ಮಾನ್ಯ ಸಚಿವರಾದ ಶ್ರೀ ಉಮೇಶ್ ಕತ್ತಿಯವರು ಉತ್ತರ ಕರ್ನಾಟಕದ ಬಗ್ಗೆ ಬಹಳಷ್ಟು ಕಾಳಜಿ, ಕಕ್ಕಲಾತಿಯಿಂದ, ಅಭಿಮಾನದಿಂದ ಧ್ವನಿ ಎತ್ತಿದ್ದಾರೆ. ಈ ಯೋಜನೆಯನ್ನು ಮಾಡಿಬಿಟ್ಟರೆ ಅಖಂಡ ಕರ್ನಾಟಕದ ಕನಸು ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಪ್ರತಿಯೊಂದು project ಗೂ cost-benefit ratio ಇರುತ್ತದೆ. Cost-benefit ratio ಎಂದರೆ ಏನು, ವ್ಯಾಪಾರ ಮಾಡುವವರು ಒಂದು ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿದಾಗ ಆ ಬಂಡವಾಳ ವಾಪಸ್ ಬರುತ್ತದೆಯೇ ಇಲ್ಲವೋ ಎನ್ನುವುದನ್ನು ನೋಡುವುದಿಲ್ಲ. ಆ ಬಂಡವಾಳದಿಂಧ ಎಷ್ಟು ಲಾಭ ಬರುತ್ತದೆ ಎನ್ನುವುದನ್ನು ನೋಡುತ್ತಾರೆ. ನಮ್ಮ ಲೆಕ್ಕದ ಪ್ರಕಾರ ೫೧,೦೦೦ ಕೋಟಿ ರೂಪಾಯಿಗಳ ಯೋಜನೆ, ಅದರೆ ಮಾನ್ಯ ಸಚಿವರಾದ ಶ್ರೀ ಕಾರಜೋಳರವರು ಹೇಳಿರುವ ಪ್ರಕಾರ ೬೫,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, ನಮ್ಮ ರಾಜ್ಯಕ್ಕೆ ಪ್ರತಿವರ್ಷ ೩,೫೬,೦೦೦ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತದೆ. ಈ ರಾಜ್ಯದ ಅಷ್ಟೆಯಲ್ಲ, ಈ ರಾಷ್ಟ್ರದ ವರಮಾನವನ್ನು ಹೆಚ್ಚಿಸುವಂತಹ prestigious irrigation project ಎಂದು ನಾನು ಹೇಳುವುದು ಇದೇ ಕಾರಣಕ್ಕೆ. Every year we are going to gain roughly Rs.3,56,000 crores. ದೊಡ್ಡ ಪ್ರಮಾಣದಲ್ಲಿ ನೀರಾವರಿಯಾಗುತ್ತದೆ. ನಮ್ಮ ಭಾಗದಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳು ಇವೆ. ಮಾನ್ಯ ಸಚಿವರಾದ ಉಮೇಶ್ ಕತ್ತಿಯವರು ಸಕ್ಕರೆ ಕಾರ್ಖಾನೆಗಳ ಮಾಲೀಕರು. ಮಾನ್ಯ ಉಪಸಭಾಪತಿಗಳು ಚಿಕ್ಕಮಗಳೂರಿನವರು ಅವರು ಎಸ್ಟೇಟ್ ಮಾಲೀಕರು. ನಾವೆಲ್ಲಾ ಬಯಲು ಸೀಮೆಯವರು. ಈಗ ಕೃಷ್ಣಮೇಲ್ದಂಡೆ ಯೋಜನೆ ಬಂದಮೇಲೆ ನೀರು ಬಂದು ನೀರಾವರಿಯಾಗಿ ರೈತರು ಶ್ರೀಮಂತರಾಗಿದ್ದಾರೆ. ಮೊದಲು ನಮ್ಮ ರೈತರ ಹತ್ತಿರ ಒಂದು ಸೈಕಲ್ ಕೂಡಾ ಇರಲಿಲ್ಲ. ಈಗ ಸಕ್ಕರೆ ಕಾರ್ಖಾನೆಗಳು ಸ್ಥಾಪನೆಯಾಗಿ. ರೈತರು ಕಬ್ಬು ಬೆಳೆಯಲು ಪ್ರಾರಂಭ ಮಾಡಿದ ಮೇಲೆ ರೈತರು ತಮ್ಮ ಮನೆಯಲ್ಲಿ ಈಗ ನಾಲ್ಕು ದ್ವಿಚಕ್ರ ವಾಹನಗಳನ್ನು, ಎರಡು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಇಷ್ಟೇ ಅಲ್ಲ ಅವರ ಹೆಣ್ಣುಮಕ್ಕಳಿಗೆ ಒಳ್ಳೆಯ ಮನೆತನ ನೋಡಿ ಮದುವೆ ಮಾಡಿಕೊಡುತ್ತಿದ್ದಾರೆ. ರೈತರು ಕೂಡು ಕಾರಿನಲ್ಲಿ ಓಡಾಡುತ್ತಾ, ಆರಾಮಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಭಿಮಾನದಿಂದ, ಗೌರವದಿಂದ ಎದ್ದೆ ಉಬ್ಬಿಸಿ ಮುಂದುವರೆದವರ ಜೊತೆಗೆ ಹೆಗಲಿಗೆ ಹೆಗಲು ಹಚ್ಚಿ ನಡೆಯುವಂತಹ ಸಾಮರ್ಥ್ಯ ಬಂದಿದೆ.

ನಾವು ಸುಮ್ಮನೆ ಭಾಷಣ ಮಾಡಿ ಉತ್ತರ ಕರ್ನಾಟಕ ಮುಂದೆ ಬರಬೇಕು ಎಂದರೆ ಹೇಗೆ ಬರುತ್ತದೆ? ಇಂತಹ ಬೃಹತ್ ಯೋಜನೆಗಳನ್ನು ಕಾರ್ಯಗತಗೊಳಿಸಬೇಕು. ಆಗ ನಿಶ್ಚಿತವಾಗಿ ಇದರ ಲಾಭ ರಾಜ್ಯಕ್ಕೆ ಸಿಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಕೆಲವೊಂದು ತೊಂದರೆಗಳು ಇವೆ. ಅದರ ಬಗ್ಗೆ ಮಾನ್ಯ ಸಚಿವರಾದ ಶ್ರೀ ಕಾರಜೋಳರವರು ತಮ್ಮ ಉತ್ತರದಲ್ಲಿ ಹೇಳುತ್ತಾರೆ. ಇದಕ್ಕೆ gazette notification ಆಗಬೇಕು. Krishna Tribunal ಗೆ ಸಂಬಂಧಿಸಿದಂತೆ ಜಸ್ಟೀಸ್ ಬ್ರಿಜೇಶ್ ಕುಮಾರ್‌ರವರ Tribunal No.2 ಬಗ್ಗೆ ವರದಿ ಏನು ಇದೆ ಅದು gazette notification ಆಗಬೇಕು. ಇವತ್ತು ನಾವು ಕೋರ್ಟ್‌ಗೆ ಹೋಗಿದ್ದೇವೆ, ಪಕ್ಕದ ರಾಜ್ಯದವರು ಕೋರ್ಟ್‌ಗೆ ಹೋಗಿದ್ದಾರೆ. ಈ ವಿಚಾರ ಬಹಳ sensitive matter ಇರುವುದರಿಂದ ಇದರ ಬಗ್ಗೆ ನಾನು ಆಳವಾಗಿ ಮಾತನಾಡಲು ಹೋಗುವುದಿಲ್ಲ. ಏಕೆಂದರೆ ಹಿಂದೆ ಗೇಟ್ ವಿಚಾರದಲ್ಲಿ ಆದ ಹಾಗೆ ಆಗಬಾರದು ಅದಕ್ಕೆ ನಾನು ಏನು ಹೇಳುವುದಿಲ್ಲ. ಇದು sensitive matter ಆಗಿರುವುದರಿಂದ ಮತ್ತು ಜಲಸಂಪನ್ಮೂಲ ಸಚಿವರ ಇಚ್ಛೆಯು ಅದೇ ಆಗಿರುವುದರಿಂದ ಮಾನ್ಯ ಕಾರಜೋಳರವರೆ ನಾನು ಇದರ ಆಳಕೆ ಹೋಗುವುದಿಲ್ಲ. ಆದರೆ ಒಂದು ವಿಚಾರವನ್ನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಹೇಳಬಯಸುವುದು, ಕಾವೇರಿ ವಿಚಾರದಲ್ಲಿ ಸುಪ್ರೀಮ್ ಕೋರ್ಟ್‌ನಲ್ಲಿ SLP (Special Leave Petition) ಇತ್ತು.

(ಮುಂದು)

(696)15-09-2021(12-40)bsd-ak

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ನ್ಯಾಯಾಲಯಗಳಲ್ಲಿ ವ್ಯಾಜ್ಯಗಳಿದ್ದು, ಇದೇ ರೀತಿ ಮಹದಾಯಿ ನದಿ ವಿಚಾರವೂ ಆಗಿದೆ. I thank the Central Government. ಇವೆರಡು ಯೋಜನೆಗಳಿಗೆ subject to the decision of Supreme Court, gazette notification ಮಾಡಿದ್ದಾರೆ. ನಾನು ಅವರ ಮುಖಾಂತರ ಸರ್ಕಾರಕ್ಕೆ ವಿನಂತಿಸುವುದೇನೆಂದರೆ pending ಇರುವುದೆಲ್ಲವೂ ನಿಕಾಲೆ ಆಗಬೇಕು. ಈಗ ೧೦ ವರ್ಷ ಆಯಿತು. ೧೩೦ tmc ನೀರು allocation ಆಗಿದ್ದು, dam ೫೧೯.೬ ಮೀಟರ್‌ಗಳಿಗೆ ನಿಂತಿದ್ದು, ಎತ್ತರವೂ ಆಗುವುದಿಲ್ಲ, ನೀರಿನ ಉಪಯೋಗವೂ ಆಗುವುದಿಲ್ಲ. ಈಗಾಗಲೇ ನಾನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದಂತೆ ಉತ್ತರ ಕರ್ನಾಟಕದ ಅತ್ಯಂತ ಪ್ರಮುಖ ೭ ಜಿಲ್ಲೆಗಳಿಗೆ ಫಲಪ್ರದವಾಗುವ ೯ lift irrigation scheme ಗಳಿಗೆ ಏನೂ ಉಪಯೋಗ ಇಲ್ಲ. ನೀರು ಇಲ್ಲ. ನೀರು ಸಂಗ್ರಹ ಆದ ಮೇಲೆ ೯ lift irrigation scheme ಗಳಿಗೆ ನೀರು ಹೋಗಬೇಕು. ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ what had happened in case of Cauvery project, what had happened in case of Mahadayi project, subject to the decision of the Apex Court of this land, ಆ ನಿರ್ಣಯಕ್ಕೆ ಒಳಪಟ್ಟು gazette notification ಆಗಬೇಕು. ಸರ್ಕಾರದವರು ವಿನಂತಿ ಮಾಡಿಕೊಂಡಿಲ್ಲ ಎಂದು ಹೇಳುವುದಿಲ್ಲ. ಮೊನ್ನೆ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರ ಪ್ರಶ್ನೆಗೆ ಉತ್ತರ ಕೊಟ್ಟಾಗ ಹೇಳಿದ್ದಾರೆ, repeatedly request ಮಾಡಿಕೊಂಡಿರುವ ಬಗ್ಗೆಯೂ ಹೇಳಿದ್ದಾರೆ. ಇಂತಹ golden opportunity ಇದೆ. ಮಾನ್ಯ ಉಮೇಶ್ ಕತ್ತಿಯವರು ಹಿರಿಯ ಸಚಿವರಾಗಿದ್ದಾರೆ. ಇಂತಹ golden opportunity ಇದೆ. ಹಿಂದೆ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಹಾಗೂ ಈಗ ಮಾನ್ಯ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ಇದ್ದು, ಕೇಂದ್ರದಲ್ಲಿ ಮಾನ್ಯ ನರೇಂದ್ರ ಮೋದಿಯವರ ಸರ್ಕಾರವಿದ್ದು, ಎರಡೂ ಒಂದೇ ಪಕ್ಷದ ನೇತೃತ್ವದ ಸರ್ಕಾರವಾಗಿದೆ. It's a double engine government. ಭಾರತೀಯ ಜನತಾ ಪಕ್ಷದವರನ್ನು ಕರ್ನಾಟಕದವರು ನಿರ್ಲಕ್ಷ್ಯಕ್ಕೆ ಒಳಪಡಿಸಿದ್ದಾರೆ ಎನ್ನುವಂತಿಲ್ಲ. ಏಕೆಂದರೆ ೨೬ Parliament Members ನ್ನು ಕನ್ನಡ ನಾಡಿನ ಕರ್ನಾಟಕದ ಜನರು ಅವರ ಪಕ್ಷಕ್ಕೆ ಆಯ್ಕೆ ಮಾಡಿದ್ದಾರೆ. ಭಾರತೀಯ ಜನತಾ ಪಕ್ಷದ ಮಡಿಲಿಗೆ ೧೨೦ ವಿಧಾನ ಸಭಾ ಕ್ಷೇತ್ರದ ಸದಸ್ಯರನ್ನು ಕೊಟ್ಟಿದ್ದಾರೆ. ಇದಕ್ಕಿಂತ ಒಂದು ಪಕ್ಷಕ್ಕೆ ಏನು contribution ಕೊಡಬೇಕು? ಒಂದು ರಾಜ್ಯ ಒಂದು ಪಕ್ಷಕ್ಕೆ ಯಾವರೀತಿಯಾಗಿ ಇಂತಹ ಅದ್ಭುತ ಕೊಡುಗೆ ಕೊಟ್ಟ ಪಕ್ಷದವರು ಮಾನ್ಯ ನರೇಂದ್ರ ಮೋದಿಯವರ ಬಳಿ ಹೋಗಿ ಈ ವಿಚಾರವನ್ನು ನೆನಪಿಸಬೇಕಿತ್ತು, ಅವರಿಗೆ ನೆನಪಿಲ್ಲ ಎಂದಲ್ಲ. ಅವರು ಹೋಗಿ they should use their good office. ಅವರ ಮೇಲೆ ವರ್ಚಸ್ಸನ್ನು ಉಪಯೋಗ ಮಾಡಲಿ. ಪುಣ್ಯಕ್ಕೆ ಮಾನ್ಯ ಕಾರಜೋಳರವರು ಜಲಸಂಪನ್ಮೂಲ ಸಚಿವರಾಗಿದ್ದರಿಂದ ನನ್ನಷ್ಟು ಸಂತೋಷ ಪಟ್ಟಿರುವವರು ಇನ್ನೊಬ್ಬರಿಲ್ಲ. ನಮ್ಮ ಜಿಲ್ಲೆಯವರು ಹಾಗೂ ನನ್ನ ಪಕ್ಕದ ಮುಧೋಳ ಕ್ಷೇತ್ರದವರಾಗಿದ್ದಾರೆ. I am very happy. ಯಾವಾಗಲೂ ಗುಣಕ್ಕೆ ಮತ್ಸರ ಇಲ್ಲ. I am very sportive. ಯಾರೇ ಆದರೂ ಒಳ್ಳೆಯ ಕೆಲಸ ಮಾಡಿದರೆ ಸಂತೋಷ. ಉತ್ತರ ಕರ್ನಾಟಕ ಎನ್ನುವುದಕ್ಕಿಂತ ೧.೩೦ ಲಕ್ಷ ಎಕರೆ ಭೂಮಿ ಕಳೆದುಕೊಳ್ಳುವವರು ನಾವು ಮತ್ತು ಅವರಾಗಿದ್ದೇವೆ. ಬಾಗಲಕೋಟೆ ಜಿಲ್ಲೆಯವರು ಭೂಮಿ ಕಳೆದುಕೊಳ್ಳುತ್ತಾರೆ, ಜೊತೆಗೆ ಬಿಜಾಪುರ ಜಿಲ್ಲೆಯವರು ಭೂಮಿ ಕಳೆದುಕೊಳ್ಳುತ್ತಾರೆ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

major ಆಗಿ ೪ ಲಕ್ಷ ಎಕರೆ ಅತ್ಯಂತ ಫಲವತ್ತಾದ ಗಂಗಾ belt ಗೆ ಸರಿಸಮಾನ ಫಲವತ್ತತೆಯನ್ನು ಹೊಂದಿದ ಭೂಮಿಯಲ್ಲದೇ, ದೇಶದಲ್ಲಿಯೇ ಹೆಚ್ಚು ಫಲವತ್ತತೆ ಹೊಂದಿದ fertile lands to the extent of four lakh acres Bagalkot is going to lose. ನಾವು ತ್ಯಾಗಿಗಳು. ಇಷ್ಟು ಭೂಮಿ ಕಳೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಮಾನ್ಯ ಹಿರಿಯರಾದ ಯಡಿಯೂರಪ್ಪನವರ ಬಗ್ಗೆ ನನಗೆ ಗೌರವವಿದ್ದು, ಅತ್ಯಂತ ಹೋರಾಟದಿಂದ ಮುಖ್ಯಮಂತ್ರಿಗಳಾದವರು. ಸಿದ್ದವನಹಳ್ಳಿ ನಿಜಲಿಂಗಪ್ಪನವರು ೪ ಬಾರಿ ಮುಖ್ಯಮಂತ್ರಿಗಳಾದಂತೆ ಇವರೂ ಸಹ ೪ ಬಾರಿ ಮುಖ್ಯಮಂತ್ರಿಗಳಾಗಿ ದಾಖಲೆಯನ್ನು ಸರಿಗಟ್ಟಿದ್ದಾರೆ. ಆದರೆ ಇವತ್ತಿನ ಅವರ ಬದಲಾವಣೆಯ ಗೊಡವೆಗೆ ನಾನು ಹೋಗುವುದಿಲ್ಲ ಮತ್ತು ರಾಜಕಾರಣ ಮಾಡುವುದಿಲ್ಲ. ಇವತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರು ದಕ್ಷಿಣ ಕರ್ನಾಟಕದವರೇ? Coastal Karnataka ದವರೇ? Mid-Karnataka ದವರೇ? He is from North Karnataka. ನಮ್ಮ ಮುಖ್ಯಮಂತ್ರಿಗಳು North ಕರ್ನಾಟಕದವರಾಗಿದ್ದು, ಮಾನ್ಯ ಜಲಸಂಪನ್ಮೂಲ ಸಚಿವರು North Karnataka ಹಾಗೂ ಹೆಚ್ಚಾಗಿ ನಮ್ಮ ಜಿಲ್ಲೆಯವರಾಗಿದ್ದಾರೆ. ಅವರು ಭೂಮಿ ಕಳೆದುಕೊಳ್ಳುವವರ ಪರವಾಗಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಬರೀ ಭೂಮಿ ಕಳೆದುಕೊಳ್ಳುವವರ ಪರ ಅಲ್ಲ, ಸಂತ್ರಸ್ತರ ಕುಟುಂಬದವನಾಗಿದ್ದೇನೆ.

**Sri S.R. PATIL:** We are Project Affected Persons. ನಾವು ನಮ್ಮ ಭೂಮಿಯನ್ನು ಕಳೆದುಕೊಂಡಿದ್ದೇವೆ, ನಮ್ಮ ಊರಿನ ಸುತ್ತಮುತ್ತ ಎಲ್ಲಾ ಭೂಮಿ ಹೋಗಿದೆ. I am coming under the submergence area. ನಮ್ಮ ಊರು ಮುಳುಗದೇ ಕೆಲವು ಭೂಮಿಗಳು ಹೋಗಿವೆ. ಅದೇರೀತಿ ಮಾನ್ಯ ಕಾರಜೋಳರವರು Project Affected Person ಆಗಿದ್ದಾರೆ. ನಿನ್ನೆ ಮುಧೋಳದ ಬಗ್ಗೆ ಚರ್ಚೆಯಾಗಿದ್ದು ೩೮ ಹಳ್ಳಿಗಳ ಬಗ್ಗೆ ಚರ್ಚೆಯಾಯಿತು. ಆಗ ನಾವು ಅಧಿಕಾರದಲ್ಲಿ ಇದ್ದೆವು. ಮಾನ್ಯ ನಿರಾಣಿಯವರು ಇದ್ದಂತೆ ಇಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-**ನಾವೆಲ್ಲರೂ ಫಲಾನುಭವಿಗಳ ಕೆಳಗಿನವರು.

**ಶ್ರೀ ಎಸ್.ಆರ್. ಪಾಟೀಲ್:-** ನಾನು ಅವರ ಬಗ್ಗೆ ಹೇಳಲಿಲ್ಲ, ನಾವು ಅವರು ವಕೀಲರು. ಮಾನ್ಯ ಸಭಾಪತಿಯವರೇ, ಒಂದು ಎಕರೆಗೆ ರೂ.೩೦ ಲಕ್ಷಗಳಿಂದ ೫೦ ಲಕ್ಷಗಳವರೆಗೂ ಕೊಡಬೇಕೆಂದು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಇರುವಾಗ ಹೇಳಿದರು. ನಾವು ಯಾವಾಗಲೂ ಭೂಮಿ ಕಳೆದುಕೊಳ್ಳುವವರ ಪರ ಇದ್ದೇವೆ. ಅವರು ಬಹಳ ಯೋಗ್ಯವಾದ ಮಾತನ್ನು ಹೇಳಿದ್ದಾರೆ, ಅಡ್ಡಿಯಿಲ್ಲ. ನಾವು ಶಹಭಾಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದೆವು. ಈಗ time ಹೇಗಿದೆ ನೋಡಿ, ಅಧಿಕಾರ ಈಗ ಅವರ ಕೈಯಲ್ಲಿ ಇದೆ. ಆಗ ನಮಗೆ ಹೇಳುತ್ತಿದ್ದರು, ಅವರೇ ಹೆಚ್ಚು ಕೊಡಬೇಕೆಂದು ಹೇಳುತ್ತಿದ್ದರು. ಆದರೆ ಈಗ ಅಧಿಕಾರ ಅವರ ಕೈಯಲ್ಲಿ ಇದೆ. ನಮ್ಮ ಭಾಗದ ಜನರ ನಸೀಬು ಎಷ್ಟು ಒಳ್ಳೆಯದು ನೋಡಿ. ಆಗ ಅವರೇ ಹೇಳಿದಂತೆ ಇನ್ನಷ್ಟು ಹೆಚ್ಚು ಸೇರಿಸಿ ಕೊಡಬಹುದಲ್ಲವೇ?

**ಶ್ರೀ ಎನ್. ರವಿಕುಮಾರ್:-** ನಸೀಬು ಬಹಳ ಚೆನ್ನಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ರವಿಕುಮಾರ್ ರವರು ಬಿಜೆಪಿ ಯಲ್ಲಿ ಬಹಳ ಪ್ರಭಾವಶಾಲಿ ನಾಯಕರಾಗಿದ್ದು, ಅವರು ಸಹ ಉತ್ತರ ಕರ್ನಾಟಕದ ಪರ ಇದ್ದಾರೆ. ಮೊನ್ನೆ ಕಲ್ಬುರ್ಗಿ ಜಿಲ್ಲೆಯ ಅವರ ಪಕ್ಷದಿಂದ ಮಹಾನಗರ ಪಾಲಿಕೆಗೆ In-charge ಆಗಿ ಬಂದಿದ್ದರು. ಆಗ ನಾನೂ ನನ್ನ ಪಕ್ಷದಿಂದ ಬಂದಿದ್ದು, ಒಂದೇ ದಿವಸ ಒಂದೇ flight ನಲ್ಲಿ ಹೋದೆವು. ಅವರು ತಮ್ಮ ವರ್ಚಸ್ಸನ್ನು ಉಪಯೋಗ ಮಾಡಬೇಕು. ಮಾನ್ಯ ಸಭಾಪತಿಯವರೇ, ಬಾಗಲಕೋಟೆ, ಬಿಜಾಪುರದವರು ಭೂಮಿ ಕಳೆದುಕೊಳ್ಳುವ ಬಗ್ಗೆ ಹೇಳಿದೆ. ಅನೇಕ ಅರಸೊತ್ತಿಗೆಗಳು, kingdom ಗಳು ಮುಳುಗಿ ಹೋಗಿವೆ. ಲಕ್ಷಾಂತರ ಜನರು ಯುದ್ಧದಲ್ಲಿ ಮಡಿದರು, ಇವರೆಲ್ಲಾ ಏಕೆ ಮಡಿದರು? ಮಣ್ಣಿಗಾಗಿ ಹೋರಾಟ ನಡೆದಿತ್ತು. ಇನ್ನು ಒಂದೆರಡು ಕಾರಣಗಳಿಗೂ ಹೋರಾಟ ನಡೆಯುತ್ತದೆ. ನಾವು ೪ ಲಕ್ಷ ಎಕರೆ ಭೂಮಿ ಕಳೆದುಕೊಳ್ಳುವವರು ಸ್ವಾತಂತ್ರ್ಯ ಯೋಧರಿಗೆ ಸರಿಸಮಾನವಾದ ಜನರಾಗಿದ್ದೇವೆ. ಅವರು ಮನೆ-ಮಠ, ಆಸ್ತಿ-ಪಾಸ್ತಿ, ಎಲ್ಲವನ್ನು ಕಳೆದುಕೊಂಡು ತಲೆ ಮೇಲೆ ಮಸಿ ಗಡಿಗೆಯನ್ನು ಹೊತ್ತುಕೊಂಡು ಬೀದಿಯಲ್ಲಿ ನಿರ್ಗತಿಕರಾಗಿ ಬರುತ್ತಾರೆ. ಈ ಮಾತನ್ನು ಬಹಳ ನೋವು ಹಾಗೂ ದುಃಖದಿಂದ ಹೇಳುತ್ತಿದ್ದೇನೆ. ಹಿರಿಯರು ಅಂದರೆ ಅಜ್ಜ-ಮುತ್ತಜ್ಜರಿಂದ ಗಳಿಸಿದ ಭೂಮಿ, ಮನೆ ಕಳೆದುಕೊಳ್ಳಬೇಕಾಗಿದೆ. ಆ sentimental feeling ಇದ್ದೇ ಇರುತ್ತದೆ, ಯಾವ ರೀತಿಯ feeling ಅಂದರೆ ನನ್ನ ಮನೆ ಮುಳುಗಿದಾಗ ಬಹಳ ನೋವೆನಿಸುತ್ತದೆ. ಆ ಮನೆಯನ್ನು ಬಿಟ್ಟು ಹೋಗಬೇಕಲ್ಲ! ನೀರು ಬರುತ್ತದೆ, ಆ ನೀರಿನಲ್ಲಿ ಮನೆ ಮುಳುಗುತ್ತದೆ. ಒಂದು ಭಾವನಾತ್ಮಕವಾದ ಸಂಬಂಧ ಇರುತ್ತದೆ. ಇದೇ ಮನೆಯಲ್ಲಿ ಹುಟ್ಟಿದ್ದು, ಅಜ್ಜ-ಮುತ್ತಜ್ಜರೆಲ್ಲರೂ ಬದುಕಿ ಬಾಳಿದ್ದಾರೆ. ಸಣ್ಣ ಮಕ್ಕಳಾಗಿದ್ದಾಗಿಂದ ಬೆಳೆದ ಮನೆಯನ್ನು ಬಿಟ್ಟು ಹೋಗಬೇಕಲ್ಲವೇ? ನಮ್ಮ ಜೀವನದ ಅವಿಭಾಜ್ಯ ಅಂಗ ಎನ್ನುವಂತೆ ನೆರೆ ಹೊರೆಯವರು ಇರುತ್ತಾರೆ. ಮನೆ ಬೀಳುವಂತಹದ್ದು ಇದ್ದರೂ ಆ ಮನೆಯ ಜೊತೆ ಒಂದು ಭಾವನಾತ್ಮಕ ಸಂಬಂಧ ಇರುತ್ತದೆ. ಇಲ್ಲಿ ಬಂದು Five Star Hotel ನಲ್ಲಿ ಇರಬಹುದು. ಆದರೆ ಅಲ್ಲಿ ಬಿದ್ದ ಮನೆ, ಬೀಳುವಂತಹ ಮನೆ, ಸಣ್ಣದಾದ ಮನೆ ಇದ್ದರೂ ನೆನಪಾಗುತ್ತದೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಪರಂಪರೆ, ಸಂಸ್ಕೃತಿ ಬಗ್ಗೆ ಬಹಳ ಅಧ್ಯಯನ ಮಾಡಿದ್ದಾರೆ. ನಾವು ಯಾವಾಗ ಊರಿಗೆ ಹೋಗುತ್ತೇವೆಯೋ ಎನ್ನುವ ಭಾವನಾತ್ಮಕ ಸಂಬಂಧ ಇರುತ್ತದೆ.

(ಮುಂದು)

(697)/ 15.09.2021/ 12.50/ ಹೆಚ್‌ವಿ:ಆರ್‌ಎನ್

( ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದು....):-**

ಸನ್ಮಾನ್ಯ ಸಭಾಪತಿಯವರೇ, ಯಾವಾಗ ನಮ್ಮೂರಿಗೆ ಹೋಗುತ್ತೇವೆ ಎನ್ನುವಷ್ಟು ಭಾವನಾತ್ಮಕವಾದ ಸಂಬಂಧವನ್ನು ಆ ನೆಲದೊಂದಿಗೆ ಇಟ್ಟುಕೊಂಡಿರುತ್ತೇವೆ. ಒಬ್ಬ ಅಧಿಕಾರಿ ಮೂರು ವರ್ಷಗಳ ಕಾಲ ಒಂದೂರಿನಲ್ಲಿ ಇದ್ದು, ನಂತರ ಆತನನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದರೆ, bag and baggage ಅನ್ನು ತೆಗೆದುಕೊಂಡು ಆ ಊರು ಬಿಟ್ಟು ಹೋಗುವಂತಹ ಸಂದರ್ಭದಲ್ಲಿ ಆತ ಮತ್ತು ಆತನ ಕುಟುಂಬದ ಸದಸ್ಯರು ಕಣ್ಣೀರು ಹಾಕುತ್ತಾರೆ. ಅವರು ಅಕ್ಕಪಕ್ಕದ ಮನೆಯವರೊಂದಿಗೆ ಹೊಂದಿಕೊಂಡಿರುತ್ತಾರೆ, ಭಾವನಾತ್ಮಕವಾಗಿ ಆ ಊರನ್ನು ಬಿಟ್ಟು ಹೋಗುವುದಕ್ಕೆ ಅವರಿಗೆ ನೋವಾಗುತ್ತದೆ. ಅದೇ ರೀತಿಯಲ್ಲಿ ನಾವುಗಳು ಶತಶತಮಾನಗಳಿಂದ ಅದೇ ನೆಲದಲ್ಲಿ ಹುಟ್ಟಿ, ಅದೇ ನೆಲದಲ್ಲಿ ಬೆಳೆದು, ಅದೇ ನೆಲದಲ್ಲಿ ಬದುಕನ್ನು ಕಟ್ಟಿಕೊಂಡು, ಅದೇ ನೆಲದಲ್ಲಿ ಮಣ್ಣಿಗೆ ಹೋಗುವವರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾ ಪೀಠವನ್ನು ಅಲಂಕರಿಸಿದರು)**

ಇಂತಹ ಭಾವನಾತ್ಮಕವಾದ ಸಂಬಂಧವನ್ನು ನಮ್ಮ ಜನರು ಆ ನೆಲದೊಂದಿಗೆ ಹೊಂದಿದ್ದಾರೆ. ಈಗ ಪೀಠವನ್ನು ಅಲಂಕರಿಸಿದಂತಹ ಮಾನ್ಯ ಸಭಾಪತಿಯವರು ಸಹ ನಮ್ಮ ಜಿಲ್ಲೆಯವರೇ ಆಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್**:- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಜಲಸಂಪನ್ಮೂಲ ಸಚಿವರು ಎಲ್ಲರೂ ಅವರ ಭಾಗದವರೇ ಆಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್**:- ಈ ಬಗ್ಗೆ ಮಾನ್ಯ ಸದಸ್ಯರಿಗೆ ಮತ್ಸರ ಆಗುತ್ತಿರಬಹುದು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ 40 ನಿಮಿಷಗಳು ಕಳೆದು ಹೋಗಿವೆ. ಒಂದು ಗಂಟೆಯೊಳಗಾಗಿ ತಮ್ಮ ಮಾತುಗಳನ್ನು ಮುಗಿಸುವುದಾಗಿ ಹೇಳಿದ್ದೀರಿ. ತಾವು ಕೊಟ್ಟ ಮಾತಿನಂತೆ ಬೇಗನೇ ತಮ್ಮ ಭಾಷಣವನ್ನು ಮುಗಿಸಿ ಬೇರೆಯವರಿಗೆ ಅವಕಾಶವನ್ನು ಮಾಡಿಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಒಂದು ಮಹತ್ತರವಾದ ಯೋಜನೆಯ ಬಗ್ಗೆ ಮಾತನಾಡುತ್ತಾ, ತಾವು ನಮ್ಮ ಭಾಗದವರೆಂದು ಹೇಳುತ್ತಿದ್ದೆ. ಆದರೆ, ತಾವು ನನಗೆ ಮಾತನಾಡಲು ಅವಕಾಶವನ್ನೇ ಕೊಡುತ್ತಿಲ್ಲ. ಇದು ನನ್ನ ದುರಾದೃಷ್ಟವೆಂದು ಹೇಳಬೇಕು.

**ಸಭಾಪತಿಯವರು:**- ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈಗಾಗಲೇ 40 ನಿಮಿಷಗಳ ಕಾಲ ಮಾತನಾಡಿದ್ದೀರಿ, ಇನ್ನು ಎಷ್ಟು ಸಮಯ ಮಾತನಾಡಬೇಕು? ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಬೇರೆ ವಿಷಯಗಳ ಬಗ್ಗೆ ಮಾತನಾಡಲು ಸದಸ್ಯರು ಕಾಯುತ್ತಿದ್ದಾರೆ. ಕಾರ್ಯಕಲಾಪಗಳ ಪಟ್ಟಿಯಲ್ಲಿ ತಮ್ಮ ವಿಷಯವನ್ನು ಕೊನೆಯಲ್ಲಿ ಹಾಕಿದ್ದರೆ ತಾವು ಎಷ್ಟು ಹೊತ್ತು ಮಾತನಾಡಿದರೂ ನಾನು ಸುಮ್ಮನಿರುತ್ತಿದ್ದೆ.

**ಶ್ರೀ ಎಸ್.ಆರ್.ಪಾಟೀಲ್**:- ಸನ್ಮಾನ್ಯ ಸಭಾಪತಿಯವರೇ, ನಾನು ಅನಾವಶ್ಯಕವಾಗಿ ಯಾವುದೇ ರಾಜಕಾರಣ, ಟೀಕೆ-ಟಿಪ್ಪಣಿ ಮಾಡುತ್ತಿಲ್ಲ. ಮಾನ್ಯ ಉಪ ಸಭಾಪತಿಯವರು ಕಾಫಿ ಎಸ್ಟೇಟ್ ಮಾಲೀಕರಾಗಿದ್ದರೂ ಬಯಲುಸೀಮೆಯ ಬಗ್ಗೆ ಮಾತನಾಡಲು ನನಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದರು. ತಾವು, ಮಾನ್ಯ ಜಲಸಂಪನ್ಮೂಲ ಸಚಿವರು ಮತ್ತು ನಾವೆಲ್ಲರೂ ಈ ಯೋಜನೆಯಿಂದಾಗಿ ಸಂತ್ರಸ್ತರಾಗಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ಅವಿಭಾಜ್ಯ ವಿಜಯಪುರ ಜಿಲ್ಲೆಯಲ್ಲಿ ಭೂಮಿ ಕಳೆದುಕೊಂಡಿರುವವರ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. 1962ನೇ ಇಸವಿಯಲ್ಲಿ ಚೀನಾ ದೇಶದವರು ನಮ್ಮ ದೇಶದ ಮೇಲೆ ದಂಡೆತ್ತಿ ಬಂದಿದ್ದರು. ಆಗ ಪಂಡಿತ್ ಜವಹರಲಾಲ್ ನೆಹರು ಅವರು ನಮ್ಮ ದೇಶದ ಪ್ರಧಾನಮಂತ್ರಿಗಳಾಗಿದ್ದರು. ಆಗ ರಕ್ಷಣಾ ಕ್ಷೇತ್ರವನ್ನು ಬಲಪಡಿಸುವುದಕ್ಕೆ ಹಣದ ಕೊರತೆ ಇತ್ತು. ಅಂತಹ ಸಂದರ್ಭದಲ್ಲಿ ಅವರು ಇಡೀ ಭಾರತ ದೇಶದ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ, 'ರಾಷ್ಟ್ರೀಯ ರಕ್ಷಣಾ ನಿಧಿಗೆ ನಿಮ್ಮನಿಮ್ಮ ರಾಜ್ಯಗಳಿಂದ ಹಣವನ್ನು ಕ್ರೋಡೀಕರಿಸಿ ಕೊಡಿ' ಎನ್ನುವ ಮಾತನ್ನು ಹೇಳಿದ್ದರು. ಆಗ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀಯುತ ಎಸ್.ನಿಜಲಿಂಗಪ್ಪನವರು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಮನವಿ ಮಾಡಿಕೊಂಡಂಥ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅವಿಭಾಜ್ಯ ಬಾಗಲಕೋಟೆ ಮತ್ತು ವಿಜಾಪುರ ಜಿಲ್ಲೆಯವರು ನಮ್ಮ ನೆಚ್ಚಿನ ನಾಯಕಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ ಮತ್ತು ಆಗ ನಾಡಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರ ತೂಕದಷ್ಟು ಬಂಗಾರವನ್ನು ತೂಗಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಟ್ಟಂಥ ಏಕೈಕ ಜಿಲ್ಲೆ ಇಡೀ ಭಾರತ ದೇಶದಲ್ಲಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಯೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. The only one district which has contributed. ಇಬ್ಬರು ನಾಯಕರ ತೂಕದಷ್ಟು ಬಂಗಾರವನ್ನು ತೂಗಿದ್ದೇವೆ. ನಮ್ಮಲ್ಲಿ ಹೆಣ್ಣುಮಕ್ಕಳಿಗೆ ಬಂಗಾರವೆಂದರೆ ಬಹಳ ಪ್ರಾಣ. ಕೊರಳಲ್ಲಿ ಧರಿಸಿದ್ದ ತಾಳಿಸರವನ್ನು ಹೊರತುಪಡಿಸಿ ಕೈಯಲ್ಲಿ ಧರಿಸಿದ್ದ ಬಿಲವಾರ, ಕೈಬಳೆಗಳನ್ನು ದಾನ ಮಾಡಿದ್ದರು. ನಮ್ಮ ಭಾಗದ ಜನರು ಅಂತಹ ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ(ಬೃಹತ್ ಮತ್ತು ಸಣ್ಣ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ನಾವು ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಸಂದರ್ಭ.......

**ಸಭಾಪತಿಯವರು**:- ಆಗ ನಾವುಗಳು ಆ ಪ್ರಸಂಗವನ್ನು ನೋಡುವುದಕ್ಕೆ ಹೋಗಿದ್ದೆವು.

**ಶ್ರೀ ಗೋವಿಂದ ಎಂ.ಕಾರಜೋಳ**:- ಸನ್ಮಾನ್ಯ ಸಭಾಪತಿಯವರೇ, ತಕ್ಕಡಿಗೆ ಹಾಕಿದಂತಹ ಬಂಗಾರ ಅವರಿಬ್ಬರ ತೂಕಕ್ಕೆ ಕಡಿಮೆ ಬಂತು. ತಕ್ಕಡಿ ಮೇಲಕ್ಕೆ ಏಳಲಿಲ್ಲ. ಆಗ ಈ ದೃಶ್ಯವನ್ನು ನೋಡಲು ಬಂದಿದ್ದ ಹೆಣ್ಣುಮಕ್ಕಳು ತಾವು ಧರಿಸಿದ್ದ ಒಡವೆಗಳನ್ನು ತೆಗೆದು ತಕ್ಕಡಿಗೆ ಹಾಕಿದರು. ಇವರು ದಾನ ಮಾಡುವುದಕ್ಕಾಗಿ ಬಂದಿರಲಿಲ್ಲ. ಈ ಕಾರ್ಯಕ್ರಮವನ್ನು ನೋಡುವುದಕ್ಕಾಗಿ ಬಂದಿದ್ದರು.

**ಶ್ರೀ ಬಿ.ಕೆ.ಹರಿಪ್ರಸಾದ್**:- ಸನ್ಮಾನ್ಯ ಸಭಾಪತಿಯವರೇ, ದಾನ ಮಾಡಿರುವ ಹೆಣ್ಣುಮಕ್ಕಳನ್ನು 'ದಾನ ಮಾಡಲು ಬರಲಿಲ್ಲ' ಎಂದು ಹೇಳುವುದು ಅವರಿಗೆ ಮಾಡಿದ ಅವಮಾನವಾಗಿದೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ನಾನು ಆ ಹೆಣ್ಣುಮಕ್ಕಳನ್ನು ಅವಮಾನಿಸುತ್ತಿಲ್ಲ. Hon'ble Member is under is under wrong impression. ಆ ಕಾರ್ಯಕ್ರಮವನ್ನು ನೋಡುವುದಕ್ಕೆ ಬಂದಂತಹ ನಮ್ಮ ತಾಯಂದಿರು ತಾವು ಧರಿಸಿದ್ದ ಒಡವೆಗಳನ್ನೂ ಸಹ ತೆಗೆದು ಹಾಕಿದ್ದರು. ಅವರ ಹೃದಯ ಶ್ರೀಮಂತಿಕೆಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅವರ ಬಗ್ಗೆ ನಾವು ಹೆಮ್ಮೆಪಡಬೇಕಾಗಿದೆ. ಅವತ್ತು ಬಂಗಾರ ಹಾಕಿದವರು ಇವತ್ತು ಯಾರೂ ಈ ಭೂಮಿಯ ಮೇಲೆ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಈಗಿನ ಪರಿಸ್ಥಿತಿ ಹೇಗಿದೆಯೆಂದರೆ, ಹಾದಿಬೀದಿಯಲ್ಲಿ ಹೋಗುತ್ತಿರುವ ನಮ್ಮ ಸಹೋದರಿಯರ ಕಿವಿ ಮತ್ತು ಕೊರಳಿನಲ್ಲಿ ಇರುವಂತಹ ಬಂಗಾರವನ್ನು ಕಸಿದುಕೊಳ್ಳುತ್ತಿದ್ದಾರೆ. ನಮ್ಮ ಜಿಲ್ಲೆಯ ಬಗ್ಗೆ ಬಹಳಷ್ಟು ಹೇಳುತ್ತಿದ್ದೇನೆಂದು ಯಾರು ಅನ್ಯಥಾ ಭಾವಿಸಬಾರದು. ಮಹಿಳೆಯವರಿಗೆ ಬಂಗಾರದ ಮೇಲೆ ಬಹಳಷ್ಟು ಪ್ರೀತಿ ಇರುತ್ತದೆ. ಹೀಗಿದ್ದರೂ ಸಹ ನಮ್ಮ ಜಿಲ್ಲೆಯ ಮಹಿಳೆಯವರು ಆ ಕಾರ್ಯಕ್ರಮವನ್ನು ನೋಡುವುದಕ್ಕೆ ಬಂದವರು ತಾವು ಧರಿಸಿದ್ದ ಬಂಗಾರವನ್ನು ತೂಕಕ್ಕೆ ಹಾಕಿದ್ದರು. ಅದೇ ರೀತಿಯಲ್ಲಿ ಸುಮಾರು 4 ಲಕ್ಷ ಎಕರೆ ಫಲವತ್ತಾದ ಭೂಮಿಯನ್ನು ಅತ್ಯಂತ ಸಂತೋಷದಿಂದ ಈ ರಾಷ್ಟ್ರದ ಪ್ರತಿಷ್ಠಿತ ನೀರಾವರಿ ಯೋಜನೆಗಾಗಿ ತ್ಯಾಗ ಮಾಡಿದ್ದೇವೆ. ಈ ತ್ಯಾಗದ ಬಗ್ಗೆ ಅವರಿಗೆ ಪರಿಕಲ್ಪನೆ ಇರಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮನೆ ಮತ್ತು ಜಮೀನು ಮುಳುಗಡೆ ಆಗಿರುವವರು ಅವರುದ್ದಕ್ಕೂ ಸಾಲ ಮಾಡಿಕೊಂಡಿರುತ್ತಾರೆ. ಸರ್ಕಾರ ಕೊಡುವಂತಹ ಪರಿಹಾರಧನ ಬ್ಯಾಂಕ್‌ಗೆ ಬಡ್ಡಿ ಕಟ್ಟುವುದಕ್ಕೂ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಗೆಜೆಟ್ ನೋಟಿಫಿಕೇಶನ್ ಮಾಡುವುದಕ್ಕೆ ಇವರಿಗೆ ಸಿಕ್ಕಿರುವಂತಹ ಸುವರ್ಣಾವಕಾಶ ಬೇರೆ ಯಾರಿಗೂ ಸಿಗುವುದಿಲ್ಲ. ಅವರದ್ದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ನಮ್ಮ ಭಾಗದ ಜನರು ಅತಿ ದೊಡ್ಡ ಪ್ರಮಾಣದಲ್ಲಿ ಕೊಡುಗೆಯನ್ನು ಕೊಟ್ಟು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. You bring the influence on the Hon'ble Prime Minister of India. ಉತ್ತರ ಕರ್ನಾಟಕ ಭಾಗದವರೇ ಮುಖ್ಯಮಂತ್ರಿಗಳಾಗಿದ್ದಾರೆ ಮತ್ತು ಜಲ ಸಂಪನ್ಮೂಲ ಸಚಿವರಾಗಿದ್ದಾರೆ. ಅವರುಗಳು ಮಾನ್ಯ ನರೇಂದ್ರ ಮೋದಿಯವರ ಮೇಲೆ ತಮ್ಮ ವರ್ಚಸ್ಸನ್ನು ಬಳಸಿಕೊಂಡು ಪರಿಹಾರವನ್ನು ಕೊಡಿಸುವಂತಹ ಕೆಲಸವನ್ನು ಮಾಡಬೇಕಾಗಿದೆ. ಅಲ್ಲಿನ ಜನರು 'ನನ್ನ ಆಸ್ತಿ ಮುಳುಗಡೆ ಆಯಿತು ನಾನು ಬೀದಿಗೆ ಬಂದೆ' ಎಂದು ನೊಂದುಕೊಳ್ಳದೇ ಇರುವ ರೀತಿಯಲ್ಲಿ ಪರಿಹಾರವನ್ನು ನೀಡಬೇಕಾಗಿದೆ. ಹಿಂದೆ ಎಷ್ಟು ಪ್ರಮಾಣದ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಒಪ್ಪಿಕೊಂಡಿತ್ತು, ಅಷ್ಟು ಮೊತ್ತವನ್ನೇ ಕೊಟ್ಟರೂ ನಮಗೆ ಸಾಕಾಗುತ್ತದೆ. ಈ ಯೋಜನೆ ಫಲಪ್ರದವಾಗಲಿ ಎನ್ನುವುದು ನಮ್ಮ ಆಶಯವಾಗಿದೆ. ಆಸ್ತಿ ಮತ್ತು ಭೂಮಿಯನ್ನು ಕಳೆದುಕೊಂಡಿರುವವರ ತ್ಯಾಗದ ಪರಿಕಲ್ಪನೆಯನ್ನು ಇಟ್ಟುಕೊಂಡು ಮೂರನೇ ಹಂತದ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿಕೊಳ್ಳುತ್ತಿದ್ದೇನೆ. ಕಾವೇರಿ ಮತ್ತು ಮಹದಾಯಿ ಯೋಜನೆಗಳಿಗೆ subject to the decision of the Court ಯಾವ ರೀತಿಯಲ್ಲಿ ಗೆಜೆಟ್ ನೋಟಿಫಿಕೇಶನ್ ಆಗಿದೆ ಅದೇ ರೀತಿಯಲ್ಲಿ it is two hundred percent quite possible. Basically, I am also an Advocate ಆಗಿರುವಂತಹ ಉದಾಹರಣೆಗಳು ಇವೆ. When cases were pending. ಕಾವೇರಿ ನದಿ ನೀರಿನ ಬಗ್ಗೆ ತೀರ್ಪಾಗಿದೆ. ನ್ಯಾಯಾಲಯದಿಂದ ಸ್ಟೇ ಇದ್ದರೆ you engage a top eminent jurist. You engage a good Advocate, spend money, and please see that stay is to be vacated. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ, ಕೇಂದ್ರ ಸರ್ಕಾರದ ಪರವಾಗಿರುವ ಅಟಾರ್ನಿ ಜನರಲ್ ಅವರು ಕೂಡ ಸಹಾಯ ಮಾಡಬಹುದಾಗಿದೆ. ಇಂತಹ ಅವಕಾಶ ನಮ್ಮ ಉತ್ತರ ಕರ್ನಾಟಕ ಭಾಗದವರಿಗೆ ಎಂದಿಗೂ ಸಿಗುವುದಿಲ್ಲ. ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದೆ. ರಾಜ್ಯಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೊಡುಗೆ ಕೊಟ್ಟಿರುವಂತಹ ಹಿಂದುಳಿದ ಪ್ರದೇಶವಾದ ಉತ್ತರ ಕರ್ನಾಟಕ ಭಾಗದ 7 ಜಿಲ್ಲೆಗಳಿಗೆ 15 ಲಕ್ಷ ಎಕರೆ ನೀರಾವರಿ ಆಗಿ, ಪ್ರತಿ ವರ್ಷ 3 ಲಕ್ಷ 56 ಸಾವಿರ ಕೋಟಿಯಷ್ಟು ಆದಾಯ ಬರುವಂತಹ ಈ ಬೃಹತ್ ನೀರಾವರಿ ಯೋಜನೆಯಿಂದ ಕರ್ನಾಟಕ ರಾಜ್ಯದ ವರಮಾನಷ್ಟೇ ಅಲ್ಲ ರಾಷ್ಟ್ರದ ವರಮಾನವೂ ಹೆಚ್ಚಾಗುತ್ತದೆ. ಈ ಯೋಜನೆಯನ್ನು ಆದಷ್ಟು ಬೇಗನೆ ಕೈಗೆತ್ತಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕಾಳೇಶ್ವರ ಏತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಒಂದು ಲಕ್ಷದ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಾಗಿದೆ. ಈ ಯೋಜನೆಗೆ ಅಡಿಗಲ್ಲು ಹಾಕುವಂತಹ ಸಂದರ್ಭದಲ್ಲಿ ಯೋಜನೆಗೆ ಚಾಲನೆ ಕೊಡುವಂತಹ ದಿನಾಂಕವನ್ನು ಸಹ ನಮೂದು ಮಾಡಿದ್ದರು. ಜೂನ್ 2016ನೇ ಇಸವಿಯಲ್ಲಿ ಈ ಯೋಜನೆಯನ್ನು ಪ್ರಾರಂಭಗೊಳಿಸಿ ಜೂನ್ 2019ನೇ ಇಸವಿಯಲ್ಲಿ ಅದಕ್ಕೆ ಚಾಲನೆಯನ್ನು ಕೊಟ್ಟಿದ್ದಾರೆ.

(ಮುಂದುವರಿದಿದೆ)

(698) 15.9.2021 1.00 ಪಿಕೆ: ಆರ್‌ಎನ್

**ಶ್ರೀ ಎಸ್.ಆರ್.ಪಾಟೀಲ್** (ಮುಂದುವರೆದಿದೆ)

ಮಹಾರಾಷ್ಟ್ರದ ಹಿಂದಿನ ಮುಖ್ಯಮಂತ್ರಿಗಳು ಮತ್ತು ಈಗಿನ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಇವರೆಲ್ಲರನ್ನೂ ಸೇರಿಸಿಕೊಂಡು ಜೂನ್ 2019ರಲ್ಲಿ, ಕೇವಲ ಮೂರು ವರ್ಷದ ಅವಧಿಯಲ್ಲಿ ರೂ. 1 ಲಕ್ಷ 20 ಸಾವಿರ ಕೋಟಿಯ ಪ್ರಾಜೆಕ್ಟನ್ನು ಮುಗಿಸಿದ್ದಾರೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮದು ಕೇವಲ ರೂ. 65 ಸಾವಿರ ಕೋಟಿಯ ಪ್ರಾಜೆಕ್ಟ್ ಆಗಿದೆ. ಅವರು 13 ಜಿಲ್ಲೆಗಳಿಗೆ ಸೌಲಭ್ಯ ಪಡೆದುಕೊಂಡಿದ್ದರೆ, ನಮ್ಮದು 7 ಜಿಲ್ಲೆಗಳಿಗೆ ಸಂಬಂಧಪಟ್ಟಂಥ ಪ್ರಾಜೆಕ್ಟ್ ಆಗಿದೆ. ಪ್ರಪಂಚದ ಅತಿ ದೊಡ್ಡ ಪ್ರಾಜೆಕ್ಟನ್ನು ಅವರು ಹೇಗೆ ಮುಗಿಸಿದ್ದಾರೋ ಅದನ್ನು ನೋಡಿಕೊಂಡಾದರೂ ನಾವು ಕೆಲಸ ಮಾಡಬೇಕಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

2021-22ನೇ ಸಾಲಿನ ಬಜೆಟ್ ಪುಸ್ತಕದ ಪುಟ ಸಂಖ್ಯೆ 29, ಪ್ಯಾರಾ 87ರಲ್ಲಿ *" ಉತ್ತರ ಕರ್ನಾಟಕದ ಆರು ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಗುರಿ ಹೊಂದಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ನ್ನು ಅಗತ್ಯವಿರುವ ಸಂಪನ್ಮೂಲಗಳನ್ನು ಒದಗಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು ನಮ್ಮ ಸರ್ಕಾರದ ಸಂಕಲ್ಪವಾಗಿರುತ್ತದೆ. ಈ ನಿಟ್ಟಿನಲ್ಲಿ ಕೃಷ್ಣಾ ನ್ಯಾಯಾಧಿಕರಣ-2ರ ಅಂತಿಮ ತೀರ್ಪಿನ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲು, ಹಾಗೂ ಈ ಯೋಜನೆಗೆ 'ರಾಷ್ಟ್ರೀಯ ಯೋಜನೆ' ಮಾನ್ಯತೆ ಪಡೆಯಲು ನಮ್ಮ ಸರ್ಕಾರ ಶ್ರಮಿಸುತ್ತಿದೆ. ಕೇಂದ್ರ ಸರ್ಕಾರದ ನೆರವಿನೊಂದಿಗೆ ಈ ಯೋಜನೆಯನ್ನು ಶೀಘ್ರಗತಿಯಲ್ಲಿ ಅನುಷ್ಠಾನಗೊಳಿಸಲು ಆದ್ಯತೆ ನೀಡಲಾಗುವುದು. ನೀರಾವರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ರೂ. 5600 ಕೋಟಿ ಅನುದಾನ ಒದಗಿಸಲಾಗುವುದು"* ಎಂದಿದೆ. ಆದರೆ 2020-21ರಲ್ಲಿ ಇದಕ್ಕೆಂದು ಒಂದು ರೂಪಾಯಿ ಕೂಡ ಕೊಡಲಿಲ್ಲ. ಮಾನ್ಯ ಸಭಾಪತಿಗಳೆ, ನೀವು ಹಿರಿಯರಾಗಿದ್ದೀರಿ; ಬಹಳ ಪ್ರಭಾವಿ ನಾಯಕರಾಗಿದ್ದೀರಿ. ಪೀಠದಿಂದ ಸರ್ಕಾರದ ಕಿವಿ ಹಿಂಡುವ ಕೆಲಸವನ್ನು ಮಾಡಿ. ನಿಮ್ಮ ಮಾತನ್ನು ಎಲ್ಲರೂ ಕೇಳುತ್ತಾರೆ.

ಬಜೆಟ್‌ನಲ್ಲಿ ಸರ್ಕಾರ, ಈ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ' ಎಂದು ಪರಿಗಣಿಸಲು ಶ್ರಮವಹಿಸುತ್ತದೆ ಎಂದು ಹೇಳಿದೆ. ನೀವು ರಾಷ್ಟ್ರೀಯ ಯೋಜನೆ ಎಂದಾದರೂ ಮಾಡಿ, ಅಂತಾರಾಷ್ಟ್ರೀಯ ಯೋಜನೆ ಎಂದಾದರೂ ಮಾಡಿ, ನೀವು ಎಲ್ಲಾದರೂ ಹೋಗಿ ಫಂಡ್ ತೆಗೆದುಕೊಂಡು ಬನ್ನಿ; ಕೇಂದ್ರ ಸರ್ಕಾರದಿಂದ ತನ್ನಿ ಅಥವಾ ಐಎಂಎಫ್ ನಿಂದ ತನ್ನಿ Beg, borrow, or steal, you should complete this project. ಮಾನ್ಯ ಕಾರಜೋಳರವರು ಸದನಕ್ಕೆ ಬರುವುದಕ್ಕೆ ಮುಂಚೆ ಕೆಲವು ಮಾತುಗಳನ್ನು ಹೇಳಿದ್ದೆ. 176 ಹಳ್ಳಿಗಳನ್ನು ಸ್ವಾಧೀನಪಡಿಸಿಕೊಂಡು ಕೃಷ್ಣಾ ಮೇಲ್ದಂಡೆ ಯೋಜನೆಯ 1 ಮತ್ತು 2ನೇ ಹಂತದ ಯೋಜನೆಯನ್ನು ಮುಗಿಸಲಾಗಿದೆ. ಪುನರ್ವಸತಿ ಕೇಂದ್ರಗಳನ್ನು ರಚನೆ ಮಾಡಿದ್ದಾರೆ. 3ನೇ ಹಂತದ ಕಾಮಗಾರಿಗೆ ಕೇವಲ 20 ಗ್ರಾಮಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. 2 ಲಕ್ಷ 73 ಸಾವಿರ ಎಕರೆ ಫಲವತ್ತಾದ ಪ್ರದೇಶವನ್ನು 1ನೇ ಮತ್ತು 2ನೇ ಹಂತದ ಕಾಮಗಾರಿಗಳಿಗೋಸ್ಕರ ಸ್ವಾಧೀನ ಪಡಿಸಿಕೊಳ್ಳಾಗಿತ್ತು. ಆದರೆ ಈಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇವಲ 1 ಲಕ್ಷ 30 ಸಾವಿರ ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ. ಮತ್ತೆ ಆಗ 78000 ರಿಂದ 80000 structures ವರೆಗೆ compensation ಕೊಟ್ಟಿದ್ದರು. ಈಗ ಕೇವಲ 10000 ಮಾತ್ರ ಆಗಿದೆ. ಡ್ಯಾಮ್ ಗೇಟ್‌ನ ಎತ್ತರ ಹೆಚ್ಚಿಸುವುದಕ್ಕೆ ಒಂದು ರೂಪಾಯಿಗಳ ಖರ್ಚು ಬರುವುದಿಲ್ಲ. ಆದರೆ ತಗಡು ಬಡಿಯುವುದಕ್ಕೆ ಅಥವಾ ಸಾಲ್ಡ್ರಿಂಗ್ ಮಾಡುವುದಕ್ಕೆ ರೂ. 4-5 ಕೋಟಿ ಖರ್ಚು ಆಗಬಹುದು. ಮಾನ್ಯ ಸಭಾಪತಿಗಳೆ, ಇವತ್ತು ನಾನು ಖಡಾಖಂಡಿತವಾಗಿ ಮತ್ತು ಅತ್ಯಂತ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ಸರ್ಕಾರ ಯಾವುದೇ ಇರಲಿ, ಅವರು ಶೇಕಡ 75 ರಷ್ಟು ಕಾಮಗಾರಿಯನ್ನು ಮುಗಿಸಿದ್ದಾರೆ. ಈಗ ಕೇವಲ ಶೇಕಡ 25ರಷ್ಟು ಕೆಲಸ ಮಾತ್ರ ಬಾಕಿ ಉಳಿದಿದೆ. ಶೇಕಡ 75 ರಷ್ಟು ಕಾಮಗಾರಿ ಮಾಡಲು it has been borne by the State Exchequer. ಆಗ ಯಾರೂ ಕೂಡ ಕೇಂದ್ರ ಸರ್ಕಾರದಿಂದ ಹಣ ತರುತ್ತೇವೆ ಎಂದು ಹೇಳಲಿಲ್ಲ, ರಾಷ್ಟ್ರೀಯ ಯೋಜನೆಯಾಗಿ ಮಾಡುತ್ತೇವೆ ಎಂದು ಯಾರೂ ಸಹ ಹೇಳಲಿಲ್ಲ. ಹಂತ-1 ಮತ್ತು ಹಂತ-2ರ ಶೇಕಡ 75 ರಿಂದ 80 ರಷ್ಟು ಕಾಮಗಾರಿಗಳಿಗೆ ಏನು ಹಣವನ್ನು ಖರ್ಚು ಮಾಡಿದ್ದೇವೆಯೋ ಆ ಹಣ ರಾಜ್ಯ ಸರ್ಕಾರದ ಬೊಕ್ಕಸದಿಂದ ಮಾಡಿರುವಂಥದ್ದಾಗಿದೆ. 3ನೇ ಹಂತ ಏನಿದೆ hardly 20 to 25%, very small portion ಆಗಿದೆ. Apart from political affiliation ಹೇಳಬೇಕಾದರೆ, ತಾವೇನು ರಾಷ್ಟ್ರೀಯ ಯೋಜನೆಯನ್ನಾಗಿಸುತ್ತೇವೆ ಎಂದು ಹೇಳಿದ್ದೀರೋ ಆ ಕುರಿತು ಕೇಂದ್ರಕ್ಕೆ ಬರೆದಿರುವ ಪತ್ರ ಎಲ್ಲಿದೆ? ಅದಕ್ಕೆ ಉತ್ತರ ಬರಲಿಲ್ಲ. ಅವರು ಇದನ್ನು ರಾಷ್ಟ್ರೀಯ ಯೋಜನೆ ಎಂದು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದಕ್ಕೋಸ್ಕರ I use the words; 'beg, borrow, or steal, you get money either from the Centre, World Bank or from any… You steal ಎಂದು ಹೇಳಿದ್ದೇನೆ. ಹೇಗಾದರೂ ಮಾಡಿ ಈ ಯೋಜನೆಯನ್ನು ಮುಗಿಸಬೇಕು ಎಂದು ಹೇಳಿದೆ. ನಮಗೆ ಅಷ್ಟು ಹೊಟ್ಟೆ ಉರಿಯುತ್ತದೆ; ಅಷ್ಟು ನೋವಾಗಿದೆ. ಶೇಕಡ 80 ರಷ್ಟು ಯೋಜನೆಯನ್ನು ಮುಗಿಸಲಿಕ್ಕೆ ಒಂದು ದಿವಸವೂ ಕೇಂದ್ರದ ಹೆಸರು ಹೇಳಲಿಲ್ಲ; 'ರಾಷ್ಟ್ರೀಯ ಯೋಜನೆ' ಆಗಬೇಕು ಎಂದೂ ಕೂಡ ಹೇಳಿದ್ದಿಲ್ಲ. ಇವತ್ತು ಶೇಕಡ 20 ಕಾಮಗಾರಿಗಳಾದರೆ, 15 ಲಕ್ಷ ಎಕರೆಗೆ ನೀರಾವರಿಯಾಗುತ್ತದೆ, ಉತ್ತರ ಕರ್ನಾಟಕದ ಭಾಗ್ಯದ ಬಾಗಿಲು ತೆರೆಯುತ್ತದೆ. 7 ಜಿಲ್ಲೆಗಳು ಫಲಪ್ರದಗೊಳ್ಳುತ್ತವೆ. ಇದರಿಂದ, ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಸಹಾಯವಾಗುತ್ತದೆ. ನೀವು ಇದನ್ನು ರಾಷ್ಟ್ರೀಯ ಯೋಜನೆ ಎಂದಾದರೂ ಹೇಳಿ ಅಥವಾ ಬೇರೆ ಏನನ್ನಾದರೂ ಹೇಳಿ I don't mind. I am only interested in the completion of this project. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತ ಯಾವುದೇ ಪರಿಸ್ಥಿತಿಯಲ್ಲಿ ಮುಗಿಯಬೇಕು. ಪಕ್ಕದ ರಾಜ್ಯದವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3 ವರ್ಷದ ಅವಧಿಯಲ್ಲಿ ರೂ. 1 ಲಕ್ಷ 20 ಸಾವಿರ ಕೋಟಿ ಖರ್ಚು ಮಾಡಿ ಕಾಲೇಶ್ವರ ಪ್ರಾಜೆಕ್ಟ್ ಮಾಡಿದ್ದಾರೆ. ಆದರೆ ನೀವು ಕೇವಲ ಇದರ ಅರ್ಧದಷ್ಟು ಹಣ ಖರ್ಚು ಮಾಡಬೇಕಿದೆ ಮತ್ತು ನಿಮಗಿನ್ನೂ ಒಂದೂವರೆ ವರ್ಷ ಕಾಲಾವಕಾಶ ಇದೆ. You will be in the history. ಇತಿಹಾಸದಲ್ಲಿ ನೀವು ಅಜರಾಮರರಾಗಿರುತ್ತೀರಿ; ನಮ್ಮ ಭಾಗದ ಜನ ನಿಮ್ಮನ್ನು ಪೂಜೆ ಮಾಡುತ್ತಾರೆ.

ಮಾನ್ಯ ಸಭಾಪತಿಗಳೆ, ನಾನು ಮೊನ್ನೆ 20 ವರ್ಷಗಳ ಬಜೆಟ್ ಕಾಪಿಗಳನ್ನು ತರಿಸಿಕೊಂಡೆ. ನಮ್ಮ ಕರ್ನಾಟಕ ರಾಜ್ಯದ 20 ವರ್ಷದ ಹಿಂದಿನ ಬಜೆಟ್ ಕಾಪಿಯಲ್ಲಿ ಮೊತ್ತ ಹತ್ತು ಸಾವಿರ ಕೋಟಿ ಇದೆ. ಈಗ ನಮ್ಮ ಬಜೆಟ್ ಮೊತ್ತ ಎರಡೂವರೆ ಲಕ್ಷ ಕೋಟಿ ಇದೆ. ಹತ್ತು ಸಾವಿರ ಕೋಟಿ ಇದ್ದಾಗ ಯುಕೆಪಿ ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಹತ್ತನೇ ಒಂದು ಭಾಗವಾಯಿತು. ಈಗ, ಹತ್ತನೇ ಒಂದು ಭಾಗ ಎಂದರೆ ಇಪ್ಪತ್ತೈದು ಸಾವಿರ ಕೋಟಿ ಆಗುತ್ತದೆ. ಈ ಮೊತ್ತವನ್ನು ಸ್ವಲ್ಪ ಜಾಸ್ತಿ ಮಾಡಿದರೂ ಒಂದೂವರೆ ವರ್ಷದ ಅವಧಿಯ ಒಳಗೆ ಈ ಪ್ರಾಜೆಕ್ಟನ್ನು ಮುಗಿಸಬಹುದು. ನೀವು ಮನಸ್ಸು ಮಾಡಿದರೆ, ಈಗ land acquisition complete ಮಾಡಬಹುದು, structures, compensation, payment ಮಾಡಬಹುದು main distributaries, canals, feed channels ಎಲ್ಲವನ್ನೂ ಪೂರ್ಣಗೊಳಿಸಬಹುದು. ನಿನ್ನೆ ಹೊಸದಾಗಿ ಹುಟ್ಟಿದಂತಹ ತೆಲ್ಲಂಗಾಣ ರಾಜ್ಯ, ಆರ್ಥಿಕ ವಾಗಿ ದುಸ್ಥಿತಿಯಲ್ಲಿದ್ದರೂ 3 ವರ್ಷಗಳಲ್ಲಿ ಕಾಲೇಶ್ವರ ಪ್ರಾಜೆಕ್ಟನ್ನು ಮುಗಿಸಿತು. ಆದ್ದರಿಂದ ನಾನು ಕೈಜೋಡಿಸಿ ಕೇಳಿಕೊಳ್ಳುವುದೇನೆಂದರೆ, ಯಾವುದೇ ಪರಿಸ್ಥಿತಿಯಲ್ಲಿ hook or cook 3ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಬೇಕು ಮತ್ತು ಅದಕ್ಕೆಂದು right from today you start land acquisition proceedings. ನಾವು ಒಂದು ವಿಚಾರ ಮಾಡಿದ್ದೇವೆ. ಈ ಪ್ರಾಜೆಕ್ಟ್‌ಗೋಸ್ಕರ, ಪಾದಯಾತ್ರೆ ಪ್ರಾರಂಭ ಮಾಡುತ್ತೇವೆ. ನಿಗದಿತ ಅವಧಿಯಲ್ಲಿ ಕಾಮಗಾರಿಗಳು ಪ್ರಾರಂಭವಾಗದೇ ಇದ್ದರೆ ಉಪವಾಸ ಸತ್ಯಾಗ್ರಹ ಮಾಡುತ್ತೇವೆ. ಮುಂದೆ, ಆಮರಣಾಂತ ಉಪವಾಸ ಮಾಡುವುದಕ್ಕೆ ಹಿಂದೇಟು ಹಾಕುವುದಿಲ್ಲ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ; ಅದನ್ನು ಹೇಳಲು ಮನಸ್ಸಾಗುವುದಿಲ್ಲ, ಆದರೂ ಹೇಳಬೇಕಾಗಿದೆ. ನಮ್ಮ ಹಿರಿಯರು ಏನು ಅಖಂಡ ಕರ್ನಾಟಕದ ಕನಸು ಕಟ್ಟಿದ್ದರೋ ಆ ಕನಸನ್ನು ನನಸು ಮಾಡುವತ್ತ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಅದು ಆಗದೇ ಇದ್ದರೆ, ನಂತರ ಆಗುವ ಕೆಟ್ಟದನ್ನು ಊಹಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ ಎಂದು ಹೇಳುತ್ತಾ, ಮತ್ತೊಮ್ಮೆ ತಮ್ಮ ಮುಖಾಂತರ ಸರ್ಕಾರಕ್ಕೆ ಅತ್ಯಂತ ವಿನಯಪೂರ್ವಕವಾಗಿ, ಕೃಷ್ಣಾ ಮೇಲ್ದಂಡೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯ 3ನೇ ಹಂತಕ್ಕೆ, right from today, right from this movement it should start. You start land acquisition and construction of main canals distributaries.

(ಮುಂದು . . .)

(699) 15-9-2021 1.10 DS-VK

**ಶ್ರೀ ಎಸ್.ಆರ್.ಪಾಟೀಲ್(ಮುಂದು):-**

ಏನಿದೆ ಎಲ್ಲಾ ಮಾಡಿ. You start and don't delay it. Every minute and every second are precious for the North Karnataka people. That too for our seven Districts. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಅಂತಹ ನೋವು, ಸಂಕಟದಲ್ಲಿದ್ದೇವೆ. ನಾವು ಇದನ್ನು ಯಾರಿಗೆ ಹೇಳಬೇಕು? ಕಳೆದ ಅಧಿವೇಶನದಲ್ಲಿ ಇದು ಚರ್ಚೆಯಾಗಲಿಲ್ಲ. ಕಳೆದ ಬಜೆಟ್‌ನಲ್ಲಿ ಇದು ಬರಲಿಲ್ಲ. ಈ ಸಲ ೫,೬೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈಗಾಗಲೇ ನಾನು ಹೇಳಿರುವುದನ್ನೇ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಗೋವಿಂದ ಕಾರಜೋಳರವರು ಜಲಸಂಪನ್ಮೂಲ ಸಚಿವರು, ಹಿರಿಯರು, ಅನುಭವಿಗಳು, ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಂಥವರು, ಮುಖ್ಯಮಂತ್ರಿ ಹುದ್ದೆ ಸಮೀಪಕ್ಕೆ ಹೋಗಿ ಬಂದಂಥವರು. ಶ್ರೀಮಾನ್ ಬಸವರಾಜ ಬೊಮ್ಮಾಯಿಯವರು, ನಾನು ಒಂದೇ ದಿವಸ ಮೇಲ್ಮನೆ ಪ್ರವೇಶ ಮಾಡಿದ್ದೇವೆ. ಅವರು ಎಂ.ಎಲ್.ಸಿ. ಆಗಿ ಮುಂದೆ ಎಂ.ಎಲ್.ಎ. ಆದರು. ಅವರು ಇವತ್ತು ಮುಖ್ಯಮಂತ್ರಿಯಾಗಿದ್ದಾರೆ. I am very happy; he is my good friend. ಮಾನ್ಯ ಸಚಿವರು ಮನಸ್ಸು ಮಾಡಲಿ.

**ಸಭಾಪತಿಯವರು:-** ನೀವು ಬೇಗ ಮುಖ್ಯಮಂತ್ರಿ ಆಗಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಆ ಹುದ್ದೆ ಬೇಡ. To be frank, I was not interested in continuation. Upper Krishna Project ಉಳಿದಿದೆಯಲ್ಲಾ, ನಾವು ನೋವಿನಿಂದ ಹೊರಗೆ ಇದ್ದರೆ ಇದನ್ನು ಯಾರು ಕೇಳುತ್ತಾರೆ? ನಾನು ಸದನಕ್ಕೆ ಬಂದರೆ ಧ್ವನಿ ಎತ್ತಬಹುದು. ನಾನು ಶಾಸಕನಾಗಿ, ವಿರೋಧ ಪಕ್ಷದ ನಾಯಕನಾಗಿ, ಇಡೀ ನಾಡಿನ ಜನರ ಬಗ್ಗೆ ಕೇಳುತ್ತಿದ್ದೇನೆ. ರಾಜಕೀಯ ಸ್ಥಾನಮಾನಗಳನ್ನು ನಾವು ಏಕೆ ಕೇಳುತ್ತೇವೆಂದರೆ, ಹೆಚ್ಚು ಪರಿಣಾಮಕಾರಿಯಾಗಿ, ಜನರ ಸಮೀಪಕ್ಕೆ ಹೋಗಿ ಜನಪರ ಕೆಲಸ ಮಾಡುವುದಕ್ಕೆ ಈ ಸ್ಥಾನಮಾನಗಳನ್ನು ಕೇಳುತ್ತೇವೆ. Not for my personal use. ನನಗೇನು ಬೇಕಾಗಿಲ್ಲ. I am least interested. ನಿನ್ನೆ ಮಾನ್ಯ ನಿರಾಣಿಯವರು ನನಗೆ ಹೇಳಿದರು, ಆಗ ನೀವು ಪೀಠದಲ್ಲಿ ಇದ್ದೀರೋ ಏನೋ ಗೊತ್ತಿಲ್ಲ. ಪಾಟೀಲರೇ, ನೀವು ನಿಮ್ಮ ಸಂಸ್ಥೆಯ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನಹರಿಸುತ್ತಿಲ್ಲವೆಂದು ಹೇಳಿದರು. ನಾನು ವಿರೋಧ ಪಕ್ಷದ ನಾಯಕನಾಗಿದ್ದೇನೆ ಎಂದ ಮೇಲೆ ಈ ಕುರ್ಚಿಗೆ ಅನ್ಯಾಯ ಮಾಡುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ನಾನು ರಾಜೀನಾಮೆ ಕೊಟ್ಟು ನನ್ನ ಸಂಸ್ಥೆಯ ಮೇಲೆ ಗಮನ ಕೊಡಬೇಕಾಗುತ್ತದೆ. ನಾನು ಬಹಳಷ್ಟು ಸಂಸ್ಥೆಗಳನ್ನು ಕಟ್ಟಿದ್ದೇನೆ. ಆ ಸಂಸ್ಥೆಗಳನ್ನು ನೋಡುವಂತಹ ಅವಶ್ಯಕತೆ ಇದೆ. ರಾಜಕೀಯದಲ್ಲಿ ಮುಂದುವರೆಯಬೇಕೆನ್ನುವ ಉದ್ದೇಶ ಇರಲಿಲ್ಲ. ಕಳೆದ ಚುನಾವಣೆಯಲ್ಲಿ ನಾನು ಹೇಳಿದ್ದೆ. ಆದರೆ, ಇವತ್ತು ಉತ್ತರ ಕರ್ನಾಟಕದಲ್ಲಿ ನೆನಗುದಿಗೆ ಬಿದ್ದಂತಹ ಈ ಯೋಜನೆಗಳೇನಿವೆ ಅವುಗಳನ್ನು ಪೂರ್ತಿ ಮಾಡಬೇಕಾಗಿದೆ. ಇದೊಂದೆ ಅಲ್ಲ, ಇವತ್ತು ಮಹಾದಾಹಿ, ಎತ್ತಿನಹೊಳೆ, ಮೇಕೆದಾಟು ಯೋಜನೆ ಇರಬಹುದು, your Government should give priority to all these four Irrigation Projects. ಕೃಷ್ಣಾ ಮೇಲ್ದಂಡೆ ಯೋಜನೆ-೩ನೇ ಹಂತ, ಮಹಾದಾಯಿ, ಎತ್ತಿನಹೊಳೆ, ಮೇಕೆದಾಟು, ಈ ನಾಲ್ಕು ಯೋಜನೆಗಳಿಗೆ ಒತ್ತು ಕೊಟ್ಟು ಒಂದೂವರೆ ವರ್ಷ ಅವಧಿಯಲ್ಲಿ ಇತಿಹಾಸ, ಚರಿತ್ರೆಯನ್ನು ನಿರ್ಮಾಣ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಒಂದು ವೇಳೆ ಸರ್ಕಾರ ನಮ್ಮ ಮನವಿಗೆ ಒಪ್ಪದಿದ್ದರೆ ಮುಂದಿನ ದಿನಮಾನಗಳು ಒಳ್ಳೆಯದು ಇರುವುದಿಲ್ಲ ಎನ್ನುವ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದ ಜೀವನಾಡಿ ಮುಂಬೈ ಮತ್ತು ಕಲ್ಯಾಣ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆ ನೀರುಣಿಸುವಂತಹ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಇವತ್ತು ಚರ್ಚೆಗೆ ತೆಗೆದುಕೊಂಡಿದ್ದಾರೆ. ಇದೊಂದು ಪ್ರಮುಖವಾದಂತಹ ವಿಷಯ. ಇದರ ಬಗ್ಗೆ ನನಗೆ ಗೊತ್ತಿರುವಂತಹ ೫-೬ ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ೧೯೬೩ ರಲ್ಲಿ ಪ್ರಾರಂಭವಾಗಿದೆ. ಕಳೆದ ಆರು ದಶಕಗಳಿಂದ ಈ ಯೋಜನೆ ಕುಂಠಿತಗೊಳ್ಳುತ್ತಿದೆ. ನಮಗೆಲ್ಲರಿಗೂ ಅರಿವು ಇರುವಂತೆ ಕೃಷ್ಣಾ ಮೇಲ್ದಂಡೆ ನ್ಯಾಯಾಧೀಕರಣ ಜಲ ವಿವಾದದ ತೀರ್ಪನ್ನು ಕೊಡುವುದಕ್ಕೆ ಬಚಾವತ್ ಆಯೋಗ KWDT-1 (Krishna Water Disputes Tribunal) ಅನ್ನು ಕೊಟ್ಟಿತು ಅದರ ತೀರ್ಪಿನ ಪ್ರಕಾರ ನಮಗೆ ೭೩೪ ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಮಹಾರಾಷ್ಟ್ರಕ್ಕೆ ೫೬೫ ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಅವಿಭಾಜಿತ ಆಂಧ್ರಪ್ರದೇಶಕ್ಕೆ ೮೦೧ ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಒಟ್ಟು ೨೧೩೦ ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ. ಇದನ್ನು ಸ್ಕೀಮ್-ಎ ನಲ್ಲಿ ಕೊಟ್ಟಿರುವಂಥದ್ದು ಎಂದು ನಾವು ಪರಿಗಣನೆ ಮಾಡುತ್ತಿದ್ದೇವೆ. ತದನಂತರ ಇದನ್ನು ಸೆಕ್ಷನ್ ೫(೨) ರಲ್ಲಿ Inter State Water Disputes Act

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ಕೊಡುತ್ತಾರೆ. ಸ್ವಸ್ವೀಕರಣ ಮತ್ತು ರಾಜ್ಯಗಳು ಕೊಡತಕ್ಕಂಥ ತಕರಾರು ಅರ್ಜಿಗಳನ್ನು ವಿಶ್ಲೇಷಣೆ ಮಾಡಿ ಸೆಕ್ಷನ್ ೫(೩)ರ ಅಡಿಯಲ್ಲಿ ಅಂತಿಮ ಆದೇಶವನ್ನು ಕೊಡುತ್ತಾರೆ. ನಂತರ ಭಾರತ ಸರ್ಕಾರ ಅಂತಿಮ ಅಧಿಸೂಚನೆಯನ್ನು ಮಾಡಬೇಕಾಗುತ್ತದೆ. ಇದರ ನಂತರ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯ ಎರಡನೇ ತೀರ್ಪು ಬರುತ್ತದೆ. ಆ ಪ್ರಕಾರವಾಗಿ ೬೫ ಪರ್ಸೆಂಟ್ ಅವಲಂಬನೆ ಇಳುವರಿ ಆಧಾರಿತವಾಗಿ ಒಟ್ಟು ೨೫೭೮ ಟಿಎಂಸಿ ನೀರು ಲಭ್ಯ ಎಂದು ನಿರ್ಧಾರ ಮಾಡಲಾಗುತ್ತದೆ. ಆ ಪ್ರಕಾರವಾಗಿ ಮಹಾರಾಷ್ಟ್ರಕ್ಕೆ ೬೬೬ ಟಿಎಂಸಿ, ಕರ್ನಾಟಕಕ್ಕೆ ೯೦೭ ಟಿಎಂಸಿ, ಅವಿಭಾಜಿತ ಆಂಧ್ರಪ್ರದೇಶಕ್ಕೆ ೧೦೦೫ ಟಿಎಂಸಿ, ಒಟ್ಟಾರೆ ೨೫೭೮ ಟಿಎಂಸಿ ನೀರು ಹಂಚಿಕೆಯಾಗುತ್ತದೆ. ಸ್ಕೀಮ್-ಎ ಅಡಿಯಲ್ಲಿ ಅಂದರೆ, ಸ್ಟೇಜ್-೧, ಸ್ಟೇಜ್-೨ ರಲ್ಲಿ ಯಾವ ರೀತಿಯಲ್ಲಿ ಏನೇನು ಕಾರ್ಯಕ್ರಮಗಳನ್ನು ಅಂದಿನ ರಾಜ್ಯ ಸರ್ಕಾರಗಳು ರೂಪಿಸಿದರು ಮತ್ತು ಯಾವ ರೀತಿ ಅನುಷ್ಠಾನಗೊಳಿಸಿದರು ಎನ್ನುವುದನ್ನು ಸದನದ ಮುಂದೆ ಇಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಸಂಪನ್ಮೂಲ ಕೊರತೆಯಿಂದ Upper Krishna Project ನ ಅನೇಕ ಯೋಜನೆಗಳು ನೆನಗುದಿಗೆ ಬಿದ್ದಿದ್ದವು. ೧೯೮೩ ರಲ್ಲಿ ಅಂದಿನ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದಕ್ಕೆ ಒಂದು ಉತ್ತಮವಾದ ಚಾಲನೆಯನ್ನು ನೀಡಿತು. ಅಂದಿನ ನೀರಾವರಿ ಸಚಿವರಾಗಿದ್ದಂತಹ ನಮ್ಮ ವರಿಷ್ಠರು, ಭಾರತದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದಂತಹ ಮಾನ್ಯ ಹೆಚ್.ಡಿ.ದೇವೇಗೌಡರು, ರಾಷ್ಟ್ರದಲ್ಲಿ ಒಬ್ಬ ಅತ್ಯುನ್ನತವಾದ ನೀರಾವರಿ ತಜ್ಞರು ಎಂದು ಖ್ಯಾತರಾಗಿರುವಂತಹ ಶ್ರೀ ಬಾಳೆಕುಂದ್ರಿಯವರ ಸಲಹೆ ಮೇರೆಗೆ ೫೧೭.೬೭ ಎತ್ತರದ ಅಣೆಕಟ್ಟು ಇತ್ತು ಅದನ್ನು ೫೨೪ ಅಡಿಗಳಿಗೆ ಏರಿಸುವಂತಹ ಅಂದರೆ, head works ಮಾತ್ರ ಪೂರ್ಣಗೊಳಿಸುವುದು. ಏಕೆಂದರೆ, ಸ್ಕೀಮ್-ಎ ಅಡಿಯಲ್ಲಿ ೫೧೭ ಅಡಿಯವರೆಗೆ ಮಾತ್ರ ನಾವು ಅಣೆಕಟ್ಟನ್ನು ಏರಿಸಬೇಕಾಗಿತ್ತು. ಅಂದಿನ ದಿನಕ್ಕೆ ಸುಮಾರು ೧೦೭೦ ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡುತ್ತಾರೆ. ಒಟ್ಟಾರೆ ಸ್ಕೀಮ್-ಎ ಅಡಿಯಲ್ಲಿ ೧೭೩ ಟಿಎಂಸಿ, ಸ್ಕೀಮ್-ಬಿ ಅಡಿಯಲ್ಲಿ ೧೩೦ ಟಿಎಂಸಿ, ಅಂದರೆ, ೨೫೭೮ ಟಿಎಂಸಿ ಯಲ್ಲಿ ೩೦೩ ಟಿಎಂಸಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೋದರೆ ಉಳಿದಂತಹ ನೀರು ಹಂಚಿಕೆ ಮಲಪ್ರಭಾ, ಘಟಪ್ರಭಾ, ತುಂಗಾಭದ್ರಾ ಇರಬಹುದು, ಆ ಜಲಾನಯನ ಪ್ರದೇಶಗಳಿಗೆ ಹಂಚಿಕೆಯಾಗಿದೆ. ತದನಂತರ ಮಾನ್ಯ ಹೆಚ್.ಡಿ.ದೇವೇಗೌಡರು ೧೯೯೫ನೇ ಇಸವಿಯಲ್ಲಿ ಮುಖ್ಯಮಂತ್ರಿಗಳಾಗಿದ್ದಂತಹ ಸಮಯದಲ್ಲಿ ಒಂದು ಉತ್ತಮವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ನಾರಾಯಣಪುರದಲ್ಲಿರುವಂತಹ ಬಸವ ಸಾಗರ ಎಂದು ನಾವೇನು ಕರೆಯಲ್ಪಡುತ್ತಿದ್ದೇವೆ ಅದರ right bank canal ನಿರ್ಮಾಣಕ್ಕೆ ಅಗತ್ಯ ಇರುವಂತಹ ಎಲ್ಲಾ ಸವಲತ್ತುಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟು ಬಲದಂಡೆ ನಾಲೆಯನ್ನು ಮಾಡುವುದಕೋಸ್ಕರವಾಗಿ ಅಂದರೆ, ರಾಯಚೂರು ಜಿಲ್ಲೆಯ ದೇವದುರ್ಗದಂತಹ ಬರಪೀಡಿತ ಪ್ರದೇಶಗಳಿಗೆ ನೀರುಣಿಸುವ ಸಲುವಾಗಿ ಬಲದಂಡೆ ನಾಲೆಯನ್ನು ನಿರ್ಮಾಣ ಮಾಡುತ್ತಾರೆ. ಈ ನೀರಾವರಿ ಯೋಜನೆ ಒಂದು ರಾಷ್ಟ್ರೀಯ ಯೋಜನೆಯಾಗುವುದಕ್ಕೆ ಎಲ್ಲಾ ಅರ್ಹತೆಗಳನ್ನು ಹೊಂದಿರುವಂತಹ ಯೋಜನೆ. ಏಕೆಂದರೆ, ಇದು ಕೇವಲ ನೀರಾವರಿ ಯೋಜನೆ ಅಲ್ಲ. ಇದು multipurpose ಯೋಜನೆಯಾಗಿದೆ.

(ಮುಂದು)

700/15-09-2021/1-20/bkp-vk

**ಶ್ರೀಕೆ.ಎ.ತಿಪ್ಪೇಸ್ವಾಮಿ** (ಮುಂದು):

ಇಲ್ಲಿ ಒಂದು ಪವರ್ ಪ್ರಾಜೆಕ್ಟ್, power generation ಮಾಡತಕ್ಕಂತಹ ಒಂದು ಯೂನಿಟ್ ಕೂಡ ಕರ್ನಾಟಕ ಪವರ್ ಕಾರ್ಪೋರೇಷನ್‌ಗೆ ಸಂಬಂಧಪಟ್ಟಂತಹ ಯೋಜನೆಯಾಗಿದೆ. ಆದರೆ, ಈ ಸೆಕ್ಷನ್ (5) 2 ಅಡಿಯಲ್ಲಿ ಬಂದಿರತಕ್ಕಂತಹ Krishna Water Dispute Tribunal award ಕೂಡ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಎಲ್ಲಾ ರಾಜ್ಯಗಳ ಅಂದರೆ, ಮಹರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ಏನು ತಕರಾರುಗಳಿವೆ, ಮತ್ತೆ, ಏನು ಅರ್ಜಿಗಳಿವೆ, ಅವುಗಳನ್ನು ಸಹ ತೀರ್ಮಾನ ಮಾಡಿ ಈಗಾಗಲೇ ನ್ಯಾಯಾಧೀಕರಣ ಈ ಸೆಕ್ಷನ್ (5) 2 ಅಡಿಯಲ್ಲಿ ಒಂದು ತೀರ್ಪನ್ನು ಕೊಟ್ಟಿದೆ. ಆದರೆ, ತದನಂತರವಾಗಿ ಅಂದಿನ ಅವಿಭಜಿತ ಆಂಧ್ರ ಪ್ರದೇಶ ಇತ್ತು, ಅದು ವಿಭಜನೆಯಾಗಿ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಾಗಿದೆ. ಈಗ ತೆಲಂಗಾಣ ರಾಜ್ಯವು ಈ ಸಂಬಂಧ ಮತ್ತೊಮ್ಮೆ ಭಾರತ ಸರ್ಕಾರಕ್ಕೆ ಮತ್ತು ಸುಪ್ರೀಂ ಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸಿ, ಈ ವ್ಯಾಜ್ಯವನ್ನು ಅಂದರೆ, ಹಂಚಿಕೆಯಾಗಿರುವಂತಹ ನೀರನ್ನು ಅಂದರೆ Krishna Water Dispute Tribunal award-1, Krishna Water Dispute Tribunal award-2 ಇವುಗಳನ್ನು ಪೂರ್ಣವಾಗಿ ವಿಮರ್ಶೆ ಮಾಡಬೇಕು ಮತ್ತು ಅದಕ್ಕೋಸ್ಕರ ಮತ್ತೊಂದು ನ್ಯಾಯಾಧೀಕರಣ ಮಾಡಬೇಕೆಂದು ಹೇಳಿ ಮತ್ತೊಂದು ಅರ್ಜಿಯನ್ನು ಹಾಕುತ್ತಾರೆ. ಆದರೆ, ಏನು Andhra Pradesh Reorganisation Act ಆಗುತ್ತಿದೆ. ಅದರ ಸೆಕ್ಷನ್ 18ರಡಿಯಲ್ಲಿ ಈಗಾಗಲೇ ಒಂದು provision ಮಾಡಿದ್ದಾರೆ. ಯಾವುದೇ ನದಿ ನೀರಾವರಿಗೆ ಸಂಬಂಧಪಟ್ಟಂತೆ ಇದ್ದರೆ ಅದನ್ನು ಈ ಸೆಕ್ಷನ್ 18 ರಡಿಯಲ್ಲಿ ತಮಗೆ ಹಂಚಿಕೆಯಾಗಿರುವ ನೀರಿನಲ್ಲಿಯೇ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗೆಹರಿಸಿಕೊಡಬೇಕೆಂದು ಒತ್ತಿ ಹೇಳಿದ್ದಾರೆ. ಆದರೂ ಕೂಡ ಈಗಿನ ಆಂದ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿಯನ್ನು ಹಾಕಿವೆ. ಈಗಾಗಲೇ ಸುಪ್ರೀಂ ಕೋರ್ಟ್ ಕೂಡ ತನ್ನ ತೀರ್ಪನ್ನು ಕೊಟ್ಟಿದೆ. " **ನೀವು ಇದನ್ನು Inter State Water Dispute Tribunal ನಲ್ಲಿ ಮಾಡಲಿಕ್ಕೆ ಬರುವುದಿಲ್ಲ, State Reorganisation Act ಏನಿದೆ, ಆ ಆಕ್ಟ್‌ನಲ್ಲಿ ಆಗಿರತಕ್ಕಂತಹ ನೀರಿನ ಹಂಚಿಕೆಯಲ್ಲಿ ಸರಿ ಮಾಡಿಕೊಳ್ಳಿ**"ಎಂದು ಹೇಳಿದೆ. ಇಷ್ಟು ಇದ್ದರೂ ಕೂಡ ಕೇಂದ್ರ ಸರ್ಕಾರ ಇದುವರೆವಿಗೂ ಕೂಡ ಸೆಕ್ಷನ್(5) 3 ರಡಿಯಲ್ಲಿ ಈ Krishna Water Dispute Tribunal award-2 ಏನಿದೆ, ಅದನ್ನು ಇದುವರೆವಿಗೂ ನೋಟಿಫೈ ಮಾಡಿರುವುದಿಲ್ಲ. ಈ ಮಧ್ಯ ನಾವು ಕೂಡ ಮಹಾರಾಷ್ಟ್ರ ಮತ್ತು ನಮ್ಮ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಒಂದು ತಕರಾರು ಅರ್ಜಿಯನ್ನು ಇದರ ಬಗ್ಗೆ ಹಾಕಿದ್ದೇವೆ. ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕು, ಆಂದ್ರಪ್ರದೇಶದವರು ನಮಗೆ ಕೊಟ್ಟಿರುವ ನೀರು ಸರಿಯಿರುವುದಿಲ್ಲ. ಮತ್ತೆ ಮಹರಾಷ್ಟ್ರದವರು ಕೆಲವೊಂದು ವಿಷಯಗಳನ್ನು ತೆಗೆದು Interlocutory Application ಹಾಕಿದ್ದಾರೆ. ಅವುಗಳು ಪೆಂಡಿಂಗ್ ಉಳಿದುಕೊಂಡಿವೆ. ಆದರೆ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ Cauvery Water Disputes Tribunal ನಲ್ಲಿ ಇದುವರೆಗೂ ಕೂಡ ಸೆಕ್ಷನ್ (5)3 ರಡಿಯಲ್ಲಿ ಯಾವುದೇ ರೀತಿಯ ನೋಟಿಫಿಕೇಷನ್ ಆಗಲಿಲ್ಲ. ಅಂದಿನ ಕೇಂದ್ರ ಸರ್ಕಾರ ಮತ್ತು ಅಂದಿನ ತಮಿಳು ನಾಡಿನಲ್ಲಿ ಇದ್ದಂತಹ ರಾಜ್ಯಸರ್ಕಾರದ ಒತ್ತಾಯದ ಮೇರೆಗೆ ತಂದಂತಹ ರಾಜಕೀಯ ಒತ್ತಡದಿಂದ ಸೆಕ್ಷನ್ (5)3 ರಡಿಯಲ್ಲಿ ಯಾವುದೇ ರೀತಿಯ ನೋಟಿಫಿಕೇಷನ್ ಆಗಲಿಲ್ಲ. ಆದರೂ ಕೂಡ ಸಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಅವಾರ್ಡ್ ಅನ್ನು ನೋಟಿಫೈ ಮಾಡಿದರು.

**ಸಭಾಪತಿಯವರು:-** ಬೇಗ ತಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:** ಮಾನ್ಯ ಸಭಾಪತಿಯವರೆ, ವಿಷಯ ಪ್ರಮುಖವಾಗಿದ್ದು, 5 ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆ. ತಮಗೆ ಗೊತ್ತಿರುವಂತೆ 2018ರಲ್ಲಿ Cauvery Water Management Authority ಬಂತು, Steering Committee ಬಂತು. ಇವತ್ತು ಕಾವೇರಿ ಜಲಾಶಯದ ವ್ಯಾಪ್ತಿಯಲ್ಲಿರುವ ನಾವೆಲ್ಲರೂ ಕೂಡ ಕೇಂದ್ರ ಸರ್ಕಾರದ ಮರ್ಜಿಯಲ್ಲಿದ್ದೇವೆ. ಅಣೆಕಟ್ಟನ್ನು ಕಟ್ಟಬೇಕು, ನೀರನ್ನು ಬಿಡಬೇಕು, ಮಳೆಯಾಗಲಿ, ಮಳೆಯಾಗದಿರಲಿ ನೀರನ್ನು ನಿಯಂತ್ರಣ ಮಾಡಿ ಅವರಿಗೆ ಬಿಡಬೇಕಾಗುತ್ತದೆ. ಆ ರೀತಿಯ ಸನ್ನಿವೇಶ ಇದೆ. ಈ ವಿಚಾರದಲ್ಲಿ ನನ್ನ ಕಳಕಳಿಯ ಮನವಿ ಇಷ್ಟೆ. ದಯಮಾಡಿ ನಾವು ಒಂದು Memorandum ನಮ್ಮ ಪಕ್ಷದ ವತಿಯಿಂದ ಮೇಕೆದಾಟು

ಇರಬಹುದು, ಕೃಷ್ಣ ಮೇಲ್ದಂಡೆ ಯೋಜನೆ ಇರಬಹುದು ಮತ್ತೆ ಮಹದಾಯಿಗೆ ಸಂಬಂಧಪಟ್ಟಂತೆ ಈಗಾಗಲೇ ರಾಜ್ಯದ ರಾಜ್ಯಪಾಲರಿಗೆ, ರಾಜ್ಯದ ಮುಖ್ಯಮಂತ್ರಿಯವರಿಗೆ, ಮತ್ತು ನಮ್ಮ ನೀರಾವರಿ ಸಚಿವರಿಗೆ ಕೊಟ್ಟಿದ್ದೇವೆ. ಕೊಡುವುದರ ಮೂಲಕ ನಮ್ಮ ಕಳಕಳಿಯ ಮನವಿಯನ್ನು ಮಾಡಿದ್ದೇವೆ. ದಯಮಾಡಿ, ತಾವು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿ. ಏಕೆಂದರೆ, ಅಲ್ಲಿ ನಿಮ್ಮ ಪಕ್ಷದ ಸರ್ಕಾರವೇ ಇದೆ. ಬೇರೆ ಯಾವುದೇ ರೀತಿಯ ಕಾನೂನುಬಾಹರವಾದಂತಹ ಕ್ರಮವನ್ನು ಜರುಗಿಸಿ ಎಂದು ನಾವು ಕೇಳುತ್ತಿಲ್ಲ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಮುಂದಿನ ದಿನಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ಅರ್ಜಿಗಳು ವಿಚಾರಣೆಗೆ ಬಂದಾಗ ಭಾರತ ಸರ್ಕಾರದ ವತಿಯಿಂದ ಪ್ರತಿಪಾದನೆ ಮಾಡುವಂತಹ ಯಾರು ಅಟಾರ್ನಿ ಜನರಲ್ ಇದ್ದಾರೆ, ಅವರಿಗೆ ಈ ವಿಚಾರವಾಗಿ ಒಂದು ಹೇಳಿಕೆಯನ್ನು ಅಥವಾ ಒಂದು ಸಬ್‌ಮಿಷನ್ ಮಾಡಿ. Subject to Supreme Court Judgement, ನಾವು ಸೆಕ್ಷನ್ (5) 3 ರಡಿಯಲ್ಲಿ ಬಂದಿರತಕ್ಕಂತಹ Krishna Water Dispute Tribunal ಅನ್ನು ನೋಟಿಫೈ ಮಾಡುತ್ತೇವೆಂದು ಹೇಳಿದ್ದಾರೆ.

ಅಲ್ಲಿಗೆ ನಮಗೆ ಏನಾಗುತ್ತದೆ ಎಂದರೆ, ನೋಟಿಫೈ ಮಾಡಿದ ತಕ್ಷಣ ನಾವು ಈ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲಿಕ್ಕೆ ಶುರು ಮಾಡುತ್ತೇವೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ಸಾಕಷ್ಟು ತಯಾರಿಯನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ. ಒಂದು Detailed Project Report ಅನ್ನು ತಯಾರಿ ಮಾಡಿಕೊಳ್ಳಬೇಕು. ನೀವು ಮಾಡಿದಂತಹ DPR ಅನ್ನು ಅವರು ವಾಪಸ್ಸು ಕಳುಹಿಸಿದ್ದಾರೆ. ಅದೇ ರೀತಿಯಾಗಿ land acquisition ಗೆ ಸುಮಾರು 50-60 ಸಾವಿರ ಕೋಟಿಗಳು ಬೇಕಾಗುತ್ತದೆ. ಏಕೆಂದರೆ, ಸ್ಕೀಂ-'ಬಿ' ಅಡಿಯಲ್ಲಿರತಕ್ಕಂತಹದ್ದು ಎಲ್ಲಾ lift irrigation schemeಗಳೇ ಆಗಿವೆ. ಈಗಾಗಲೇ ಏನು ಕಾಲುವೆಯಲ್ಲಿ ಹರಿಯುವಂತಹ ನೀರಿಗೆ ಸಂಬಂಧಪಟ್ಟ ಹಾಗೆ ಎಲ್ಲಾ ಕಾಲುವೆಗಳ ನಿರ್ಮಾಣ ಕಾರ್ಯ ಮುಗಿದು ಹೋಗಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ದಯಮಾಡಿ Cruise gate fix ಮಾಡಬೇಕೆಂದರೆ, ನೀರನ್ನು 524 ಅಡಿಯವರೆಗೆ ತಡೆಹಿಡಿಯಬೇಕೆಂದು ಹೇಳಿದರೆ ಇದಕ್ಕೆ ರಾಷ್ಟ್ರೀಯ ಯೋಜನೆ ಮಾಡಬೇಕೆಂದರೆ, ತಾವು ಎಲ್ಲದಕ್ಕೂ ತಯಾರಾಗಿರಬೇಕು. ಸಾಕಷ್ಟು ಸಂಪನ್ಮೂಲ ಕ್ರೋಢೀಕರಣವಾಗಬೇಕು. ತಾವು Environmental Impact Assessment ಮಾಡಬೇಕು ಹಾಗೂ ಪರಿಷ್ಕೃತ ಯೋಜನಾ ವರದಿಯನ್ನು ತಯಾರು ಮಾಡಿ ಸರ್ಕಾರದ ಮೇಲೆ ಒತ್ತಾಯ ಹಾಕಿ ಈ ರಾಷ್ಟ್ರೀಯ ಯೋಜನೆ ಎಂದು declare

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ತಾವು ಒತ್ತಾಯ ಹಾಕಬೇಕೆಂದು ನಾನು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

**ಸಭಾಪತಿಯವರು:** ಮಂತ್ರಿಗಳು ಉತ್ತರ ಹೇಳಿದ್ದಾರೆ. Clarification ಕೇಳಿದ್ದಾರೆ. ನಿಮಗೆ ಕೇಳುವ ಹಕ್ಕು ಇದೆ. ಇಟಗಿಯವರೆ, ಒಂದು ನಿಮಿಷ. ನಾನು ನಿಮ್ಮನ್ನು ಕೇಳುತ್ತೇನೆ. ಹೇಗೆ ಮಾಡುವುದು ಹೇಳಿ.

**ಶ್ರೀ ಎಸ್.ಆರ್.ಪಾಟೀಲ್:** ಎಲ್ಲರಿಗೂ allow ಮಾಡಿ. ಆಮೇಲೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಎಲ್ಲರಿಗೂ ಅವಕಾಶ ಕೊಡಿ.

**(ಗೊಂದಲ)**

**ಶ್ರೀಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಏನೂ ಭಾಷಣ ಮಾಡುವುದಿಲ್ಲ ಒಂದು suggestion ನೀರಾವರಿ ಮಂತ್ರಿಗೆ ಕೊಡುವುದಕ್ಕೆ ಹೇಳಿ. ಅವರು ದುಡ್ಡಿಲ್ಲವೆಂದು ಹೇಳುತ್ತಾರೆ. ನೀವು ನಿಗಮ ಮಾಡಿಕೊಂಡಿದ್ದೀರಿ. ಅವರು ನೋಟಿಫಿಕೇಷನ್ ಅಂದರೆ ಒಂದು Central Government ನವರು ನೋಟಿಫಿಕೇಷನ್ ಮಾಡಲಿ. ಆ ನೋಟಿಫಿಕೇಷನ್ ಆಧಾರದ ಮೇಲೆ ಕಾವೇರಿ ನಿಗಮದಿಂದ Central Government ನಲ್ಲಿ ದುಡ್ಡಿಲ್ಲದಿದ್ದರೂ State Government ನವರು resolution ಮಾಡಿ Central Government ನಿಂದ permission ತೆಗೆದುಕೊಳ್ಳಿ. Petrodollars ಸಾಲ ಕೊಡಿಸುವಂತಹ ಜವಾಬ್ದಾರಿಯನ್ನು IDB interest ಮೇಲೆ ನಾನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಅದಕ್ಕೆ ಸರ್ಕಾರ ತಯಾರಾಗಿದೆಯೇ ಎಂದು ನೋಡಿ. ಇದನ್ನು ನೀವು ತೀರ್ಮಾನ ಮಾಡಿ ಹೇಳಿ.

**ಸಭಾಪತಿಯವರು:** ಶ್ರೀಯುತ ತಿಮ್ಮಾಪೂರವರೆ, ತಾವು ಮಾತನಾಡಿ,

**ಶ್ರೀ.ಆರ್.ಬಿ. ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ)** ಮಾನ್ಯ ಸಭಾಪತಿಯವರೆ, ನಾವು ಸಂತ್ರಸ್ಥರ ಏರಿಯಾದಿಂದ ಬಂದಂತಹವರು. ಮಾನ್ಯ ಸಚಿವರು ಎರಡು ಕಡೆಗಳಲ್ಲಿ ಅಂದರೆ ....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-.** ಮಾನ್ಯ ಸಭಾಪತಿಯವರೆ, ಬೆಳಗ್ಗೆ 10.30ಕ್ಕೆ ಸದನ ಕರೆಯುತ್ತೀರಿ. ಊಟಕ್ಕೆ ಒಂದು time fix ಮಾಡಿ.

**ಸಭಾಪತಿಯವರು:** ನೀವು ಕುಳಿತುಕೊಳ್ಳಿ. ಊಟ ಮಾಡಿದ ಮೇಲೆ ಮಾಡಿ ಎನ್ನುತ್ತೀರಿ; ಊಟವೂ ಆಗಲಿ ಅಂತೀರಿ, ಚರ್ಚೆಯೂ ಬೇಕೆನ್ನುತ್ತೀರಿ.

**ಶ್ರೀ.ಆರ್.ಬಿ. ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು)** ಮಾನ್ಯ ಸಭಾಪತಿಯವರೆ, ಜನರು ಆಯ್ಕೆ ಮಾಡಿ ಕಳುಹಿಸಿದ ತಾಲ್ಲೂಕು ಸಂತ್ರಸ್ಥರ ತಾಲ್ಲೂಕು. ಬಿಜಾಪುರದಲ್ಲಿ profit ಇದೆ, ಅವರಿಗೆ ನೀರು ಬರುತ್ತಿದೆ, ಅಂದರೆ ಎರಡೂ ಕಡೆಗಳಲ್ಲಿ ಅವರು ಸಮಾಧಾನಪಟ್ಟುಕೊಳ್ಳುವಂತಹದ್ದು ಆಗುತ್ತಿದೆ. ಮಾನ್ಯ ಸಭಾಪತಿಯವರೆ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಏಕೆಂದರೆ, ನಮ್ಮ ವಿರೋಧ ಪಕ್ಷದ ನಾಯಕರು ರಾಜ್ಯಮಟ್ಟದ ವಿಷಯಗಳೆಲ್ಲವನ್ನೂ ಈಗಾಗಲೇ ಚರ್ಚೆ ಮಾಡಿದ್ದಾರೆ. ನಾನು ಮೊದಲಿಗೆ ಕೆಲವು ವಿಚಾರಗಳಿಗೆ ಸೀಮಿತವಾಗಿ ನೀರಾವರಿ ಸಚಿವರು ಇರಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ. ಅವರು ಬೇರೆ ವಿಷಯಗಳ ಕಾರಣದಿಂದ ಕಂದಾಯ ಸಚಿವರಿಗೆ ಮಾತ್ರ ಬರುತ್ತದೆ ಎಂದು ಹೇಳಿದ್ದಾರೆ. ಈಗ ನನಗೆ ಅವಕಾಶ ಸಿಕ್ಕಿದೆ.

ಮಾನ್ಯ ಸಭಾಪತಿಯವರೆ, ಈ ಭೂಮಿ ಬೆಲೆ ನಿಗದಿ ಮಾಡುವ ಸಲುವಾಗಿ ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಮುಳುಗಡೆ ಏರಿಯಾದಲ್ಲಿ different ಆಗಿದೆ. ಬೀಳಗಿಗೆ ಒಂದು, ಜಮಖಂಡಿಗೆ ಒಂದು ಈ ರೀತಿ ವ್ಯತ್ಯಾಸಗಳನ್ನು ನಾವು ಕಾಣುತ್ತಿದ್ದೇವೆ.

**(ಮುಂದು .)**

**(701) 15.09.2021 01.30 ಎಸ್‌ವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಬಿ.ತಿಮ್ಮಾಪುರ (ಮುಂದು):-**

ಈಗಿನ ನೀರಾವರಿ ಸಚಿವರು ವಿರೋಧ ಪಕ್ಷದಲ್ಲಿದ್ದಾಗ ಮಾತನಾಡಿದ್ದಾರೆ. ಜಮಖಂಡಿಗೆ ಏಕೆ ಒಂದು ದರ, ಬೀಳಗಿಗೆ ಏಕೆ ಒಂದು ದರ, ಬಾಗಲಕೋಟೆಗೆ ಏಕೆ ಒಂದು ದರ ಎಂದು ಕೇಳಿದ್ದಾರೆ. ಮಾಚಕನೂರ ಈಗ ಮುಳುಗಡೆಯಾಗುತ್ತಿದೆ. ಅಲ್ಲಿ ಒಂದು ಎಕರೆಗೆ 8 ಲಕ್ಷ, 10 ಲಕ್ಷಗಳನ್ನು ಕೊಡುತ್ತಾರೆ. ಬೀಳಗಿಗೆ ಹೋದರೆ 25 ಲಕ್ಷ, 30 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇದನ್ನು ಸರಿಪಡಿಸುವವರು ಯಾರು?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ತಾಲ್ಲೂಕಿನವರೇ ನೀರಾವರಿ ಸಚಿವರಾಗಿದ್ದಾರೆ. ಮುಧೋಳ ತಾಲ್ಲೂಕಿನಲ್ಲಿ ಸಮಸ್ಯೆಗಳೇ ಇಲ್ಲವಾಗಿಬಿಡುತ್ತವೆ. ಮತ್ತೊಮ್ಮೆ ಮಗದೊಮ್ಮೆ ಯಾವುದೇ ಹೋರಾಟವನ್ನು ಇಲ್ಲವಾಗಿಸಿಬಿಡುತ್ತಾರೆಂದು ನಮ್ಮ ಭಾವನೆ. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಅವರು ಮಾತನಾಡಿರತಕ್ಕಂತಹ ವಿಷಯಗಳನ್ನು ನಾನು ಓದಿಕೊಂಡಿದ್ದೇನೆ. ಬರಗಾಲದ ನಾಡಿಗೆ ನೀರು ಬರಬೇಕಾಗಿತ್ತು ಮುಂತಾದ ಹಲವಾರು ವಿಚಾರಗಳನ್ನು ಅವರು ಚರ್ಚೆ ಮಾಡಿದ್ದರು. ಭೂಮಿ ಬೆಲೆ ನಿಗದಿಯನ್ನು ಮಾಡುತ್ತೀರೋ ಅಥವಾ ಒಂದೇ ದರವನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೀರೋ ಹೇಗೆ? ಅವರನ್ನು ಆರಿಸಿ ಕಳುಹಿಸಿದ ಕ್ಷೇತ್ರದಲ್ಲಿಯೇ ಬೇರೆ ತಾಲ್ಲೂಕುಗಳಿಗಿಂತ ಬಹಳಷ್ಟು ಕಡಿಮೆ ಬರುತ್ತದೆ. ಹಲವಾರು ಹಳ್ಳಿಗಳ ಹೆಸರನ್ನು ನಾನು ಹೇಳಬೇಕಾಗುತ್ತದೆ. ಅವರಿಗೆ ಎಲ್ಲಾ ತಿಳಿದಿರುವುದರಿಂದ ನಾನು ಹೇಳಲು ಹೋಗುವುದಿಲ್ಲ. ನಾನು ಹುಟ್ಟಿದ ಸ್ಥಳ ಮತ್ತು ಅವರು ಆರಿಸಿ ಬಂದಂತಹ ಕ್ಷೇತ್ರ ಎರಡೂ ಒಂದೇ ಆಗಿದ್ದು, ಅವರು ಆ ಕ್ಷೇತ್ರದಲ್ಲಿ 15-20 ವರ್ಷಗಳಿಂದ ರಾಜಕಾರಣದಲ್ಲಿದ್ದಾರೆ.

ಪ್ರವಾಹದಿಂದ ನಮಗೆ ಹಾನಿಯಾಗಿರುವುದಿಲ್ಲ, ಆಲಮಟ್ಟಿ ಅಣೆಕಟ್ಟಿನ ನೀರು ನಿಲ್ಲುವುದರಿಂದ ನಮಗೆ ಹಾನಿಯಾಗಿದೆ ಎಂದು ನಿನ್ನೆ ಮಾತನಾಡುವಾಗ ನಾನು ಹೇಳಿದ್ದೇನೆ. ನೀರಿನ ಮಟ್ಟ ಎತ್ತರಕ್ಕೆ ಹೋಗಿ ತಕ್ಷಣ ನೀರು ಹರಿದು ಹೋಗುವುದಿಲ್ಲ. 5 ರಿಂದ 10 ದಿನಗಳ ಕಾಲ ನೀರು ನಿಲ್ಲುವುದರಿಂದ ನಮ್ಮ ಬೆಳೆಗಳು ಹಾನಿಯಾಗುತ್ತವೆ. ಆಲಮಟ್ಟಿ ಸಂತ್ರಸ್ತರಂತೆ ನಮ್ಮನ್ನೂ ಪರಿಗಣಿಸಬೇಕು ಎಂದು ನಾವು ಕೇಳುತ್ತಿದ್ದೇವೆ. ನಮ್ಮ ಬೆಳೆಗಳಿಗೆ ಆಲಮಟ್ಟಿ ಅಣೆಕಟ್ಟಿನಲ್ಲಿ ಹಾನಿಯಾಗಿದೆಯೇ ವಿನಃ ಪ್ರವಾಹದಿಂದ ಹಾನಿಯಾಗಿರುವುದಲ್ಲ ಎಂದು ರೈತರು ಹೇಳುತ್ತಾರೆ. ನಾನು ಹಲವಾರು ತಜ್ಞರ ಜೊತೆಯಲ್ಲಿ ಮಾತನಾಡಿದ್ದೇನೆ. ನನಗೂ ಅದೇ ಅನುಮಾನ ಮೂಡುತ್ತಿದೆ. ನಾವು ಸಣ್ಣವರಿದ್ದಾಗ ಪ್ರವಾಹ ಬಂತು ಎಂದರೆ ಒಂದು ಅಥವಾ ಎರಡು ದಿನಗಳಲ್ಲಿ ನೀರು ಹರಿದು ಹೋಗುತ್ತಿತ್ತು. ಈಗ ನೀರು ನಿಂತು ಬಿಡುತ್ತದೆ. ಐದು ದಿನಗಳು ನೀರು ನಿಂತರೆ ಕಬ್ಬಿನ ಬೆಳೆಗೆ ಹಾನಿಯಾಗುತ್ತದೆ. ತಾವು ಸುಮಾರು ಆರು ಎಕರೆ ಬೆಳೆಯನ್ನು ಕಳೆದುಕೊಂಡಿದ್ದೀರಿ. ನಾನು 35 ಎಕರೆ ಬೆಳೆಯನ್ನು ಕಳೆದುಕೊಂಡಿದ್ದೇನೆ. ಪ್ರತಿ ವರ್ಷ ಮುಳುಗಡೆಯಾಗುವುದು, ಅದನ್ನು ಬಿತ್ತನೆ ಮಾಡಲು ಪುನಃ ಸಾಲ ತಂದು ಬೆಳೆ ಬೆಳೆಯುವುದು ಈ ರೀತಿಯಾಗುತ್ತಿದೆ. ಇದು ಆಲಮಟ್ಟಿ ಅಣೆಕಟ್ಟಿನಿಂದ ಆಗಿರುವುದರಿಂದ ನಮಗೆ ಪರಿಹಾರ ಕೊಡಿ ಎಂದು ನಾವು ಸರ್ಕಾರಕ್ಕೆ ವಿನಂತಿ ಮಾಡುತ್ತೇವೆ. ಸರ್ಕಾರ ಪರಿಹಾರ ಕೊಡಲಿಕ್ಕೆ ಏಕೆ ಹಿಂದು ಮುಂದೆ ನೋಡುತ್ತದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ನೀರಾವರಿ ಸಚಿವರು ನಮ್ಮವರಾಗಿದ್ದು, ರೈತರನ್ನು ರಕ್ಷಣೆ ಮಾಡುತ್ತಾರೆ ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. 2002ರಲ್ಲಿ ನಾನು ಉಸ್ತುವಾರಿ ಸಚಿವನಾಗಿದ್ದಾಗ ನಾನೇ ಆ ಗೇಟ್ ಅನ್ನು ಹಾಕಿಸಿದ್ದೇನೆ. ಅದಕ್ಕಿಂತ ಮುಂಚೆ ನೀರು ಹರಿದು ಹೋಗುತ್ತಿತ್ತು. ಆದರೆ ಈಗ ಏಕೆ ಹೋಗುತ್ತಿಲ್ಲ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ನಮಗೆ ಒಂದು ಅನುಮಾನವಿದೆ. ನೀರಿನ ನಿರ್ವಹಣೆಯಲ್ಲಿ ಅಲ್ಲಿನ ಅಧಿಕಾರಿಗಳ ತಪ್ಪಿನಿಂದಾಗಿ ಐದು-ಹತ್ತು ದಿನಗಳ ಕಾಲ ನೀರು ನಿಲ್ಲುತ್ತದೆ.

ಎರಡು ಲಕ್ಷ ಕ್ಯುಸೆಕ್ಸ್ ನೀರು ಕೃಷ್ಣಾ ನದಿಯಿಂದ ಬರುತ್ತದೆ. 50 ಸಾವಿರ ಕ್ಯುಸೆಕ್ಸ್ ನೀರು ಘಟಪ್ರಭಾ ನದಿಯಿಂದ ಬರುತ್ತದೆ. 517 ಮೀಟರ್‌ಗೆ ಗೇಟ್ ಹಾಕಿದ ನಂತರ ನೀರಿನ ಮಟ್ಟ ಎತ್ತರಕ್ಕೆ ಬಂದೇ ಬರುತ್ತದೆ. ಗೇಟ್ ಹಾಕಿದ್ದರಿಂದ ಎರಡು ಲಕ್ಷ ಕ್ಯುಸೆಕ್ಸ್ ನೀರು ನಮ್ಮಲ್ಲಿ ನಿಲ್ಲುತ್ತದೆ. ಅದನ್ನೇ 511 ಅಥವಾ 512 ಮೀಟರ್‌ಗಳಿಗೆ ಮೂರರಿಂದ ನಾಲ್ಕು ಮೀಟರ್ ಗೇಟ್ ಅನ್ನು ತೆಗೆಸಿದ್ದರೆ ನೀರು ನಿಲ್ಲದೆ ಹರಿದು ಹೋಗುತ್ತಿತ್ತು. ನೀರಿನ ನಿರ್ವಹಣೆಯ ತಪ್ಪಿನಿಂದಾಗಿ ನಮ್ಮ ಬೆಳೆ ಹಾನಿಯಾಗಿದೆ. ಆಲಮಟ್ಟಿ ಅಣೆಕಟ್ಟಿನಿಂದ ನಮಗೆ ಈ ಪ್ರವಾಹದಲ್ಲಿ ಹಾನಿಯಾಗುತ್ತಿರುವುದರಿಂದ ಆಲಮಟ್ಟಿ ಸಂತ್ರಸ್ತರಿಗೆ ಕೊಟ್ಟಿರುವ ಸೌಲಭ್ಯವನ್ನು ನಮಗೂ ಕೊಟ್ಟು ಸರ್ಕಾರವು ನಮ್ಮ ಕಡೆ ಗಮನ ಹರಿಸಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇದು ಪ್ರವಾಹದಿಂದ ಆಗಿರುವುದಲ್ಲ, ಯೋಜನೆಯಿಂದ ಆಗಿರುವುದು ಎಂದು treat ಮಾಡಬೇಕು.

ಪ್ರತಿ ವರ್ಷ 38 ಹಳ್ಳಿಗಳ ಜನರು ಜೀವ ಕೈಯಲ್ಲಿಟ್ಟುಕೊಂಡು ಬದುಕಬೇಕು. ಪ್ರವಾಹ ಮಿಜ್ಜಿ ಬಂತು, ಒಂಟೋಡಿಗೆ ಬಂತು, ನನ್ನೂರಿಗೆ ಬರುತ್ತೆ, ಒಂದು ತಾಸಿಗೆ ಬರುತ್ತೆ, ಎರಡು ತಾಸಿಗೆ ಬರುತ್ತೆ, ಗಂಟು ಮೂಟೆ ಕಟ್ಟಬೇಕು, ಟ್ರಾಕ್ಟರ್ ಹುಡುಕಬೇಕು. ಓಡೋಡಿ ಗುಡ್ಡದಂತಹ ಎತ್ತರದ ಪ್ರದೇಶಕ್ಕೆ ಸೇರಬೇಕು. ರೂಗಿ ಹಾಗೂ ಗುಲಗಲಜಂಬಗಿ ಎನ್ನುವ ಎರಡು ಹಳ್ಳಿಗಳಿವೆ. ಹೊರಮಾಡು ತಮಗೂ ತಿಳಿದಿದೆ. ಹೊರಮಾಡು ಒಡೆದು ಬಿಟ್ಟರೆ ಇಡೀ ಊರಿಗೆ ಊರೇ ಕೊಚ್ಚಿಕೊಂಡು ಹೋಗುತ್ತದೆ. 2019ರಲ್ಲಿ ಅದು ಒಡೆದು ಹೋಗಿ ಎರಡೂ ಹಳ್ಳಿಗಳ ಜನರು ರಾತ್ರೋರಾತ್ರಿ ಮಕ್ಕಳನ್ನು ಕರೆದುಕೊಂಡು ಓಡಿದರು. ಮನೆಯಲ್ಲಿರತಕ್ಕಂತಹ ಹಣ, ಧಾನ್ಯ, ದನಕರುಗಳು ಕೊಚ್ಚಿ ಹೋದವು. ಆ ಹಾನಿಯನ್ನು ನೋಡಲಸಾಧ್ಯ. 38 ಹಳ್ಳಿಗಳ ಜನರಿಗೆ ಪ್ರತಿ ವರ್ಷ ಪ್ರವಾಹ ಬಂತೆಂದರೆ ಭಯಭೀತಿ. ಭಯದಲ್ಲಿ ಬದುಕುವಂತಹ ಬದುಕು ಯಾರಿಗೂ ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ದರಿಂದ ಸರ್ಕಾರವು ಇದನ್ನು ಆಲಮಟ್ಟಿ affected area ಎಂದು ನಮಗೆ ಪರಿಹಾರ ಕೊಡಬೇಕು. ನೀರಿನ ನಿರ್ವಹಣೆಯಲ್ಲಿ ಏನೇನು ತಪ್ಪುಗಳಾಗಿದೆಯೋ ಅದನ್ನು ಸರಿಪಡಿಸಬೇಕು. ಏನಾದರೂ ಅನುಮಾನವಿದ್ದರೆ ಒಂದು ತಜ್ಞರ ಸಮಿತಿಯನ್ನು ರಚಿಸಬೇಕು. ರೈತರು ಹಾಗೂ ನಾವೆಲ್ಲರೂ ಆಲಮಟ್ಟಿ ಅಣೆಕಟ್ಟಿನಿಂದ ಆಗಿದೆ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ಅದನ್ನು ತಿಳಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಾ, ಅವಕಾಶಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಆಲಮಟ್ಟಿ ಜಲಾಶಯವನ್ನು ಪೂರ್ಣಗೊಳಿಸಬೇಕು ಎನ್ನುವುದು ನಮ್ಮೆಲ್ಲರ ಆಸಕ್ತಿಯಾಗಿದ್ದು, ಪದೇ ಪದೇ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆ ಕೂಡ ಆಗಿದೆ. ಹಿಂದಿನ ಅಧಿವೇಶನದಲ್ಲಿ ಚರ್ಚೆ ಮಾಡುವಾಗ ನಾನು ಹೇಳಿದೆ. ಆಲಮಟ್ಟಿ ಜಲಾಶಯದ ಮೊಟ್ಟಮೊದಲನೆಯ ಸಂತ್ರಸ್ತ ಎಂದರೆ ಅದು ನಾನೇ. ಬೇನಾಳ ಗ್ರಾಮದ ನನ್ನ ತಾಂಡಾ ಮುಳುಗಡೆಯಾಗಿ ಮೂರು ಕಡೆ ಭಾಗವಾಗಿ ನಮಗೆ ಮೊದಲನೆಯ ಹಂತದಲ್ಲಿ ಪರಿಹಾರ ಕೂಡ ಬಂದಿದೆ. ಅಂದು ಕೂಡ ನಾನು ತಮಗೆ ಹೇಳಿದ್ದೆನು. ಅಂದಿನ ದಿನದಲ್ಲಿ ಪ್ರತಿ ಎಕರೆಗೆ ಕೇವಲ ರೂ.3000 ಗಳು ಬಂದಿದೆ. ನನ್ನ ಮನೆಯೂ ಸೇರಿ ನಮ್ಮ ಗ್ರಾಮದ ಎಲ್ಲಾ ಮನೆಗಳು ಮುಳುಗಡೆಯಾಗಿದ್ದು, ನಾನು ಮೊಟ್ಟ ಮೊದಲನೆಯ ಸಂತ್ರಸ್ತ ಎಂದು ಹೇಳಿದ್ದೆನು.

ಹಿಂದಿನ ಅಧಿವೇಶನದಲ್ಲಿ ಚರ್ಚೆ ಮಾಡುವಾಗ ಮೂರನೇ ಹಂತದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಿದಾಗ ಮಾನ್ಯ ಕಾರಜೋಳ ಅವರು ಇದನ್ನು ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸಿ, ಕೇಂದ್ರ ಸರ್ಕಾರದಿಂದ ಮಾನ್ಯತೆಯನ್ನು ಪಡೆಯುತ್ತಿದ್ದೇವೆ ಎಂದು ಉತ್ತರವನ್ನು ಕೊಟ್ಟಿದ್ದರು. ಆಯವ್ಯಯದಲ್ಲಿಯೂ ಕೂಡ ಇದನ್ನು ಘೋಷಣೆ ಮಾಡಲಾಗಿದೆ. ಇದರ ಬಗ್ಗೆ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಕೂಡ ಪ್ರಸ್ತಾಪವನ್ನು ಮಾಡಿದ್ದಾರೆ. ಇದು ಯಾವ ಹಂತದಲ್ಲಿದೆ? ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಲು ಕೇಂದ್ರ ಸರ್ಕಾರವು ಒಪ್ಪಿದೆಯೇ? ಒಪ್ಪಿದ್ದರೆ ಅದಕ್ಕೆ ಮಾನ್ಯತೆ ದೊರೆತಿದೆಯೇ? ಎಂದು ಮಾನ್ಯ ನೀರಾವರಿ ಸಚಿವರಲ್ಲಿ ಕೇಳಬಯಸುತ್ತೇನೆ.

ಹಿಂದಿನ ಅಧಿವೇಶನದಲ್ಲಿ ಕೇವಲ ರೂ.5600 ಕೋಟಿಗಳನ್ನು ಈ ಯೋಜನೆಗೆ ಮೀಸಲಿಡಲಾಗಿದೆ ಎಂದು ಸರ್ಕಾರವು ಹೇಳಿತ್ತು. ಆ ರೂ.5600 ಕೋಟಿಗಳಲ್ಲಿ ಎಷ್ಟು ಹಣ

"ಪ್ರಕಟಣೆಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೆಚ್ಚವಾಗಿದೆ? ಕೋವಿಡ್-19ರ ಸಂದರ್ಭದಲ್ಲಿ ವೆಚ್ಚವಾಗುವ ಹಣವೇನಾದರೂ ಕಡಿಮೆಯಾಗಿದೆಯೇ? ಇದರ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ಕೊಡಬೇಕು. ರೂ.5600 ಕೋಟಿ ಬಹಳ ಕಡಿಮೆಯಿದೆ ಎಂದು ಹಿಂದಿನ ಅಧಿವೇಶನದಲ್ಲಿ ಕೂಡ ನಾನು ಹೇಳಿದ್ದೆನು. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ತಿಮ್ಮಾಪುರ ಅವರು ಮಾತನಾಡಿದಂತೆ ಈ ಯೋಜನೆ ಪೂರ್ಣಗೊಳ್ಳಲು ಒಂದು ಲಕ್ಷ ಕೋಟಿ ಬೇಕಾಗಿದೆ. ಕೇವಲ ರೂ.5600 ಕೋಟಿ ಕೊಟ್ಟರೆ ಈ ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ 30-40 ವರ್ಷ ಬೇಕಾಗುತ್ತದೆ.

**(...ಮುಂದು)**

(702) 15-09-2021, 1.40 KG ಬಿಎನ್ ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):-**

ಈ ಯೋಜನೆಯನ್ನು ಪೂರ್ಣಗೊಳಿಸಲು ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಮೀಸಲು ಇಡಬೇಕೆಂದು ಮನವಿ ಮಾಡಿದ್ದೇನೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು. ಈ ವಿಷಯವನ್ನು ಕೆಳಗಿನ ಮನೆಯಲ್ಲಿಯೂ ಸಹ ನಿನ್ನೆ ದಿವಸ ಪ್ರಸ್ತಾಪ ಮಾಡಿದ್ದಾರೆ. ಆದರೆ, ವಿಶೇಷವಾಗಿ ಕೃಷ್ಣ ಮೇಲ್ದಂಡೆ ಯೋಜನೆಗೆ ಹೆಚ್ಚು ಅನುದಾನವನ್ನು ಕೊಡುತ್ತಾರೆಂದು ಭಾವಿಸಿದ್ದೇವೆ. ಇನ್ನೂ ಆ ವಿಷಯ ಇಲ್ಲಿ ಚರ್ಚೆಗೆ ಬಂದಿಲ್ಲ. ಆದರೆ, ಅದಕ್ಕೆ ಸರ್ಕಾರ ಏನಾದರೂ ಹೆಚ್ಚಿಗೆ ಹಣ ಕೊಟ್ಟಿದೆಯೋ ಅಥವಾ ಇಲ್ಲವೋ ಎಂದು ಕೇಳಬಯಸುತ್ತೇನೆ. ಈ ಯೋಜನೆಯನ್ನು ಪೂರ್ಣಗೊಳಿಸಬೇಕಾದರೆ, ಅಲ್ಲಿನ ಕಾಲುವೆಗಳು ಯಾವ ಪರಿಸ್ಥಿತಿಯಲ್ಲಿವೆ ಎನ್ನುವುದನ್ನು ನೋಡಬೇಕಾಗುತ್ತದೆ. ಆ ಕಾಲುವೆಗಳನ್ನು ದುರಸ್ತಿ ಮಾಡುವುದಕ್ಕೆ ಮತ್ತು ವಿತರಣಾ ಕಾಲುವೆಗಳನ್ನು ದುರಸ್ತಿ ಮಾಡುವುದಕ್ಕೆ ಸರ್ಕಾರ ವಿಶೇಷವಾಗಿ ಹಣವನ್ನು ಮೀಸಲು ಇಟ್ಟಿದೆಯೇ; ಈ ಕಾಲುವೆಗಳ ದುರಸ್ತಿಯ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತಿದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಸದಸ್ಯರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ.ರಾಥೋಡ್‌ರವರು ಬಹಳ study

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಿ ಬಂದಿದ್ದಾರೆ. ಹಾಗಾಗಿ, ಅವರಿಗೆ ಮಾತನಾಡುವುದಕ್ಕೆ ಸ್ವಲ್ಪ ಸಮಯ ಕೊಡಿ. ಅವರು ಮಾತನಾಡಲಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಅವರಿಗೆ ಸಮಯವನ್ನು ನೀಡಿದ್ದೇನೆ ಅಲ್ಲವೇ?

**ಶ್ರೀ ಪ್ರಕಾಶ್ ಕೆ.ರಾಥೋಡ್ :-** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ, ಈಗಾಗಲೇ ಆಲಮಟ್ಟಿ ಜಲಾಶಯದಲ್ಲಿ ನೀರು ವಿತರಣೆಯಾಗುತ್ತಿದೆ. ಇದರಲ್ಲಿ ಹಲವಾರು ಕಡೆಗಳಲ್ಲಿ ಹೂಳು ಎತ್ತುವ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಈ ಹಿಂದೆಯೇ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ಇದರಿಂದ ಇನ್ನೂ ಹೆಚ್ಚು ನೀರು ಬಳಕೆಯಾಗುವಂತಹ ಸಂಭವ ಬರುತ್ತದೆ ಎಂದು ಭಾವಿಸಿದ್ದೇನೆ. ಇದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಅದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ.

ಮಾನ್ಯ ಸಭಾಪತಿಯವರೇ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ಕೈಗೆತ್ತಿಕೊಂಡು 134 ಕ್ಕಿಂತ ಹೆಚ್ಚಿನ ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಮಾಡಿದ್ದಾರೆ. ಅದರಲ್ಲಿ ಸಾಕಷ್ಟು ಕೆರೆಗಳು ಪೂರ್ಣಗೊಂಡಿವೆ. ಇನ್ನೂ ಸ್ವಲ್ಪ ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ಸರ್ಕಾರ ತೆಗೆದುಕೊಂಡಿತ್ತು. ಈ ವರ್ಷದಲ್ಲಿ ಎಷ್ಟು ಕಾಮಗಾರಿಗಳನ್ನು ತೆಗೆದುಕೊಂಡು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

ಮಾನ್ಯ ಸಭಾಪತಿಯವರೇ, ಇನ್ನೂ ಏತ ನೀರಾವರಿ ಯೋಜನೆಯ ಸಾಕಷ್ಟು ಕಾರ್ಯಕ್ರಮಗಳು ಇವೆ. ಅದರಲ್ಲಿ ಮುಳವಾಡ ಅಥವಾ ಚಿಮ್ಮಲಗಿ ಇಂತಹ ಏತ ನೀರಾವರಿ ಯೋಜನೆಗಳು ಯಾವ ಹಂತದಲ್ಲಿವೆ ಎಂಬುದನ್ನು ತಿಳಿಸಿದರೆ ಒಳ್ಳೆಯದು. ಆಲಮಟ್ಟಿ ಯೋಜನೆ ಸಂಪೂರ್ಣವಾಗಬೇಕೆಂದರೆ, ಇವೆಲ್ಲದರ ಬಗ್ಗೆ ಯೋಜನೆ ಮಾಡಬೇಕಾಗುತ್ತದೆ. 519 ರಿಂದ 524 ಅಡಿಗಳಿಗೆ ಆಲಮಟ್ಟಿ ಜಲಾಶಯದ ಗೇಟ್‌ನ್ನು ಎತ್ತರಿಸುವುದರಿಂದ, 30 ಟಿ.ಎಂ.ಸಿ. ನೀರು ಬಳಕೆಯಾಗುವ ಸಂಭವವಿದೆ ಎನ್ನುವುದನ್ನು ಒಪ್ಪುವುದರ ಜೊತೆಗೆ, ಈ ಕಾಮಗಾರಿಗಳನ್ನು ಸಹ ತೆಗೆದುಕೊಳ್ಳಬೇಕಾಗಿದೆ. ಇದನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಮತ್ತು ಇದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ಇದಕ್ಕೆ ಹಣ ಕಡಿಮೆ ಮೀಸಲಿಟ್ಟಿರುವುದರಿಂದ, ಈ ಹಿಂದಿನ ಅಧಿವೇಶನದಲ್ಲಿಯೂ ಸಹ, ಯಾವುದಕ್ಕೂ ಹಣ ಕಡಿಮೆ ಬೀಳುವುದಿಲ್ಲ, ಹೆಚ್ಚಿಗೆ ಹಣ ಬೇಕೆಂದರೆ, ಕೊಡುತ್ತೇವೆಂಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೂ ಸಹ, ಇಲ್ಲಿಯವರೆಗೆ ಹೆಚ್ಚುವರಿಯಾಗಿ ಹಣವನ್ನು ಮೀಸಲಾಗಿ ಇಟ್ಟಿಲ್ಲ. ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ಕೊಡಬೇಕೆಂದು ಮನವಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ 20 ಹಳ್ಳಿಗಳನ್ನು ಭೂ-ಸ್ವಾಧೀನ ಮಾಡಬೇಕಾಗಿದೆ, ಪುನರ್ವಸತಿ ಕೇಂದ್ರಗಳನ್ನು ಮಾಡಬೇಕಾಗಿದೆ. ಅದರ ಬಗ್ಗೆ new Land Acquisition Act ಪ್ರಕಾರ, Chapter V deals with rehabilitation and resettlement award. Relevant portion of Clause 38.1 stipulates as follows: " *Provided further that in case of acquisition of land for irrigation or hydel project, being a public purpose, the rehabilitation and resettlement shall be completed six months prior to submergence of the lands acquired.*" ಇದರ ಅಡಿಯಲ್ಲಿ ಭೂ-ಸ್ವಾಧೀನ ಮಾಡುವುದಕ್ಕೆ ಮತ್ತು 20 ಹಳ್ಳಿಗಳನ್ನು ಪುನರ್ವಸತಿ ಮಾಡುವುದಕ್ಕೆ ಸರ್ಕಾರ ಯಾವ ಪ್ರಮಾಣದಲ್ಲಿ ಯೋಜನೆ ಮಾಡಿದೆ. ಈ ಕಾಯಿದೆ ಅಡಿಯಲ್ಲಿ ಏನಾದರೂ ಅನ್ವಯ ಮಾಡಿ rehabilitation and resettlement ಗೆ ಈ Act ಅನ್ನು ಚಾಲನೆಗೆ ತಂದು ಏನಾದರೂ ಮಾಡುತ್ತಿದೆಯೇ ಎಂದು ಕೇಳುವುದಕ್ಕೆ ಇಚ್ಛೇ ಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಇದನ್ನು ನ್ಯಾಯಾಧೀಕರಣದಲ್ಲಿ ತೆರವುಗೊಳಿಸುವುದಕ್ಕೆ ಸರ್ಕಾರ ಏನು ಮಾಡಿದೆ? ಮೊನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಯವರು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ನ್ಯಾಯಾಧೀಕರಣದಿಂದ ಬೇಗ ಆದೇಶ ಹೊರಡಿಸಬೇಕೆಂದು ಚರ್ಚೆ ಮಾಡಿದ್ದಾರೆಂದು ಅದನ್ನು ದಿನಪತ್ರಿಕೆಗಳಲ್ಲಿ ಓದಿದ್ದೇವೆ. ಈ ಬಗ್ಗೆ ಸರ್ಕಾರ ಅದು ಯಾವ ಹಂತದಲ್ಲಿದೆ ಎಂಬ ಮಾಹಿತಿಯನ್ನು ಕೊಡಬೇಕು. ಏಕೆಂದರೆ, ನಾವು ಬಿಜಾಪುರ ಜಿಲ್ಲೆ ತ್ಯಾಗ ಮಾಡಿರುವಂತಹ ಜಿಲ್ಲೆ. ಇವತ್ತಿನವರೆಗೂ ಆಲಮಟ್ಟಿ ಜಲಾಶಯದಿಂದ ಮೊದಲನೇ ಮತ್ತು ಎರಡನೇ ಹಂತದಲ್ಲಿ ಎಷ್ಟು ಸೌಲಭ್ಯಗಳು ಸಿಕ್ಕಿದೆಯೋ, ಅದು ಬೇರೆ ಜಿಲ್ಲೆಗಳಿಗೆ ಹೆಚ್ಚು ಹೋಗಿದೆ. ಬಿಜಾಪುರ ಜಿಲ್ಲೆಗೆ ಮಾತ್ರ ಈ ಬಾರಿ 90 ಟಿ.ಎಂ.ಸಿ. ನೀರು ಬರುವಂತಹ ಅವಕಾಶವಿದೆ. ಬರಗಾಲ ಪೀಡಿತ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಅತಿ ಹೆಚ್ಚು ಪ್ರಮಾಣದ ನೀರು ಬಿಜಾಪುರ ಜಿಲ್ಲೆಗೆ ಬರುತ್ತದೆ ಈ ಒಂದು ನ್ಯಾಯಾಧೀಕರಣದ ತೀರ್ಪಿನಿಂದ, ಇದಕ್ಕೆ ತಾವು ಆದ್ಯತೆ ಕೊಡಬೇಕು. ಬರಗಾಲ ಪೀಡಿತ ಜಿಲ್ಲೆ ಎಂದು ಬಿಜಾಪುರ ಜಿಲ್ಲೆ ಹಣೆಪಟ್ಟಿ ಇಟ್ಟುಕೊಂಡಿದೆ, ಇದಕ್ಕೆ ಅನುಕೂಲ ಮಾಡಿದರೆ, ಇವತ್ತು ಬಿಜಾಪುರ ನಗರಕ್ಕೆ 15 ದಿವಸಗಳಿಗೆ ಒಮ್ಮೆ ನೀರು ಬರುತ್ತಿದೆ. ಆಲಮಟ್ಟಿ ಜಲಾಶಯದಿಂದ 5 ಕೀಲೋಮೀಟರ್ ದೂರದಲ್ಲಿರುವ

ನಿಡಗುಂದಿ ಗ್ರಾಮಕ್ಕೆ ನೀರು ಕೊಡುವುದಕ್ಕೆ ಆಗಲಿಲ್ಲ. ನನ್ನ ಊರು ಬೇನಾಳ ಪುನರ್ವಸತಿಯಾಗಿ 5 ಕೀಲೋಮೀಟರ್ ದೂರದಲ್ಲಿದ್ದರೂ ಸಹ, ನಮಗೆ ಇವತ್ತಿನವರೆಗೂ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತಿಲ್ಲ. ನಾವು ನಮ್ಮ ಭೂಮಿಯನ್ನು ಕಳೆದುಕೊಂಡಿದ್ದೇವೆ. ಆದ್ದರಿಂದ, ನಮಗೆ ತೀರ್ಪಿನಲ್ಲಿ ಅನುಕೂಲವಾಗಬೇಕು. 84 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುವಂತಹ ಅವಕಾಶ ಮಾಡಬೇಕೆಂದರೆ, ಬಿಜಾಪುರ ಜಿಲ್ಲೆಗೆ ಆಶೀರ್ವಾದ ಮಾಡಬೇಕೆಂದರೆ, 3ನೇ ಹಂತದ ಕಾರ್ಯಕ್ರಮಗಳು ಇವೆ. ಆ ಯೋಜನೆಗಳನ್ನು ಪೂರ್ಣಗೊಳಿಸಬೇಕು. ಇದನ್ನು ಹಿಂದೆಯೂ ಸಹ ಹೇಳಿದ್ದೇನೆ. ಬಿಜಾಪುರ ಜಿಲ್ಲೆ 5 ನದಿಗಳು ಹರಿಯುವಂತಹ ಜಿಲ್ಲೆಯಾಗಿದೆ. ಆದರೂ ಸಹ, ಇವತ್ತಿನವರೆಗೂ ಬರಗಾಲ ಪೀಡಿತ ಜಿಲ್ಲೆ ಎಂದು ಅನಿಸಿಕೊಳ್ಳುತ್ತಿದೆ. ನಮಗೆ ಈ ಯೋಜನೆಯಲ್ಲಿ ಬಹಳ ಅನುಕೂಲವಾಗುತ್ತದೆ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ. ಇದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಮನವಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗಾಗಲೇ ಮಾತನಾಡಿದಂತಹ ಸದಸ್ಯರು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನ್ಯಾಯಾಧೀಕರಣದ ಬಗ್ಗೆ, ಒಂದರಿಂದ ಮೂರನೇ ಹಂತದವರೆಗೆ ಸಾಕಷ್ಟು ಮನವರಿಕೆ ಮಾಡಿಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಇಲ್ಲಿ ಒಂದು ಸುದೈವ ಏನೆಂದರೆ, ಕಳೆದ ಎರಡು ಬಾರಿಯಿಂದ ಜಲ ಸಂಪನ್ಮೂಲ ಇಲಾಖೆಯ ಸಚಿವ ಸ್ಥಾನ ನಮ್ಮ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯವರ ಕೈಯಲ್ಲಿದೆ. ಬಿಜಾಪುರ ಜಿಲ್ಲೆಯಲ್ಲಿ ಬಹುಶಃ ನಮ್ಮ ರಾಜ್ಯದಲ್ಲಿಯೇ ಅಷ್ಟು ಕೆರೆಗಳಿಗೆ ನೀರನ್ನು ತುಂಬಿಸುವಂತಹ ಕಾರ್ಯಕ್ರಮ ಎಲ್ಲೆಲ್ಲಿಯೂ ಆಗಿಲ್ಲ. ಯಾವ ಜಿಲ್ಲೆಗಳಲ್ಲಿಯೂ ಆಗಿಲ್ಲ. ಸಾಕಷ್ಟು ಅನುಕೂಲವಾಗಿದೆ. ಅವರು ಭೂಮಿಗಳನ್ನು ಕಳೆದುಕೊಂಡಿದ್ದಾರೆ. ನಮಗೂ ಕೂಡ ಕೆರೆಗಳಿಗೆ ನೀರು ತುಂಬಿಸುವ ಕೆಲಸವಾದ್ದರಿಂದ ಬಹಳ ಸಂತೋಷವಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾವು ಕಳೆದ ನಾಲ್ಕಾರು ವರ್ಷಗಳಿಂದ ಪ್ರತಿಯೊಂದು ಸದನದಲ್ಲಿಯೂ ಆಲಮಟ್ಟಿ ಜಲಾಶಯದ ಗೇಟ್‌ನ್ನು 519.6 ರಿಂದ 524.256 ರಷ್ಟು ಎತ್ತರಕ್ಕೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದೇವೆ. ಪ್ರತಿಯೊಂದು ಬಾರಿಯೂ ಏನಾದರೊಂದು ಉತ್ತರವನ್ನು ಹೇಳುತ್ತಾರೆ. ಇದನ್ನು ಹೀಗೆ ಮುಂದಕ್ಕೆ ಹಾಕುತ್ತಾ ಹೋದರೆ, ಇದರಿಂದ ಏನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಯೋಜನವಾಗುತ್ತದೆ? ಇದನ್ನುಎಷ್ಟು ದಿವಸಗಳ ಕಾಲ ಮುಂದಕ್ಕೆ ಹಾಕುವುದಕ್ಕೆ ಆಗುತ್ತದೆ? ಇದಕ್ಕೆ ಒಂದು time limit ತರಬೇಕಲ್ಲವೇ? ಇವತ್ತು ಹಣ ಇಲ್ಲ. ಹೌದು. ಹಣ ಇಲ್ಲವೆಂದರೆ, ಅದಕ್ಕೆ ಏನು ಮಾಡಬೇಕೆಂದು ವಿಚಾರ ಮಾಡಬೇಕು ಅಲ್ಲವೇ? ಮಾನ್ಯ ನೀರಾವರಿ ಸಚಿವರು ಈಗ ಒಂದು project ಅನ್ನು ಮಾಡಬೇಕಾದರೆ, 65 ಸಾವಿರ ಕೋಟಿ ರೂಪಾಯಿಗಳು ಆಗುತ್ತದೆಂದು ಹೇಳಿದರು. ಬಹುಶಃ ಅವರಿಗೆ ಗೊತ್ತಿಲ್ಲವೆಂದು ಅನಿಸುತ್ತದೆ. Estimate ಗಳನ್ನು ಮಾಡುವುದನ್ನು ಕಲಿತರೆ, 2 ಲಕ್ಷ 65 ಸಾವಿರ ಕೋಟಿ ರೂಪಾಯಿಗಳು ಸಾಲುವುದಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಗಮನಕೊಡಬೇಕು. ಕಳೆದ ಬಾರಿ ಸದನದಲ್ಲಿ Re-modernisation of NRBC main distributary ಬಗ್ಗೆ ಮಾತನಾಡಿದ್ದೇವೆ. 500 ಕೋಟಿ ರೂಪಾಯಿಗಳು Unnecessary bills ಆಗುತ್ತವೆ. ಈಗ time limit ಹಾಕಲಿಲ್ಲವೆಂದರೆ, ಇದೇ ತರಹ ಆಗುತ್ತದೆ. ಇದರಿಂದ ಭ್ರಷ್ಟಾಚಾರವಾಗಿ ಇನ್ನೂ 50 ವರ್ಷಗಳು ಮುಗಿದರೂ ಸಹ, ಇದು ಆಗುವುದಿಲ್ಲ.

**(ಮುಂದು.,)**

**(703) 15-09-2021 (1.50) ಎಂವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ ಇಟಗಿ (ಮುಂದು..):-**

ಇವತ್ತು ತಾವು ಹೇಳಿದಂತೆ ನಾನು *Kaleshwaram Lift Irrigation Project* (K.L.I.P.,) ಗೆ ಹೋಗಿ ಅದನ್ನು ನೋಡಿಕೊಂಡು ಬಂದಿದ್ದೇನೆ. ಅದು ಒಂದು ವಿವಿಧೋದ್ದೇಶ ಯೋಜನೆ. ಅಂದರೆ, ಒಂದನೆಯದು, irrigation. ಎರಡನೆಯದು, drinking water. ಮೂರನೆಯದು, power generation. ನಾಲ್ಕನೆಯದು, transportation. ಅಲ್ಲಿ ಎಲ್ಲಾ ವ್ಯವಸ್ಥಿತವಾಗಿ ಆಗಿದೆ. ಅದನ್ನು ಕೂಡ ಇವರ ರೀತಿ ಬಿಟ್ಟರೆ ಒಂದು ಲಕ್ಷದ ಇಪ್ಪತ್ತು ಸಾವಿರ ಕೋಟಿ ಹೋಗಿ ಎರಡು ಲಕ್ಷದ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಆಗುತ್ತಿತ್ತು. ಆದರೆ, ಅವರಿಗೆ ಸಮಯದ ಪರಿಮಿತಿಯನ್ನು ನೀಡಿದರು. ಅಂದರೆ, ಏನೇ ಆದರೂ ಸಹ ಆ ಸಮಯದ ಒಳಗೆ ಆಗಬೇಕು. ಅದಕ್ಕೆ ಆ project ಅಲ್ಲಿಗೆ restrict ಆಯಿತು. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಅದಕ್ಕೆ ಸಂಬಂಧಪಟ್ಟಂತೆ ಕೆಲವು ಅಂಕಿಅಂಶಗಳನ್ನು ಹೇಳಿದರು. ನಮ್ಮ ರಾಜ್ಯಕ್ಕೆ 730 ಟಿ.ಎಂ.ಸಿ., ನೀರು ಹಂಚಿಕೆಯಾಗಿದೆ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಇಂತಿಷ್ಟು ನೀರು ಹಂಚಿಕೆಯಾಗಿದೆ ಎಂದು ಹೇಳಿದರು. ಇವತ್ತಿನ ದಿವಸ ನಮಗೆ ಹಂಚಿಕೆಯಾಗಿರುವ 730 ಟಿ.ಎಂ.ಸಿ., ನೀರನ್ನು

ಎಲ್ಲೆಲ್ಲಿ ಉಪಯೋಗ ಮಾಡುತ್ತೇವೆಂದು ಗೊತ್ತಾಗಬೇಕಲ್ಲವೇ? ಹಿಂದೆ ಉಪ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಲಕ್ಷ್ಮಣ ಸವದಿಯವರು ಜಿಲ್ಲೆಯ ಜಿಲ್ಲಾ ಮಂತ್ರಿಗಳಾಗಿದ್ದರು. ಅವರು ಅಲ್ಲಿಗೆ ಬಂದ ತಕ್ಷಣ ತುಂಗಭದ್ರಾದಿಂದ ಅವರಿಗೆ protest ಆಯಿತು. ಅದು ಸಹ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಬರುತ್ತದೆ. ಈಗ ಆಗಿರತಕ್ಕಂಥ ಯೋಜನೆಗಳಿಗೆ ನೀರು ಸಾಕಾಗುತ್ತಿಲ್ಲ. ಉದಾಹರಣೆಗೆ; ಮಾನ್ಯ ಸದಸ್ಯರು ಹೇಳಿದಂತೆ N.R.B.C., ಯನ್ನು ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರು ಮಾಡಿಸಿದರು ಎಂದು. ಆ ಕೆಲಸ ಬಹಳ ಸುಂದರವಾಗಿ ಆಗಿದೆ. ನಾನು ಅದೇ ತಾಲ್ಲೂಕಿನ ಫಲಾನುಭವಿ. ಅವರು ಏನು ಮಾಡಿದರು ಎಂದರೆ, ಅವರು ನೇರವಾಗಿ entrustment ಕೊಟ್ಟುಬಿಟ್ಟರು. ಅಂದರೆ, ಒಂದೊಂದು ಲೈನ್‌ಗೆ ಒಂದೊಂದು ಕೋಟಿ ರೂಪಾಯಿಗಳ estimate ಎಂದು. ಅಂತಿಮವಾಗಿ ಎರಡು ಕೋಟಿ, ಎರಡೂವರೆ ಕೋಟಿ ಮತ್ತು ಮೂರು ಕೋಟಿ ಎಂದು ಆಯಿತು. ಆಗ ಏನಾಯಿತು ಎಂದರೆ, ಅಷ್ಟು ಹಣದಲ್ಲಿ ಅಷ್ಟೊ ಕಿಲೋಮೀಟರ್ ಕೆಲಸ ಒಂದೇ ವರ್ಷದಲ್ಲಿ ಮುಗಿದು ಹೋಯಿತು. ಆ ರೀತಿ ಮುಗಿದಿದ್ದರಿಂದ ಎಷ್ಟೋ ಹಣ ಉಳಿತಾಯವಾಯಿತು ಮತ್ತು ಲಿಂಗಸುಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳಿಗೆ ತಕ್ಷಣ ನೀರು ಬಂತು. ಅದರ ಜೊತೆಗೆ ಕುಡಿಯುವ ನೀರು ಸಹ ಬಂತು. ಈ ರೀತಿ ಸಮಯದ ಪರಿಮಿತಿಯನ್ನು ಮಾಡದೇ ಇರುವುದಕ್ಕೆ ಈ ರೀತಿಯ ಸಮಸ್ಯೆಗಳು ಬರುತ್ತವೆ. ಈಗ ಮೊನ್ನೆ ಕಾಲುವೆಗಳಿಗೆ ಆಧುನೀಕರಣದ ಕೆಲಸ ನಡೆಯುತ್ತಿದೆ. ಅದಕ್ಕೆ ಸಾಕಷ್ಟು ಹಣವನ್ನು ಸಹ ಒದಗಿಸಿದ್ದಾರೆ. ಅಲ್ಲಿ ಈಗ ಕೆಲಸ ನಡೆಯುತ್ತಿದೆ. ರೂಪಿಸಿರುವ ಯೋಜನೆಗಳಿಗೆ ಶೇಕಡಾ 50ರಷ್ಟು ನೀರು ತಲುಪುತ್ತಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಒಂದು ಸಭೆಯನ್ನು ಮಾಡಿ ಅದರ ಬಗ್ಗೆ ಕೇಳಿ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಗ 15th, 16th, 17th and 18th Distributaries of N.R.B.C., ಈಗ ಅಲ್ಲಿ ಎಷ್ಟು command area ಇದೆ. ಈ Canal ಆಗಿ ಸುಮಾರು 20 ವರ್ಷವಾಗಿದೆ. ಇವತ್ತಿನವರೆಗೆ ಎಲ್ಲಿಯವರೆಗೆ ನೀರು ಮುಟ್ಟಿದೆ, ಎಲ್ಲಿಯವರೆಗೆ ನೀರು ಮುಟ್ಟಿಲ್ಲ ಮತ್ತು ಇನ್ನೂ ಏಕೆ ಮುಟ್ಟಿಲ್ಲ?

ಮಾನ್ಯ ಸಭಾನಾಯಕರು ಹೇಳಿದರು, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮೂವತ್ತು ಲಕ್ಷ ಎಕರೆಗೆ ನೀರಾವರಿಯಾದರೆ, ನಮ್ಮ ದೇಶಕ್ಕೆ ಇಷ್ಟು ವರಮಾನ ಬರುತ್ತದೆಂದು ಹೇಳಿದರು. ಹಾಗಾದರೆ ನೀರನ್ನು ಮುಟ್ಟಿಸಿದರೆ ಅಲ್ಲವೆ ರಾಜ್ಯಕ್ಕೆ ಮತ್ತು ದೇಶಕ್ಕೆ ವರಮಾನ ಬರುವುದು. ನೀರು ಮುಂದಕ್ಕೆ ಹೋಗುವುದೇ ಇಲ್ಲ. ಈಗ ನಮ್ಮ ಹೊಲಗಳು 16th Distributary ನಲ್ಲಿ ಇವೆ. ಆ Distributary ಗೆ ಸುಮಾರು ಇಪ್ಪತ್ತು ಸಾವಿರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಕ್ಟೇರ್ ಇದೆ. ಆದರೆ, ಆ ನೀರು ಹತ್ತು ಸಾವಿರ ಹೆಕ್ಟೇರ್‌ಗೂ ಮುಟ್ಟುವುದಿಲ್ಲ. ನಾವು ಎಷ್ಟೋ ಸಲ ಶಂಖ ಹೊಡೆದು ಇಂಜಿನಿಯರ್ ಅನ್ನು ಕೇಳಿದರೆ, ಅವರು ಆ ರೀತಿಯಾಯಿತು, ಈ ರೀತಿಯಾಯಿತು ಎಂದು tail enders ಗಳಿಗೆ ಕಥೆ ಹೇಳಿಕೊಂಡು ಕುಳಿತುಕೊಳ್ಳುತ್ತಾರೆ. ಆದುದರಿಂದ ಇದಕ್ಕೆ ಏನಾದರೂ ಮಾಡಬೇಕಲ್ಲವೇ? ನಾವು ಕೆಲವು ಪ್ರಸ್ತಾವನೆಗಳನ್ನು ನೀಡಿದ್ದೇವೆ. ಇವತ್ತು 15th, 16th, 17th and 18th Distributaries ಗಳಿಗೆ ಶೇಕಡಾ 90ರಷ್ಟಾದರೂ ನೀರು ತಲುಪಲಿ ಎಂದು ನಾವು ಒಂದು ಪ್ರಸ್ತಾಪನೆಯನ್ನು ಬರೆದು ಕೊಟ್ಟಿದ್ದೇವೆ. ಅಂದರೆ, ರಾಯಚೂರು ಮತ್ತು ಲಿಂಗಸುಗೂರು ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಕೆರೆಗಳಿವೆ. ಅವುಗಳಿಗೆ gravity ಮುಖಾಂತರ canal ಗಳಿಗೆ ಸಂಪರ್ಕ ಕೊಟ್ಟು, ಆ canal ನಿಂದ ಅದರ guage ಅನ್ನು ಎತ್ತರ ಮಾಡಿ, ಶೇಕಡಾ 90ರಷ್ಟು tail end ಆಗಲಾರದ ರೀತಿ ಮಾಡುವುದಕ್ಕೆ ನಾವು ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಆದರೆ, ಅವರು ಅದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ. ಈಗ Cost Benefit Ratio (C.B.R.,) ಅನ್ನು ನೋಡದೆ ಕೆಲವು sanction ಆಗಿಬಿಡುತ್ತವೆ. ಅದನ್ನು ಹೇಗೆ ಮಾಡುತ್ತಾರೆಂದು ನಮಗೆ ತಿಳಿಯುವುದಿಲ್ಲ. ಕಳೆದ ಹತ್ತು ವರ್ಷದಿಂದ ನೀರನ್ನು ಹಂಚಿಕೆ ಮಾಡಿದ್ದಾರೆ. ಮುಂದಿನ ವರ್ಷ ಒಂದು ಕಡೆ ತೆಗೆದು ಮತ್ತೊಂದಕ್ಕೆ ಹಂಚಿಕೆ ಮಾಡುತ್ತಾರೆ. ಆದುದರಿಂದ ಇದಕ್ಕೆ ಏನಾದರೂ ವೈಜ್ಞಾನಿಕವಾಗಿ ಬೇಕಲ್ಲವೇ? ನೀರು ಇದ್ದರೆ pressure ಬರುತ್ತದೆ. ಉದಾಹರಣೆಗೆ; ಒಂದು ರೊಟ್ಟಿಯನ್ನು ಕಸಿದುಕೊಂಡು ಹೋದರೆ, ಆಗ ಯಾರ ಹೊಟ್ಟೆಯೂ ತುಂಬುವುದಿಲ್ಲ. ಈ ದಿನ ಆ ರೀತಿಯ ಪರಿಸ್ಥಿತಿ ಇದೆ. ಆದುದರಿಂದ ಇದಕ್ಕೆ defunct ಆಗುತ್ತಿದೆ. ಈ ಯೋಜನೆಗಳಿಗೆ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿ, ಜನರಿಗೆ ನೀರು ಕೊಡಬೇಕೆಂದು ಮಾಡಿದ್ದೇವೆ. ಇದರಿಂದ ಈ ಯೋಜನೆಗಳು defunct ಆಗುವುದು ಇದರಿಂದಲೇ. ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ, ಒಂದು ಕೆರೆಯಿಂದ ಮತ್ತೊಂದು ಕೆರೆಗೆ, ಒಂದು distributary ನಿಂದ ಮತ್ತೊಂದು distributary ಗೆ ಹೆಚ್ಚಿಗೆ lift irrigation ಮಾಡುತ್ತೇವೆ. ಏಕೆಂದರೆ, 90% we need it for drinking water only. ಇನ್ನು ಹತ್ತು ಹದಿನೈದು ವರ್ಷವಾದ ಮೇಲೆ ಯಾವ ಹೊಲಗಳಿಗೂ ಸಹ ನೀರು ಸಿಗುವುದಿಲ್ಲ. ನಮಗೆ ಕೇವಲ ಕುಡಿಯುವುದಕ್ಕೆ ನೀರು ಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಸುಮಾರು ಎಂಟರಿಂದ ಹತ್ತು ಜಿಲ್ಲೆಗಳು ಕುಡಿಯುವ ನೀರಿಗೆ ಅವಲಂಬನೆಯಾಗಿವೆ. ಈ ಹಿಂದೆ ಒಮ್ಮೆ ರಾಯಚೂರು ಜಿಲ್ಲೆಗೆ ನೀರು ಬಿಡಿಸಿಕೊಂಡು ಬಿಟ್ಟೆವು. ಆಗ ಮಾಲಿಂಗಪುರ ಮತ್ತು ಬಿಳಗಿಯಲ್ಲಿ ನೀರು ಇಲ್ಲದೆ ಗಲಾಟೆಯೋ ಗಲಾಟೆ. ಆಗ ನೀರಿಗೆ ಹಾಹಾಕಾರವಾಗಿ ಬಿಟ್ಟಿತ್ತು. ಆಗ ಒಂದೂವರೆಯಿಂದ ಎರಡು ಟಿ.ಎಂ.ಸಿ., ನೀರನ್ನು ಬಿಡಿಸಿದ್ದೆವು. ಆಗ ಎಷ್ಟು ಹಾಹಾಕಾರವಾಯಿತು ಎಂದರೆ ಅಲ್ಲಿ ಪ್ರಾಣಿಗಳು ಸಹ ಹೊರಗೆ ಬಂದುಬಿಟ್ಟಿದ್ದವು. ಆಗ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತಹ ಒಂದು ಪರಿಸ್ಥಿತಿ ಇತ್ತು. ಇವುಗಳನ್ನೆಲ್ಲಾ ಮನಸ್ಸಿನಲ್ಲಿ ಇಟ್ಟುಕೊಂಡು, ತಕ್ಷಣ ಮಾಡುವಂತಹ ಯೋಜನೆಗಳು.

**ಸಭಾಪತಿಯವರು:-** ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೆ ಮೊದಲು ನಿಮ್ಮ ಭಾಷಣವನ್ನು ಮುಗಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಇವತ್ತು ನನಗೆ ಕೆಳಮನೆಯಲ್ಲಿ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಅದಕ್ಕೆ ನಾನು ಉತ್ತರ ನೀಡುವುದಕ್ಕೆ ಇಲ್ಲಿ ಕುಳಿತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಹಿರಿಯ ಸದಸ್ಯರುಗಳು rehabilitation ಬಗ್ಗೆ ಸಹ ಹೇಳಿದ್ದಾರೆ. Hats off to all the Governments, which were in power. ಅದು ಜನತಾ ದಳ ಇರಬಹುದು, ಬಿ.ಜೆ.ಪಿ., ಇರಬಹುದು ಅಥವಾ ಕಾಂಗ್ರೆಸ್ ಪಕ್ಷ ಇರಬಹುದು. ಇದಕ್ಕೆ highest rehabilitation ಮಾಡಿರುವುದು ಈ ಯೋಜನೆಗೆ. ನನಗೆ ಅನಿಸಿರುವ ಮಟ್ಟಿಗೆ ಏಷ್ಯಾದಲ್ಲೇ No.1 rehabilitation. ಇಷ್ಟು ದೊಡ್ಡ rehabilitation ಅನ್ನು ಯಾವುದಕ್ಕೂ ಸಹ ಕೊಟ್ಟಿಲ್ಲ. It is one of the biggest rehabilitations done by any Government. A very good package was given. ಅದರ ಬಗ್ಗೆ ಎರಡು ಮಾತಿಲ್ಲ. ಇದನ್ನು ಎಲ್ಲಾ ಸರ್ಕಾರದವರು ಮಾಡಿದ್ದಾರೆ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಹೇಳಿದಂತೆ ಈ ಹಿಂದೆ ನಾರಾಯಣಪುರದ ಯೋಜನೆಗೆ ಪರಿಹಾರ ಕೇವಲ ಮೂರು ಸಾವಿರ ರೂಪಾಯಿಗಳಿಗೆ ಮುಗಿದು ಹೋಗಿದೆ. ಈಗ ಅಲ್ಲಿಯ ಬಗ್ಗೆಯೂ ಸ್ವಲ್ಪ ನೋಡಬೇಕಲ್ಲವೇ? ನಾವು ನೋಡಿದಂತೆ ಇಪ್ಪತ್ತು ಸಾವಿರ ರೂಪಾಯಿಗಳು ಇತ್ತು. ಈಗ ಅದು ಆರು ಲಕ್ಷದಿಂದ ಏಳು ಲಕ್ಷಕ್ಕೆ ಬಂದಿದೆ. ಯೋಜನೆಗಳಿಗೆ ನಮ್ಮ ಜಮೀನುಗಳು ಹೋದಾಗ ಪರಿಹಾರ ಕೇವಲ ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ ಇತ್ತು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಪಾಟೀಲ ಇಟಗಿಯವರೆ, ನಾರಾಯಣಪುರ ಜಲಾಶಯದ ಯೋಜನೆ ಮಾತ್ರ ಮೂರು ಸಾವಿರದಲ್ಲಿ ಮುಗಿದಿಲ್ಲ. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮೊದಲನೆ ಹಂತದಲ್ಲಿ ಸೊನ್ನಾ, ಹಂಚನಾಳ, ಕೋರ್ತಿ, ಕೋಲಾರ ಇವುಗಳು ನೀರಿಗೆ ಹತ್ತಿರ ಇದ್ದುದ್ದರಿಂದ ಮುಳುಗಡೆಯಾದಾಗ ಅವರಿಗೂ ಕೇವಲ ಎರಡೂವರೆಯಿಂದ ಮೂರು ಸಾವಿರ ರೂಪಾಯಿ ಪರಿಹಾರ ಸಿಕ್ಕಿದೆ. ಮಾನ್ಯ ಸದಸ್ಯರ ತಾಲ್ಲೂಕಿನಲ್ಲಿ ಬಹಳಷ್ಟು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಕರು ಇದ್ದಾರೆ. ಅವರ ಜಮೀನುಗಳು ಸಹ ಮುಳುಗಡೆಯಾದವು. ಅವರಿಗೂ ಸಹ ಎರಡು ಸಾವಿರ, ಎರಡೂವರೆ ಸಾವಿರ ಮತ್ತು ಮೂರು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಪರಿಹಾರ ಸಿಕ್ಕಿಲ್ಲ. ಯಾವಾಗ ಹೆಚ್ಚಿನ ಪರಿಹಾರ ಸಿಕ್ಕಿತು ಎಂದರೆ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಜೆ.ಹೆಚ್.ಪಟೇಲರು ರಾಜ್ಯದ ಮುಖ್ಯಮಂತ್ರಿಯಾಗಿ, ಮಾನ್ಯ ರಮೇಶ್ ಜಿಣಜಿಣಗಿಯವರು ಕಂದಾಯ ಮಂತ್ರಿಗಳಾದಾಗ ಒಂದು ಸಮಿತಿಯನ್ನು ನೇಮಕ ಮಾಡಿದಾಗ, ಆಗ ಸ್ವಲ್ಪ ಹೆಚ್ಚಿಗೆ ಪರಿಹಾರ ಸಿಕ್ಕಿತು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಒಂದು ಎಕರೆಗೆ ಸುಮಾರು 32 ನೂರು ರೂಪಾಯಿಗಳು. ಅದೆಲ್ಲವನ್ನು ಕೂಡಿದರೆ ಹತ್ತು ಸಾವಿರದ ಸಮೀಪ ಬರುತ್ತಿತ್ತು. ಮತ್ತೆ land cost ಸಹ ಆಗ ಅಷ್ಟೆ ಇತ್ತು. ಮುಂದಿನ ದಿನಗಳಲ್ಲಿ ಅದು ಒಂದೂವರೆ ಲಕ್ಷವಾಯಿತು. ಈಗ ಇಪ್ಪತ್ತೈದು-ಮೂವತ್ತು ಲಕ್ಷ ಕೊಟ್ಟರು ಜಮೀನು ಸಿಗದಂತಾಗಿದೆ. ಈಗ cost increase ಆಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಎಕರೆಗೆ ಹತ್ತು ಸಾವಿರ ರೂಪಾಯಿಯಂತೆ ಆರುನೂರು ನೂರು ಎಕರೆಗಳಷ್ಟು ಜಮೀನುಗಳು ಮಾರಾಟವಾದವು. ಆಗ ಒಂದು ಎಕರೆ ಕೇವಲ ಹತ್ತು ಸಾವಿರ ರೂಪಾಯಿ ಮಾತ್ರ ಇತ್ತು. ಆದರೆ, ಈಗ ಹತ್ತು ಲಕ್ಷ ರೂಪಾಯಿಗಳಿಗೂ ಸಹ ಜಮೀನು ಸಿಗುವುದಿಲ್ಲ. ಈಗ ಒಂದು ಎಕರೆ ಜಮೀನಿಗೆ ಇಪ್ಪತ್ತು, ಮೂವತ್ತು ಮತ್ತು ನಲವತ್ತು ಲಕ್ಷ ರೂಪಾಯಿಗಳಾಗಿದೆ. ಇದೇ ರೀತಿ ಇನ್ನು ಸ್ವಲ್ಪ ದಿವಸ ಬಿಟ್ಟರೆ ಒಂದು ಎಕರೆಗೆ ಕೋಟಿ ರೂಪಾಯಿಗಳಾಗುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಒಂದೇ ಒಂದು clarification ಬೇಕು.

**ಸಭಾಪತಿಯವರು:-** ಈಗ clarification ಬೇಡ. ನೀವು ಅದನ್ನು ಬರೆದು ಇಟ್ಟುಕೊಂಡಿರಿ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡಿ.

**ಶ್ರೀ ಬಸವರಾಜ ಪಾಟೀಲ ಇಟಗಿ:-** ಮಾನ್ಯ ಸಭಾಪತಿಯವರೆ, ನಾನು rehabilitation ಬಗ್ಗೆ ಮಾತನಾಡುತ್ತಿದ್ದೆ. ಇವತ್ತಿನ ದಿವಸ rehabilitation ಮಾಡುವುದಕ್ಕೆ ಐವತ್ತರಿಂದ ಅರವತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿಯವರೆಗೆ ಏನು ಮಾಡಿದ್ದಾರೆಂದರೆ, ಇನ್ನು ಸಾಕಷ್ಟು land acquisition ಅನ್ನು ಮಾಡಿಯೇ ಇಲ್ಲ. ಈಗ ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ನೀರು ಹರಿದು ಸುಮಾರು ಹದಿನೈದು ವರ್ಷವಾಗಿದೆ. ಆದರೆ, ಇವತ್ತಿನವರೆಗೂ ಸಹ J.M.C., (Joint Measurement Certificate) ಮಾಡಿಲ್ಲ ಹಾಗೂ ಇದಕ್ಕೆ ಯಾವೊತ್ತು ಪರಿಹಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಾರೆಂದು ಗೊತ್ತಿಲ್ಲ. ಅದಕ್ಕೆ ಸುಮ್ಮನೆ ಹಣ ಹೋಗುತ್ತದೆ, ಅವರು ಸುಮ್ಮನೆ ಕುಳಿತುಕೊಳ್ಳುತ್ತಾರೆ. ಈ ರೀತಿಯಾದಾಗ ಸರ್ಕಾರಕ್ಕೆ ಮುಂದೆ ಹೊಡೆತ ಬೀಳುತ್ತದೆ. ಅಂದಿನ ದಿನದ ಪೇಮೆಂಟ್ ಅನ್ನು ಅಂದೇ ಮಾಡಿದ್ದರೆ, ಅಂದರೆ ಹದಿನೈದು ವರ್ಷದ ಹಿಂದೆ ಎಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಂದು ಎಕರೆ ಜಮೀನು ಸಿಗುತ್ತಿತ್ತು. ಆದರೆ, ಇವತ್ತು ಏಳು ಲಕ್ಷ ರೂಪಾಯಿಗಿಂತ ಹೆಚ್ಚಿಗೆ ಇದೆ. ನಾವು ಇವತ್ತಿನ ದಿವಸ ಯಾವುದೇ ರೀತಿಯ ಯೋಜನೆಗಳನ್ನು ಮಾಡಬೇಕಾದರೆ, ಅದಕ್ಕೆ ಇಷ್ಟು ಜಮೀನು ಬೇಕು ಎಂದು ಇರುತ್ತದೆ. ನಾವು NoC ಯನ್ನು distribute ಮಾಡುವಂತಹ ಕಾಲಕ್ಕೆ 90% for creating irrigation potential and 10% for land acquisition - ಈ ರೀತಿಯ ratio ಪ್ರಕಾರ ಹೋಗಬೇಕು. ಆ ಯೋಜನೆಯೂ ಮುಗಿಯಬೇಕು ಮತ್ತು ಭೂಸ್ವಾಧೀನ ಪ್ರಕ್ರಿಯೆಯೂ ಮುಗಿಯಬೇಕು. ಆ ರೀತಿ ಮಾಡಿದಾಗ ಮಾತ್ರ ಆಗುತ್ತದೆ. ಆದರೆ, ಇವರು ಭೂಸ್ವಾಧೀನ ಪ್ರಕ್ರಿಯೆಯನ್ನು ಮೂಲೆಗೆ ಹಾಕಿಬಿಟ್ಟಿದ್ದಾರೆ. ಕೇವಲ irrigation potential ಎಂದು ಹೇಳಿದರು.

**(ಮುಂದು...**

(704) & (705)15.09.2021 02.00 LL-GR -YL-MD

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು...)**

ನೂರಾರು ಕೋಟಿ ರೂಪಾಯಿ ಖರ್ಚು ಮಾಡಿ ಕೆನಾಲ್‌ಗಳನ್ನು ನಿರ್ಮಾಣ ಮಾಡಿದ್ದು, ಅವುಗಳ ನಡುವೆ ಡ್ರಾಪ್‌ಗಳನ್ನು ಮಾಡಿರುವುದಿಲ್ಲ. ಇದರಿಂದಾಗಿ, ಈ ಎಲ್ಲಾ ಯೋಜನೆಗಳು ವೇಸ್ಟ್ ಆಗಿರುತ್ತವೆ. ಇಂತಹ ಯೋಜನೆಗಳಲ್ಲಿ ಇಂಜಿನಿಯರ್‌ಗಳಾದವರು ಮೈಂಡ್ ಅಪ್ಲೈ ಮಾಡುವುದಿಲ್ಲ. ಅಲ್ಲದೇ ಅವರಿಗೆ, ಆ ರೀತಿಯ ಮೈಂಡ್ ಅಪ್ಲಿಕೇಶನ್ ಇರುವುದೇ ಇಲ್ಲ. 4 ವರ್ಷದ ಹಿಂದೆ ಮೊದಲು ಕೆನಾಲ್‌ಗಳನ್ನು ನಿರ್ಮಾಣ ಮಾಡಿ ಕನೆಕ್ಟಿವಿಟಿ ನಿರ್ಮಾಣ ಮಾಡಿದ್ದರೆ ನೀರು ಹರಿಯುತ್ತಿತ್ತು. ಇದರಿಂದಾಗಿ, atleast revenue to the exchequer ಆದರೂ ಬರುತ್ತದೆ. ಒಟ್ಟಿನಲ್ಲಿ ಅಧಿಕಾರಿಗಳು ಯಾವುದೇ ನೀರಾವರಿ ಯೋಜನೆಗಳಲ್ಲಿ ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದರಿಂದ, ಎಲ್ಲಾ ಯೋಜನೆಗಳು ಈ ರೀತಿ ಆಗುತ್ತಿರುತ್ತವೆ.

ಈ ವಿಷಯದಲ್ಲಿ ತಮ್ಮ ಮುಖಾಂತರ ನನ್ನ ಮನವಿ ಏನೆಂದರೆ, ನೀರಾವರಿ ಯೋಜನೆಗಾಗಿ ಇಲ್ಲಿಯವರೆಗೆ ಭೂಸ್ವಾಧೀನ ಪಡಿಸಿಕೊಂಡಿರುವುದಕ್ಕೆ ಮೊದಲು ಪರಿಹಾರ ಹಣ ಬಿಡುಗಡೆ ಮಾಡಬೇಕು. ಇಲ್ಲದೇ ಹೋದರೆ, ಮುಂದಿನ ಯಾವುದೇ ಹೊಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ಹೋದರೆ ರೈತರು ಮೊದಲು ಪರಿಹಾರ ಹಣ ನೀಡದೇ ಇದ್ದರೆ ಜಮೀನಿಗೆ ಕಾಲಿಡಬಾರದೆಂದು ಹೇಳುವ ಪರಿಸ್ಥಿತಿ ಇವೊತ್ತಿನ ದಿವಸ ನಿರ್ಮಾಣ ಆಗಿರುತ್ತದೆ. ಸ್ವತಃ ನಮ್ಮ ಜಮೀನನ್ನು ನೀರಾವರಿ ಯೋಜನೆಗಾಗಿ ಸುಮಾರು 15 ವರ್ಷಗಳ ಹಿಂದೆ ಭೂಸ್ವಾಧೀನಪಡಿಸಿಕೊಂಡಿದ್ದು, ಇವೊತ್ತಿನವರೆಗೂ ಆ ಜಮೀನಿನ ಜೆ.ಎಂ.ಸಿ., ಆಗಿರುವುದಿಲ್ಲ. ಮೇನ್ ಕೆನಾಲ್‌ನಲ್ಲಿ ಮಾತ್ರ ಪರಿಹಾರ ನೀಡಿದ್ದು, ಡಿಸ್ಟ್ರಿಬ್ಯೂಟರೀಸ್ ಮತ್ತು ಲ್ಯಾಟರಲ್‌ಗಳಿಗೆ ಜೆ.ಎಂ.ಸಿ., ಮಾಡಿರುವುದಿಲ್ಲ. ಈ ಬಗ್ಗೆ ನಾವು ಸಂಬಂಧಪಟ್ಟವರಿಗೆ ಸಾಕಷ್ಟು ಅರ್ಜಿಗಳನ್ನು ಸಹ ಕೊಟ್ಟಿರುತ್ತೇವೆ. ಇದರ ಜೊತೆಗೆ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ K.L.I.S., ಯೋಜನೆ ಏನಿದೆ, ಅದರಲ್ಲಿ ಮೂಲಭೂತವಾಗಿ ನೀರನ್ನು ಉಪಯೋಗ ಮಾಡುವುದಕ್ಕೆ ಸಹ ಒಂದು ಟೆಕ್ನಾಲಜಿ ಮಾಡಬೇಕೆಂದು ಈಗಾಗಲೇ ನಿರ್ಧಾರ ಮಾಡಿದ್ದಾರೆ. ಆ ಟೆಕ್ನಾಲಜಿಯನ್ನು ನಮ್ಮ ರಾಜ್ಯದಲ್ಲಿಯೂ ಸಹ ಉಪಯೋಗ ಮಾಡಿದ್ದು, ಅದರಲ್ಲಿ ಅಷ್ಟು ಸಫಲತೆಯನ್ನು ಸಾಧಿಸಿರುವುದಿಲ್ಲ. ಡ್ರಿಪ್ ಇರಿಗೇಷನ್‌ಗಾಗಿ ಮಸ್ಕಿ ತಾಲ್ಲೂಕಿನಲ್ಲಿ 900 ಕೋಟಿ ರೂಪಾಯಿಯ ಒಂದು pilot project ಮಾಡಿದ್ದು, ನಂದವಡಗಿಯಲ್ಲಿಯೂ ಸಹ ಲಿಫ್ಟ್ ಇರಿಗೇಷನ್ ಎಂದು ಒಂದು ಯೋಜನೆ ಮಾಡಿರುತ್ತಾರೆ. ಆದರೆ, ಅವುಗಳಲ್ಲಿ ಅಷ್ಟು ಸಫಲತೆಯನ್ನು ಸಾಧಿಸಿರುವುದಿಲ್ಲ. ಇಂತಹ ವಿಷಯಗಳಲ್ಲಿ ರೈತರನ್ನು ಸಹ ಎಜುಕೇಟ್ ಮಾಡಬೇಕು. ಏಕೆಂದರೆ, ನೀರಾವರಿ ಯೋಜನೆಗಳಿಂದ ನೀರು ಕೊಡುವುದು ಮತ್ತು ಆ ನೀರನ್ನು ಬಳಕೆ ಮಾಡುವುದು ಸಹ ಅಷ್ಟೇ ಮುಖ್ಯವಾಗಿರುತ್ತದೆ. ನಮ್ಮ ಭಾಗದಲ್ಲಿ ಮಳೆ ಬಂದಾಗ ಕೆನಾಲ್‌ಗಳಿಗೆ ನೀರು ಬಿಡುತ್ತಾರೆ. ಅದರಲ್ಲಿಯೂ ಹೆಚ್ಚು ಮಳೆ ಬರುವಂತಹ ಸಂದರ್ಭದಲ್ಲಿ ಮಾತ್ರ ಟೇಲ್ ಎಂಡ್‌ಗೆ ನೀರು ಬರುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಮಗೆಲ್ಲಾ ತಿಳಿದಿರುವಂತೆ ಆರ್ ಅಂಡ್ ಆರ್ ಸೆಂಟರ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಪ್ರವಾಹದಿಂದ ಯಾರು ಮನೆಗಳನ್ನು ಕಳೆದುಕೊಂಡಿರುತ್ತಾರೆ, ಅವರಿಗೆ ಪರಿಹಾರ ಹಣ ಮತ್ತು ಇತರೆ ಪರಿಹಾರವನ್ನು ಸಹ ಒದಗಿಸಿರುತ್ತಾರೆ. ಆದರೆ, ಅನೇಕ ಕಡೆಗಳಲ್ಲಿ ಗ್ರಾಮ ಪಂಚಾಯಿತಿ ಗ್ರಾಮ ಠಾಣಾಗಳಲ್ಲಿ ಅನೇಕ ಬಡವರು ಅಂದರೆ, ಎಸ್.ಸಿ./ಎಸ್.ಟಿ. ಇರಬಹುದು ಅಥವಾ ಇತರ ಬಡವರು ಇರಬಹುದು. ಅವರೆಲ್ಲರೂ ಸಹ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಠಾಣಾಗಳಲ್ಲಿ ಸಣ್ಣ-ಸಣ್ಣ ಶೆಡ್‌ಗಳನ್ನು ನಿರ್ಮಾಣ ಮಾಡಿಕೊಂಡು ವಾಸ್ತವ್ಯ ಇರುತ್ತಾರೆ. ಅದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುತ್ತಾರೆಂದು ಅವರಿಗೆ ಪರಿಹಾರ ನೀಡಿರುವುದಿಲ್ಲ. ಅದು ಬೇರೆ ವಿಚಾರ. ಆದರೆ, ಅವರಿಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎಲ್ಲಿಯಾದರೂ ಪುನರ್ವಸತಿ ಆದ ಮೇಲೆ ಆ ಊರು ಖಾಲಿಯಾಗಿರುತ್ತದೆ. ಆ ಬಡವರಿಗೆ ಅಲ್ಲಿ ಯಾವುದೇ ಸೈಟು ಇರುವುದಿಲ್ಲ. ನಮ್ಮ ಭಾಗದವರೇ ನೀರಾವರಿ ಮಂತ್ರಿಗಳು ಇರುವುದರಿಂದ ನಾನು ಅವರಲ್ಲಿ ವಿನಂತಿಸುವುದೇನೆಂದರೆ, ಯಾರು ಗ್ರಾಮ ಠಾಣಾದಲ್ಲಿರುವಂತಹ ಬಡವರು ಪುನರ್ವಸತಿ ಕೇಂದ್ರಗಳಿಗೆ ಶಿಫ್ಟ್ ಆಗಿರುತ್ತಾರೆ, ಅಲ್ಲಿ ಇನ್ನು 10-15 ಎಕರೆ ಹೆಚ್ಚುವರಿ ಜಮೀನನ್ನು ಕಾಯ್ದಿರಿಸಿದ್ದು, ಅದನ್ನು ಯಾರಿಗೂ ಕೊಟ್ಟಿರುವುದಿಲ್ಲ. ಅನೇಕ ಕಡೆ ಮನೆ ಮತ್ತು ಜಮೀನು ಇಲ್ಲದವರಿಗೆ ಸರ್ಕಾರದಿಂದ ಮನೆ ಮತ್ತು ಜಮೀನು ಸಹ ನೀಡಲಾಗಿರುತ್ತದೆ. ಆದರೆ, ಇಂತಹ ನಿರ್ಗತಿಕರಾದವರಿಗೆ ಆ ರೀತಿಯ ಪರಿಹಾರ ನೀಡಿರುವುದಿಲ್ಲ. ಆದುದರಿಂದ, ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿಸುವುದೇನೆಂದರೆ, ಬಡವರ ಪರವಾಗಿ ಹೆಚ್ಚು ಮುತುವರ್ಜಿ ವಹಿಸಿ ಎಲ್ಲಿ ಜಾಗಗಳನ್ನು ಕಾದಿರಿಸಿದ್ದಾರೆ ಅಲ್ಲಿ ನಿರ್ಗತಿಕರಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭೂಸ್ವಾಧೀನ ಪ್ರಕ್ರಿಯೆ ಮತ್ತು ಪುನರ್ವಸತಿ ಬಗ್ಗೆ ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಅದರಲ್ಲಿ ಅಕ್ಷರಶಃ ನಿಜ ಇದೆ. ಏಕೆಂದರೆ, ಪ್ರವಾಹ ಯಾವುದೋ ಒಂದು ದಿವಸ ಬರುವುದಲ್ಲ. ಅದು ಪ್ರತಿ ವರ್ಷ ಬರುತ್ತದೆ. ಸ್ವತಃ ನನ್ನ ಮನೆ ಮತ್ತು ಹೊಲ ಕೃಷ್ಣಾ ಮೇಲ್ದಂಡೆ ಯೋಜನೆಯ ದಂಡೆಗೆ ಇರುತ್ತದೆ. ಪ್ರತಿ ವರ್ಷ ನಾವುಗಳು 15 ದಿವಸಗಳ ಕಾಲ ಊರು ಬಿಟ್ಟು ರಾಯಚೂರಿನಲ್ಲಿ ಇದ್ದು, ನೀರು ಇಳಿದ ನಂತರವೇ ನಾವು ವಾಪಸ್ಸು ಬರುತ್ತೇವೆ. ಆ ಪರಿಸ್ಥಿತಿ ಇರುತ್ತದೆ. ಡ್ಯಾಮ್ ರೆಗ್ಯುಲೇಷನ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ, ಜಲಾಶಯಗಳಲ್ಲಿ ಸುಮಾರು 10-15 ದಿವಸ ನೀರು ನಿರ್ವಹಣೆ ಮಾಡುತ್ತಾರೆಂದು ಹೇಳಿರುವುದರಲ್ಲಿ ಸತ್ಯ ಇದೆ. ಆದರೆ, ಇಲ್ಲಿ ಏನಾಗುತ್ತದೆಯೆಂದರೆ, ಪ್ರವಾಹ ಮೊದಲು ಪ್ರಾರಂಭವಾಗುವುದು ಬೆಳಗಾವಿ ಜಿಲ್ಲೆಯಲ್ಲಿ. ನಮ್ಮ ಎಚ್ಚರಿಕೆ ಯಾವಾಗ ಪ್ರಾರಂಭ ಆಗುತ್ತದೆಯೆಂದರೆ, ಧೂದ್‌ಗಂಗಾ ಮತ್ತು ವೇದಗಂಗಾ ನದಿಗಳಲ್ಲಿ ಪ್ರವಾಹ ಕಾಣಿಸಿಕೊಂಡಾಗ ನಮಗೆ ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ನಮಗೆ ಇನ್ನು 8 ದಿನಗಳ ನಂತರ ನಮ್ಮ ಪಾಳಿ ಇದೆಯೆಂದು ಗೊತ್ತಾಗುತ್ತದೆ. ಅಲ್ಲಿಯವರೆಗೂ ನಾವು ಅದು ಮುಳುಗಿತು, ಇದು ಮುಳುಗಿತು ಎಂದು ನೋಡುತ್ತಿರುತ್ತೇವೆ. ಆದರೆ, ಮುಂದಿನ 8 ದಿನಗಳಲ್ಲಿ ನಮ್ಮ ಮನೆ ಮುಳುಗುತ್ತದೆ ಎಂಬ ಅರಿವೇ ಇರುವುದಿಲ್ಲ. ಏಕೆಂದರೆ, ಘಟಪ್ರಭ, ಮಲಪ್ರಭ, ಧೂದ್‌ಗಂಗಾ, ವೇದಗಂಗಾ, ಪಂಚಗಂಗಾ ಎಲ್ಲಾ ನದಿಗಳು ಸೇರಿ ಆಲಮಟ್ಟಿ ಮುಖಾಂತರ ನಮಗೆ ಪ್ರವಾಹ ಬರುತ್ತದೆ. ಇದರ ಜೊತೆಗೆ, ಮಾರ್ಕಂಡೇಯ, ಹಿಪ್ಪರಗಿ ಬ್ಯಾರೇಜ್‌ನಿಂದಲೂ ಸಹ ಪ್ರವಾಹ ಸೇರಿದಂತೆ, ಎಲ್ಲವೂ ಸೇರಿ ಕೊನೆಯದಾಗಿ ನಮಗೆ ಪ್ರವಾಹ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರಿಂದಾಗಿ, ಮೊದಲು ಪ್ರವಾಹ ಬಂದಂತಹ ಭಾಗದಲ್ಲಿ ಕಡಿಮೆ ಹಾನಿಯಾಗುತ್ತದೆ. ಆದರೆ, ಕೊನೆಯದಾಗಿ ನಮಗೆ ಬರುವಂತಹ ಪ್ರವಾಹದಿಂದಾಗಿ ಊರುಗಳೇ ಮುಚ್ಚುವಂತಹ ಪರಿಸ್ಥಿತಿ ಇರುತ್ತದೆ. ಏಕೆಂದರೆ, ಗೂಗಲ್ ಬ್ಯಾರೇಜ್ ಬಳಿ ಈ ಬಾರಿ ಪ್ರವಾಹ ಬಂದಾಗ, 4 ಲಕ್ಷದ 60 ಸಾವಿರದಿಂದ 70 ಸಾವಿರ ಕ್ಯೂಸೆಕ್ಸ್ ನೀರು ಹಾದು ಹೋಗಿರುತ್ತದೆ. 2009 ರಲ್ಲಿ ಮತ್ತು 2019ರಲ್ಲಿ ಜುರಾಲಾ ಪ್ರಾಜೆಕ್ಟ್‌ನಿಂದ 14 ಲಕ್ಷ ಕ್ಯೂಸೆಕ್ಸ್ ನೀರು ಹಾದು ಹೋಗಿರುತ್ತದೆ. ಆ ಸಂದರ್ಭದಲ್ಲಿ ಅರ್ಧಕ್ಕೆ ಅರ್ಧ ಹಳ್ಳಿ ಮುಳುಗಡೆಯಾಗಿರುತ್ತದೆ. ಜೊತೆಗೆ, ಆ ಸಂದರ್ಭದಲ್ಲಿ ಮಂತ್ರಾಲಯ ಸೇರಿದಂತೆ ಬಹುತೇಕ ಪ್ರದೇಶ ಮುಳುಗಡೆಯಾಗಿರುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಂತ್ರಿಗಳು ನಮ್ಮ ಬಳಿ ಬಂದಾಗ, ಎಲ್ಲಾ ಸಂತ್ರಸ್ಥರು ಅವರ ಬಳಿ ಹೋಗಿ ಹೇಳಿದಾಗ ತಕ್ಷಣವೇ ಅವುಗಳನ್ನು 'shifting villages' ಎಂದು ಪರಿಗಣನೆ ಮಾಡಿರುತ್ತಾರೆ. Project affected villages are also like shifting villages. ಈ 'shifting villages' ಎಂದು ಮಾಡಿದ ಮೇಲೆ ಸುಮಾರು 10 ವರ್ಷ ಕಳೆದರೂ ಸ್ಥಳಾಂತರ ಮಾಡಿರುವುದಿಲ್ಲ. ಅಲ್ಲಿ ಮನೆಗಳನ್ನು ನಿರ್ಮಿಸಿದ್ದರೂ ಸಹ ಅವುಗಳಿಗೆ ಬಾಗಿಲು-ಕಿಟಕಿ ಇರುವುದಿಲ್ಲ. ಇವೆಲ್ಲವನ್ನೂ ಒಂದು ಪ್ರಾಜೆಕ್ಟ್‌ನಲ್ಲಿ ಸೇರಿಸಿ ತ್ವರಿತಗತಿಯಲ್ಲಿ ಮಾಡಿದಾಗ ಮಾತ್ರ ಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಹಾಗಾಗಿ, ಸರ್ಕಾರಕ್ಕೆ ನನ್ನ ಮನವಿ ಏನೆಂದರೆ,

(**ಗೊಂದಲ**)

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ನೀರಾವರಿ ಯೋಜನೆಯ ವಿಚಾರವಾಗಿದ್ದು, ಅದನ್ನು ಕೇಳುವುದಕ್ಕೆ ಮಂತ್ರಿಗಳು ಸದನದಲ್ಲಿ ಹಾಜರಿರುವುದಿಲ್ಲವೆಂದರೆ, ನಾವು ಏತಕ್ಕೆ ಮಾತನಾಡಬೇಕು? ಹಾಗಾಗಿ, ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ. ದಯಮಾಡಿ ಭೋಜನ ವಿರಾಮದ ನಂತರ ಚರ್ಚೆ ಮಾಡುವುದಕ್ಕೆ ಮತ್ತೊಂದು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ನಮ್ಮ ಉತ್ತರ ಕರ್ನಾಟಕ ಭಾಗದ ಜನರ ಸಾವು-ಬದುಕಿನ ವಿಚಾರವಾಗಿದ್ದು, ಇದಕ್ಕೆ ಯಾವುದೇ ಸಮಯ ನಿಗದಿ ಮಾಡಬೇಡಿ. Please give them full time.

(**ಗೊಂದಲ**)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾತನಾಡಲು ನನಗೆ ಒಂದು ಅವಕಾಶ ಕೊಡಿ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮುಂದೂಡಿ ನಂತರ ಇದರ ಬಗ್ಗೆ ಚರ್ಚೆ ಮುಂದುವರೆಸಬಹುದು. ಏಕೆಂದರೆ, ಸದನದಲ್ಲಿ ಮಂತ್ರಿಗಳು ಇಲ್ಲದೇ ಇದ್ದರೆ ನಾವು ಯಾರಿಗೆ ಮಾತನಾಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ. ಇಬ್ರಾಹಿಂರವರು ಬಹಳ ಹಿರಿಯ ಸದಸ್ಯರಾಗಿದ್ದು, ನಿನ್ನೆಯ ದಿವಸ ಕೂಡ ಇದೇ ರೀತಿಯ ಮಾತನಾಡಿರುತ್ತಾರೆ. ಮಾನ್ಯ ನೀರಾವರಿ ಮಂತ್ರಿಗಳು ಇಷ್ಟು ಹೊತ್ತು ಸದನದಲ್ಲಿ ಹಾಜರಿದ್ದು, ಈಗ ಒಂದು ನಿಮಿಷ ಹೊರಗಡೆ ಹೋಗಿರುತ್ತಾರೆ. ಪುನಃ ಅವರು ವಾಪಸ್ಸು ಬರುತ್ತಾರೆ.

**(ಗೊಂದಲ)**

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ನೀರಾವರಿ ಮಂತ್ರಿಗಳ ವಿರುದ್ಧ ದೂರು ನೀಡುತ್ತಿಲ್ಲ. ಅವರು ಹೋಗಿ ಬರಲಿ. ನಾನು ಭೋಜನ ವಿರಾಮದ ನಂತರ ಈ ಚರ್ಚೆಯನ್ನು ಮುಂದುವರೆಸೋಣವೆಂದು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಇಬ್ರಾಹಿಂರವರು ಪ್ರತಿ ಬಾರಿ ಇದೇ ರೀತಿ ಮಾತನಾಡುತ್ತಾರೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವರು ತಪ್ಪುಮಾಡಿದ್ದಾರೆಂದು ನಾನು ಹೇಳಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ನಾನು ಶ್ರೀಯುತ ಆಸ್ಕರ್ ಫರ್ನಾಂಡೀಸ್‌ರವರ ಅಂತಿಮ ದರ್ಶನ ಕಾರ್ಯಕ್ರಮಕ್ಕೆ ಅವರು ನಮ್ಮ ಜಿಲ್ಲೆಯವರು ಆಗಿರುವ ಕಾರಣಕ್ಕೆ ನಾನು ಹೋಗಲೇ ಬೇಕಾಗಿದ್ದರಿಂದ ಹೋಗಿದ್ದೆನು. ಆ ಸಂದರ್ಭದಲ್ಲಿ ಶ್ರೀ ಸಿ.ಎಂ. ಇಬ್ರಾಹಿಂರವರು ಮಾತನಾಡುತ್ತಾ, ಸದನದಲ್ಲಿ ಸಭಾನಾಯಕರು ಹಾಜರಿಲ್ಲ, ಹಾಗಾಗಿ ಇಲ್ಲಿ ಹಾಜರಿರುವ ಮಾನ್ಯ ಮಂತ್ರಿಗಳು ಅನಾಥ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಶುಗಳು ಎಂದು ಹೇಳಿದರೆ ಏನು ಅರ್ಥ? ಆ ರೀತಿ ಮಾತನಾಡಿದಾಗ, ಏತಕ್ಕೆ ಆ ರೀತಿ ಮಾತನಾಡಿರುತ್ತಾರೆಂದು ನಾವು ಕೇಳಬೇಕಲ್ಲವೇ?

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅಂತಹ ಸಂದರ್ಭದಲ್ಲಿ ಸದನಕ್ಕೆ ಮಂತ್ರಿಗಳನ್ನು ಯಾರು ಪರಿಚಯ ಮಾಡಿಕೊಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಂತಹ ಶಬ್ದಗಳ ಬಳಕೆಯನ್ನು ಮಾನ್ಯ ಇಬ್ರಾಹಿಂರವರು ಮಾಡಿದರೆ ಹೇಗೆ? ಆ ಶಬ್ದಗಳನ್ನು ಬೇರೆ ಯಾರಾದರೂ ಬಳಕೆ ಮಾಡಿದ್ದರೆ ಅದಕ್ಕೆ ನನ್ನ ಆಕ್ಷೇಪ ಇಲ್ಲ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಸದನಕ್ಕೆ ಹೊಸದಾಗಿ ಬಂದಂತಹ ಮಂತ್ರಿಗಳನ್ನು ಯಾರು ಪರಿಚಯ ಮಾಡಿಕೊಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹೊಸದಾಗಿ ಬಂದಂತಹ ಮಂತ್ರಿಗಳನ್ನು ಪರಿಚಯ ಮಾಡಿಕೊಡುವುದು ನನ್ನ ಜವಾಬ್ದಾರಿಯಾಗಿದೆ. ಆದರೆ, ಆ ಸಂದರ್ಭದಲ್ಲಿ ನಾನು ನನ್ನ ಜಾಗದಲ್ಲಿ ಇರುವುದಿಲ್ಲ. ಆ ಸಂದರ್ಭದಲ್ಲಿ ನಾನು ಎಲ್ಲಿ ಹೋಗಿದ್ದೇನೆ ಅಥವಾ ಏನಾಗಿದ್ದೇನೆಂಬುದನ್ನು ವಿಚಾರಿಸದೇ ಮಾನ್ಯ ಮಂತ್ರಿಗಳು ಅನಾಥ ಶಿಶುಗಳೆಂದು ಹೇಳಿದರೆ ಏನು ಅರ್ಥ? ಅವರ ಬಾಯಿಯಿಂದ ಇಂತಹ ಶಬ್ದಗಳು ಬರಬಾರದಿತ್ತೆಂದು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆ ಸಂದರ್ಭದಲ್ಲಿ ನಾನು ನನ್ನ ಅನುಮತಿ ಪಡೆದು ಹೋಗಿರುತ್ತಾರೆಂದು ನಾನು ಸದನಕ್ಕೆ ತಿಳಿಸಿರುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅನಾಥ ಶಿಶು ಎಂದು ಹೇಳಿರುವುದರಲ್ಲಿ ಏನು ತಪ್ಪಿದೆ? (**ಗೊಂದಲ)** ಒಬ್ಬ ಮಂತ್ರಿಗಳ ಪರಿಚಯವನ್ನು ಈ ಸದನಕ್ಕೆ ಯಾರು ಮಾಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ಯಾರಾದರೂ ಹೊಸ ಸದಸ್ಯರು ಈ ರೀತಿ ಮಾತನಾಡಿದ್ದರೆ ಸರಿ. ಆದರೆ, ಮಾನ್ಯ ಇಬ್ರಾಹಿಂರವರಂತಹ ಹಿರಿಯ ಸದಸ್ಯರು ಈ ರೀತಿ ಮಾತನಾಡಿದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ಆ ಸಂದರ್ಭದಲ್ಲಿಯೇ ಈ ಬಗ್ಗೆ ಸ್ಪಷ್ಟೀಕರಣ ನೀಡಿರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಯಾವುದೋ ನಿರ್ದಿಷ್ಟ ಕಾರಣಕ್ಕೆ ಹೋದಾಗ ಮಾನ್ಯ ಇಬ್ರಾಹಿಂರವರು ಈ ರೀತಿಯ ವ್ಯಂಗ್ಯ ಮಾತನಾಡುವುದು ಸರಿಯಲ್ಲವೆಂದು ಹೇಳುತ್ತಿದ್ದೇನೆ. ಅದೇ ರೀತಿ ನೀರಾವರಿ ಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳರವರು ಯಾವುದೋ ಕಾರಣಕ್ಕಾಗಿ ಒಂದು ನಿಮಿಷ ಹೊರಗಡೆ ಹೋಗಿರುತ್ತಾರೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಸಭಾನಾಯಕರು ಎಲ್ಲಿ ಹೋಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ನೀರಾವರಿ ಮಂತ್ರಿಗಳು ಎಲ್ಲಿಗೋ ಹೋಗಿರುವುದು ತಪ್ಪೆಂದು ನಾನು ಹೇಳಿರುವುದಿಲ್ಲ. ಆದರೆ, ನಾನು ಹೇಳಿದ್ದೇನೆಂದರೆ, ಭೋಜನ ವಿರಾಮದ ನಂತರ ಚರ್ಚೆ ಮುಂದುವರೆಸಬೇಕೆಂದು ಕೇಳಿರುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರು ನಿನ್ನೆಯ ದಿವಸ ನನ್ನ ಅನುಮತಿ ತೆಗೆದುಕೊಂಡು ಹೋಗಿರುತ್ತಾರೆಂದು ಹೇಳಿರುತ್ತೇನೆ. ಆದರೆ, ಮಾನ್ಯ ಸಿ.ಎಂ. ಇಬ್ರಾಹಿಂರವರು ತಡವಾಗಿ ಬಂದಿದ್ದರಿಂದ ಅವರಿಗೆ ಗೊತ್ತಾಗಿರುವುದಿಲ್ಲ. **(ಗೊಂದಲ)** ಈಗ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ತಮ್ಮ ಚರ್ಚೆಯನ್ನು ಮುಂದುವರೆಸಿ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಎಲ್ಲಾ ಸದಸ್ಯರು ಮಧ್ಯೆ ಮಾತನಾಡುತ್ತಾರೆ. ಹಾಗಾಗಿ, ಈಗ ನಮ್ಮನ್ನು ಊಟಕ್ಕೆ ಬಿಡಿ. ನಮಗೆ ಹಸಿವಾಗಿದ್ದು, ಮಾತನಾಡಲು ಪದಗಳು ಬರುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಈಗ ತಾವು ತಮ್ಮ ಚರ್ಚೆಯನ್ನು ಮುಕ್ತಾಯಗೊಳಿಸಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಸಮಯ 2 ಗಂಟೆ ಆಗಿದ್ದು, ಊಟಕ್ಕಾಗಿ ಸದನವನ್ನು ಮುಂದೂಡಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗ ನಮ್ಮನ್ನು ಊಟಕ್ಕೆ ಬಿಡಿ. ಊಟದ ವಿರಾಮದ ನಂತರ ನಾನು ಸ್ವಲ್ಪವೇ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ನಮಗೆ ಬಹಳ ಹಸಿವಾಗಿದೆ.

**ಸಭಾಪತಿಯವರು:-** ಈ ಚರ್ಚೆಯನ್ನು ಮಾನ್ಯ ಇಟಗಿಯವರಿಗೆ ಮುಕ್ತಾಯ ಮಾಡೋಣ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗ ನಮಗೆ ಬಹಳ ಹಸಿವಾಗಿದ್ದು, ನಮ್ಮನ್ನು ಊಟಕ್ಕೆ ಬಿಡಿ. ನಂತರ ನಾವು ಮಾತನಾಡುತ್ತೇವೆ.

**ಸಭಾಪತಿಯವರು:-** ಹಾಗಾದರೆ, ತಾವೆಲ್ಲರೂ ಮಾತನಾಡಿದ ನಂತರ ಕೊನೆಯದಾಗಿ, ಸರ್ಕಾರದಿಂದ ಉತ್ತರ ಕೊಡಿಸೋಣವೇ?

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಆಯಿತು ನಮಗೆ ಕೊನೆಯದಾಗಿಯೇ ಉತ್ತರ ಕೊಡಿಸಿ.

**ಸಭಾಪತಿಯವರು:-** ಹಾಗಾದರೆ, ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 03-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 20 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 03-00 ಗಂಟೆಗೆ ಸೇರಲು ನಿಶ್ಚಯಿಸಿತು)**

**(706)15.9.2021/3.20/ಎಂ.ಎಂ-ಎ.ಕೆ**

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 03 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**<u>ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿ ವಿಳಂಬವಾಗುತ್ತಿರುವ ಕುರಿತು ಮುಂದುವರೆದ ಚರ್ಚೆ</u>**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಮತ್ತೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧನ್ಯವಾದಗಳು. ನನ್ನ ಮೇಲೆ ಅವರಿಗೆ ಬಹಳ ಕಣ್ಣು ಇದೆ. ಬೇಗ ಮುಗಿಸಲಿ ಎಂದು ಬೇಕಂತಲೇ ನನಗೆ ಊಟದ ಸಮಯದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದರು. ಈಗಲಾದರೂ ಬೇಗ ಮುಗಿಸಲಿ ಎಂದು ಮತ್ತೆ ಅವಕಾಶ ಕೊಟ್ಟಿದ್ದಾರೆ. ನಾನು ಅವರ ಊರಿನಲ್ಲಿ ಓದಿರುವುದರಿಂದ ಅವರಿಗೆ ನನ್ನ ಮೇಲೆ ಸ್ವಲ್ಪ ಪ್ರೀತಿ ಜಾಸ್ತಿ. ನಾನು ಆಗಲೇ ಮಾತನಾಡಬೇಕಾದರೆ rehabilitation ಬಗ್ಗೆ ಹೇಳುತ್ತಿದ್ದೆ. Rehabilitation ಬಗ್ಗೆ ಮುಖ್ಯವಾಗಿ ನಾವು ಎಲ್ಲಿ ತಪ್ಪಿದ್ದೇವೆ ಎಂದರೆ ಸಾಮಾನ್ಯವಾಗಿ ಹೇಗೆ ಭೂ ಸ್ವಾಧೀನ ಮಾಡುತ್ತಾರೋ ಅದೇ ರೀತಿ ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಇಟ್ಟಿದ್ದಾರೆ. ಅದಕ್ಕೆ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಯಾವುದೇ ಪ್ರಾಜೆಕ್ಟ್ ಅನ್ನು ಪ್ರಾರಂಭ ಮಾಡಬೇಕಾದರೆ, rehabilitation ಮಾಡಬೇಕಾದರೆ ಅದಕ್ಕೊಂದು ವಿಶೇಷ ಭೂಸ್ವಾಧೀನಾಧಿಕಾರಿಯನ್ನು ಆ ಪ್ರಾಜೆಕ್ಟ್‌ಗೆ ಇಟ್ಟು ಅಲ್ಲೇ ಇತ್ಯರ್ಥವಾಗುವಂತಹ ಕೆಲಸ ಆಗಬೇಕು. ಅದು ಒಂದು ಸಲ ಪ್ರಾರಂಭವಾದರೆ ಭೂ ಸ್ವಾಧೀನ ಆಗಬೇಕಾದರೆ ಕನಿಷ್ಟ ಮೂರು ವರ್ಷಗಳು ತೆಗೆದುಕೊಳ್ಳುತ್ತದೆ. ಪ್ರತಿ ವರ್ಷ ಆ ಭೂಮಿಯ ಮೌಲ್ಯ ಶೇ.20ರಷ್ಟು ಹೆಚ್ಚಾಗುತ್ತಾ ಹೋಗುತ್ತದೆ ಹೊರತು ಕಡಿಮೆಯಂತೂ ಆಗುವ ಪ್ರಸಂಗ ಬರುವುದಿಲ್ಲ. ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೂಡ ಇವತ್ತು ಎಲ್ಲಾ ಪ್ರಾಜೆಕ್ಟ್‌ಗಳ ಬೆಲೆ ಹೆಚ್ಚಾಗುವುದನ್ನು ಕೂಡ ನಾವು ಗಣನೀಯವಾಗಿ ನೋಡುತ್ತೇವೆ. ಆದ್ದರಿಂದ ಮಂತ್ರಿಗಳಲ್ಲಿ ನನ್ನ ವಿನಂತಿಯೇನೆಂದರೆ, ಈಗಲಾದರೂ ಎಚ್ಚೆತ್ತುಕೊಂಡು ರಾಜ್ಯದಲ್ಲಿರುವ ಎಲ್ಲಾ ಪ್ರಾಜೆಕ್ಟ್‌ಗಳನ್ನು ಯಾವುದೇ ಪ್ರಾಜೆಕ್ಟ್ ಮಾಡಲಿ ತಕ್ಷಣವೇ ಆ ಪ್ರಾಜೆಕ್ಟ್‌ಗೆ ವಿಶೇಷ ಭೂಸ್ವಾಧೀನಾಧಿಕಾರಿಯನ್ನು ನಿಗದಿ ಮಾಡಿ 06 ಅಥವಾ 08 ತಿಂಗಳಿನಲ್ಲಿ ಅಥವಾ ಒಂದು ವರ್ಷದೊಳಗೆ ಪೂರ್ತಿ ಜೆ.ಎಂ.ಸಿ ಆಗಿ ಹಣ ಪೇಮೆಂಟ್ ಮಾಡುವ ಹಂತಕ್ಕೆ ತರುವ ಕೆಲಸ ಮಾಡಬೇಕು. ಇವರು 4-6 ವರ್ಷಗಳಿಂದ ಈ ಯೋಜನೆಯನ್ನು ಹೀಗೆ ಪ್ರತಿ ವರ್ಷ ಮುಂದಕ್ಕೆ ಹಾಕುತ್ತಾ ಹೋಗುತ್ತಿದ್ದಾರೆ. ಒಮ್ಮೆಲೇ 50,000/- ರಿಂದ 70,000/- ಹಣ ಬೇಕೆಂದು ಅವರು ಕಾರಣ ಹೇಳುತ್ತಾರೆ. ಮೊನ್ನೆ ದಿವಸ ಸಚಿವರು ಸುಮಾರು 65,000 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಹೇಳಿದರು. ಆದರೆ ನನ್ನ ಬಳಿ ಅವರೇ ಕೊಟ್ಟಂತಹ ಒಂದು ಹೇಳಿಕೆ ಇದೆ. ಅವರು ದಿನಾಂಕ 19.03.2021ರಂದು ಹೇಳಿಕೆಯೊಂದನ್ನು ಕೊಟ್ಟಿದ್ದಾರೆ. 'ಯು.ಕೆ.ಪಿ., ರಾಷ್ಟ್ರೀಯ ಯೋಜನೆಗೆ ಶಿಫಾರಸ್ಸು' ಶ್ರೀ ಪ್ರಕಾಶ್ ರಾಥೋಡ್‌ರವರ ಪ್ರಶ್ನೆಗೆ ಶ್ರೀ ಗೋವಿಂದ ಕಾರಜೋಳರವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳೇ ಇದನ್ನು ತಾವು ಕೊಟ್ಟಿದ್ದು. ನೀವು ಇವತ್ತು 65,000/- ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಆದರೆ ಅವತ್ತಿನ ದಿವಸ ಕನಿಷ್ಟ ಒಂದು ಲಕ್ಷಕ್ಕೂ ಅಧಿಕ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದರು. ಆದ್ದರಿಂದ ನಾನು ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಸರ್ಕಾರದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟು ಹಣವನ್ನು 2-3 ವರ್ಷಗಳಲ್ಲಿ ಖರ್ಚು ಮಾಡುವುದಾದರೆ ನೀವು Irrigation Bonds ಅನ್ನು raise ಮಾಡಿ. ರೈತರು ಕೊಡುತ್ತಾರೆ. ಹಿಂದೆ ಮಾನ್ಯ ಹೆಚ್.ಡಿ. ದೇವೇಗೌಡರು ಇದ್ದಾಗ Irrigation Bonds ಅನ್ನು raise ಮಾಡಿದರು. ಎನ್.ಆರ್.ಬಿ.ಸಿ ಕಾಲುವೆ ಆಗಬೇಕಾದರೆ ಬಾಂಡ್ಸ್ raise ಮಾಡಿ ಆ ಬಾಂಡ್ ಮುಖಾಂತರ ಸಾಕಷ್ಟು ಅಭಿವೃದ್ಧಿಗಳಾಯಿತು, ಆಗ ನಮಗೆ ಎರಡೇ ವರ್ಷದಲ್ಲಿ ನೀರು ಬಂತು. ಸರ್ಕಾರ Irrigation Bonds ಅನ್ನು raise ಮಾಡಲಿ. ಅದಕ್ಕೇನು ಬೆನಿಫಿಟ್ ಕೊಡಬೇಕೆಂದರೆ ಆದಾಯ ತೆರಿಗೆ ಕಟ್ಟುವವರಿಗೆ ಅದರ ಲಾಭ ಕೊಡಬೇಕು. ಇವತ್ತು ಸಾಕಷ್ಟು ರೈತರು ಇನ್ವೆಸ್ಟ್ ಮಾಡುತ್ತಾರೆ. ನಮ್ಮ ಜಮೀನಿಗೆ ನೀರು ಬರುವುದರಿಂದ ಹಣವನ್ನು ಬ್ಯಾಂಕ್‌ನಲ್ಲಿ ಇಡುವ ಬದಲು Irrigation Bonds ಅನ್ನು raise ಮಾಡಿದರೆ ನಮ್ಮ ರೈತರ ಹೊಲಕ್ಕೆ ನೀರು ಬರುವುದಾಗುತ್ತದೆ. ನೀವು ಏನಾದರೂ ಒಂದನ್ನು ಮಾಡಬೇಕಲ್ಲವೇ? ಹಣವಂತೂ ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಈಗ ಕೋವಿಡ್ ಬಂದಿದೆ, ಮುಂದೆ ಯಾವುದು ಬರುತ್ತದೆಂದು ಗೊತ್ತಿಲ್ಲ. ಹಳ್ಳಿಗಳಲ್ಲಿ ಪ್ಲೇಗ್, ಚಿಕನ್‌ಪಾಕ್ಸ್ ಎಂಬ ಕಾಯಿಲೆಗಳು ಬರುತ್ತಿತ್ತು. ಇನ್ನೂ ಯಾವ ಕಾಯಿಲೆಗಳು ಬರುತ್ತವೆಯೋ ಯಾರಿಗೆ ಗೊತ್ತು? ತ್ವರಿತಗತಿಯಲ್ಲಿ ಮಾಡಬೇಕಾದರೆ ನೀವು ಏನಾದರೂ ಆಲೋಚನೆ ಮಾಡಬೇಕಾಗುತ್ತದೆ. ನೀರಾವರಿ ಬಾಂಡ್‌ಗಳನ್ನು raise ಮಾಡಿ, ಸಾಕಷ್ಟು ರೈತರನ್ನು educate ಮಾಡಿ. ಅವರು ಹಣವನ್ನು ತೊಡಗಿಸುತ್ತಾರೆ. ತ್ವರಿತಗತಿಯಲ್ಲಿ ನೀರಾವರಿ ಆದರೆ ತೆರಿಗೆ ಮುಖಾಂತರ ನಿಮ್ಮ exchequer ಗೂ ಹಣ ಬರುತ್ತದೆ. ಅದನ್ನು ವಾಪಸ್ ಪೇ ಮಾಡುವುದಾಗುತ್ತದೆ. ಹಿಂದೆ ಮಾಡಿರುವುದನ್ನು ನೋಡಿ ಅನುಕೂಲವಾದರೆ ಇದನ್ನು ಮಾಡುವುದು ಯೋಗ್ಯವೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ನೀವು ಪ್ರತಿ ವರ್ಷ ಕನಿಷ್ಟ 20,000 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ earmark ಮಾಡದಿದ್ದರೆ ಈ ಪ್ರಾಜೆಕ್ಟ್ ಬೇಗ ಆಗುವುದಿಲ್ಲ. ಎಷ್ಟೇ ಕಡಿಮೆ ಮಾಡಿದರೂ ಕನಿಷ್ಟ 20,000 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ಬಜೆಟ್‌ನಲ್ಲಿ include ಮಾಡಬೇಕು.

(ಮುಂದು)

(707) 15-09-2021/ 03-30/ ಕೆಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):-**

ಈಗಾಗಲೇ ಶೇಕಡ 60 ರಿಂದ 70 ರಷ್ಟು ಕಾಲುವೆಗಳು ಪೂರ್ಣಗೊಂಡಿವೆ. Water utilize ಆಗುತ್ತಿದೆ. ಆದರೆ, ರೈತರ ಜಮೀನಿಗೆ ನೀರು ಸರಿಯಾಗಿ ಮುಟ್ಟುತ್ತಿಲ್ಲ. ಇದರ ಬಗ್ಗೆಯೂ ಕೂಡ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚಿನ ಗಮನ ಹರಿಸಿದರೆ, ರೈತರ ಜಮೀನಿಗೆ ನೀರು ಮುಟ್ಟಿ ಇನ್ನಷ್ಟು ಬೆಳೆಗಳನ್ನು ಬೆಳೆಯುತ್ತಾರೆ. ಇನ್ನಷ್ಟು ಟ್ಯಾಕ್ಸ್ ಬರುವಂತಹದ್ದು ಆಗುತ್ತದೆ. ಸಾಕಷ್ಟು ಬಾರಿ tail-off ಮಾಡಿರುವುದಿಲ್ಲ. tail-off ಮಾಡದೇ ಇರುವುದಕ್ಕೆ ಏನಾಗಿದೆ ಎಂದರೆ, ರೈತರ ಜಮೀನುಗಳಿಗೆ ನೀರು ಹೋಗಿ ಬಿಡುತ್ತದೆ. ಮಳೆ ಬಂದ ಕೂಡಲೇ ಕಾಲುವೆಗಳಿಂದ ನೀರು ಯಾರು ತೆಗೆದುಕೊಳ್ಳುವುದಿಲ್ಲ. ಇದ್ದರಿಂದ, ನೀರು ಜಾಸ್ತಿಯಾಗಿ ನೇರವಾಗಿ ಹೊಲಕ್ಕೆ ಹೋಗಿ ಆ ಹೊಲ submerge ಆಗಿ fertility ಸಹಿತ ಕಳೆದುಕೊಳ್ಳುತ್ತದೆ. ಆ ಜಮೀನಿನಲ್ಲಿ ಏನಾದರೂ ಬೆಳೆಯಬೇಕಾದರೆ 10 ವರ್ಷಗಳು ಬೇಕಾಗುತ್ತದೆ. 50 ರಿಂದ 100 ಎಕರೆ tail-off ನೀರಿನಿಂದ ಆ ಕಡೆ ಹೋಗಿಬಿಟ್ಟಿರುತ್ತದೆ. ಸರಿಯಾಗಿ tail-off ಆಗಿರುವುದಿಲ್ಲ. ಇದರ ಬಗ್ಗೆ ಬಹಳಷ್ಟು ಸಾರಿ ಅನುಭವಕ್ಕೆ ಬಂದಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸಾಕಷ್ಟು ನೀರನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಇದೆ. ಸುಮಾರು 1998 ರಲ್ಲಿ ಮೊದಲನೇ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಿದ್ದೆ. ಆವತ್ತಿನಿಂದ ಇವತ್ತಿನವರೆಗೂ ಕೂಡ ತಮ್ಮ ಗಮನಕ್ಕೂ ಇರಬಹುದೆನ್ನುವ ಸಂಪೂರ್ಣ ಮಾಹಿತಿ ನನಗೆ ಇದೆ. ತುಂಗಾಭದ್ರಾ ಯೋಜನೆಗೆ ಸಂಬಂಧಪಟ್ಟಂತೆ ಎಷ್ಟು ತೊಂದರೆ ಇದೆ ಎಂದರೆ ಪ್ರತಿ ವರ್ಷ ಮುಷ್ಕರಗಳು ನಡೆಯುತ್ತದೆ. ಇದೇ ರೀತಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿಯೂ ಬರುತ್ತದೆ. ನವಲಿಯಲ್ಲಿ ಜಲಾಶಯ ಮಾಡಿಕೊಡುತ್ತೇವೆ, ರೈತರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿ 10 ವರ್ಷಗಳಾಯಿತು. ಸುಮಾರು 3 ಲಕ್ಷ ಎಕರೆಗಳು suffering ಅಚ್ಚುಕಟ್ಟು ಪ್ರದೇಶ ಇದೆ. ಅಲ್ಲಿ ನಮ್ಮ ಸಮಸ್ಯೆ ಏನಾಗಿದೆ ಎಂದರೆ, crop loan ತೆಗೆದುಕೊಂಡು ಇನ್ಸೂರೆನ್ಸ್ ಕಟ್ಟುತ್ತೇವೆ. ನಮ್ಮ ಊರಿನ ಬಗ್ಗೆಯೇ ಹೇಳುತ್ತೇನೆ ನೋಡಿ. ನಾವು ಇನ್ಸೂರೆನ್ಸ್ ಕಟ್ಟುತ್ತೇವೆ. ಆದರೆ, ನಮ್ಮ ಊರಿಗೆ ನೀರು ಬರುವುದಿಲ್ಲ. ಸುಮಾರು 19 ರಿಂದ 20 ಕಿ.ಮೀ ದೂರದಲ್ಲಿ ನಮ್ಮ ಜಮೀನುಗಳು ಇವೆ. ಸುಮಾರು 15 ಕಿ.ಮೀ ವರೆಗೆ ನೀರು ಬರುತ್ತದೆ. ಮುಂದಕ್ಕೆ ಬರುವುದಿಲ್ಲ. ಇದನ್ನು ಅವರು command area ಎಂದು ಕೊಡುತ್ತಾರೆ. Command area ಎಂದು ನಮ್ಮ ಹತ್ತಿರ ಇನ್ಸೂರೆನ್ಸ್ ಕಟ್ಟಿಸಿಕೊಳ್ಳುತ್ತಾರೆ. ಆದರೆ Command area ಎಂದು ರೈತರಿಗೆ ಇನ್ಸೂರೆನ್ಸ್ ಹಣ ಕೊಡುವುದಿಲ್ಲ. ಈ ಕಡೆ ನೀರು ಬರುವುದಿಲ್ಲ. Compensation ಬರುವುದಿಲ್ಲ. ಇದು ರೈತರಿಗೆ ಎಂತಹ ವಿಪರ್ಯಾಸ. ಇದಕ್ಕೆ ನಾವು ಏನು ಮಾಡಬೇಕು. ಇದಕ್ಕೆ ಕಡ್ಡಾಯವಾಗಿ ಅಲ್ಲಿ ಇನ್ಸೂರೆನ್ಸ್ ಅನ್ನು ಕಟ್ ಮಾಡುತ್ತಾರೆ. ನಾವು ಏನಾದರೂ ಕೇಳುವುದಕ್ಕೆ ಹೋದರೆ command area ಎಂದು ಹೇಳುತ್ತಾರೆ. Tail-end ನಲ್ಲಿ ನೀರು ಬರುವುದಿಲ್ಲ. ಕನಿಷ್ಠಪಕ್ಷ ತಾವು ಅದನ್ನು ಗುರುತಿಸಿ ಎಲ್ಲಿಯವರೆಗೆ ನೀರು ಬರುತ್ತದೆ. ಅಲ್ಲಿಯವರೆಗೆ command area or non-command area ಎಂದು ಕೊಡಿ. Command

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದಮೇಲೆ command ಆಗಿದೆ ಎಂದು compensation ಅನ್ನು ತೆಗೆದುಕೊಳ್ಳಬೇಕೆಂದು ತಾವು ಒಂದು ನೋಟಿಫಿಕೇಶನ್ ಮಾಡಿ. ಮಾನ್ಯ ಸಚಿವರೇ ಇದೊಂದು ದೊಡ್ಡ ವಿಪರ್ಯಾಸ. ಸಾಕಷ್ಟು ಜನ ಬಡವರು 2 ರಿಂದ 3 ಎಕರೆ ಜಮೀನಿಗೆ 40 ಸಾವಿರದಿಂದ 80 ಸಾವಿರ ರೂಪಾಯಿಗಳವರೆಗೆ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿರುತ್ತಾರೆ. ನಂತರ command area ಎಂದು ಬೆಳೆ ಹಾಳದರೆ ಇನ್ಸೂರೆನ್ಸ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಯಾರಿಗೆ ಹೇಳಬೇಕು. ಯಾರನ್ನು ಕೇಳಬೇಕೆನ್ನುವುದೇ ತಿಳಿಯದಂತಾಗಿದೆ. ಇದರ ಕಡೆ ಅಧಿಕಾರಿಗಳು ಕೂಡ ಸರಿಯಾಗಿ ಗಮನ ಹರಿಸುವುದಿಲ್ಲ. ತಾವು ನಮ್ಮ ಊರಿಗೆ ನೀರು ಕೊಡುವುದಕ್ಕೆ ಆಗುವುದಿಲ್ಲವೆಂದರೆ non-command area ಎಂದು ಘೋಷಣೆ ಮಾಡಿ ಬಿಡಿ. ತಾವು ಏಕೆ ಆ ರೀತಿ ಘೋಷಣೆ ಮಾಡುವುದಿಲ್ಲ? ತಾವು ಇಷ್ಟು ಯೋಜನೆಗಳಿಂದ ಮೊದಲನೆ ಹಂತ, ಎರಡನೆ ಹಂತ ಮತ್ತು ಮೂರನೆ ಹಂತದ ಯೋಜನೆಗಳಿಗೆ ಸುಮಾರು 30 ಲಕ್ಷ ಎಕರೆಗೆ ನೀರಾವರಿ ಕೊಡುತ್ತೇವೆಂದು ದಿನ ಮುಂಜಾನೆ ಹೇಳಿಕೆಯನ್ನು ಕೊಡುತ್ತೀರಿ. ಅಲ್ಲಿ ಸುಮಾರು 10 ರಿಂದ 15 ಲಕ್ಷ ಎಕರೆಗೆ ನೀರಾವರಿ ಕೊಡುವುದಕ್ಕೆ ಆಗುವುದಿಲ್ಲ. ಎಷ್ಟು ಎಕರೆಗೆ ನೀರು ಕೊಡುವುದಕ್ಕೆ ಆಗುತ್ತದೆ ಎಂದು ತಾವು ಹೇಳಿ. ಇಷ್ಟು ಮಾತ್ರ ಉಪಯೋಗ ಮಾಡಿ. ಮುಂದಿನ ಬಾರಿ ನೀರನ್ನು ಕೊಡುವುದಿಲ್ಲ ಎಂದು ಹೇಳಿ. ಆ ಏರಿಯಾವನ್ನು non-command area ಎಂದು ಘೋಷಣೆ ಮಾಡಿ. ಇವತ್ತು ತುಂಗಾಭದ್ರಾದಲ್ಲಿಯೂ ಅದೇ ಪರಿಸ್ಥಿತಿ ಇದೆ. ಇವತ್ತಿನ ದಿವಸ ಆ ರೈತರಿಗೆ ಒಂದು ಬೆಳೆಯನ್ನು ಬೆಳೆಯಲಾರದಷ್ಟು ಸಮಸ್ಯೆ ಇದೆ. ರೈತರು ಚೆನ್ನಾಗಿ ಮಳೆ ಬಂದಾಗ ಅವರು ಈ ಸಮಸ್ಯೆಯಿಂದ ಪಾರಾಗುತ್ತಾರೆ. ತುಂಗಾಭದ್ರಾದಲ್ಲಿ ಖಂಡಿತವಾಗಿ ರೈತರಿಗೆ ಸಮಸ್ಯೆ ಇದೆ. ಮಾನ್ಯ ಮಂತ್ರಿಗಳು ತುಂಗಾಭದ್ರ ಜಲಾಶಯವನ್ನು ಗಂಭೀರವಾಗಿ ಪರಿಗಣಿಸಿ. ಮಾನ್ಯ ಮಂತ್ರಿಗಳು ನೀಡುವ ಉತ್ತರದಲ್ಲಿ ಈ ಜಲಾಶಯದ ಬಗ್ಗೆಯೂ ಏನಾದರೂ ಹೇಳಿದರೆ ನಮಗೂ ಸ್ವಲ್ಪ ಸಂತೋಷವಾಗುತ್ತದೆ ಮತ್ತು ಆ ಭಾಗದ ಜನರಿಗೂ ಸಂತೋಷವಾಗುತ್ತದೆ. ನವಲಿ ಜಲಾಶಯಕ್ಕೆ ಸಂಬಂಧಿಸಿದಂತೆ estimate and DPR (Detailed Project Report) ಮಾಡಿ ಈಗಾಗಲೇ 6 ವರ್ಷಗಳಾಯಿತು. ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯ ಈ ಮೂರು ಸರ್ಕಾರಗಳು ಸೇರಿ ಮಾಡುವಂತಾದ್ದಾಗಿದೆ. ಇದು combined project ಆಗಿದ್ದು, ನಮ್ಮದ್ದು ಶೇಕಡ 65 ರಷ್ಟು ಇದ್ದರೆ, ಅವರದ್ದು 35 ರಷ್ಟು ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರೇ ಒಂದು ಪತ್ರ ಕೂಡ ಮೂವ್ ಆಗಿಲ್ಲ. ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ major beneficiaries. ಎಲ್ಲಾ ಸರ್ಕಾರದವರು ಈ ಹಿಂದೆ irrigation projects ಮಾಡುತ್ತಿದ್ದರು. ಆಗ AIBP (Accelerated Irrigation Benefit Programme) funds ಬರುತ್ತಿತ್ತು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಸರ್ಕಾರ ಸ್ವಲ್ಪ ಮೊತ್ತವನ್ನು ಹಾಕಿ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನನಗನಿಸಿರುವ ಮಟ್ಟಿಗೆ ಸುಮಾರು 5 ರಿಂದ 8 ವರ್ಷಗಳಾಗಿರಬಹುದು. AIBP funds ಪೂರ್ಣವಾಗಿ ಕಟ್ ಆಗಿಬಿಟ್ಟಿದೆ. ಮೊದಲೆಲ್ಲಾ ಕೋಟಿಗಟ್ಟಲೆ ಹಣ ಬರುತ್ತಿತ್ತು. ನಂತರ 6 ರಿಂದ 7 ಸಾವಿರ ಕೋಟಿ ರೂಪಾಯಿಗಳಿಗೆ decrease ಆಯಿತು. ನನಗನಿಸಿರುವ ಮಟ್ಟಿಗೆ ಈಗ ಸಾವಿರ ಕೋಟಿ ರೂಪಾಯಿಗಳೊಳಗಾದರೆ ಅಷ್ಟು ಮೊತ್ತ ಬರುತ್ತದೋ, ಇಲ್ಲವೋ ಗೊತ್ತಿಲ್ಲ AIBP funds ಬಂದರೆ ರಾಷ್ಟ್ರೀಯ ಯೋಜನೆ ಶಿಫಾರಸ್ಸು ಮಾಡುವುದೇ ಬೇಕಾಗಿಲ್ಲ. ಕೇಂದ್ರ ಸರ್ಕಾರದವರನ್ನು ಮೊದಲು ನಮಗೆ AIBP funds ಇಷ್ಟು ಕೊಡುತ್ತಿದ್ದರು. ಈಗ ಜಾಸ್ತಿ ಕೊಡಿ ಎಂದು ತಾವು convince ಮಾಡಬೇಕು. ನಮ್ಮ ಕಡೆ ಇಷ್ಟು ನದಿಗಳು ಇವೆ. ಇಷ್ಟು ಅವಕಾಶಗಳು ಇವೆ. ಇದನ್ನು ತ್ವರಿತಗತಿಯಲ್ಲಿ ಮಾಡಲು AIBP funds ಕೊಡಬೇಕೆಂದು ಹೇಳಬಹುದು. ಅದರಲ್ಲಿ ಸಾಕಷ್ಟು ದುಡ್ಡು ಬರುತ್ತದೆ. ಇದನ್ನು ಈಗ ನಿಲ್ಲಿಸಿದ್ದಾರೆ. ನಮ್ಮ ರಾಜ್ಯದ 25 ಮಂದಿ ಎಂ.ಪಿ.,ಗಳು ಇದ್ದು, ಅವರೆಲ್ಲಾ ಹೋಗಿ ಮಹದಾಯಿ ಯೋಜನೆ ಇರಬಹುದು. ಕಾವೇರಿ ಜಲಾಶಯ ಇರಬಹುದು, ಕೃಷ್ಣಾ ಜಲಾಶಯ ಇರಬಹುದು ಮತ್ತು ಗೋದಾವರಿ ಜಲಾಶಯ ಇರಬಹುದು. ಇನ್ನು ಎಲ್ಲಾ ಜಲಾಶಯಗಳಿಗೆ ದುಡ್ಡು ತರುವಂತಹದ್ದು ಆಗಬೇಕು. ಹಿಂದೆ ಯು.ಪಿ.ಎ. ಸರ್ಕಾರ ಇದ್ದಾಗ ಪ್ರತ್ಯೇಕವಾಗಿ ಏಳು ಸಾವಿರ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದಾಗ UKP remodulation ಆಯಿತು. ಆಗ NLBC ಆಯಿತು. ಈಗ ಈ ಸರ್ಕಾರ ಬಂದಮೇಲೆ NRBC remodulation ಕೆಲಸ ತೆಗೆದುಕೊಂಡಿದ್ದಾರೆ. ಏಕೆಂದರೆ, 20 ವರ್ಷಕ್ಕೊಮ್ಮೆ ಕಾಲುವೆಗಳ ರಿಪೇರಿ ಮಾಡಬೇಕಾಗುತ್ತದೆ. ಜಮೀನುಗಳಿಗೆ ನೀರು ಮಟ್ಟುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಉಂಟಾಗಿರುತ್ತದೆ. ಇಂತಹ ಯೋಜನೆಗಳು ಇವೆ. ಇನ್ನು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ.

ಮಾನ್ಯ ಮಂತ್ರಿಯವರೇ ತಮ್ಮಲ್ಲಿ ಪ್ರಾಮಾಣಿಕವಾಗಿ ವಿನಂತಿ ಮಾಡುತ್ತೇನೆ. ಎಲ್ಲಾ ಸರ್ಕಾರಗಳು ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದರೂ ಕೂಡ ಜಮೀನುಗಳಿಗೆ ನೀರು ಮುಟ್ಟುತ್ತಿಲ್ಲ. ಇದರಲ್ಲಿ ಸಣ್ಣ ಸಣ್ಣ ತೊಂದರೆಗಳಿವೆ. ಇದಕ್ಕೆ ಬಹಳ ದುಡ್ಡು ಬೇಕಾಗುವುದಿಲ್ಲ. ಕಾಲುವೆಗಳಲ್ಲಿ gauge maintain ಆಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ level ಮೇಲೆ ಕಾಲುವೆಗಳಿಗೆ ನೀರು ಬರುವುದಿಲ್ಲ. ಮೊದಲು ಇದಕ್ಕೆ ಬಾಗಿಲು ಮುಚ್ಚುತ್ತೇವೆಂದು ಹೇಳಿದ್ದರು. ಈಗ ಏನು ಮಾಡಿದ್ದಾರೆ ಎಂದರೆ, main canal 10 meter depth ಇದ್ದರೆ first lateral ಒಂದು ಮೀಟರ್ ಮೇಲೆ ಇಟ್ಟಿದ್ದಾರೆ. ಅದು ಪೂರ್ತಿಯಾದ ಮೇಲೆ ಅದರೊಳಗೆ ನೀರು ಹೋಗಬೇಕೆಂದು ಇಟ್ಟಿದ್ದಾರೆ. ಈಗ gauge ಕಡಿಮೆಗೆ ಬಿಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಕಾಲುವೆಗಳಲ್ಲಿ gauge ಕಡಿಮೆ ಇರುತ್ತದೆ. ಅದಕ್ಕೆ ಕಾರಣ ಏನೆಂದರೆ, upper reaches ನಲ್ಲಿ...

**ಶ್ರೀ ಗೋವಿಂದ ಎಂ.ಕಾರಜೋಳ (ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ gauge ಕಡಿಮೆ ಇರುವುದಿಲ್ಲ. Carrying capacity of the canal ಅನ್ನು ನೋಡಿ ನೀರು ಬಿಡುವಂತಹದ್ದು ಇರುತ್ತದೆ. Carrying capacity ಎಂದರೆ 1000 ಕ್ಯೂಸೆಕ್‌ನಿಂದ 3000 ಕ್ಯೂಸೆಕ್‌ವರೆಗೆ carrying capacity ಮೇಲೆ ನೀರು ಬಿಡುವಂತಹದ್ದು ಇರುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನೇ ಹೇಳುವುದಕ್ಕೆ ಹೊರಟಿದ್ದೆ. NRBC ಒಳಗೆ 183 ಕ್ಯೂಸೆಕ್ಸ್ ನೀರು ಬಿಡಬೇಕು. ಇವತ್ತಿನವರೆಗೂ ಪೂರ್ತಿಯಾಗಿ ಬಿಟ್ಟಿರುವುದಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ ಆ gauge ಪೂರ್ತಿಯಾಗಿ ಇದ್ದರೆ ಎಲ್ಲಾ ಕಾಲುವೆಗಳಿಗೆ ನೀರು ಹೋಗುತ್ತದೆ. ಅಲ್ಲಿ ನೀರನ್ನೇ ಕಡಿಮೆ ಬಿಡುತ್ತಾರೆ. ಇದು various reasons ಗಳಾಗಿವೆ. ಏಕೆಂದರೆ, ಮೊನ್ನೆಯ ದಿವಸ NRBC ಯಲ್ಲಿ ಏಕೆ ಕಡಿಮೆ ನೀರನ್ನು ಬಿಡುತ್ತಿದ್ದರು ಎಂದರೆ, 2 ಸಾವಿರ ಕ್ಯೂಸೆಕ್‌ಗಿಂತ ಜಾಸ್ತಿ ನೀರು ಬಿಡುತ್ತಿರಲಿಲ್ಲ. ಇದಕ್ಕೆ ಕಾರಣ ಏನೆಂದರೆ, 1 ರಿಂದ 15 ಕಿ.ಮೀವರೆಗೂ ನೀರು ಹೋಗುತ್ತಿತ್ತು. ಒಂದು ವೇಳೆ ಅಲ್ಲಿ ನೀರನ್ನು ಬಿಟ್ಟರೆ ಒಡೆದುಕೊಂಡು ಹೋಗುತ್ತದೆ. ಸುಮಾರು 15 ಕಿ.ಮೀ ಶಿತಲಗೊಂಡಿದೆ. ಈಗ remodulation ಆದಮೇಲೆ ಸುಧಾರಣೆಯಾಗಿದೆ. ಈ ರೀತಿಯ ಸಣ್ಣ-ಪುಟ್ಟ ಸಮಸ್ಯೆಗಳಿವೆ. Tail-end ಗೆ ನೀರು ತಲುಪುವುದಿಲ್ಲ. ಉದಾಹರಣೆಗೆ, ಮಾನ್ಯ ಮಂತ್ರಿಯವರೇ, ದೇವಗಿರಿ ತಾಲ್ಲೂಕಿನಲ್ಲಿ 72 ಕೆರೆಗಳು ಇದ್ದು, ಇದ್ದರಲ್ಲಿ 40 ಕೆರೆಗಳು potential ಇವೆ. Potential ಎಂದರೆ, 600 ರಿಂದ 1400 ಎಕರೆ ಜಮೀನುಗಳು ಮೇಲಿನ reach ನಲ್ಲಿ ಇವೆ. ಇದಕ್ಕೆ ತಾವು ಸಂಪರ್ಕ ಕಲ್ಪಿಸಿದರೆ ಆಯಿತು. ಉದಾಹರಣೆಗೆ, lateral to off distributaries ನೀರು ಒಂದು ಅಡಿ ಕಡಿಮೆ ಇದ್ದರೆ, ಅಲ್ಲಿ ಮೇಲಿರುವಂತಹ ಕಾಲುವೆಗಳಿಗೆ ಹೆಚ್ಚಿನ ನೀರು ಬಂದಾಗ ತುಂಬಿಸಿ, ಅದಕ್ಕೆ ನೇರವಾಗಿ gravity ಹೋಗುವ ಹಾಗೆ ಕೊಟ್ಟರೆ ಆ gauge ನಿರ್ವಹಣೆಯಾಗುತ್ತದೆ. ಅಲ್ಲಿ 10 ಕಿ.ಮೀವರೆಗೆ ನೀರು ಇರುವುದು, 20 ಕಿ.ಮೀವರೆಗೆ ನೀರು ಇರುತ್ತದೆ. ಉದಾಹರಣೆಗಾಗಿ ಇದನ್ನು ನಮ್ಮ ತಾಲ್ಲೂಕಿನಲ್ಲಿ ಮಾಡಿ ತೋರಿಸಿದ್ದೇವೆ. ದೇವದುರ್ಗ ತಾಲ್ಲೂಕಿನಲ್ಲಿ ಪರಾಪುರ ಕೆರೆ ಇದೆ. ಅಲ್ಲಿ left canal ಗಳು ಇದ್ದು, ಅದನ್ನು ಜೋಡಿಸಿ ತೋರಿಸಿದ್ದೇವೆ. ಇದರಿಂದ, ಆ ನದಿ ದಂಡೆಗೆ ನೀರು ಮುಟ್ಟುವಂತಹದ್ದು ಮಾಡಿದ್ದೇವೆ. ಇದರ ಬಗ್ಗೆ ಸಾಕಷ್ಟು ಪತ್ರಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಪ್ರಮುಖವಾದ ಸಮಸ್ಯೆಯೇನೆಂದರೆ, ನಮ್ಮ ಊರುಗಳೆಲ್ಲಾ ನದಿ ದಂಡೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ ಊರುಗಳಾಗಿವೆ. ಈ ಕಾಲುವೆಗಳಿಗೆ ಮಳೆ ನೀರು ಬರುತ್ತದೆ. ಹಾಗೆಯೇ ಸಾಕಷ್ಟು ಕಾಲುವೆ ನೀರು ಬರುತ್ತದೆ. ನಮ್ಮ ಜಮೀನುಗಳಿಗೆ ಹೋಗಬೇಕಾದರೆ ನಾವು ಹಳ್ಳಗಳನ್ನು ದಾಟಬೇಕಾಗುತ್ತದೆ. ನಮ್ಮಲ್ಲಿ ಜಮೀನುಗಳಲ್ಲಿರುವಂತಹ ಹಳ್ಳಗಳು ಎಲ್ಲಾ ದೊಡ್ಡ velocity ಹಳ್ಳಗಳಾಗಿವೆ. ಏಕೆಂದರೆ, ಇವೆಲ್ಲಾ ನೇರವಾಗಿ ನದಿಗೆ ಹೋಗುತ್ತವೆ. ಈಗ ರೈತರು, ಹೆಣ್ಣು ಮಕ್ಕಳು, ಕೂಲಿ ಕಾರ್ಮಿಕರು ಹೊಲಕ್ಕೆ ಹೋಗಬೇಕಾದರೆ ಇಷ್ಟಿಷ್ಟು ನೀರು ಇರುತ್ತದೆ. ಅವರು ಹೇಗೆ ಹೋಗಬೇಕು? ಇದರ ಬಗ್ಗೆ ನೀರಾವರಿ ಇಲಾಖೆಗೆ ಹತ್ತಾರು ಬಾರಿ ಮನವಿ ಮಾಡಿದ್ದೇವೆ. ಎಲ್ಲರೂ ಪ್ರತಿ ದಿನ ಬಟ್ಟೆ ನೆನಸಿಕೊಂಡು ಹೋಗಬೇಕೇ? ಈಗಾಗಲೇ 20 ವರ್ಷಗಳಾಗಿದ್ದು, ಇದನ್ನು ಮಾಡುವುದಕ್ಕೆ ಇನ್ನು ಎಷ್ಟು ವರ್ಷಗಳು ಬೇಕು? ನಮ್ಮ ಜಮೀನುಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. Food grains ತರುವುದಕ್ಕೆ ಆಗುವುದಿಲ್ಲ. ನಮ್ಮ ಟ್ರಾಕ್ಟರ್ ಮತ್ತು ಬಂಡಿ ಹೋಗುವುದಿಲ್ಲ. ಎಷ್ಟು ಬಾರಿ ಹೇಳಬೇಕು, ಯಾರಿಗೆ ಹೇಳಬೇಕು. ಪ್ರತಿ ಬಾರಿಯೂ ನಾವು ಪತ್ರವನ್ನು ಕೊಟ್ಟು ಎಲ್ಲಾ ಕೇಳಿದ್ದೇವೆ. ಇದನ್ನು ಕಿವಿಗೇ ಹಾಕಿಕೊಳ್ಳುವುದಿಲ್ಲ. ಸುಮ್ಮನೆ ಯಾವುದೋ ಕೆಲಸಕ್ಕೆ ಬಾರದೇ ಇರುವಂತಹ ಎಷ್ಟೋ ಯೋಜನೆಗಳನ್ನು ಮಾಡುತ್ತಾರೆ. ಈ ಯೋಜನೆಗಳು ತಕ್ಷಣವೇ ಒಂದು ತಾಸಿನೊಳಗೆ ಆಗಿಬಿಡುತ್ತವೆ.

(ಮುಂದು)

**(708) 3:40 ಎಸ್‌ಪಿಆರ್-ಆರ್‌ಎನ್ 15/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಪಾಟೀಲ್ ಇಟಗಿ(ಮುಂದು):-**

ಅಲ್ಲಿನ ಮೂಲಭೂತ ಅವಶ್ಯಕತೆಗಳೇನು, ಗ್ರಾಮಗಳಲ್ಲಿನ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು. ಗ್ರಾಮಗಳಲ್ಲಿ ನೀರು ಬರದೇ ಇರುವುದರಿಂದ, ಹೆಚ್ಚಿನ ನೀರಿನ ಹರಿವಿನಿಂದ ಹಾಗೂ ಅಲ್ಲಿನ ಹೊಲ-ಜಮೀನುಗಳು ಜೌಗು ಆಗುವ ಬಗ್ಗೆ ತಿಳಿದುಕೊಳ್ಳಬೇಕು. ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತಿರುವ ಕಾಡಾ ಇಲಾಖೆಯು ಜಮೀನಿನಲ್ಲಿ ಹೆಚ್ಚು ನೀರು ಬಂದಾಗ ಆಗುವ ಜೌಗು ಬಗ್ಗೆ ತಿಳಿದುಕೊಳ್ಳಬೇಕು. ಅಲ್ಲಿರುವ ಕೇಂದ್ರ ಸರ್ಕಾರದ 15 ಕೋಟಿ ರೂಪಾಯಿಗಳ ಯೋಜನೆಯ ಸದ್ಬಳಕೆಯಾಗಬೇಕು. ಇದರ ಬಗ್ಗೆ ಆಸಕ್ತಿ ವಹಿಸಬೇಕು. ಏಕೆಂದರೆ, ಕಾಲುವೆಗಳಿಗೆ ನೀರು ಹೋಗುವ ಸಂದರ್ಭದಲ್ಲಿ ಅಕ್ಕ-ಪಕ್ಕದಲ್ಲಿರುವ ಜಮೀನಿನ ಒಳಗೆ ನೀರು ಹೋಗಿ, ಅಲ್ಲಿನ ನೀರಿನ ಪ್ರಮಾಣ ಹೆಚ್ಚಾಗಿ ಜಮೀನಿನಲ್ಲಿ ಜೌಗು ಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ನೆರೆಯ ಆಂಧ್ರ ಪ್ರದೇಶ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿನ ಭೀಮಾವರಂ ಪ್ರಾಂತ್ಯದಲ್ಲಿ ಸಮುದ್ರ ತೀರದ ಕಡೆಗಳಲ್ಲಿ ದಿನದ 24 ಗಂಟೆಗಳ ಕಾಲ ಜಮೀನಿನಲ್ಲಿ ನೀರು ಇರುತ್ತದೆ. ಆ ರೀತಿಯಾಗಿ ಈ ಯೋಜನೆಯ ಪ್ರದೇಶದ ಕೆಲವು ಭಾಗದ ಹೊಲ-ಜಮೀನುಗಳಲ್ಲಾಗಿದೆ. ಅಲ್ಲಿನ 'ಎಸ್ಕೇಪ್ ಗೇಟ್'ಗಳು ಸರಿಯಾಗಿ ಇಲ್ಲ ಹಾಗೂ ಅವುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇತ್ತೀಚೆಗೆ ಒಂದೊಂದೆ ಗೇಟುಗಳನ್ನು ದುರಸ್ತಿಗೊಳಿಸುತ್ತಿದ್ದಾರೆ. ಇಂತಹ ಸಮಸ್ಯೆಗಳೆಲ್ಲವನ್ನೂ ಸರಿಪಡಿಸುವ ಕೆಲಸಗಳನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಏಕೆಂದರೆ ಅವರು ಈ ಹಿಂದೆ ಲೋಕೋಪಯೋಗಿ ಇಲಾಖೆಯ ಸಚಿವರಾಗಿದ್ದಾಗ ನಮ್ಮ ಕೆಲಸವನ್ನು ಮಾಡಿಕೊಟ್ಟಿದ್ದಾರೆ. ನಮ್ಮ ಭಾಗದಲ್ಲಿ ಎರಡು ದಶಕಗಳಿಂದ ರಸ್ತೆಯಾಗಿರಲಿಲ್ಲ; ಈ ಬಗ್ಗೆ ಬಹಳವಾಗಿ ಸಚಿವರನ್ನು ಕೈಮುಗಿದು ಕೇಳಿಕೊಂಡಾಗ ಅವರು ಖಾತೆಯನ್ನು ವಹಿಸಿಕೊಂಡಾಗ ನಮ್ಮ ಕೆಲಸವನ್ನು ಮಾಡಿಕೊಟ್ಟಿದ್ದಾರೆ; ಅದಕ್ಕಾಗಿ ಅವರಿಗೆ ಧನ್ಯವಾದಗಳು. ಪ್ರಶ್ನಿತ ಕೆಲಸವನ್ನೂ ಸಹ ಸಚಿವರು ಮಾಡಿಕೊಡುತ್ತಾರೆಂಬ ಆಶಯ ನಮಗಿದೆ. ಅವರು ಉತ್ತರ ಕರ್ನಾಟಕ ಭಾಗದವರಾಗಿದ್ದು, ಯೋಜನೆಗಾಗಿ ಹೊಲ-ಜಮೀನುಗಳನ್ನು ಅವರೂ ಸಹ ಕಳೆದುಕೊಂಡಿದ್ದಾರೆ. ಹೀಗಾಗಿ ಎಷ್ಟು ಕಷ್ಟ ಇದೆ ಎನ್ನುವುದು ಅವರಿಗೆ ತಿಳಿದಿರುವುದರಿಂದ ಅವರು ಕೆಲಸಗಳನ್ನು ಮಾಡುತ್ತಾರೆ. ಪುನರ್ವಸತಿ-ಮರು ಇತ್ಯರ್ಥ ಮತ್ತು ದುರಸ್ತಿ ಬೆಲೆಗಳ ಬಗ್ಗೆ ಸಚಿವರು ಹೆಚ್ಚಿನ ಕಾಳಜಿಯನ್ನು ವಹಿಸಬೇಕೆಂದು ನಾನು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬಹಳಷ್ಟು ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೂ ಸಹ ಧನ್ಯವಾದಗಳನ್ನು ತಿಳಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೃಷ್ಣ ನದಿಯು ಉತ್ತರ ಕರ್ನಾಟಕ ಭಾಗದಲ್ಲಿ ಬಹಳ ಮಹತ್ವದ್ದಾಗಿದೆ. ಅದೇ ರೀತಿಯಾಗಿ ದಕ್ಷಿಣ ಕರ್ನಾಟಕ ಭಾಗದಲ್ಲಿ ಕಾವೇರಿ ನದಿಯು ಬಹಳ ಮಹತ್ವದ್ದಾಗಿದೆ. ಕೃಷ್ಣ ಮತ್ತು ಕಾವೇರಿ ಎರಡೂ ನದಿಗಳು ನಮ್ಮ ರಾಜ್ಯದ ಎರಡು ಕಣ್ಣುಗಳಂತಿವೆ. ಉತ್ತರ ಕರ್ನಾಟಕ ಭಾಗದ ಜನರಿಗೆ ಕೃಷ್ಣ ನದಿಯಿಂದ ಸಿಗಬೇಕಾದ ನೀರಾವರಿ ಯೋಜನೆಗಳು ಇನ್ನು ಪೂರ್ತಿಯಾಗಿ ದೊರೆತಿರುವುದಿಲ್ಲ. 1964 ನೇ ಇಸ್ವಿಯಿಂದ ಪ್ರಾರಂಭಗೊಂಡ ಕೃಷ್ಣ ಮೇಲ್ದಂಡೆ ಯೋಜನೆಗಳು ಇಲ್ಲಿಯವರೆಗೆ ಪೂರ್ಣಗೊಂಡಿರುವುದಿಲ್ಲ. ದೇಶದ ಹಿಂದಿನ ಪ್ರಧಾನಿ ದಿವಂಗತ ಲಾಲ್ ಬಹದೂರ್ ಶಾಸ್ತ್ರಿಯವರು ದಿನಾಂಕ 22/05/1964 ರಂದು ಯೋಜನೆಗಾಗಿ ಅಡಿಗಲ್ಲನ್ನು ಹಾಕಿದಾಗ, ಯೋಜನೆಯ ವೆಚ್ಚ ಕೇವಲ 37 ಸಾವಿರ ಕೋಟಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳಾಗಿತ್ತು. ಸದರಿ ಯೋಜನೆಗಾಗಿ ಇಲ್ಲಿಯವರೆಗೆ 52 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿರುವ ಮಾಹಿತಿಯು ಇದೆ. ಇಷ್ಟು ಮೊತ್ತವನ್ನು ಖರ್ಚು ಮಾಡಿದಾಗ, ಇವತ್ತಿನ ದಿವಸ ನಾವು 123 ಟಿ.ಎಂ.ಸಿ. ಯಷ್ಟು ನೀರು ಸಂಗ್ರಹಣೆ ಮಾಡುವ ಕೆಲಸವು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಾಗಿದೆ ಮತ್ತು ಸುಮಾರು 9 ಮಹತ್ವದ ನೀರಾವರಿ ಯೋಜನೆಗಳು ಕಾರ್ಯಾರಂಭವಾಗಿವೆ.

ಯೋಜನೆಯ 3 ನೇ ಹಂತದಲ್ಲಿ ಎಫ್.ಆರ್.ಎಲ್.ನ್ನು 519.6 ಮೀಟರ್‌ಗಳಿಂದ 524.256 ಮೀಟರ್‌ಗಳಷ್ಟು ಎತ್ತರಕ್ಕೆ ಏರಿಸಿದಾಗ, ಅಲ್ಲಿ ಭಾದಿತವಾಗುವ ಸಂತ್ರಸ್ಥ ಕುಟುಂಬಗಳು ಮತ್ತು ಯೋಜನೆಗೆ ಮುಳುಗಡೆಯಾಗುವ ಭೂಮಿಯ ಬಗ್ಗೆ ನಾವುಗಳೆಲ್ಲರೂ ಗಮನಹರಿಸಿದಾಗ ಇವತ್ತಿನ ದಿವಸ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಭೂಮಿಯು ಮುಳುಗಡೆಯಾಗುತ್ತಿದೆ. ಹೀಗಾಗಿ ಹಾಲಿ ಇರುವ 519.6 ಮೀಟರ್‌ಗಳಿಂದ 524.256 ಮೀಟರ್‌ಗಳಷ್ಟು ಎತ್ತರಕ್ಕೆ ಏರಿಸಿದಾಗ, ಜಲಾಶಯದಲ್ಲಿ ಸುಮಾರು 75,563 ಎಕರೆ ವಿಸ್ತೀರ್ಣದ ಪ್ರದೇಶವು ಮುಳುಗಡೆಗೆ ಒಳಗಾಗುತ್ತವೆ. ಇದರಲ್ಲಿ ಸುಮಾರು 127 ಗ್ರಾಮಗಳು ಸೇರಿಕೊಂಡಿವೆ. ಇಷ್ಟು ದೊಡ್ಡ ಪ್ರಮಾಣದ ಭೂಮಿಯು ಕೃಷ್ಣ ನೀರಿನ ದಂಡೆಯಿಂದ ಹೆಚ್ಚುವರಿಯಾಗಿ ವ್ಯಾಪಿಸುತ್ತಿದೆ. ಇದರ ಜೊತೆಯಲ್ಲಿ 20 ಗ್ರಾಮಗಳನ್ನು ಸ್ಥಳಾಂತರಗೊಳಿಸಬೇಕಾಗಿದೆ. ಆಗ ಅಲ್ಲಿ ಪುನರ್ವಸತಿ ಮತ್ತು ಪುನರ್ನಿಮಾಣಕ್ಕಾಗಿ 6,467 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಇದರ ಜೊತೆಗೆ ಅಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಕಾಲುವೆಗಳ ನಿರ್ಮಾಣಕ್ಕಾಗಿ ಇವತ್ತಿನ ದಿವಸ 51,837 ಎಕರೆಗಳಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಇವುಗಳೆಲ್ಲವನ್ನೂ ಒಟ್ಟುಗೂಡಿಸಿದಾಗ, ಇವತ್ತಿನ ದಿವಸ ಸುಮಾರು 1,31,000 ಎಕರೆಗಳಷ್ಟು ಭೂಮಿಗೆ ಪರಿಹಾರವನ್ನು ನೀಡಬೇಕಾಗಿರುವ ವಿಚಾರವು ಸರ್ಕಾರದ ಮುಂದಿದೆ. ಸ್ವಾಧೀನಪಡಿಸಿಕೊಂಡ ಭೂಮಿಗೆ ಯೋಗ್ಯವಾದ ಬೆಲೆ ಅಥವಾ ಅಲ್ಲಿನ ಮಾರುಕಟ್ಟೆ ಬೆಲೆಯನ್ನು ಆಧರಿಸಿ, ಸಂತ್ರಸ್ಥ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಬೇಕಾಗಿರುವುದು ಸರ್ಕಾರದ ಮುಂದಿರುವ ದೊಡ್ಡ ಸಮಸ್ಯೆಯಾಗಿದೆ. ನನ್ನನ್ನೂ ಒಳಗೊಂಡಂತೆ ನಾವುಗಳೆಲ್ಲರೂ ಸಹ ಸಂತ್ರಸ್ತರಾಗಿದ್ದೇವೆ. ಯೋಜನೆಯ 1, 2 ಮತ್ತು 3 ಹಂತಗಳಲ್ಲಿ ನಾವು ನಮ್ಮ ಆಸ್ತಿ, ಮನೆ-ಮಠಗಳನ್ನು ಕಳೆದುಕೊಂಡಿದ್ದೇವೆ. ಅಲ್ಲಿನ ನೋವು-ನಲಿವುಗಳು ನಮಗೆ ತಿಳಿದಿವೆ. ನಿಜವಾಗಿಯೂ ಸಹ ಇದೊಂದು ರಾಷ್ಟ್ರದಲ್ಲಿಯೇ ಅತ್ಯಂತ ಮಹತ್ವ ಹಾಗೂ ಬೃಹದಾಕಾರವಾದ ಯೋಜನೆಗಾಗಿದ್ದು, ಕಳೆದ ಐದು ದಶಕಗಳ ಕಾಲ ಕಳೆದರೂ ಸಹ ಯೋಜನೆಯು ಪೂರ್ಣಗೊಂಡಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

37 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭವಾದ ಯೋಜನೆಗೆ ಈಗಾಗಲೇ ಸಾಕಷ್ಟು ಹಣವನ್ನು ವ್ಯಯಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇದಕ್ಕೆ ಅವಶ್ಯಕವಾಗಿರುವ ಹಣದ ಬಗ್ಗೆ ನಾವು ಯೋಚಿಸಿದರೆ, ಸುಮಾರು 80 ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ. ಏಕೆಂದರೆ, ಈ ಯೋಜನೆಗಾಗಿ 1,31,000 ಎಕರೆ ವಿಸ್ತೀರ್ಣದ ಪ್ರದೇಶಗಳಿಗೆ ನಾವು ಯಾವ ಬೆಲೆಯನ್ನು ನೀಡುತ್ತಿದ್ದೇವೆ ಮತ್ತು ಪ್ರತಿ ಎಕರೆಗೆ ಇಂತಿಷ್ಟು ಹಣವನ್ನು ನಿಗದಿಪಡಿಸುತ್ತಿದ್ದೇವೆ ಅವುಗಳ ಆಧಾರದ ಮೇಲೆ ನಮ್ಮ ಯೋಜನೆಯ ಗಾತ್ರವು ನಿರ್ಧಾರವಾಗುತ್ತದೆ. ಇಂದಿಗೂ ಸಹ ಸ್ವಾಧೀನಪಡಿಸಿಕೊಂಡ ಭೂಮಿಯ ಬೆಲೆ ನಿರ್ಧಾರವಾಗಿಲ್ಲ. ಹೊಸ ಭೂ ಸ್ವಾಧೀನ ಕಾಯ್ದೆಯಡಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದಾಗ, ನಗರ ಪ್ರದೇಶಗಳಲ್ಲಿ ಮಾರುಕಟ್ಟೆಯ ಬೆಲೆಯ ಮೂರು ಪಟ್ಟನ್ನು ಮತ್ತು ಗ್ರಾಮೀಣ ಭಾಗದಲ್ಲಿ ಮಾರುಕಟ್ಟೆ ಬೆಲೆಯ ನಾಲ್ಕು ಪಟ್ಟನ್ನು ನೀಡಬೇಕೆಂದು ನಿರ್ಧರಿಸಲಾಗಿದೆ. ಇವುಗಳೆಲ್ಲವನ್ನೂ ಹೊರತುಪಡಿಸಿ, ಸಂತ್ರಸ್ತರಿಗೆ ಏಕರೂಪ ಬೆಲೆಯನ್ನು 'ಕನ್ಸೆಂಟ್ ಅವಾರ್ಡ್'ನ್ನು ನಿಗದಿಪಡಿಸಬೇಕು. ಏಕಕಾಲದಲ್ಲಿಯೇ ರೈತರಿಗೆ ಸ್ವಾಧೀನಪಡಿಸಿಕೊಂಡ ಭೂಮಿಯ ಬೆಲೆಯನ್ನು ನೀಡಬೇಕು. ಅವರುಗಳು ನ್ಯಾಯಾಲಯ ಹಾಗೂ ಇನ್ನಿತರೆ ಸರ್ಕಾರಿ ಕಛೇರಿಗಳಿಗೆ ಪರಿಹಾರ ಮೊತ್ತಕ್ಕಾಗಿ ಅಲೆಯದಂತೆ, ಅವರಿಗೆ ತೃಪ್ತಿಯಾಗುವ ರೀತಿಯಲ್ಲಿ ಹಾಗೂ ಅದೇ ರೀತಿಯಾಗಿ ಸರ್ಕಾರಕ್ಕೂ ಭಾರವಾಗದ ರೀತಿಯಲ್ಲಿ ಪರಿಹಾರ ಮೊತ್ತವನ್ನು ಇವತ್ತಿನ ದಿವಸ ಕೊಡಬೇಕಾಗಿದೆ. ಈ ಹಿಂದೆ ಶ್ರೀ ಕಾಗೋಡು ತಿಮ್ಮಪ್ಪನವರ ನೇತೃತ್ವದಲ್ಲಿ ಈ ಯೋಜನೆಗೆ ಸಂಬಂಧಪಟ್ಟಂತೆ ಸಮಿತಿಯನ್ನು ರಚಿಸಲಾಗಿತ್ತು. ಆದರೆ ಆ ಸಮಿತಿಯು ಇದುವರೆವಿಗೆ ಯಾವುದೇ ವರದಿಯನ್ನು ನೀಡಿರುವುದಿಲ್ಲ.

ಇವತ್ತಿನ ದಿವಸ ಬೆಲೆ ನಿರ್ಧಾರ ಯೋಜನೆಯ ಒಂದು ಭಾಗವಾಗಿದ್ದರೆ, ಸರ್ಕಾರವು ಮಾರ್ಗಸೂಚಿಗಳನ್ವಯ ಬೆಲೆಯನ್ನು ಘೋಷಿಸಿದಾಗ, ಒಂದು ಸಂತ್ರಸ್ತರಿಂದ ಮತ್ತೊಂದು ಸಂತ್ರಸ್ತರಿಗೆ ಅಥವಾ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಮಾರುಕಟ್ಟೆಯ ಬೆಲೆಯಲ್ಲಿ ವ್ಯತ್ಯಾಸವಾಗುತ್ತದೆ. ಇದರ ಬಗ್ಗೆ ಮಾನ್ಯ ಆರ್.ಬಿ.ತಿಮ್ಮಾಪೂರರವರೂ ಸಹ ಈಗಾಗಲೇ ಉಲ್ಲೇಖಿಸಿದ್ದಾರೆ. ಇನ್ನೂ ಸುಮಾರು 20 ಗ್ರಾಮಗಳಿಗೆ ಪುನರ್ವಸತಿಯನ್ನು ಕಲ್ಪಿಸಬೇಕಾಗಿದೆ. ಸದರಿ 20 ಗ್ರಾಮಗಳ ಪುನರ್ವಸತಿ ಕೇಂದ್ರಗಳ ಸ್ಥಾಪನೆಗೆ ಸುಮಾರು 6,400 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಅಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುದ್ದೀಪ ಮುಂತಾದವುಗಳನ್ನೂ ಸಹ ಒದಗಿಸಬೇಕಾಗಿದೆ. ಅಲ್ಲಿನ ಎಲ್ಲವನ್ನೂ ಕೂಡಿದಾಗ ಅಲ್ಲಿ ಒಟ್ಟು 23,331 ಕುಟುಂಬಗಳವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾದಿತರಾಗುತ್ತಿದ್ದಾರೆ. ಬಾಗಲಕೋಟೆ ನಗರವೊಂದರಲ್ಲಿಯೇ ಸುಮಾರು 2,330 ಕುಟುಂಬಗಳು ಸಂತ್ರಸ್ತರಾಗುತ್ತಿದ್ದಾರೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ನಾವು ಗಮನಿಸಿದಾಗ, ಪುನರ್ವಸತಿ ಮತ್ತು ಪುನರ್ನಿರ್ಮಾಣದ ಜೊತೆಗೆ ಭೂಮಿಯ ಬೆಲೆಯನ್ನು ಸರ್ಕಾರವು ನಿರ್ಧರಿಸಬೇಕಾಗಿದೆ.

ಸುಮಾರು 130 ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ನಾವು ಬಳಕೆ ಮಾಡಿಕೊಳ್ಳಬೇಕಾಗಿದೆ. ಇಲ್ಲಿಯವರೆಗೆ 1, 2 ಮತ್ತು 3 ನೇ ಹಂತದ ಯೋಜನೆಗಾಗಿ ಸಾಕಷ್ಟು ಮುಳುಗಡೆಯಾಗಿ ಭಾದಿತರಾಗಿರುವ ಕುಟುಂಬಗಳ ಒಟ್ಟು ಸಂಖ್ಯೆಯನ್ನು ನಾವು ಲೆಕ್ಕ ಹಾಕಿದಾಗ ಸುಮಾರು 4 ಲಕ್ಷದಷ್ಟು ಸಂತ್ರಸ್ತ ಕುಟುಂಬಗಳಾಗುತ್ತವೆ. 3ನೇ ಹಂತದ ಯೋಜನೆಯಲ್ಲಿ 1,58,000 ಸಂತ್ರಸ್ತರು ತಮ್ಮ ಮೂಲ ಸ್ಥಾನವನ್ನು ಬಿಟ್ಟು ಹೊರಗಡೆ ಬರಬೇಕಾದ ಪರಿಸ್ಥಿತಿಯುಂಟಾಗಿದೆ. ಈ ಜನರಿಗೆ ಹೊಸ ಬದುಕನ್ನು ಕಟ್ಟಿಕೊಡುವ ಜವಾಬ್ದಾರಿಯು ಸರ್ಕಾರದ ಮೇಲಿದೆ. ಯಾವುದೇ ಪಕ್ಷದ ಸರ್ಕಾರವು ಅಧಿಕಾರದಲ್ಲಿರಲಿ, ಎಲ್ಲಾ ಸರ್ಕಾರಗಳಲ್ಲಿ ಇಚ್ಛಾಶಕ್ತಿಯ ಕೊರತೆಯಿಂದಾಗಿ ಯೋಜನೆಯು ಐದು ದಶಕಗಳ ಕಾಲವನ್ನು ಈಗಾಗಲೇ ಕಳೆದಿದ್ದು, ಆರನೇ ದಶಕಕ್ಕೆ ನಾವು ಕಾಲಿಡುತ್ತಿದ್ದೇವೆ. ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಉದಾಹರಣೆಯೊಂದನ್ನು ಬಹಳ ಚೆನ್ನಾಗಿ ಹೇಳಿದರು. ಕಾಲೇಶ್ವರಂ ಏತ ನೀರಾವರಿ ಯೋಜನೆಯನ್ನು ಇಡೀ ರಾಷ್ಟ್ರಕ್ಕೆ ಮಾದರಿಯಾಗುವ ನಿಟ್ಟಿನಲ್ಲಿ ಮಾಡಿದ್ದಾರೆ. ಅದನ್ನು ನಾನೂ ಸಹ ನೋಡಿಕೊಂಡು ಬಂದಿದ್ದೇನೆ. ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ 1,20,000 ಕೋಟಿ ರೂಪಾಯಿಗಳನ್ನು ವ್ಯಯಿಸಿ, ಯೋಜನೆಯನ್ನು ಪೂರ್ಣಗೊಳಿಸುವ ಯೋಜನೆಗಳನ್ನು ಹಾಕಿಕೊಂಡಾಗ, ಕರ್ನಾಟಕ ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಏಕೆ ಐವತ್ತು ವರ್ಷಗಳನ್ನು ಕಳೆಯಿತು ಎಂದು ಗೊತ್ತಾಗುತ್ತಿಲ್ಲ. ಇದಕ್ಕೆ ನಮ್ಮಲ್ಲಿರುವ ಇಚ್ಛಾಶಕ್ತಿಯ ಕೊರತೆ ಎಂದು ನನಗನ್ನಿಸುತ್ತದೆ. ಕೊರತೆ ಇರುವ ಇಚ್ಛಾಶಕ್ತಿಯನ್ನು ತುಂಬಿಕೊಡುವ ಬಗ್ಗೆ ನಾವುಗಳೆಲ್ಲರೂ ಯೋಚನೆ ಮಾಡಬೇಕಾಗಿದೆ. ನಮ್ಮ ಸದನವು ಮೇಲ್ಮನೆ ಮತ್ತು ಚಿಂತಕರ ಚಾವಡಿಯಾಗಿರುವುದರಿಂದ ಇದರ ಬಗ್ಗೆ ಎಷ್ಟು ಚರ್ಚೆ ಮತ್ತು ಚಿಂತನೆಯನ್ನು ಮಾಡಿ ಅಂತಿಮ ನಿರ್ಧಾರಕ್ಕೆ ಬರಬೇಕು. ಹಾಕಿಕೊಂಡ ಯೋಜನೆಯನ್ನು ಪೂರ್ತಿಗೊಳಿಸಿ 130 ಟಿ.ಎಂ.ಸಿ.ಯಷ್ಟು ನೀರನ್ನು ಸದ್ಬಳಕೆ ಮಾಡಿಕೊಳ್ಳುವ ಕೆಲಸವು ನಮ್ಮೆಲ್ಲರಿಂದ ಆಗಬೇಕಾಗಿದೆ. ನಾವು ಕೇವಲ 5-6 ಟಿ.ಎಂ.ಸಿ. ನೀರಿಗಾಗಿ ನ್ಯಾಯಾಧೀಕರಣದಲ್ಲಿ ಬಡಿದಾಡುತ್ತಿದ್ದೇವೆ. ಆದರೆ, ಸುಮಾರು 200 ಟಿ.ಎಂ.ಸಿ.ಯಷ್ಟು ನೀರು ಕೃಷ್ಣಾ ಕೊಳ್ಳದ ಮುಖಾಂತರ ಸಮುದ್ರವನ್ನು ಸೇರುತ್ತಿದೆಯೇ ಹೊರತು ಇದರ ಬಳಕೆಯಾಗುತ್ತಿಲ್ಲ. ಇಂತಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂಶಗಳ ಬಗ್ಗೆ ನಾವು ಸಮಗ್ರವಾಗಿ ಚಿಂತನೆಯನ್ನು ಮಾಡಬೇಕಾದ ಅನಿವಾರ್ಯತೆಯುಂಟಾಗಿದೆ. ಪರಿಸ್ಥಿತಿಯನ್ನು ನಾವು ಹೀಗೆಯೇ ಬಿಟ್ಟರೆ, ಇವತ್ತಿನ ದಿವಸ ನಾವು ಹಾಲು, ಮೊಸರು ಮತ್ತು ಮಜ್ಜಿಗೆಗಳನ್ನು ಯಾವ ರೀತಿಯಾಗಿ ಉಪಯೋಗಿಸುತ್ತಿದ್ದೇವೆಯೋ ಆ ರೀತಿಯಾಗಿ ಮುಂದಿನ 2050 ನೇ ಇಸ್ವಿಯಲ್ಲಿ ನೀರನ್ನು ಬಳಸಬೇಕಾದ ಪ್ರಸಂಗ ಬರುತ್ತದೆ.

(ಮುಂದು)

(709)15-09-2021(03-50)cs(bsd)-vk

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು)**

ಆ ಹಿನ್ನೆಲೆಯಲ್ಲಿ ನಾವೆಲ್ಲರೂ ನೀರಿನ ಬಳಕೆಯನ್ನು ಯಥೇಚ್ಛವಾಗಿ ಬಳಸದೇ, ಕುಡಿಯುವ ನೀರನ್ನು ಸಂಗ್ರಹ ಮಾಡುವ ಯೋಜನೆಯನ್ನು ಜಾರಿಗೆ ತರಬೇಕಾಗಿದೆ. ಶ್ರೀಕೃಷ್ಣದೇವರಾಯನ ಕಾಲದಲ್ಲಿ ರಾಜನಿಗೆ ಹಾಲು ಉಣಿಸುವ ಸಂದರ್ಭದಲ್ಲಿ ತಾಯಿಯು " ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯವನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್‌ಪುರುಷರನ್ನು ರಕ್ಷಿಸು" ಎಂದು ಕಿವಿ ಮಾತನ್ನು ಹೇಳುತ್ತಿರುತ್ತಾಳೆ. ಇದು ತಾಯಿ ಹೇಳುವ ಪಾಠ.. ಇವತ್ತು ರಾಜ ಆಗಿರುವ ಸರ್ಕಾರವು ಈ ಮಾತನ್ನು ಗಮನಿಸಿದರೆ ಡ್ಯಾಂ ಕಟ್ಟಿಸಬೇಕು, ಕೆರೆ ಕಟ್ಟಬೇಕು, ಆ ಭಾಗದ ಜನತೆಗೆ ನೀರನ್ನು ಒದಗಿಸುವ ಕೆಲಸ ಆಗಬೇಕೆಂದು ಹೇಳುತ್ತೇನೆ. ಮಹಾಭಾರತದಲ್ಲಿ ಕೂಡ ಒಂದು ಮಾತು ಬರುತ್ತಿದ್ದು, ರಾಜನು ಪ್ರಜಾಹಿತಾತ್ಮಕವಾಗಿ ಮಾಡಬೇಕಾದ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣದ ಮಹತ್ವನ್ನು ತಿಳಿಸಲಾಗಿದೆ. ನಾರದನು ಧರ್ಮರಾಜನಿಗೆ ಮಳೆಯನ್ನು ನೆಚ್ಚಿಕೊಂಡು ಕೂರದೇ ಕೆರೆ, ಕುಂಟೆ, ಸರೋವರಗಳನ್ನು ನಿರ್ಮಿಸು, ಬೇಸಾಯದಲ್ಲಿ ತೊಡಗಿಕೊಳ್ಳಬೇಕೆಂದು ಹೇಳಿರುವುದು ಉಲ್ಲೇಖಾರ್ಹ. ಕೃಷಿಯಲ್ಲಿ ಏನಾದರೂ ಸಾಧನೆ ಮಾಡಬೇಕಾದರೆ ಧರ್ಮರಾಜನಿಗೆ ನಾರದರು ಹೇಳಿದ ಸಂದೇಶ ಇದಾಗಿದೆ. ಇಂತಹ ಅನೇಕ ವಿಚಾರಗಳನ್ನು ನಾವೆಲ್ಲರೂ ಕಂಡುಕೊಂಡಾಗ, ಭಾರತ ದೇಶದ ಬಗ್ಗೆ ಅನೇಕ ಉಲ್ಲೇಖಗಳು ಬರುತ್ತವೆ. "ಭಾರತಂ, ಮಹಾಭಾರತಂ, ಗಂಗಾ, ನರ್ಮದಾ, ಪುಣ್ಯ ತೀರ್ಥಂ, ಕೃಷ್ಣಾ , ಸಿಂಧು, ಸರಸ್ವತಿ, ಕಾವೇರಿ ಜೀವನ ಕಾರಣ ಮೂಲತತ್ವಂ, ನದಿ ರಾಷ್ಟ್ರಸ್ಯ ಮಹಾ ಅಮೃತಂ" ಮಾತನ್ನು ಕೇಳಿದಾಗ ಭಾರತಕ್ಕೆ ಏಕೆ ಶ್ರೇಷ್ಠತೆ ಬಂತು ಮತ್ತು ಬೇರೆ ರಾಷ್ಟ್ರಗಳಿಗಿಂತ ಹೆಚ್ಚು ಮಹತ್ವ ಇದೆ ಎನ್ನುವ ವಿಚಾರವನ್ನು ವಿಚಾರ ಮಾಡಿದಾಗ ಭಾರತ ದೇಶದಲ್ಲಿರುವ ಗಂಗಾ, ಕಾವೇರಿ, ಕೃಷ್ಣಾ, ನರ್ಮದಾಗಳಂತಹ ಪುಣ್ಯ ತೀರ್ಥಗಳು ಇರುವುದರಿಂದ ಭಾರತಕ್ಕೆ ಬೆಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಿದೆ. ಎಲ್ಲಾ ನದಿಗಳು ನೀರನ್ನು ಬಳಸಿಕೊಂಡು ರೈತನ ಬದುಕು ಹಸನು ಮಾಡಲು ನೀರನ್ನು ಕೊಡಬೇಕಾಗಿದೆ. ರೈತನ ಬೆಲೆಯನ್ನು ದ್ವಿಗುಣ ಮಾಡಲು ರೈತನ ಭೂಮಿಗೆ ನೀರನ್ನು ಒದಗಿಸುವ ಕೆಲಸ ಮಾಡಬೇಕು. ಅದಕ್ಕಾಗಿ ನದಿಗಳ ಜೋಡಣೆ ಹಾಗೂ ಇರುವ ನೀರು ಸದ್ಬಳಕೆ ಆಗಬೇಕು ಎನ್ನುವ ದೃಷ್ಟಿಯಲ್ಲಿ ಡ್ಯಾಂ ಕಟ್ಟಬೇಕಾದ ಅನಿವಾರ್ಯತೆ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಕೃಷ್ಣಾ ಕಣಿವೆಯಲ್ಲಿ ಯೋಜನೆಯನ್ನು ಜಾರಿಗೆ ತರಲು ಅಧಿಕಾರಿ ವರ್ಗ ಇಲ್ಲ, ಹತ್ತು-ಹಲವು ಕಛೇರಿಗಳಲ್ಲಿ ಎಲ್ಲರೂ In-charge ಆಗಿದ್ದಾರೆ. ಅಷ್ಟೋ-ಇಷ್ಟೋ ಜಮೀನು ಭೂಸ್ವಾಧೀನ ಆಗಿ ನ್ಯಾಯಾಲಯಕ್ಕೆ ಹೋಗಿರುವ ಸಂದರ್ಭದಲ್ಲಿ ನ್ಯಾಯಾಲಯದ ತೀರ್ಪು ಇತ್ಯರ್ಥ ಆದರೆ no appeal ಕೊಡಿಸಲು ಬೆಂಗಳೂರಿಗೆ ಬರಬೇಕಾಗಿದೆ. ಇವೆಲ್ಲವೂ ಅಲ್ಲಿಯೇ ಆಗಬೇಕು. ಭೂಸ್ವಾಧೀನ ಆಗಿ, Court ಗೆ ಹೋಗಿ, payment ಕೊಡಬೇಕಾದರೆ no appeal ಬಂದಿಲ್ಲ ಎಂದು ೬ ತಿಂಗಳು ಒಂದು ವರ್ಷ ಅಲೆಯುವುದನ್ನು ನಾವು ಕಾಣುತ್ತಿದ್ದೇವೆ. ಇವೆಲ್ಲವೂ KBJNL (Krishna Bhagya Jala Nigam Ltd.)ನ ಮೂಲಕ ಇತ್ಯರ್ಥವಾಗಬೇಕು. ಅದಕ್ಕೆ ಬೆಂಗಳೂರಿನಲ್ಲಿರುವ KBJNL ಕಾರ್ಯಾಲಯವನ್ನು ಬೆಳಗಾವಿಗೆ shift ಮಾಡಬೇಕು. ಆ ಯೋಜನೆಯು ಬೆಳಗಾವಿ ಭಾಗದಲ್ಲಿದೆ. ಆದರೆ office ಬೆಂಗಳೂರಿನಲ್ಲಿದೆ. ಸಂತ್ರಸ್ತರು ಬೆಂಗಳೂರಿಗೆ ತೆರಳಬೇಕಾಗಿದೆ. ಆದ್ದರಿಂದ ಮಾನ್ಯ ನೀರಾವರಿ ಸಚಿವರಲ್ಲಿ ವಿನಂತಿಸುವುದೇನೆಂದರೆ, ದಯವಿಟ್ಟು KBJNL Office ಅನ್ನು ಸುವರ್ಣ ಸೌಧಕ್ಕೆ ವರ್ಗಾಯಿಸುವ ಕೆಲಸವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ನಾವೆಲ್ಲರೂ ಯೋಜನೆ ಬಗ್ಗೆ ಮಾತನಾಡುವಾಗ ರೈತರ ಬಗ್ಗೆ ಮಾತನಾಡುತ್ತಿದ್ದೇವೆ. ರೈತನು ರಾಷ್ಟ್ರದ ಬೆನ್ನೆಲುಬು, ಒಕ್ಕಲಿಕ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲಾ ಎಂದು ಹೇಳುತ್ತೇವೆ. ನಮ್ಮ ರೈತರು ೪ ಲಕ್ಷ ಎಕರೆ ಜಮೀನನ್ನು ಸರ್ಕಾರಕ್ಕೆ, ರಾಷ್ಟ್ರಕ್ಕೆ ಸಮರ್ಪಣೆ ಮಾಡಿ, ತ್ಯಾಗ ಮನೋಭಾವನೆಯನ್ನು ಮೆರೆದಿದ್ದಾನೆ. ದೇಶವನ್ನು ಕಾಯುವ ಯೋಧರು ಎಷ್ಟು ಶ್ರೇಷ್ಠರೋ, ಅಂತಹ ಯೋಧರಿಗೆ ಸಮಾನವಾಗಿ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗಿರುವ ಸಂತ್ರಸ್ತರು ಅಷ್ಟೇ ಶ್ರೇಷ್ಠರು ಎಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಸುಮಾರು ೧೩೮ ಪುನರ್ವಸತಿ ಕೇಂದ್ರಗಳು ನಿರ್ಮಾಣವಾಗಿದ್ದು, ಇವುಗಳಲ್ಲಿ ೩೪ ಪುನರ್ವಸತಿ ಕೇಂದ್ರಗಳಿಗೆ ಸ್ಮಶಾನ ಜಾಗ ಇಲ್ಲ. ೩೪ ಗ್ರಾಮಗಳಿಗೆ ಸ್ಮಶಾನ ಜಾಗ ಇಲ್ಲ. ಇದರಲ್ಲಿ ೮ ಗ್ರಾಮಗಳ ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನ ಜಾಗಕ್ಕೆ ಸಂಬಂಧಪಟ್ಟಂತೆ ಸುಮಾರು ೧೦ ವರ್ಷಗಳಿಂದ High Court ನಲ್ಲಿ pending ಇದೆ. ಇದೆಲ್ಲವನ್ನೂ ಗಮನಿಸಿದಾಗ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕಾ

ಸರ್ಕಾರ ಸಂತ್ರಸ್ತರ ಬಗ್ಗೆ ಕಡಿಮೆ ಧೋರಣೆ ತೋರುವುದು ಸರಿಯಲ್ಲ. ಒಂದು ಕಡೆ ಡ್ಯಾಂ ಎತ್ತರಿಸಿ ನೀರು ಸಂಗ್ರಹ ಹೆಚ್ಚಳ ಮಾಡಬೇಕು. ಇನ್ನೊಂದು ಕಡೆ ಸಂತ್ರಸ್ತರ ಬದುಕನ್ನು ನೋಡಬೇಕು ಎಂದು ಹೇಳುತ್ತೇನೆ.

ಇನ್ನು ಹಣಕಾಸಿ ವ್ಯವಸ್ಥೆ ಸರ್ಕಾರದ ಮೇಲೆ ಇದ್ದು ಕೋವಿಡ್-೧೯ ಪರಿಸ್ಥಿತಿಯಲ್ಲಿ , ಒಂದು ಕಡೆ ಅತೀವೃಷ್ಠಿ ಇದ್ದರೆ ಮತ್ತೊಂದು ಕಡೆ ಅನಾವೃಷ್ಠ ಇದೆ. ಇದರ ಮಧ್ಯೆ ಸಾಕಷ್ಟು ಯೋಜನೆಗಳನ್ನು ಸರ್ಕಾರ ಜಾರಿಗೆ ತರುತ್ತಿದೆ. ಅಂತಹದ್ದರಲ್ಲಿಯೂ ಈ ಯೋಜನೆಗೆ ದೊಡ್ಡ ಪ್ರಮಾಣದ ಹಣ ನೀಡಿದ್ದು, ಯೋಜನೆ ಗಾತ್ರ ನೋಡಿದಾಗ ೩ನೇ ಹಂತ ಸ್ವಲ್ಪವೇ ಇದೆ ಎಂದನಿಸುತ್ತದೆ. ಇವತ್ತಿನ ಮಾರುಕಟ್ಟೆ ಬೆಲೆಗೆ ಹೋಲಿಸಿದಾಗ ಹಿಂದೆ ಆಗಿರುವ payment ನ ಎರಡು ಪಟ್ಟು ಖರ್ಚಾಗುವುದಿದೆ. ಆ ಹಿನ್ನಲೆಯಲ್ಲಿ ಇದನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡಬೇಕೆಂದು ನನ್ನ ಆಗ್ರಹವಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೂ ಕಡಿಮೆ ಭಾರ ಬರುತ್ತದೆ ಅಥವಾ ನಾಲ್ಕು ವರ್ಷಗಳಲ್ಲಿ ಕಾಲೇಶ್ವರಂ ಯೋಜನೆ ಹಾಕಿಕೊಂಡಂತೆ ಪ್ರತಿ ವರ್ಷ ರೂ.೨೦ ರಿಂದ ೨೫ ಕೋಟಿ ಹಣ ಖರ್ಚು ಮಾಡಿ, ೪ ವರ್ಷಗಳಲ್ಲಿ ೧೩೦ TMC ನೀರನ್ನು ಬಳಸಿಕೊಳ್ಳುವುದು ಆಗಬೇಕು. ಆ ಹಿನ್ನೆಲೆಯಲ್ಲಿ ಸರ್ಕಾರ ಚಿಂತನೆ ಮಾಡಬೇಕು. ಇದರ ಜೊತೆ ೧೫೦ kilometer ದೂರದಲ್ಲಿ ನೀರನ್ನು canal ಮೂಲಕ ಕೊಡುತ್ತಿದ್ದೇವೆ. ಬಾದಿತಗೊಂಡ ಪ್ರದೇಶಗಳಿಗೆ ನೀರಿನ ಹಂಚಿಕೆ ಪ್ರಮಾಣವನ್ನು ಗಮನಿಸಬೇಕು. ೭ ಜಿಲ್ಲೆಗಳಲ್ಲಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳು ಸಂತ್ರಸ್ತ ಜಿಲ್ಲೆಗಳಾಗಿದ್ದು, ಜಮೀನು ಕಳೆದುಕೊಂಡು ಆಸ್ತಿಯನ್ನು ತ್ಯಾಗ ಮಾಡಿದಂತಹ ೪ ಲಕ್ಷ ಸಂತ್ರಸ್ತರ ಜಿಲ್ಲೆಗಳಾಗಿವೆ. ಆದರೆ ನೀರಿನ ಲಾಭ ಎಲ್ಲಿ ಆಗುತ್ತಿದೆ, ೧ನೇ ಮತ್ತು ೨ನೇ ಹಂತದ ೧೨೩ TMC ನೀರು ಹಾಗೂ ೩ನೇ ಹಂತದ ೧೩೦ TMC ನೀರನ್ನು ಯಾದಗಿರಿ, ರಾಯಚೂರು, ಗುಲ್ಬರ್ಗದಲ್ಲಿನ ಭೂಮಿಗಳಲ್ಲಿ ಬಳಸಲಾಗುತ್ತದೆ. ಇವೆಲ್ಲವನ್ನು ಗಮನಿಸಿದಾಗ ನೀರು ೧೫೦ ರಿಂದ ೧೮೦ kilometer ವರೆಗೆ canal ಗಳಲ್ಲಿ ಹೋಗುತ್ತಿದೆ, ಇದರಲ್ಲಿ ೯ TMC ನೀರು ಬಾಷ್ಪೀಕರಣ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ನಾವು ೬ TMC ಮಹದಾಯಿ ನೀರಿಗೆ ಬಡಿದಾಡುತ್ತಿದ್ದೇವೆ. ಇಲ್ಲಿ ೯ TMC ನೀರು ಆವಿಯಾಗುತ್ತಿದೆ. ಇದೆಲ್ಲವನ್ನೂ ಗಮನಿಸಿದಾಗ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಕೃಷ್ಣ ಮತ್ತು ಘಟಪ್ರಭಾಗಳಿಂದ ೨೦ kilometer ಅಂತರಗಳಲ್ಲಿ ಒಣ ಬೇಸಾಯ ಭೂಮಿ ಇದೆ. ಆ ಭೂಮಿಯ ನೀರನ್ನು ಕೇಳಿದರೆ, ಆ ನೀರು allocation ಇಲ್ಲ, ಎಲ್ಲಾ ಕೆಳಗಿನ ಜಿಲ್ಲೆಗಳಿಗೆ ಇದೆ ಎಂದು ಹೇಳುತ್ತಾರೆ. ಆದ್ದರಿಂದ ಸಂತ್ರಸ್ತರ ಜಿಲ್ಲೆಗಳಿಗೆ ಮೊದಲು ಆದ್ಯತೆ ಕೊಡಬೇಕೆಂದು ಹೇಳಿ, ೧೩೦ TMC ನೀರಿನಲ್ಲಿ ಬಾಗಲಕೋಟೆ ಜಿಲ್ಲೆಗೆ ೨೮ TMC ನೀರು allotment ಆಗಿದೆ. ಬಿಜಾಪುರ ಜಿಲ್ಲೆಗೆ ೩೨ TMC ನೀರು ಆಗಿದೆ. ಬಾಗಲಕೋಟೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಜಾಪುರ ಜಿಲ್ಲೆಗಳಿಗೂ ಹೆಚ್ಚಿನ ನೀರು ಕೊಡುವ ವ್ಯವಸ್ಥೆ ಆಗಬೇಕು. ಬಾಗಲಕೋಟೆಯಿಂದ ೧೦ TMC ದೂರದಲ್ಲಿ ಒಣ ಬೇಸಾಯ ಭೂಮಿ ಇದ್ದು, ಯಾವುದೇ ಯೋಜನೆ ತಂದಾಗ ನೀರಿನ allocation ಇಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ಆ ಕಡೆಯೂ ಒತ್ತು ಕೊಡಬೇಕೆಂದು ವಿನಂತಿಸುತ್ತೇನೆ.

ಇನ್ನು ಬಹಳ ವಿಷಯಗಳನ್ನು ಮಾತನಾಡಬೇಕೆಂದು ನಾನು ಎರಡು ದಿವಸಗಳಿಂದ ಬರೆದುಕೊಂಡು ಬಂದಿದ್ದೆನು, ಕಳೆದ ಅಧಿವೇಶನದಲ್ಲಿ ೫ ದಿವಸಗಳಿಂದ ಬಂದರೂ touch ಆಗಲಿಲ್ಲ. ಇವತ್ತು ಬಹಳ ವಿಚಾರಗಳನ್ನು ಹಿರಿಯ ಶಾಸಕರು ಹಾಗೂ ಮಾನ್ಯ ಎಸ್.ಆರ್. ಪಾಟೀಲರು ಹೇಳಿರುವ ಎಲ್ಲಾ ವಿಷಯಗಳಿಗೆ ನಾನು ಬೆಂಬಲಿಸುತ್ತೇನೆ.

(ಮುಂದು)

(710)/15-9-2021/4-10/ಎಲ್ಎಂ/ವಿಕೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** (ಮುಂದು):-

ಎಲ್ಲ ಹಿರಿಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಚರ್ಚೆ ಮಾಡಲು ಪೂರ್ಣ ಒಂದು ದಿನ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಾಲ್ಕು ವರ್ಷಗಳಲ್ಲಿ ಈ ಯೋಜನೆಯನ್ನು ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. ಇನ್ನು ಸಂತ್ರಸ್ತರು registration ಮಾಡಿಕೊಳ್ಳಲು ೩ ವರ್ಷಗಳ ಅವಕಾಶವನ್ನು ಮಾತ್ರ ಕೊಟ್ಟಿದ್ದಾರೆ. ಜಮೀನು ಕಳೆದುಕೊಂಡ ನಾವು ೫ ವರ್ಷದವರೆಗೆ free of cost registration ಮಾಡಿಕೊಳ್ಳಬಹುದು. ೫ ವರ್ಷದಲ್ಲಿ ಜಮೀನು ಸಿಗದಿದ್ದರೆ ೧೦ ವರ್ಷಗಳ ನಂತರ registration ಮಾಡಿಕೊಳ್ಳಲು ಹೋದರೆ ಆಗ ನಮಗೆ ವಿನಾಯಿತಿ ಇಲ್ಲ. ದಯಮಾಡಿ ೫ ವರ್ಷ ಇರುವುದನ್ನು ೨೦ ವರ್ಷಗಳಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ(ಜಲಸಂಪನ್ಮೂಲ ಸಚಿವರು)**:- ಮಾನ್ಯ ಸಭಾಪತಿಗಳೆ, stamp duty exemption; ಸಂತ್ರಸ್ತರ ಮಕ್ಕಳಿಗೆ ನೌಕರಿ ಕೊಡುವುದನ್ನು ೨೦ ವರ್ಷಗಳವರೆಗೆ ಅವಕಾಶ ಕೊಡುವುದರ ಬಗ್ಗೆ ಈಗಾಗಲೇ sanction ಮಾಡಿದ್ದೇವೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ**:- ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಂತ್ರಸ್ತರ ಮಕ್ಕಳಿಗೆ ಸರ್ಕಾರಿ ನೌಕರಿಯಲ್ಲಿ ೫% ಮೀಸಲಾತಿಯನ್ನು ಕೊಡುವುದಕ್ಕೆ ೫ ವರ್ಷಗಳವರೆಗೆ ಅವಧಿ ಇತ್ತು, ಈಗ ಅದನ್ನು ೨೫

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಷಗಳಿಗೆ ಏರಿಸಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತು ಎಲ್ಲ ಸಂತ್ರಸ್ತರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಸಬ್ಸಿಡಿ ವಿನಾಯಿತಿಯನ್ನು ದಯಮಾಡಿ ೨೦ ವರ್ಷದವರೆಗೆ ಮಾಡಿಕೊಡಬೇಕೆಂದು ಮತ್ತೊಮ್ಮೆ ನಾನು ಮಂತ್ರಿಗಳಲ್ಲಿ ಆಗ್ರಹ ಮಾಡುತ್ತೇನೆ. ಈಗ ಇರುವ ೫ ವರ್ಷಗಳ ಅವಧಿಯನ್ನು ತೆಗೆದು ೧೦ ಅಥವಾ ೨೦ ವರ್ಷಗಳಾಗಿ ಮಾಡಿಕೊಟ್ಟರೆ ಸಂತ್ರಸ್ತರು ಜಮೀನನ್ನು ಖರೀದಿ ಮಾಡಲು ಅನುಕೂಲವಾಗುತ್ತದೆ. Backwater and flood ಬಂದ ಸಮಯದಲ್ಲಿ ನಾವು ಜಮಖಂಡಿಯ ಒಂದು ಹಳ್ಳಿಗೆ ಹೋಗಿದ್ದವು, ಅಲ್ಲಿಗೆ ಅವತ್ತು ನಡೆದಾಡುವ ದೇವರು, ಮಾತನಾಡುವ ದೇವರು ಎಂದು ಕರೆಯುವ ಶ್ರೀ ಸಿದ್ದೇಶ್ವರ ಶ್ರೀಗಳು ಬಂದಿದ್ದರು. ಅಜ್ಜನವರು ಬರುತ್ತಾರೆ ಎಂದು ಅಲ್ಲಿ ಸಾವಿರಾರು ಜನರು ಸೇರಿದರು. ಅಲ್ಲಿ ನೆರೆದಿರುವ ಎಲ್ಲ ಜನರು ಅಜ್ಜನವರನ್ನು ಕಣ್ಣತುಂಬಾ ನೋಡಿ ಸಂತೋಷಪಟ್ಟರು. ಈ ಯೋಜನೆಯಿಂದ ಸಂತ್ರಸ್ತರಾದವರು ಮಾತ್ರವಲ್ಲ ಪ್ರವಾಹದಿಂದ ಸಂತ್ರಸ್ತರಾದವರು ಅಲ್ಲಿ ಬಂದಿದ್ದರು. ಆಗ ಅಲ್ಲಿ ಅಜ್ಜನವರು ಹೇಳಿದ ಒಂದು ಮಾತನ್ನು ಇಲ್ಲಿ ನಾನು ಪ್ರಸ್ತಾಪ ಮಾಡಬಯಸುತ್ತೇನೆ, **ಶ್ರೀಗಳು ಮೌನವಾಗಿ ನಿಂತು ಹೇಳುತ್ತಿದ್ದಾರೆ " ಜೀವ ಉಳಿದಿದೆಯಲ್ಲ ಅಷ್ಟು ಸಾಕು, ಜೀವಕ್ಕಿಂತ ಯಾವುದು ದೊಡ್ಡದಲ್ಲ, ಜೀವ ಇರುವುದರಿಂದಲೇ ನಮ್ಮ-ನಿಮ್ಮ ಚಲನೆ, ಮಿಲನ ನಡೆಯುತ್ತಿದೆ, ಹೊಸ ಬದುಕು ಕಟ್ಟಿಕೊಳ್ಳಲು ಜೀವ ಒಂದು ಇದ್ದರೆ ಸಾಕು, ಜೀವಕ್ಕೆ ಒಂದು ವಿಚಿತ್ರ ಶಕ್ತಿ ಇದೆ, ತೊಂದರೆಯಲ್ಲಿದಾಗ ಅದು ಛಲವನ್ನು, ಗಟ್ಟಿತನವನ್ನು, ಶೌರ್ಯವನ್ನು, ಹೋರಾಟದ ಮನೋಭಾವವನ್ನು ಗೆಳೆಯರಾಗಿ ಕರೆದುಕೊಂಡು ಬರುತ್ತದೆ. ಈ ಗೆಳೆಯರು ಟೊಂಕಕಟ್ಟಿ ನಿಂತು ಹೊಸ ಬದುಕನ್ನು ಕಟ್ಟಿಕೊಡುತ್ತಾರೆ. ನಾಳೆ ಖಂಡಿತ ಸೂರ್ಯೋದಯವಾಗುತ್ತದೆ, ಹೂ ಗಳು ಅರಳುತ್ತವೆ, ಹಾಗೆ ನಿಮ್ಮ ಬದುಕಿನಲ್ಲಿ ಹೊಸ ನಗೆ ಮೂಡಿಯೇಮೂಡುತ್ತದೆ "ಎಂದು** ಅವರು ತಮ್ಮ ಸ್ಪಷ್ಟಧ್ವನಿಯಲ್ಲಿ ಹೇಳಿರುವುದನ್ನು ನಾನು ಕೇಳಿದ್ದೇನೆ. ಈ ಮಾತನ್ನು ಕೇಳಿದ ಸಂತ್ರಸ್ತರು ಖುಷಿಪಟ್ಟರು. ಇವತ್ತು ಆ ಪೂಜ್ಯರ ಮಾತು ನಮಗೆ ನೆನಪಾಗುತ್ತದೆ. ಆ ಸಂತ್ರಸ್ತರ ಕಣ್ಣೀರನ್ನು ಒರೆಸಲು ಸರ್ಕಾರ ಮುಂದೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಸಮಗ್ರ ಉತ್ತರ ಕರ್ನಾಟಕದ ನೀರಾವರಿ ಯೋಜನೆ ಬಗ್ಗೆ ಒಂದು ದಿನ ಚರ್ಚೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು, ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಗಳೆ, ಇಂದು ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಎಸ್.ಆರ್.ಪಾಟೀಲ್‌ರವರು ಈ ನಾಡಿನ ಬೃಹತ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರವನ್ನು ಚರ್ಚೆಗೆ ತಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಬಸವರಾಜ ಇಟಗಿಯವರು, ಶ್ರೀ ತಿಪ್ಪೇಸ್ವಾಮಿಯವರು ಮತ್ತು ಶ್ರೀ ಹಣಮಂತಪ್ಪ ನಿರಾಣಿಯವರು ಮಾತನಾಡಿದ್ದಾರೆ. ನಾನು ಖಂಡಿತವಾಗಿ ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ತಾವು ಕೊಟ್ಟ ೪-೫ ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಇಡೀ ಜಗತ್ತಿನ ನೀರಿನ ಮೂಲ ಅಂದರೆ, ಮಳೆ. ಆ ಮಳೆ ನೀರನ್ನು ಸಂಗ್ರಹಿಸುವಂತಹ ಕೆಲಸವನ್ನು ನಾವು ಎಷ್ಟು ಪರಿಣಾಮಕಾರಿಯಾಗಿ ಮಾಡುತ್ತೇವೆ, ಅಷ್ಟರಮಟ್ಟಿಗೆ ನೀರಿನ ಹಾಹಾಕಾರ ನೀಗುತ್ತದೆ. ಅದಕ್ಕಾಗಿ ಕೆರೆಕಟ್ಟೆಗಳು. ಹಳ್ಳ-ಕೊಳ್ಳಗಳು, ಸರೋವರಗಳು-ಸಮುದ್ರಗಳು ಎಲ್ಲವು ಇದ್ದಾಗಲೂ ನಾವು ಜಲಾಶಯಗಳ ನಿರ್ಮಾಣಕ್ಕೂ ದೊಡ್ಡಮಟ್ಟದಲ್ಲಿ ಕೈಹಚ್ಚಿದ್ದೇವೆ. ಶತ-ಶತಮಾನಗಳಿಂದ ಕೃಷ್ಣಾ-ಕಾವೇರಿ ಯೋಜನೆಗಳ ಬಗ್ಗೆ ಮಾತನಾಡುತ್ತಲೇ ಇದ್ದೇವೆ. ಆದರೆ ಯಾವ ಯೋಜನೆಗಳು ಇನ್ನು ಪೂರ್ಣವಾಗಿರುವುದಿಲ್ಲ. ನೆರೆಯ ರಾಜ್ಯವಾದ ಆಂಧ್ರದಲ್ಲಿ ಎರಡು ನೀರಾವರಿ ಯೋಜನೆಗಳು ಪೂರ್ಣವಾಗಿವೆ ಎಂದು ಮಾನ್ಯ ಸದಸ್ಯರಾದ ಹಣಮಂತಪ್ಪ ನಿರಾಣಿಯವರು ಈಗಾಗಲೇ ಹೇಳಿದರು. ಒಂದು ಪೋಲಾವರಂ ಆಂಧ್ರಪ್ರದೇಶದ ಯೋಜನೆ ಇನ್ನೊಂದು ಈಗಿನ ತೆಲಂಗಾಣದ ಕಾಲೇಶ್ವರಂ ನೀರಾವರಿ ಯೋಜನೆ. ಇದು ೧,೨೫,೦೦೦ ಕೋಟಿ ರೂಪಾಯಿಗಳ ಯೋಜನೆಯಾಗಿದ್ದು, ಇದು ಕೇವಲ ಮೂರು ವರ್ಷಗಳಲ್ಲಿ ಪೂರ್ಣವಾಗಿದೆ. ನಮ್ಮ ಯೋಜನೆಗಳು ಪ್ರಾರಂಭವಾಗಿ ಐದಾರು ದಶಕಗಳಾದರು ಮುಗಿಯಲಿಲ್ಲ. ೫೫ ರಿಂದ ೬೦,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೧೭೦ ಟಿಎಂಸಿ 'ಎ' ಸ್ಕೀಮ್‌ನ ಯೋಜನೆಯು ಸ್ವಲ್ಪಮಟ್ಟಿಗೆ ಪೂರ್ಣವಾಗಿದೆ. ಈಗ ಕೃಷ್ಣ ನ್ಯಾಯಮಂಡಳಿ ತೀರ್ಪು ಕೊಟ್ಟಿದೆ, 'ಬಿ' ಸ್ಕೀಮ್‌ನಲ್ಲಿ ೧೩೦ ಟಿಎಂಸಿ ನೀರನ್ನು ಬಳಸಿಕೊಳ್ಳಲೇ ಬೇಕು. ದುರಂತ ಎಂದರೆ, ಕರ್ನಾಟಕ ಎಲ್ಲಾ ವಿಚಾರಗಳಲ್ಲಿ ಅವಕೃಪೆಗೆ ಒಳಗಾಗುತ್ತಿದೆ. ಅದು ಕೃಷ್ಣಾ, ಕಾವೇರಿ ಅಥವಾ ಮಹದಾಯಿ ನೀರಾವರಿ ವಿಚಾರವಿರಲಿ, ಎಲ್ಲಾ ಕಾಲಘಟ್ಟದಲ್ಲಿಯು ಕೇಂದ್ರದಲ್ಲಿ ಯಾವುದೇ ವಿಚಾರವಿರಲಿ, ತಮಿಳುನಾಡು, ಮಹಾರಾಷ್ಟ್ರ,ಆಂಧ್ರಪ್ರದೇಶ ರಾಜ್ಯಗಳ ಮುಂದೆ ಕರ್ನಾಟಕದ ಸ್ಥಿತಿ ಅತ್ಯಂತ ಶೋಚನೀಯವಾಗಿದೆ ಎಂದು ಅತ್ಯಂತ ನೋವಿನಿಂದ ಭಾರವಾದ ಮನಸ್ಸಿನಿಂದ ಹೇಳುತ್ತೇನೆ. ಪೋಲಾವರಂ ಮತ್ತು ಕಾಲೇಶ್ವರಂ ಯೋಜನೆಗಳು ರಾಷ್ಟ್ರೀಯ ನೀರಾವರಿ ಯೋಜನೆಗಳು ಎಂದು ನಿರ್ಣಯವಾಗಿವೆ. ಕೇಂದ್ರ ಸರ್ಕಾರದವರು ಈ ಯೋಜನೆಗಳನ್ನು National Projects ಎಂದು ಘೋಷಣೆ ಮಾಡಿದ್ದಾರೆ. ನಾವು ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಅದರೆ ಏನು ಆಗಿರುವುದಿಲ್ಲ. ಇವತ್ತು ರಾಜ್ಯದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ಸರ್ಕಾರವಿದೆ. ಉತ್ತರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕದ ಜನರು ಬಿಜೆಪಿ ಪರ ಗಟ್ಟಿಯಾಗಿ ನಿಂತುಕೊಂಡಿದ್ದಾರೆ. ಆದರೆ ಏಕೆ ನಮ್ಮ ಯೋಜನೆಗಳು ರಾಷ್ಟ್ರೀಯ ಯೋಜನೆಗಳಾಗಿ ಘೋಷಣೆಯಾಗಲಿಲ್ಲ? ಘೋಷಣೆಯಾದರೆ ಬರುವ ಲಾಭ ಎಂದರೆ, ೯೦% ರಷ್ಟು ಯೋಜನೆಯ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ. Land works and Civil works ಗೆ ಕೇಂದ್ರ ಸರ್ಕಾರ ಹಣವನ್ನು ಕೊಡುತ್ತದೆ. ಕೇಂದ್ರ ಸರ್ಕಾರದ ತಂಡ ಬಂದು ಎಲ್ಲವನ್ನು ಪರೀಕ್ಷಿಸುತ್ತದೆ. ಯಾವ ಕೆಲಸಗಳು ನಿಲ್ಲುವುದಿಲ್ಲ. ಹೋದ ಅಧಿವೇಶನದಲ್ಲಿ ನಾನು ಮಾತನಾಡುತ್ತಾ, ಸರ್ಕಾರ ಮೇಕೆದಾಟು ಯೋಜನೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿದೆ. ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಮತ್ತು ತಮಿಳುನಾಡು ಮತ್ತು ಕರ್ನಾಟಕದ ವಿವಾದವನ್ನು ಶಾಶ್ವತವಾಗಿ ಪರಿಹರಿಸಿಕೊಳ್ಳಬೇಕು ಎಂದರೆ, ಮೇಕೆದಾಟು ಯೋಜನೆಯಾಗಬೇಕು. ಆ ಯೋಜನೆ ಎಷ್ಟು ಪ್ರಗತಿಯಾಗಿದೆ ಎನ್ನುವ ವಿವರಣೆಯನ್ನು ಇನ್ನು ಕೊಟ್ಟಿರುವುದಿಲ್ಲ. ಈ ವಿಚಾರವಾಗಿ ಕೇಂದ್ರ ಸರ್ಕಾರವನ್ನು ಭೇಟಿ ಮಾಡಲಾಗಿದೆಯೇ? ಆ ಯೋಜನೆ ಎಲ್ಲಿ ಹೋಯಿತು? ನಾವು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರನ್ನು ಭೇಟಿ ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ. ವಿಧಾನಸೌಧದ ಗಾಂಧಿ ಪ್ರತಿಮೆಯಿಂದ ರಾಜಭವನಕ್ಕೆ ಪಾದಯಾತ್ರೆ ಹೋಗಿದ್ದವು. ಎಲ್ಲಾ ಶಾಸಕರು ಸೇರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವು. ಮೇಕೆದಾಟು, ಕೃಷ್ಣಾ, ಕಾವೇರಿ ಯೋಜನೆಗಳ ವಿಚಾರವಾಗಿ ಮನವಿ ಪತ್ರಗಳನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯದ ರಾಜ್ಯಪಾಲರಿಗೆ, ಮುಖ್ಯಮಂತ್ರಿಗಳಿಗೆ ತಲುಪಿಸಿದ್ದೇವೆ. ಈ ಮೂರು ಮಹತ್ವದ ಯೋಜನೆಗಳಾಗಿದ್ದು, ತಮ್ಮ ಮುಖಾಂತರ ಸಚಿವರಲ್ಲಿ ನನ್ನ ಮನವಿ ಎಂದರೆ, ನೀರಾವರಿ ಯೋಜನೆಗಳ ವಿಚಾರವಾಗಿ ನಮ್ಮ ಚರ್ಚೆ ಇದ್ದೇ ಇರುತ್ತದೆ. ಎಲ್ಲಿಯವರಗೆ ಯೋಜನೆಯನ್ನು ಮುಗಿಸುವುದಿಲ್ಲ ಅಲ್ಲಿಯವರೆಗೆ ಚರ್ಚೆ ಇದ್ದೇ ಇರುತ್ತದೆ. ಕೃಷ್ಣಾ ಬಿ ಸ್ಕೀಮ್‌ಗೆ ಸಂಬಂಧಿಸಿದಂತೆ ಗೆಜೆಟ್ ನೋಟಿಫಿಕೇಶನ್ ಆಗಬೇಕು. ಆಂಧ್ರದವರು ತಕರಾರು ಮಾಡುತ್ತಿದ್ದಾರೆ ಅದು ಸರಿ, ಕಾವೇರಿ ವಿಚಾರದಲ್ಲಿ ತಕರಾರು ಇತ್ತು ಕೇಂದ್ರ ಸರ್ಕಾರದವರು ಮಧ್ಯಬಂದು ಆ ವಿವಾದವನ್ನು ಬಗೆಹರಿಸಿದರು. ಅದೇ ರೀತಿ ಇವತ್ತು ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಈ ವಿವಾದವನ್ನು ಇತ್ಯರ್ಥಗೊಳಿಸುವಂತೆ ಮಾಡಬೇಕು. ಇರುವ hurdles clear ಮಾಡಿ ಗೆಜೆಟ್ ನೋಟಿಫಿಕೇಶನ್ ತಕ್ಷಣ ಅಗಬೇಕು. ಗೆಜೆಜ್ ನೋಟಿಫಿಕೇಶನ್ ಆದ ತಕ್ಷಣ ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡುವಂತಹ ಒತ್ತಡವನ್ನು ಹಾಕಬೇಕು. ಅದರ ಬಗ್ಗೆ ಅಗತ್ಯಬಿದರೆ ಇಲ್ಲಿಯು ನಿರ್ಣಯ ಮಾಡಿ. ಕೇಂದ್ರದ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿ, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ, ತಾವೇ ಹೋಗಿ ಭೇಟಿಯಾಗುವುದಾದರೆ

ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಭೇಟಿಯಾಗಿ ಅಥವಾ ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತಿರಾ ಹೋಗಿ. ಕರ್ನಾಟಕದ ಒಂದು ಯೋಜನೆಗಾದರೂ ಕೇಂದ್ರದ ಮನ್ನಣೆ ಬೇಕಾಗುತ್ತದೆ. ನಾನು ಹಳೆಯ ಮೈಸೂರಿನವನು, ಆದರೂ ಕಾವೇರಿ-ಕೃಷ್ಣಾ ನಮ್ಮ ಎರಡು ಕಣ್ಣುಗಳಿದ್ದಂತೆ. ಇನ್ನು ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣ ಬೇಕು. ಮಾನ್ಯ ಜಲಸಂಪನ್ಮೂಲ ಸಚಿವರು ಹೊಸದಾಗಿ ಈ ಇಲಾಖೆಯ ಅಧಿಕಾರವನ್ನು ತೆಗೆದುಕೊಂಡಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳ spillover works ಇದೆ. ಹೀಗಿರುವಾಗ ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿ ಬಿ ಸ್ಕೀಮ್‌ನ್ನು ರಾಜ್ಯ ಸರ್ಕಾರ ಮಾಡಲು ಸಾಧ್ಯವೆ? ಇದಕ್ಕೆ ಪರಿಹಾರ ಎಂದರೆ, ಇದನ್ನು ರಾಷ್ಟ್ರೀಯ ಯೋಜನೆ ಎಂದು ಕೇಂದ್ರದಿಂದ ಘೋಷಣೆ ಮಾಡಿಸಬೇಕು. ಆಗ ಮಾತ್ರ ಈ ಯೋಜನೆ ಕಾಲಮಿತಿಯಲ್ಲಿ ಒಂದು ಅಥವಾ ಎರಡು ವರ್ಷಗಳಲ್ಲಿ ಮುಕ್ತಾಯವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಒಂದು ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ, ಮಾನ್ಯ ದೇವೇಗೌಡರು ೨೦ ತಿಂಗಳು ಪ್ರಧಾನ ಮಂತ್ರಿಗಳಾಗಿದ್ದರು. ಒಂದು ಯೋಜನೆಯನ್ನು ರೂಪಿಸಿ, ಇಡೀ ದೇಶದಲ್ಲಿ ಯಾವ ನೀರಾವರಿ ಯೋಜನೆಗಳು ನೆನೆಗುದಿಗೆ ಬಿದ್ದಿದ್ದವು ಆ ಯೋಜನೆಗಳನ್ನು ಜಾರಿಗೆ ತರಲು ಒಂದು ವಿಶೇಷ ಯೋಜನೆ AIBP (Accelerated Irrigation Benefit Program) ಎಂದು ರೂಪಿಸಿದರು. ಅದರಲ್ಲಿ ಕರ್ನಾಟಕ ರಾಜ್ಯಕ್ಕೆ ಆರರಿಂದ ಏಳು ಸಾವಿರ ಕೋಟಿ ರೂಪಾಯಿಗಳು ಹರಿದು ಬಂದಿತ್ತು.

(**ಮುಂದು**)

(711)/ 15.09.2021/ 4.10/ ಹೆಚ್‌ವಿ:ಜಿಆರ್

( ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು....):-**

ಸನ್ಮಾನ್ಯ ಸಭಾಪತಿಯವರೇ, ಆ ಭಾಗದ ಜನರು ಈಗಲೂ ಅವರನ್ನು ನೆನಪಿಸಿಕೊಳ್ಳುತ್ತಿದ್ದಾರೆ. ಈಗ ಇವರು ಏನು ಮಾಡುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಬಳಿ ಯಾವುದಾದರು ನಿಯೋಗವನ್ನು ತೆಗೆದುಕೊಂಡು ಹೋಗುತ್ತಾರೋ, ಅವರೋ ಖುದ್ದು ಕೇಂದರ ಸಚಿವರನ್ನು ಭೇಟಿ ಮಾಡುತ್ತಾರೋ ಅಥವಾ ತಮ್ಮ ಪ್ರಭಾವವನ್ನು ಬಳಸುತ್ತಾರೋ ಗೊತ್ತಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರುವಂತಹ ಸಂದರ್ಭದಲ್ಲಿ ಹೆಚ್ಚು ಅನುಕೂಲತೆಗಳು ರಾಜ್ಯಕ್ಕೆ ಹರಿದು ಬರುತ್ತವೆಂದು ನಾವೆಲ್ಲರೂ ಭಾವಿಸಿದ್ದೆವು. ದಯಮಾಡಿ ಮಾನ್ಯ ಜಲ ಸಂಪನ್ಮೂಲ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಗೆಜೆಟ್ ನೋಟಿಫಿಕೇಶನ್ ಮಾಡಿಸಬೇಕು ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಿಸಿದರೆ ಬಹುಶಃ ನಮ್ಮ ಈ ಪ್ರಯತ್ನಕ್ಕೆ ಶಾಶ್ವತವಾದ ಪರಿಹಾರ ಶರವೇಗದಲ್ಲಿ ದೊರೆಯುತ್ತದೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಡಾ||ತೇಜಸ್ವಿನಿ ಗೌಡ(ವಿಧಾನಸಭಾಯಿಂದ ಚುನಾಯಿತರಾದವರು)**:- ಸನ್ಮಾನ್ಯ ಸಭಾಪತಿಯವರೇ, ಈ ಮನೆಯ ಹಿರಿಯ ಸದಸ್ಯರುಗಳು ಈ ವಿಷಯದ ಬಗ್ಗೆ ಬಹಳಷ್ಟು ಮಾತನಾಡಿದ್ದಾರೆ. ಕೆಲವೊಂದು ವಿಚಾರಗಳ ಮೇಲೆ ಮಾತ್ರ ಬೆಳಕು ಚೆಲ್ಲುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲ ರಾಜ್ಯಗಳ ಮಧ್ಯೆ ಸಮನ್ವಯವನ್ನು, ಶಾಂತಿ ಮತ್ತು ಪ್ರೀತಿಯನ್ನು ಸಾಧಿಸಲೇ ಬೇಕಾಗಿರುವ ಅನಿವಾರ್ಯತೆ ಇದ್ದಾಗ್ಯೂ ಕೂಡ ರಾಜ್ಯದ ಹಿತವನ್ನು ಕಾಪಾಡಬೇಕಾದಾಗ ಅಂತರ್‌ರಾಜ್ಯ ಮಟ್ಟದಲ್ಲಿ ನದಿ ನೀರಿನ ವಿಚಾರ ಮತ್ತು ಭಾಷಾ ವಿಚಾರಗಳು ಬಹಳ ಸೂಕ್ಷ್ಮವಾಗಿರುವ ವಿಚಾರಗಳಾಗಿರುತ್ತವೆ. ಅನೇಕ ಮಂದಿ ಹಿರಿಯರು ಸ್ವಾತಂತ್ರ್ಯ ಪೂರ್ವದಿಂದಲೂ ಇರುವಂತಹ ನದಿ ನೀರಿನ ವಿವಾದದ  ಬಗ್ಗೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮತ್ತು ಕರ್ನಾಟಕ ರಾಜ್ಯ ರಚನೆಯಾದ ಮೇಲೆ ರಾಜ್ಯದ ನೀರಿನ ಹಕ್ಕನ್ನು ಕಾಪಾಡುವುದಕ್ಕೆ ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದರೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕಾಗಿ ಇಂದಿನ ಪೀಳಿಗೆಯವರು ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ. ನೀರಿನ ಹಕ್ಕನ್ನು ಪ್ರತಿಪಾದನೆ ಮಾಡುವುದಕ್ಕೋಸ್ಕರ ನೂರಾರು ಕೋಟಿ ರೂಪಾಯಿಗಳನ್ನು ನ್ಯಾಯಾಲಯಗಳಲ್ಲಿ ವ್ಯಯ ಮಾಡಿದ್ದೇವೆ. ಏಕೆಂದರೆ ಮೊದಲು ನಮ್ಮ ನೀರಿನ ಹಕ್ಕನ್ನು ಪ್ರತಿಪಾದನೆ ಮಾಡಬೇಕಾಗುತ್ತದೆ. ಎರಡನೆಯದಾಗಿ, ಹತ್ತಾರು ಜನ ಮೇದಾವಿಗಳು ಸಾವಿರಾರು ಜನ ವಕೀಲರು, ಅಧಿಕಾರಿಗಳು  ಮತ್ತು ನಮ್ಮ ರಾಜಕೀಯ ಮುತ್ಸದ್ದಿಗಳು ಈ ವಿಚಾರದ ಬಗ್ಗೆ ಅಧ್ಯಯನ ಮಾಡಿ ರಾಜ ತಾಂತ್ರಿಕ ನೈಪುಣ್ಯತೆಯನ್ನು ಮೆರೆದು ಪಕ್ಕದ ರಾಜ್ಯದವರ ಜೊತೆಗೆ ಕೆಲವೊಮ್ಮೆ ಯುಕ್ತಿಯಿಂದ ಕೆಲವೊಮ್ಮೆ ಶಕ್ತಿಯಿಂದ ನಮ್ಮ ನೀರಿನ ಹಕ್ಕನ್ನು   ಪ್ರತಿಪಾದನೆ ಮಾಡಿಕೊಂಡಿದ್ದೇವೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಸಾರ್ವಜನಿಕ ಮಹತ್ವದ ವಿಚಾರದಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ  ಮಾಡಿದ್ದಾರೆ. ಕೃಷ್ಣಾ, ಕಾವೇರಿ ಮತ್ತು ಮಹದಾಯಿ ಅಥವಾ ಬೇರೆ ಯಾವುದೇ ನದಿ ನೀರಾವರಿ ಯೋಜನೆಗಳ ವಿಚಾರ ಬಂದಾಗ, ಅದು ಕರ್ನಾಟಕ ರಾಜ್ಯದ ಜನರ ಭಾವನಾತ್ಮಕ ಮತ್ತು ಪ್ರತಿಷ್ಠೆಯ ವಿಚಾರವಾಗಿರುತ್ತದೆ. ನಮ್ಮ ಪಕ್ಕದ ರಾಜ್ಯದವರು ಜಲಯಜ್ಞ ಮಾಡಿ, ನೀರಾವರಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರೈಸುವಾಗ, ನಾವು ಇಷ್ಟು ಸುದೀರ್ಘವಾಗಿ ನೀರಾವರಿ ಯೋಜನೆಗಳನ್ನು ಮಾಡುತ್ತಿರುವ ಬಗ್ಗೆ ನಮಗೆ ದುಃಖ ಮತ್ತು ಹೊಟ್ಟೆಕಿಚ್ಚಾಗುತ್ತಿದೆ. ಒಂದು ಕಡೆ ಅತಿವೃಷ್ಠಿಯಿಂದಾಗಿ ಸಮಸ್ಯೆಯುಂಟಾದರೆ, ಮತ್ತೊಂದು ಕಡೆ 1600 ಅಡಿಗಳಷ್ಟು ಅಂತರ್ಜಲ ಕುಸಿತಗೊಂಡಿರುವ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಇದರಿಂದಾಗಿ ಸಮಾನತೆಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವು ಆದ್ಯತೆಯನ್ನು ಯಾವುದಕ್ಕೆ ಕೊಡಬೇಕು ಎನ್ನುವುದರ ಬಗ್ಗೆ ಇದೊಂದು ಅಪಾಯದ ಕರೆಗಂಟೆಯಾಗಿದೆ. ಡಾ|| ಎ.ಪಿ.ಜೆ.ಅಬ್ದುಲ್ ಕಲಂ ಅವರು, 'ನಿದ್ದೆ ಮಾಡುವಾಗ ಕನಸು ಕಾಣುವುದು ಸಹಜ. ಆದರೆ, ನಿದ್ದೆ ಮಾಡುವುದಕ್ಕೆ ಬಿಡದೇ ಇರುವಂತಹ ಕನಸ್ಸು ಕಾಣಬೇಕಾಗಿದೆ. ಆ ಕನಸ್ಸಿನ ಬೆನ್ನೆತ್ತಬೇಕು' ಎಂದು ಹೇಳಿದ್ದಾರೆ, ಈ ವಿಚಾರದಲ್ಲಿ ಹಿಂದಿನ ಅನೇಕ ಮುಖ್ಯಮಂತ್ರಿಗಳು ನೋವನ್ನುಂಡಿದ್ದಾರೆ, ಶ್ರೀಯುತರುಗಳಾದ ಹೆಚ್.ಡಿ.ದೇವೇಗೌಡರು, ಜೆ.ಹೆಚ್.ಪಟೇಲ್‌ರವರು, ಎಸ್.ಎಂ.ಕೃಷ್ಣಾರವರು, ಬಿ.ಎಸ್.ಯಡಿಯೂರಪ್ಪನವರು ನೀರಾವರಿ ವಿಚಾರದಲ್ಲಿ ಜೈಲಿಗೆ ಹೋಗುವ ಹಂತವನ್ನು ತಲುಪಿರುವ ವಿಚಾರವನ್ನು ನಾನು ಪತ್ರಕರ್ತೆಯಾಗಿ ಮತ್ತು ಈ ರಾಜ್ಯದ ಪ್ರಜೆಯಾಗಿ ಕಂಡಿದ್ದೇನೆ. ಇಂತಹ ಸಂದರ್ಭದಲ್ಲಿ ನಾವು ಮುಕ್ತವಾಗಿ ಮಾತನಾಡಬೇಕಾಗುತ್ತದೆ. ಮೊಟ್ಟಮೊದಲ ಬಾರಿಗೆ ನಾವು ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಸೋರಿಕೆಯನ್ನು ತಡೆಗಟ್ಟಬೇಕಾಗಿದೆ. ಒಂದು ಯೋಜನೆಯ ಪ್ರಾರಂಭದಲ್ಲಿ ಅಂದಾಜು ವೆಚ್ಚ ಎಷ್ಟಿರುತ್ತದೆ ಅದು ಮುಕ್ತಾಯಗೊಳ್ಳುವಷ್ಟರಲ್ಲಿ ಎಷ್ಟಾಗುತ್ತದೆ ಎನ್ನುವುದು ಮುಖ್ಯವಾಗುತ್ತದೆ. ಯೋಜನೆ ವಿಳಂಬವಾದಷ್ಟೂ ಅಂದಾಜು ವೆಚ್ಚದ ಪ್ರಮಾಣ ಹೆಚ್ಚಾಗುತ್ತದೆ. ಮತ್ತೊಂದು ಕಡೆ ಗುಣಮಟ್ಟ ಮತ್ತು ಸೋರಿಕೆಯಿಂದಾಗಿ ಹಣ ವ್ಯಯವಾಗುತ್ತದೆ. ಕರ್ನಾಟಕ ರಾಜ್ಯ ತನ್ನ ನೀರಿನ ಹಕ್ಕನ್ನು ಸಾಧನೆ ಮಾಡಿಕೊಳ್ಳದಿದ್ದರೆ ಮತ್ತೊಂದು ಅಪಾಯ ಕಾದಿದೆ. ಇಂತಹ ವಿಚಾರಗಳು ಬಂದಾಗ ಕೋರ್ಟ್‌ಗಳು ಬಹಳ ಸೂಕ್ಷ್ಮವಾಗಿ ಸ್ಪಂದಿಸುತ್ತವೆ. ಒಂದು ಕಡೆ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ನಮ್ಮ ರಾಜ್ಯದ ವಕೀಲರು ನಮ್ಮ ನೀರಿನ ಹಕ್ಕನ್ನು ದೊರಕಿಸಿಕೊಟ್ಟಿದ್ದಾರೆ. ಕೃಷ್ಣಾ, ಕಾವೇರಿ ಮತ್ತು ಮಹದಾಯಿ ನದಿಗಳಿಂದ ಬರುವ ನಮ್ಮ ಭಾಗದ ನೀರನ್ನು ನಿಗದಿತ ಸಮಯದಲ್ಲಿ ಬಳಸಿಕೊಳ್ಳದೇ ಇದ್ದರೆ ಮುಂದಿನ ದಿನಗಳಲ್ಲಿ ನಾವು ಅಪಾಯವನ್ನು ಎದುರಿಸಬೇಕಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಪ್ರತಿಪಕ್ಷಗಳು ನೀಡಿರುವಂತಹ ಸಲಹೆ ಸೂಚನೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುವಂತಹ ಸರ್ಕಾರ ನಮ್ಮದು. ಮಾನ್ಯ ಎಸ್.ಆರ್.ಪಾಟೀಲ್‌ನವರು ನೋಡುವುದಕ್ಕೆ ಮೃದು ಸ್ವಭಾವದವರಾಗಿದ್ದರೂ ಮಾತಿನ ಅಂಕುಶದಿಂದ ಸರ್ಕಾರವನ್ನು ಚುಚ್ಚಿದ್ದಾರೆ. ಅವರ ಕರ್ತವ್ಯವನ್ನು ಅವರು ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮದು ಡಬ್ಬಲ್ ಇಂಜಿನ್ ಸರ್ಕಾರವಾಗಿದೆ. ಡಬ್ಬಲ್ ಇಂಜಿನ್ ಸರ್ಕಾರವಾಗಿದ್ದರೂ ಸಹ ಈ ದೇಶದ ಪ್ರಧಾನ ಮಂತ್ರಿಗಳಾಗಿರುವ ಮಾನ್ಯ ನರೇಂದ್ರ ಮೋದಿಯವರು ರಾಜ್ಯದ ನೀರಾವರಿ ವಿಚಾರ ಬಂದಂತಹ ಸಂದರ್ಭದಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರ ಜೊತೆಗೆ ಮಾತುಕತೆ ನಡೆಸುವುದರ ಜೊತೆಗೆ ಬಾಗಿಲಿಗೆ ಬಂದು ಕಳುಹಿಸಿಕೊಡುವಂತಹ ಸೌಜನ್ಯವನ್ನು ಸಹ ಹೊಂದಿದ್ದಾರೆ. ನಮ್ಮ ಸರ್ಕಾರಕ್ಕೆ ಯಾವುದೇ ರೀತಿಯ ಪ್ರತಿಷ್ಠೆ ಎನ್ನುವುದು ಇಲ್ಲ. ಈ ವಿಚಾರದಲ್ಲಿ ಯಾರೂ ಸ್ವಪ್ರತಿಷ್ಠೆಯನ್ನು ತೋರಿಸುವುದಿಲ್ಲ. ಹಿಂದೆ ಮಾನ್ಯ ಹೆಚ್.ಎನ್.ನಂಜೇಗೌಡರು, ಶ್ರೀಯುತ ನಾಗೇಗೌಡರು, ಶ್ರೀ ಹೆಚ್.ಡಿ.ದೇವೇಗೌಡರು, ಮಾನ್ಯ ಪುಟ್ಟಸ್ವಾಮಿಗೌಡರು ಮತ್ತು ಈಗಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು ಮತ್ತು ನೀರಾವರಿ ಸಚಿವರಾಗಿರುವ ಶ್ರೀ ಗೋವಿಂದ ಕಾರಜೋಳ ಇವರುಗಳಿಂದ ಇಂದಿನ ಪೀಳಿಗೆಯವರು ನೀರಾವರಿಯ ಬಗ್ಗೆ ಜ್ಞಾನವನ್ನು ಪಡೆದುಕೊಳ್ಳಬೇಕಾಗಿದೆ. ನೀರಾವರಿ ವಿಚಾರ ಬಂದಾಗ ಬೇರೆ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಬೇಗನೇ ಅನುಷ್ಠಾನಗೊಳಿಸಲು ಬೇರೆ ಖರ್ಚುಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಕಾರಾತ್ಮಕವಾದ ತೀರ್ಮಾನಗಳನ್ನು ತೆಗೆದುಕೊಂಡ ಸಂದರ್ಭದಲ್ಲಿ ವಿರೋಧ ಪಕ್ಷದವರು ಸಹಕಾರವನ್ನು ನೀಡಬೇಕಾಗುತ್ತದೆ. ಆದ್ಯತೆಯ ಮೇರೆಗೆ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕಾಗಿದೆ ಮತ್ತು ಒಂದು ಕಾಲಮಿತಿಯೊಳಗೆ ಅವುಗಳನ್ನು ಮುಗಿಸಬೇಕಾಗಿದೆ. ಅದರಿಂದ ದೊರೆಯುವಂತಹ ಫಲವನ್ನು ನಮ್ಮ ತಲೆಮಾರಿನವರು ಮತ್ತು ನಮ್ಮ ಮುಂದಿನ ತಲೆಮಾರಿನವರು ಅನುಭವಿಸುವಂತಾಗಬೇಕಾಗಿದೆ. ನಾನು ಹೈಕೋರ್ಟ್‌ನ ಒಬ್ಬ ನ್ಯಾಯಮೂರ್ತಿಗಳ ಜೊತೆಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ, 'ಹಿಂದೆ ಮಾನವ ಕೇಂದ್ರೀಕೃತ ತೀರ್ಪುಗಳನ್ನು ನೀಡಲಾಗುತ್ತಿತ್ತು. ಈಗ ಪ್ರಕೃತಿ ಉಳಿದರೆ ನಾವು ಉಳಿಯುತ್ತೇವೆ ಎನ್ನುವ ಹಿನ್ನೆಲೆಯಲ್ಲಿ ಪ್ರಕೃತಿಯನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ' ಎನ್ನುವ ಮಾತನ್ನು ಹೇಳಿದರು. ಮನುಷ್ಯ ಇವತ್ತು ಅತಿವೃಷ್ಟಿ ಮತ್ತು ಅನಾವೃಷ್ಟಿಗಳನ್ನು ಎದುರಿಸುತ್ತಿದ್ದೇವೆ. ಉತ್ತರ ಕರ್ನಾಟಕ ಭಾಗದ ಮತ್ತು ಕರಾವಳಿ ಭಾಗದ ನನ್ನ ಅನೇಕ ಜನ ಸ್ನೇಹಿತರು ಮಾತನಾಡುತ್ತಿದ್ದ ಸಂದರ್ಭದಲ್ಲಿ 'ನಾವು ಕಷ್ಟಪಟ್ಟು ಸಂಪಾದನೆ ಮಾಡಿದಂತಹ ಸಂಪತ್ತು ನೀರಿನ ಪಾಲಾಗುತ್ತಿದೆ. ಒಂದು ಕಡೆ ಕಡಲು ಕೊರೆತ ಮತ್ತೊಂದು ಕಡೆ ಪ್ರವಾಹದ ರಭಸವನ್ನು ನಾವು ಎದುರಿಸುತ್ತಿದ್ದೇವೆ' ಎನ್ನುವಂತಹ ಮಾತುಗಳನ್ನು ಹೇಳಿದ್ದಾರೆ. ಬಹಳ ಕಷ್ಟಪಟ್ಟು ಸಂಪಾದನೆ ಮಾಡಿದ ಮನೆಮಠ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರು ಮಾತನಾಡುತ್ತಿದ್ದ

ಸಂದರ್ಭದಲ್ಲಿ, ಮುಳುಗಡೆಯಾಗಿರುವ ಪ್ರದೇಶದೊಂದಿಗೆ ಸಂತ್ರಸ್ತರ ಭಾವನಾತ್ಮಕ ಸಂಬಂಧ ಯಾವ ರೀತಿಯಲ್ಲಿರುತ್ತದೆ ಎನ್ನುವುದರ ಬಗ್ಗೆ ವಿವರಿಸಿದ್ದರು.

ಸನ್ಮಾನ್ಯ ಸಭಾಪತಿಯವರೇ, ತ್ಯಾಗ ಎನ್ನುವ ಮಾತು ಬಂದಾಗ ಕೋಟಿ ರೂಪಾಯಿಗಳನ್ನು ಕೊಟ್ಟರೂ ಒಬ್ಬ ತಾಯಿಯ ನೆನಪನ್ನು ಹಣದಿಂದ ಅಳತೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಬಾಳಿ ಬದುಕಿದಂತಹ ನಮ್ಮ ಸಂಸ್ಕೃತಿ, ಬಂಧುತ್ವವನ್ನು ತೊರೆದು ಇಂತಹ ಯೋಜನೆಗಳಿಗೆ ಭೂಮಿಯನ್ನು ಬಿಟ್ಟುಕೊಟ್ಟಿರುವವರ ತ್ಯಾಗವನ್ನು ನಾವು ಯಾವ ಮಾತಿನಿಂದಲೂ ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸುವ ವಿಚಾರದಲ್ಲಿ ಒಂದಿಷ್ಟು ಕೊರತೆಗಳಾಗಿವೆ. ಒಬ್ಬ ರೈತನಿಗೆ ದನಕರು ಕಟ್ಟಿಕೊಳ್ಳುವಷ್ಟು ವಿಸ್ತಾರವಾದ ಜಾಗವನ್ನು ಕೊಡದೇ 30x40 ವಿಸ್ತೀರ್ಣದ ಜಾಗ ಕೊಟ್ಟರೆ ಅವನಿಗೆ ಸಾಕಾಗುವುದಿಲ್ಲ. ಇಂತಹ ಅವೈಜ್ಞಾನಿಕ ವಿಚಾರಧಾರೆಗಳು ಎಲ್ಲಿಂದ ಬಂದಿವೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇಂತಹ ಕೊರತೆಗಳನ್ನು ಸರಿಪಡಿಸಿ ಆದಷ್ಟು ತ್ವರಿತವಾಗಿ ನ್ಯಾಯಾಲಯಗಳಿಂದ ಹಂಚಿಕೆಯಾಗಿರುವ ಕರ್ನಾಟಕ ರಾಜ್ಯದ ನೀರಿನ ಹಕ್ಕನ್ನು ಅತ್ಯಂತ ಶೀಘ್ರವಾಗಿ ಬಳಸಿಕೊಳ್ಳುವುದಕ್ಕೆ ನಾವು ಆದ್ಯತೆಯನ್ನು ಕೊಡಬೇಕಾಗಿದೆ ಎನ್ನುವ ಮಾತನ್ನು ಹೇಳುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 68ರಡಿಯಲ್ಲಿ ಪ್ರಸ್ತಾಪಿಸಿರುವ ಈ ವಿಚಾರಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಗೋವಿಂದ ಎಂ.ಕಾರಜೋಳ(ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ವಿಚಾರವಾಗಿ ಪ್ರತಿಪಕ್ಷದ ನಾಯಕರನ್ನು ಒಳಗೊಂಡಂತೆ ಸುಮಾರು 8 ಜನ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಸುಮಾರು ಒಂದು ಗಂಟೆ ಐದು ನಿಮಿಷಗಳ ಕಾಲ ಮಾತನಾಡಿದ್ದಾರೆ. ಶ್ರೀಯುತರುಗಳಾದ ತಿಪ್ಪೇಸ್ವಾಮಿಯವರು, ಆರ್.ಬಿ.ತಿಮ್ಮಾಪೂರ್‌ರವರು ಮತ್ತು ಪ್ರಕಾಶ್ ಕೆ.ರಾಥೋಡ್‌ರವರು ಹದಿನೈದು ನಿಮಿಷಗಳ ಕಾಲ ಮಾತನಾಡಿದ್ದಾರೆ. ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರು ಸುಮಾರು ಮೂವತ್ತು ನಿಮಿಷಗಳ ಕಾಲ ಮಾತನಾಡಿದ್ದಾರೆ. ಅವರ ಭಾಗಕ್ಕೆ ನೀರಾವರಿ ಆಗಿ ಬಹಳ ವರ್ಷಗಳಾಗಿವೆ. ನಾರಾಯಣಪುರ ಎಡದಂಡೆ ಮತ್ತು ಬಲದಂಡೆ ಕಾಲುವೆ, ಜೇವರ್ಗಿ ಶಾಖಾ ಕಾಲುವೆ ಮತ್ತು ಇಂಡಿ ಶಾಖಾ ಕಾಲುವೆಯ ಎಲ್ಲ ನೀರಾವರಿ ಯೋಜನೆಗಳಿಂದ ನೀರು ಪಡೆದುಕೊಂಡಿರುವವರು ಅವರ ಭಾಗದವರೇ, ಅವರೇ ಹೆಚ್ಚು ಮಾತನಾಡಿದ್ದಾರೆ. ಶ್ರೀಯುತರುಗಳಾದ ಕೆ.ಟಿ.ಶ್ರೀಕಂಠೇಗೌಡರು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರಾಣಿ ಹಣುಮಂತ್ ರುದ್ರಪ್ಪನವರು ಮತ್ತು ತೇಜಸ್ವಿಗೌಡರು ಸಂಕ್ಷಿಪ್ತವಾಗಿ ಮಾತನಾಡಿದ್ದಾರೆ.

(ಮುಂದುವರಿದಿದೆ)

(712)/ 15.09.2021/4.20/ಪಿಕೆ(ಹೆಚ್‌ವಿ):ಜಿಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ಎಂ.ಕಾರಜೋಳ(ಮುಂದು...):-**

ಸನ್ಮಾನ್ಯ ಸಭಾಪತಿಯವರೇ, ಇವರೆಲ್ಲ ಕಳಕಳಿ ಮತ್ತು ಕಾಳಜಿಗಾಗಿ ಮೊಟ್ಟಮೊದಲನೆಯದಾಗಿ ನಾನು ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಬಯಸುತ್ತಿದ್ದೇನೆ. ಕೃಷ್ಣಾ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟಬೇಕು ಮತ್ತು ನೀರಾವರಿಯನ್ನು ಒದಗಿಸಬೇಕೆನ್ನುವ ನಿಟ್ಟಿನಲ್ಲಿ ಒಂದು ಶತಮಾನದಿಂದಲೂ ಹೋರಾಟ ನಡೆಯುತ್ತಿದೆ. ಬ್ರಿಟಿಷ್‌ನವರ ಕಾಲದಲ್ಲಿಯೇ ಈ ಹೋರಾಟ ಪ್ರಾರಂಭವಾಗಿತ್ತು. ಆ ಕಾಲದಲ್ಲಿ ಸುಗಂಧಿ ಮುರುಗಪ್ಪಣ್ಣನವರ ಹೆಸರನ್ನು ಇತ್ತೀಚಿನವರು ಯಾರು ಕೇಳಿರುವುದಕ್ಕೆ ಸಾಧ್ಯವಿಲ್ಲ ಬಹುಶ: ಮಾನ್ಯ ಎಸ್.ಆರ್.ಪಾಟೀಲ್‌ರವರು ಕೇಳಿರಬಹುದು. ಆದರೆ, ನೋಡಿರುವುದಕ್ಕೆ ಸಾಧ್ಯವಿಲ್ಲ. ನಾನು ಅವರನ್ನು ನೋಡಿದ್ದೇನೆ ಏಕೆಂದರೆ ನಾನು ಅವರ ಊರಿನಲ್ಲಿಯೇ ಹುಟ್ಟಿ ಬೆಳೆದವನು. ಶ್ರೀ ರಾಜಾರಾಮ್ ದುಬೆಯವರು ಮಾನ್ಯ ಜವಹರಲಾಲ ನೆಹರು ಅವರ ಕಾಲದಲ್ಲಿ ಲೋಕಸಭಾ ಸದಸ್ಯರಾಗಿದ್ದರು ಮತ್ತು ಮಾನ್ಯ ಬಾಬು ಹುಜರೆಯವರು 1952ರಲ್ಲಿ ಮುಂಬೈ ಪ್ರಾಂತ್ಯದ ಮೊದಲನೆಯ ಚುನಾವಣೆಯಲ್ಲಿ ಗೆದ್ದು ಬಂದಿದ್ದರು. ಅವರನ್ನು ನಾವೆಲ್ಲರೂ 'ಅಜ್ಜನವರು' ಎಂದು ಕರೆಯುತ್ತಿದ್ದೆವು. ಇವರೆಲ್ಲವೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ. ಇವರೆಲ್ಲರೂ ಆ ಪ್ರಾಂತ್ಯಕ್ಕೆ ನೀರಾವರಿ ಒದಗಿಸಬೇಕೆನ್ನುವ ನಿಟ್ಟಿನಲ್ಲಿ ದೊಡ್ಡ ಹೋರಾಟ ನಡೆಸಿ, ಸೆರೆವಾಸವನ್ನು ಅನುಭವಿಸಿದ್ದರು. ಆದರೆ, ಯಾವುದೇ ಪ್ರಗತಿಯನ್ನು ಬ್ರಿಟಿಷ್ ಸರ್ಕಾರದಲ್ಲಿ ಕಾಣುವುದಕ್ಕೆ ಸಾಧ್ಯವಾಗಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪ್ರಾಂತ್ಯಗಳ ಪುನರ್‌ವಿಂಗಡಣೆಯಾದ ಮೇಲೆ ನಾವು, ನೀವೆಲ್ಲರೂ ಮುಂಬೈ ಪ್ರಾಂತ್ಯದಿಂದ ಮೈಸೂರು ಪ್ರಾಂತ್ಯಕ್ಕೆ ಬಂದಿರುವವರು. ನಾವುಗಳು ಮೈಸೂರು ಪ್ರಾಂತ್ಯಕ್ಕೆ ಬರುವುದಕ್ಕೂ ಮುಂಚೆ ಮುಂಬೈ ಪ್ರಾಂತ್ಯದಲ್ಲಿ ಕೋಯ್ನಾ ಅಣೆಕಟ್ಟನ್ನು ನಿರ್ಮಾಣ ಮಾಡುವ ಬಗ್ಗೆ ಸರ್ವೆ ಮತ್ತು ಡಿ.ಪಿ.ಆರ್. ಅನ್ನು ಮಾಡಲಾಗಿತ್ತು. ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಅನುಮೋದನೆ ಸಹ ದೊರೆತಿತ್ತು. ಮುಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಟೆಂಡರ್ ಕರೆಯುವಷ್ಟರಲ್ಲಿ ರಾಜ್ಯಗಳ ಪುನರ್‌ವಿಂಗಡಣೆ ಆಗಿತ್ತು. ಅಂದಿನ ಮುಂಬೈ ಪ್ರಾಂತ್ಯದ ಸರ್ಕಾರ, 'ಮೈಸೂರು ರಾಜ್ಯದ ಅಖಂಡ ವಿಜಾಪುರ ಜಿಲ್ಲೆ ಅಂದರೆ, ಇಂದಿನ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳನ್ನು ನೀರಾವರಿ ವ್ಯಾಪ್ತಿಗೆ ತರಲು ನಾವು ಸರ್ವೆ ಮಾಡಿ ಆಡಳಿತಾತ್ಮಕ ಅನುಮೋದನೆಯನ್ನು ದೊರಕಿಸಿಕೊಂಡಿದ್ದೇವೆ. ಈಗ ಟೆಂಡರ್ ಕರೆಯಬೇಕಾಗಿದೆ. ನಿಮ್ಮ ಪಾಲಿನ ಹಣವನ್ನು ನೀವು ಕೊಡುತ್ತೀರಾ? ಹಣ ಕೊಡುವುದಕ್ಕೆ ನೀವು ಒಪ್ಪಿಗೆ ಕೊಟ್ಟರೆ ನಾವು ಯೋಜನೆಯನ್ನು ನಿಮ್ಮ ಜಿಲ್ಲೆಗೂ ಜಾರಿಗೊಳಿಸುತ್ತೇವೆ' ಎನ್ನುವ ಮಾತನ್ನು ಹೇಳಿದ್ದರು. ಸುಮಾರು 37 ಟಿ.ಎಂ.ಸಿ.ಯಷ್ಟು ನೀರು ಜಮಖಂಡಿ, ಬಿಜಾಪುರ, ಬಾಗೇವಾಡಿ, ಮುದ್ದೆಬಿಹಾಳ ಮತ್ತು ಸಿಂದಗಿಗಳನ್ನು ಒಳಗೊಂಡಂತೆ ತಾಳಿಕೋಟೆಗೆ ಹೋಗಿ ಕೊನೆಗೊಳ್ಳುತ್ತಿತ್ತು. 'ಇದಕ್ಕಾಗಿ ಮೈಸೂರು ಸರ್ಕಾರದವರು ಸುಮಾರು 2 ಕೋಟಿ ರೂಪಾಯಿಗಳನ್ನು ಕೊಟ್ಟರೆ ನಿಮ್ಮ ಜಿಲ್ಲೆಗಳಿಗೆ ಯೋಜನೆಯನ್ನು ಜಾರಿ ಮಾಡುತ್ತೇವೆ' ಎಂದು ಮುಂಬೈ ಪ್ರಾಂತ್ಯದವರು ಹೇಳಿದ್ದರು. ಅವರು ಇವರು ಎಂದು ನಾನು ಯಾರ ಮೇಲೂ ಆರೋಪ ಮಾಡುವುದಿಲ್ಲ. ಅಂದಿನ ಮೈಸೂರು ಪ್ರಾಂತ್ಯದವರು, 'ನಮ್ಮ ಯೋಜನೆಯನ್ನು ನಾವೇ ಮಾಡಿಕೊಳ್ಳುತ್ತೇವೆ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲ' ಎಂದು ತಿಳಿಸಿದರು. ನಾನು ಈ ಸದನದ ಗಮನಕ್ಕೆ ಒಂದು ವಿಚಾರವನ್ನು ತರಲು ಬಯಸುತ್ತಿದ್ದೇನೆ. ಆಗ ಕೇಂದ್ರದಲ್ಲಿ ಅಂದಿನ ಮುಂಬೈ ಪ್ರಾಂತ್ಯದಲ್ಲಿ ಮತ್ತು ಮೈಸೂರು ಪ್ರಾಂತ್ಯದಲ್ಲಿಯೂ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು, ಯಾರಾದರು ದೊಡ್ಡ ಮನಸ್ಸು ಮಾಡಿ ಮುತುವರ್ಜಿ ವಹಿಸಿ ಎರಡೂ ಪ್ರಾಂತ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಪರಸ್ಪರ ಮಾತುಕತೆಯ ಮೂಲಕ ಒಪ್ಪಿಗೆ ಪತ್ರವನ್ನು ಕೊಟ್ಟಿದ್ದರೆ ಸುಮಾರು 60 ವರ್ಷಗಳ ಹಿಂದೆಯೇ ಅಖಂಡ ವಿಜಾಪುರ ಜಿಲ್ಲೆ ನೀರಾವರಿಯ ವ್ಯಾಪ್ತಿಗೆ ಬರುತ್ತಿತ್ತು. ಇದಕ್ಕೆ ನಾವು ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು? ಅವರು ಯಾರೂ ಈಗ ನಮ್ಮೊಂದಿಗೆ ಇಲ್ಲ. ಇದರಿಂದ ನಮಗಾದ ಅನ್ಯಾಯ ಬೇರೆ ಯಾರಿಗೂ ಆಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಶ್ರೀಮತಿ ಇಂದಿರಾಗಾಂಧಿಯವರನ್ನು ಮತ್ತು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ನಿಜಲಿಂಗಪ್ಪನವರನ್ನು ನಮ್ಮ ಜಿಲ್ಲೆಯವರು ಬಂಗಾರದಲ್ಲಿ ತೂಗಿದ್ದೇವೆಂದು ಹೇಳಿದರು. ನಾನು ಆ ಕಾರ್ಯಕ್ರಮವನ್ನು ಕಣ್ಣಾರೆ ನೋಡಿದ್ದೇನೆ. ಅದು ನಡೆದಂತಹ ಸ್ಥಳವನ್ನು ಸಹ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಬಿಜಾಪುರದಲ್ಲಿ ಜನತಾದಳದ ಕಛೇರಿ, ಖಾದಿ ಭಂಡಾರ ಇರುವಂತಹ ಜಯಶ್ರೀ ಟಾಕೀಸ್ ಮುಂದೆ ಬಸವೇಶ್ವರ ಸರ್ಕಲ್‌ನಲ್ಲಿ ಪೆಂಡಾಲ್ ಹಾಕಿ ಇವರುಗಳನ್ನು ತಕ್ಕಡಿ ಇಟ್ಟು ತೂಗಿರುವುದಕ್ಕೆ ನಾನು ಸಾಕ್ಷಿ ಆಗಿದ್ದೇನೆ.

ನಾನು ಆಗ ವಿದ್ಯಾರ್ಥಿದೆಸೆಯಲ್ಲಿದ್ದೆ. ಅವತ್ತಿನ ಬೇಡಿಕೆ ಏನಿತ್ತು ಎನ್ನುವುದು ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಮರೆತು ಹೋಗಿದೆಯೋ ಅಥವಾ ಅದನ್ನು ಹೇಳದೇ ಬಿಟ್ಟಿರಬಹುದು. ಅವತ್ತು ನಮ್ಮ ಜಿಲ್ಲೆಯವರು ರೈಲಿನ ಸಂಪರ್ಕವನ್ನು ಕೇಳಲಿಲ್ಲ, ವಿಮಾನ ನಿಲ್ದಾಣ ಅಥವಾ ಬಸ್ ನಿಲ್ದಾಣವನ್ನು ಕೇಳಲಿಲ್ಲ. ಅದರ ಬದಲಿಗೆ 'ನಮ್ಮ ಜಿಲ್ಲೆ ಕಳೆದ 350 ವರ್ಷಗಳಿಂದ ಪದೇಪದೇ ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆಯಾಗಿದೆ. ಇಲ್ಲಿಗೆ ನೀರಾವರಿ ಯೋಜನೆಯನ್ನು ಮಾಡಿಕೊಡಿ' ಎನ್ನುವ ಒಂದೇ ಒಂದು ಮನವಿಯನ್ನು ಕೊಟ್ಟರು. 1963-64ರಲ್ಲಿ ಈ ಘಟನೆ ನಡೆದಿತ್ತು. 1963ನೇ ಇಸವಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಡಿ.ಪಿ.ಆರ್. ಆಗುತ್ತದೆ. ಅವತ್ತಿಗೆ ಲೋಕೋಪಯೋಗಿ ಇಲಾಖೆಯವರ ಎಸ್.ಆರ್.ದರದನ್ವಯ ಇದರ ಅಂದಾಜು ವೆಚ್ಚ ಸುಮಾರು 58 ಕೋಟಿ 20 ಲಕ್ಷ ರೂಪಾಯಿಗಳಾಗಿರುತ್ತದೆ. 1964ನೇ ಇಸವಿ ಮೇ ತಿಂಗಳಿನಲ್ಲಿ ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಗಳನ್ನು ಕರೆದು ಈ ಯೋಜನೆಗೆ ಅಡಿಗಲ್ಲು ಹಾಕಲಾಗಿತ್ತು. ಅಂದಿನಿಂದ ರಾಜ್ಯದಲ್ಲಿ ಯಾವಯಾವ ಸರ್ಕಾರಗಳು ಅಧಿಕಾರದಲ್ಲಿದ್ದವು ಎನ್ನುವುದನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. 1964-65 ರಿಂದ 1982-83ರವರೆಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಶ್ರೀ ಎಸ್.ನಿಜಲಿಂಗಪ್ಪನವರು, ದಿವಂಗತ ಶ್ರೀ ವೀರೇಂದ್ರ ಪಾಟೀಲ್‌ರವರು, ದಿವಂಗತ ಶ್ರೀ ಡಿ.ದೇವರಾಜ್ ಅರಸುರವರು ಮತ್ತು ದಿವಂಗತ ಶ್ರೀ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಯುತರುಗಳಾದ ಬಿ.ಡಿ.ಜತ್ತಿ ಹಾಗೂ ಶ್ರೀ ಎಸ್.ಆರ್.ಕಂಠಿಯವರು ನಮ್ಮ ಜಿಲ್ಲೆಯವರು. ಇವರುಗಳು ಕೆಲವೇ ಕೆಲವು ತಿಂಗಳುಗಳವರೆಗೆ ಮಾತ್ರ ಮುಖ್ಯಮಂತ್ರಿಗಳಾಗಿದ್ದರು. ಈ ಅವಧಿಯಲ್ಲಿ 224 ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ವೆಚ್ಚ ಮಾಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೆ, ಯಾವುದೋ ಒಂದು ವಿಚಾರ ಬಂದಾಗ ಹಿಂದಿನ ನೀರಾವರಿ ಸಚಿವರು ಅಜಾಗರೂಕತೆಯಿಂದ ಯಾರದೋ ಹೆಸರನ್ನು ಉಲ್ಲೇಖ ಮಾಡಿದ್ದರು. ಅದು ಯಾರು ಎನ್ನುವುದು ನನಗೆ ಗೊತ್ತಿತ್ತು. ಆದರೆ, ನಾನು ಆ ಹೆಸರನ್ನು ಹೇಳಿದ್ದರೆ, ಅವರ ಕುಟುಂಬದವರಿಗೆ, ಆ ಭಾಗದ ಜನರಿಗೆ ಮತ್ತು ಆ ಜನಾಂಗಕ್ಕೆ ನೋವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಹೆಸರನ್ನು ಹೇಳಿರಲಿಲ್ಲ. ಆದರೆ, ಹಿರಿಯರಾದ ಜಲಸಂಪನ್ಮೂಲ ಸಚಿವರು ಈ ರೀತಿ ಮಾತನಾಡುತ್ತಾರೆಂದು ನಿರೀಕ್ಷೆ ಮಾಡಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಯಾರಿಗಾದರು ನೋವನ್ನುಂಟು ಮಾಡಬೇಕೆನ್ನುವುದು ನನ್ನ ಉದ್ದೇಶವಲ್ಲ. ವಸ್ತುಸ್ಥಿತಿಯನ್ನು ಸದನದ ಮುಂದಿಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಮಾತನಾಡುವುದರಿಂದ ಉತ್ತರ ಕರ್ನಾಟಕದವರಾದ ನಾವುಗಳು ನಮ್ಮ ಮಾನವನ್ನು ನಾವೇ ತೆಗೆದುಕೊಂಡಂತಾಗುತ್ತದೆ. ಹೇಳಲೇಬೇಕು ಎನ್ನುವುದಾದರೆ ಹೇಳಲಿ, ನಾನು ಅಡ್ಡಿಪಡಿಸುವುದಿಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:-** ಸನ್ಮಾನ್ಯ ಸಭಾಪತಿಯವರೇ, ಅವರು ಬೇಡ ಎನ್ನುವುದಾದರೆ ಇಲ್ಲಿಗೇ ಬಿಟ್ಟುಬಿಡುತ್ತೇನೆ. ಆದರೆ, ಯಾವ ಅವಧಿಯಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ ಎನ್ನುವುದರ ಬಗ್ಗೆ ತಿಳಿಸುವುದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಮುಂದೆ 1983-84 ರಿಂದ 1988-89ರವರೆಗೆ ದಿವಂಗತರುಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಮತ್ತು ಶ್ರೀ ಎಸ್.ಆರ್.ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದರು ಆಗ 278 ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ವೆಚ್ಚ ಮಾಡಲಾಗಿತ್ತು. ನಂತರ 1989-90 ರಿಂದ 1994-95ರವರೆಗೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ಆ ಅವಧಿಯಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರು, ಶ್ರೀ ಎಸ್.ಬಂಗಾರಪ್ಪನವರು ಮತ್ತು ಶ್ರೀ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದರು. ಆಗ ಸುಮಾರು 836 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿತ್ತು. ಇದು 1994-95ರವರೆಗೆ ಆಗಿರುವಂತಹ ಪ್ರಗತಿಯಾಗಿದೆ. ನಾನು ಇದನ್ನು ಇಷ್ಟು ವಿವರವಾಗಿ ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಆದರೆ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಒಂದು ಮಾತನ್ನು ಹೇಳಿದ್ದರು.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಕೆ.ಪಾಟೀಲ್‌ರವರ ಅವಧಿಯಲ್ಲಿ ಎಷ್ಟು ಖರ್ಚು ಮಾಡಲಾಗಿತ್ತು ಎನ್ನುವುದನ್ನು ಸಹ ಅವರು ಹೇಳಬೇಕಾಗಿದೆ.

(ಮುಂದುವರಿದಿದೆ)

(713) 15-9-2021 4.30 DS-MD

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಗ ಬಜೆಟ್ ಏನಿತ್ತು, ಈಗ ಬಜೆಟ್ ಏನಿದೆ ಎಂಬುದನ್ನು ಹೇಳಿ. ೧೯೭೩-೭೪ ರಲ್ಲಿ ಅಲ್ಲಿ ಬರಗಾಲ ಇದ್ದಾಗ ನಾವೆಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್.ಎಸ್.ಎಸ್.ನಿಂದ ದೇವರಾಜ ಅರಸುರವರು ಆಹಾರ ಧಾನ್ಯಗಳನ್ನು ಅಲ್ಲಿ ಹಂಚಿಕೆ ಮಾಡುವುದಕ್ಕೆ ನಮ್ಮನ್ನು ಕಳುಹಿಸುತ್ತಿದ್ದರು. ನಾನು ಮುಧೋಳಕ್ಕೆ ಹೋದಾಗ ನಾನು ಕೇಳಿದೆ, ಆಗ ದೂರದಲ್ಲೂ ಒಂದು ಮರ ಕಾಣುತ್ತಿರಲಿಲ್ಲ. ಈಗ ಹೋದರೆ ಪೂರ್ತಿಯಾಗಿ ಹಚ್ಚ ಹಸಿರಾಗಿ ಕಾಣುತ್ತಿದೆ. ಮಾನ್ಯ ತಿಮ್ಮಾಪೂರರವರಿಗೆ ಹೇಳಿದಾಗ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಹೇಳಿದರು. ಮುಧೋಳದಲ್ಲಿರುವಂತಹ ಮೇಟಿಯವರ ಹೆಸರು ಹೇಳಿದಾಗ, ಸರಿಯಿದೆ, ನೀವು ಬಂದಿರುತ್ತೀರಿ ಎಂದು ಅವರು ಒಪ್ಪಿಕೊಂಡರು. ಏನು ಆಗಿಲ್ಲವೆಂದು ಹೇಳುವುದು ತಪ್ಪಾಗುತ್ತದೆ. ಅಲ್ಲಿ ನಾವು ಕಣ್ಣಾರೆ ನೋಡಿರುವಂಥದ್ದು. ಸುಮ್ಮನೆ ಅಪಾದನೆ ಮಾಡುವುದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಫಿಗರ್ ಮೆನಷನ್ ಮಾಡಿದ್ದಾರಲ್ಲಾ ೨೦ ವರ್ಷದ ಆಯವ್ಯಯವನ್ನು ತೆಗೆದು ನೋಡಿ. ಈ ಕರ್ನಾಟಕ ರಾಜ್ಯದ ಆಯವ್ಯಯ ಒಂದು ವರ್ಷಕ್ಕೆ ಹತ್ತು ಸಾವಿರ ಕೋಟಿ ರೂಪಾಯಿಗಳು. ಆಗ ಒಂದು ಎಕರೆ ೩,೦೦೦ ರೂಪಾಯಿ ಇದ್ದದ್ದು ಈಗ ೩೦ ಲಕ್ಷ ರೂಪಾಯಿಗಳಾಗಿವೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯ ಪ್ರಸ್ತಾಪ ಮಾಡುತ್ತಿರಲಿಲ್ಲ. ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡುತಿದ್ದೇನೆಂದರೆ, ಬಂಗಾರ ತೂಗಿದ ವಿಷಯ ಪ್ರಸ್ತಾಪ ಮಾಡಿರುವುದರಿಂದ ಈ ವಿಷಯ ಬಂತು. ಅಷ್ಟಕ್ಕಾಗಿ ಹೇಳಿದ್ದೇನೆಯೇ ಹೊರತು ಬೇರೆ ಯಾವ ಕಾರಣಕ್ಕೂ ಅಲ್ಲ. ಅವರು ಮಾತನಾಡುವುದಕ್ಕಿಂತಲೂ ಮುಂಚೆಯೇ ಕಾಳಜಿ, ಕಳಕಳಿಯ ಬಗ್ಗೆ ಧನ್ಯವಾದ ಹೇಳಿದ್ದೇನೆ. ಆ ಮಂದಿಯ ಬಗ್ಗೆ ಹೇಳಿಯೇ ನಾನು ಪ್ರಾರಂಭ ಮಾಡಿದ್ದೇನೆ. ಅದು ಅವರಿಗೆ ಗೊತ್ತಿರಲಿ.

ಮಾನ್ಯ ಸಭಾಪತಿಯವರೇ, ನಾನು ಈಗ ಉತ್ತರ ಹೇಳಿಬಿಡುತ್ತೇನೆ, ಏನಾದರೂ ಸ್ಪಷ್ಟೀಕರಣ ಕೇಳುವುದಾದರೆ ನಂತರ ಕೇಳಲಿ. ಈಗ ನೇರವಾಗಿ ೧೩೦ ಟಿಎಂಸಿ ನೀರಿನ ಬಳಕೆ ಬಗ್ಗೆ ಇವತ್ತೇನು ಅವರು ಪ್ರಸ್ತಾಪ ಮಾಡಿದ್ದಾರೆ ನಾನು ಅಲ್ಲಿಗೆ ಬರುತ್ತೇನೆ. ದಿನಾಂಕ:೩೦-೧೨-೨೦೧೦ಕ್ಕೆ ಕೃಷ್ಣಾ ನ್ಯಾಯಾಧೀಕರಣದ ನ್ಯಾಯಮೂರ್ತಿಗಳಾಗಿರುವಂತಹ ಶ್ರೀ ಬ್ರಿಜೇಷ್‌ಕುಮಾರ್ ರವರು Tribunal Award ನ್ನು ಪಾಸ್ ಮಾಡುತ್ತಾರೆ. ೧೩೦ ಟಿಎಂಸಿಯಷ್ಟು ನಮಗೆ ಆಲಮಟ್ಟಿ ಜಲಾಶಯದಲ್ಲಿ ಸಿಗುತ್ತದೆ. ಒಟ್ಟು ೧೭೩ ಟಿಎಂಸಿಯಲ್ಲಿ ಉಳಿದಿರುವುದು ಬೇರೆ ಬೇರೆ ಉಪ ಯೋಜನೆಗಳಿಗೆ ಹೋಗುತ್ತದೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ೧೩೦ ಟಿಎಂಸಿ ಅಷ್ಟು ನೀರು ನಮಗೆ ಕೊಡುತ್ತಾರೆ. ಅವತ್ತು ನಮ್ಮದೇ ಸರ್ಕಾರ ಇತ್ತು. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದರು, ಆಗ Tribunal

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Award ಬರುತ್ತದೆ. ಕೆಲವೇ ತಿಂಗಳುಗಳಲ್ಲಿ ಮಾನ್ಯ ಜಗದೀಶ್ ಶೆಟ್ಟರ್ ರವರು ಮುಖ್ಯಮಂತ್ರಿಗಳಾದರು. ೨೦೧೧-೧೨ ರಲ್ಲಿ DPR (Detailed Project Report) ತಯಾರು ಮಾಡಿ ೧೩೦ ಟಿಎಂಸಿ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನಾವು ಯೋಜನೆಯನ್ನು ಸಿದ್ಧಪಡಿಸಿದ್ದೆವು. R & R (*Rehabilitation and Resettlement*) works ಗೆ ಮೊದಲ ಆದ್ಯತೆ ನಮ್ಮದು ಇರಬೇಕೆಂದು ೧೭,೨೦೭ ಕೋಟಿ ರೂಪಾಯಿಯದ್ದು ಸಚಿವ ಸಂಪುಟಕ್ಕೆ ತಂದು ಅನುಮೋದನೆ ಮಾಡಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟೆವು. ೨೦೧೩ ರಲ್ಲಿ ಚುನಾವಣೆ ಬಂತು. ಚುನಾವಣೆ ಬಂದ ನಂತರ ನಮಗೆ ಬಹುಮತ ಬರಲಿಲ್ಲ, ನಾವು ಸೋತೆವು. ಇದರ ಮಧ್ಯೆದಲ್ಲಿ ೨೦೧೦ ರಲ್ಲಿ ಕೃಷ್ಣಾ ನ್ಯಾಯಾಧೀಕರಣ ಎರಡರದ್ದು Tribunal Award ಬಂತು. ಅದು ಬಂದ ನಂತರ ನಮ್ಮದೇ ಸರ್ಕಾರ ಇತ್ತು, ಬಿಜೆಪಿ ಯವರು ಏನು ಮಾಡಲಿಲ್ಲವೆಂದು ನಮ್ಮ ಮೇಲೆಯೇ blame ಮಾಡಿದರು. ಕಾಂಗ್ರೆಸ್‌ನವರು 'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂದು ಬಂದರು. ಹೊಸಪೇಟೆಯಿಂದ ಕೂಡಲ ಸಂಗಮದವರೆಗೂ ಪಾದಯಾತ್ರೆ ಮಾಡಿ ಹಿಗ್ಗಾಮುಗ್ಗಾ ನಮ್ಮನ್ನೆಲ್ಲಾ ಬೈಯ್ದರು. ಆಗ ನಾನು ಮಂತ್ರಿಯಾಗಿದ್ದೆ. ನಾನು ಇದನ್ನು sportive ಆಗಿ ಹೇಳುತ್ತಿದ್ದೇನೆ. ಇದರ ಪರಿಣಾಮ ಏನಾಯಿತು ಎಂದರೆ, ಇವರ ಮೇಲೆ ವಿಶ್ವಾಸ ಇತ್ತು. ಇವರು ಭಾಷಣ ಮಾಡಿರುವುದು ಏನೆಂದರೆ, ನಮ್ಮ ಕೈಯಲ್ಲಿ ಅಧಿಕಾರ ಕೊಡಿ, ಪ್ರತಿ ವರ್ಷ ನಾವು ಕೃಷ್ಣೆಗೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದರು.

**ಶ್ರೀ ಎಂ.ನಾರಾಯಣಸ್ವಾಮಿ:-** ನೀರಾವರಿಗೆ ಹತ್ತು ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೇವೆ. ಬೇಕಾದರೆ ಬಜೆಟ್ ಕಾಪಿಯನ್ನು ತೆಗೆದು ನೋಡಿ.

(ಗೊಂದಲ)

**ಸಭಾಪತಿಯವರು:-** ಅದನ್ನು verify ಮಾಡಿ ನೋಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಬಹಳ sportive ಆಗಿ ಅವರು ಎಷ್ಟು ತಾಸು ಮಾತನಾಡಿದ್ದಾರೆ ಅದಕ್ಕೆಲ್ಲಾ ನಗುತ್ತಾ ಉತ್ತರವನ್ನು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ನಾನು ಯಾವತ್ತು ಸದನವನ್ನು ತಪ್ಪು ದಾರಿಗೆ ಎಳೆಯುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಅವತ್ತು ಅವರು ಏನು ಹೇಳಿದರು ಎಂದರೆ, ಕೂಡಲ ಸಂಗಮನಾಥ ಸನ್ನಿಧಿಯೊಳಗೆ ಸಭೆ ಮಾಡಿ ಪ್ರತಿ ವರ್ಷ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದರು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಹೋಗುವವರೆಗೂ ಯಾವತ್ತೂ ಹತ್ತು ಸಾವಿರ ಕೋಟಿ ರೂಪಾಯಿ ಕೊಡಲಿಲ್ಲ. ೧೩೦ ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ಪ್ರಥಮ ಆದ್ಯತೆ ಭೂಸ್ವಾಧೀನ ಮಾಡಿಕೊಳ್ಳುವಂಥದ್ದು. Rehabilitation Centres ಗಳನ್ನು ಸೃಷ್ಟಿ ಮಾಡಬೇಕಾಗಿತ್ತು. ಇವತ್ತು ಬೆಳಗ್ಗೆ ಮಾನ್ಯ ಎಸ್. ಆರ್.ಪಾಟೀಲ್‌ರವರು ಮಾತನಾಡುವಾಗ ಹೇಳಿದರು, ೨೦ ಹಳ್ಳಿಗಳ ಸ್ಥಳಾಂತರ, ೧,೩೪,೦೦೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಂಥದ್ದು. ಅದರಲ್ಲಿ ೭೫,೫೫೨ ಎಕರೆ ಹಿನ್ನೀರಿನಲ್ಲಿ ಮುಳುಗಡೆಯಾಗುತ್ತದೆ. ಉಳಿದಿರುವಂತಹ ೬೪೪೭ ಎಕರೆ Rehabilitation Centres ಗಳಿಗೆ ಬೇಕಾಗುತ್ತದೆ. ಅದಲ್ಲದೆ, ನಮಗೆ canal network ಗೆ ಮತ್ತು jack well ಗಳಿಗೆ, head works ಗಳಿಗೆ ಬೇಕಾಗಿರುವಂಥದ್ದೆಲ್ಲಾ ಸೇರಿ ಒಟ್ಟು ೧,೩೪,೦೦೦ ಎಕರೆ ಬೇಕಾಗುತ್ತದೆ. ಅದನ್ನು ನಾವು ಮಾಡಬೇಕಾಗಿತ್ತು. ಇವತ್ತು ನಮ್ಮ ಸರ್ಕಾರದ ಪ್ರಥಮ ಆದ್ಯತೆ ಏನೆಂದರೆ, R & R (*Rehabilitation and Resettlement*) works ನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ೨೦೧೩ ರಿಂದ ೨೦೧೯ ರವರೆಗೆ ಯಾರ್ಯಾರು ಏನೇನು ಖರ್ಚು ಮಾಡಿದ್ದಾರೆಂದು ಹೇಳಬೇಕಲ್ಲವೇ? ೨೦೧೩ ರಿಂದ ೨೦೧೮ ರವರೆಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದರು. ೭೭೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೨೦೧೮ ರಿಂದ ಜುಲೈ ೨೦೧೯ ರವರೆಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಇತ್ತು. ೧೯೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಜುಲೈ ೨೦೧೯ ರಿಂದ ೨೦೨೧ ಜುಲೈವರೆಗೆ ನಮ್ಮದೇ ಸರ್ಕಾರ ಇದೆ. ೩೨೨೬ ಕೋಟಿ ಖರ್ಚಾಗಿದೆ. ಇದು ಕೃಷ್ಣಾ ಮೇಲ್ದಂಡೆ ಯೋಜನೆ-೩ನೇ ಹಂತದ ಕಾಮಗಾರಿಗಳಿಗಾಗಿ ಖರ್ಚು ಮಾಡಿರುವಂಥದ್ದು. ೨೦೧೩ ರಿಂದ ೨೦೨೧ ಜುಲೈವರೆಗೆ ಮೂರು ಸರ್ಕಾರಗಳು ಸೇರಿ ೧೩,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇವತ್ತು ಸರ್ಕಾರ ಬದಲಾಗಿದೆ. ರಾಜ್ಯದ ಮುಖ್ಯಮಂತ್ರಿಗಳಾಗಿ ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರು ಅಧಿಕಾರ ವಹಿಸಿಕೊಂಡಿದ್ದಾರೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುವ ಸಂದರ್ಭದಲ್ಲಿ ಹೇಳಿದರು, ಮಾನ್ಯ ತಿಮ್ಮಾಪೂರರವರು ಅತೀ ಪ್ರೀತಿಯಿಂದ ನನಗೂ ಹೇಳಿದರು, ಅವರು

ನಮ್ಮ ತಾಲ್ಲೂಕಿನವರು. *"Blood is thicker than water"* ಎಂದು ಹೇಳುತ್ತಾರೆ. ಅದಕ್ಕಾಗಿ ಅವರು ಪ್ರೀತಿಯಿಂದ ಹೇಳಿದ್ದಾರೆ.

(ಮುಂದು)

714/15-09-2021/4-40/bkp-md

**ಸಭಾಪತಿಯವರು:-** ಶ್ರೀಯುತ ಕಾರಜೋಳ್ ರವರೆ, ನಿಮ್ಮಲ್ಲಿ ಯಾವಾಗ ಪ್ರೀತಿ ಇರುತ್ತದೋ, ಯಾವಾಗ ಇರುವುದಿಲ್ಲವೋ ಎನ್ನುವುದು ಗೊತ್ತಾಗುವುದಿಲ್ಲ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೆ,ಇದೆಲ್ಲಾ match fixing.

**ಶ್ರೀ ಗೋವಿಂದ .ಎಂ. ಕಾರಜೋಳ:** ಮಾನ್ಯ ಸಭಾಪತಿಯವರೆ, ನಿಮ್ಮ ಕಳಕಳಿ ಕಾಳಜಿ ಬಗ್ಗೆ ನಾನು ಮೊದಲೇ thanks ಹೇಳಿಯೇ ಮಾತನಾಡುವುದಕ್ಕೆ ಶುರು ಮಾಡಿದ್ದೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಮಾನ್ಯ ಸಭಾಪತಿಯವರೆ, ಇವತ್ತು ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳಾದಂತಹ ಬಸವರಾಜ ಬೊಮ್ಮಾಯಿಯವರು ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ. ಅವುಗಳನ್ನು ಈಗಾಗಲೇ ನಾವು ಮಾಡಿದ್ದೇವೆ, ಬೇಕಾದರೆ, ಅದರ ಕಾಪಿಯನ್ನೂ ಸಹಿತ ಕಳುಹಿಸಿಕೊಡುತ್ತೇನೆ. ಕೃಷ್ಣಾ ನ್ಯಾಯಾಧೀಕರಣದ್ದು ಗೆಜೆಟ್ ನೋಟಿಫಿಕೇಷನ್ ಆಗಬೇಕು ಎನ್ನುವುದರ ಬಗ್ಗೆ ಆಗಸ್ಟ 25ನೇ ತಾರೀಖಿಗೆ ನಾವು ಹೋಗಿ ಕೇಂದ್ರ ಜಲ ಸಂಪನ್ಮೂಲ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. CWC (Central Water Commission) ಅಧಿಕಾರಿಗಳ ಜೊತೆಗೆ ನಾವು ಸಭೆ ಮಾಡಿದ್ದೇವೆ. ಅದೂ ಅಲ್ಲದೆ ನಮ್ಮ ಕೇಸ್‌ಗಳನ್ನು ಸುಪ್ರೀಂಕೋರ್ಟ್‌ನಲ್ಲಿ ವಾದ ಮಾಡತಕ್ಕಂತಹ ವಕೀಲರ ಟೀಮ್ ಜೊತೆಗೆ ಸಹಿತ ಸಭೆ ಮಾಡಿದ್ದೇವೆ. ಅದಾದ ನಂತರ ಮೊನ್ನೆ ಹೋಗಿ ಬಂದಿದ್ದೇವೆ. ಈ ತಿಂಗಳಲ್ಲಿ ಎರಡು ಸಲ ಹೋಗಿ ಬಂದಿದ್ದೇವೆ. ನಮ್ಮ ಕಳಕಳಿ ಹಾಗೂ ಕಾಳಜಿ ಏನೆಂದರೆ, ಇದು ಬೇಗನೆ Gazette Notification ಆಗಬೇಕು. Gazette Notification ಆಗದ ಹೊರತು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ನಾವು DPR (Detailed Project Report) ಅನ್ನು ಕೂಡ clear ಮಾಡಿಕೊಡಿ ಎಂದು ಕೇಳಿದ್ದೇವೆ. ಅದೂ ಅಲ್ಲದೇ ಮಹಾರಾಷ್ಟ್ರ ಸರ್ಕಾರದವರ ಜೊತೆಗೆ ಮುಂದುವರೆದು ಪ್ರಯತ್ನ ಮಾಡಿದ್ದೇವೆ. ನಾವು ಹಾಗೂ ಅವರು ಜಂಟಿಯಾಗಿ ಹೋಗಬೇಕೆಂದು ಮಾಡಿದ್ದೇವೆ. ಕೆಲವು ವಿಷಯಗಳನ್ನು ಬಹಿರಂಗವಾಗಿ ಮಾತನಾಡುವುದಕ್ಕೆ ಆಗುವುದಿಲ್ಲ, ಹೇಳಬೇಕಾಗುತ್ತದೆ. ಹೋಗಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಅದು ಆಗುತ್ತದೆ. ಅದೂ ಅಲ್ಲದೇ ಇನ್ನೂ ಒಂದು ಸಲಹೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಬಸವರಾಜ್ ಇಟಗಿಯವರು ಮಾಡಿದ್ದಾರೆ. ನಿಮಗೆ ಇಷ್ಟೊಂದು ಹಣ ಅಂದರೆ ಲಕ್ಷ-ಕೋಟಿಗಟ್ಟಲೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಕೇಂದ್ರದ ನೆರವು ಪಡೆಯಬೇಕು. ರಾಷ್ಟ್ರೀಯ ಯೋಜನೆಯಾಗಬೇಕೆಂದು ತಾವು ಹೇಳಿದ್ದೀರಿ. ಹೇಳಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ. ನಾವು ಈಗಾಗಲೇ ಎರಡು ಪತ್ರಗಳನ್ನು ಬರೆಯುವುದಲ್ಲದೇ ಸ್ವತಃ ಹೋಗಿ ಎರಡು ಬಾರಿಗೆ ಭೇಟಿಯಾಗಿ ಬಂದಿದ್ದೇನೆ. ನಮ್ಮದು ಸಮಸ್ಯೆ ಏನಾಗಿದೆ ಎಂದರೆ, ಸುಪ್ರೀಂ ಕೋರ್ಟ್‌ನಲ್ಲಿ ನಾಲ್ಕು ರಾಜ್ಯಗಳು PIL (Public Interest Litigation) ಇದೆ. ಮಹಾರಾಷ್ಟ್ರದವರು ನ್ಯಾಯಾಧೀಕರಣ-2ರಲ್ಲಿ ನಮಗೆ ಸರಿಯಾದಂತಹ ನೀರಿನ ಪಾಲು ಸಿಕ್ಕಿಲ್ಲವೆಂದು ಅವರು ಹೋಗಿದ್ದಾರೆ. ಆಂದ್ರ ಮತ್ತು ತೆಲಂಗಾಣದವರೂ ಸಹಿತ ಹೋಗಿದ್ದಾರೆ. ಆದರೆ, ಮೊನ್ನೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯದವರು ಈ 2015ನೇ ಸಾಲಿನಲ್ಲಿ ಆಂಧ್ರ ಪ್ರದೇಶ ವಿಭಜನೆಯಾದಾಗ ಅಂದರೆ ತೆಲಂಗಾಣ ಮತ್ತು ಆಂಧ್ರ ರಾಜ್ಯವಾಗುವುದಕ್ಕಿಂತ ಮುಂಚಿತವಾಗಿ ನಮಗೆ award ಬಂದದ್ದರಿಂದ ಅಂದರೆ 2010ರಲ್ಲಿಯೇ Tribunal award ಬಂದದ್ದರಿಂದ ಸುಪ್ರೀಂಕೋರ್ಟ್‌ನಲ್ಲಿ ಅವರಿಗೆ ಸೂಚ್ಯವಾಗಿ ಹೇಳಿದ್ದಾರೆ. ಇದು ನಿಮ್ಮ internal matter. ನಿಮ್ಮ ರಾಜ್ಯಕ್ಕೆ ಸಿಗಬೇಕಾದಂತಹ ಪಾಲು ಸಿಕ್ಕಿದೆ. ನೀವುಗಳು ಕುಳಿತು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಿ ಎನ್ನುವ ಮಾತನ್ನೂ ಕೂಡ ಸುಪ್ರೀಂಕೋರ್ಟ್ express ಮಾಡಿದೆ. ಆದರೆ ಇನ್ನೂ ನಮಗೆ final orders ಆಗಬೇಕಾಗಿದೆ. ಅದಕ್ಕೆ ಅದರ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ, ಆ ಕೆಲಸ ಆಗಬೇಕಾಗಿದೆ. ಮೂರೂ ರಾಜ್ಯಗಳ ವ್ಯಾಜ್ಯವನ್ನು ಮುಗಿಸಬೇಕೆಂದು ಪ್ರಾಮಾಣಿಕವಾದಂತಹ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ನಿಮಗೆ ನಾನು ಹೇಳುತ್ತೇನೆ. ಅದೇ ಕೆಲಸದಲ್ಲಿ ನಾವಿದ್ದೇವೆ, ಈಗ ಬೇರೆ ಯಾವುದೇ ಕೆಲಸವಿಲ್ಲ. ಅದೂ ಒಂದೇ ಅಲ್ಲ. ಮಹದಾಯಿ ವಿಚಾರದಲ್ಲಿ ನಾವು ಒಂದು ಹೆಜ್ಜೆ ಮುಂದಕ್ಕೆ ಹೋಗಿದ್ದೇವೆ. ನಮಗೆ Gazette Notification ಆಗಿದೆ, 13.4 TMC ಯಷ್ಟು ನೀರು ನಮಗೆ ಆಗಿದೆ. ಅದರಲ್ಲಿ ನಾವು ಸುಮಾರು 5 TMC ಯಷ್ಟು ನೀರನ್ನು ಕುಡಿಯುವ ನೀರಿಗಾಗಿ ಉಪಯೋಗ ಮಾಡಿಕೊಳ್ಳುತ್ತೇವೆ. 8 TMC ಯಷ್ಟು ನೀರನ್ನು ಜಲ ವಿದ್ಯುತ್ ಉತ್ಪಾದನೆಗಾಗಿ ನಾವು ಉಪಯೋಗ ಮಾಡುತ್ತಿದ್ದೇವೆ. ಅದನ್ನೂ ಕೂಡ ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ DPR (Detailed Project Report) ಅನ್ನು ಕೂಡಲೇ ಅನುಮೋದನೆ ಮಾಡಬೇಕೆಂದು ಕೂಡ ವಿನಂತಿ ಮಾಡಿ ಕೂಡ ಬರೆದಿದ್ದೇವೆ. ಇನ್ನು ಮೇಕೆದಾಟು ಬಗ್ಗೆ ನಮ್ಮ ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಮಾತನಾಡಿದ್ದಾರೆ. ಮೇಕೆದಾಟಿನ ಬಗ್ಗೆಯೂ ಸಹಿತ ನಾವು ಪ್ರಯತ್ನ ಮುಂದುವರೆಸಿದ್ದೇವೆ. ತಮಿಳುನಾಡಿನ ಒಂದು ಆಂಗ್ಲ ಪತ್ರಿಕೆಯಲ್ಲಿ ಒಂದು ವರದಿ ಬಂದಿತ್ತು, ಆ ವರದಿಯಲ್ಲಿ suo

moto case ಹಾಕಿಕೊಂಡು ನಮಗೆ against ಆಗಿ order ಆಗಿತ್ತು. ಅದರ ವಿರುದ್ಧ ನಾವು National Green Tribunal Principal Bench, ದೆಹಲಿಗೆ ಹೋದೆವು. ಅದನ್ನು order quash ಮಾಡಿದರು. Suo moto case ಹಾಕತಕ್ಕಂತಹ ವ್ಯವಸ್ಥೆಯಿಲ್ಲವೆನ್ನುವುದನ್ನೂ ಕೂಡ . . .

**ಶ್ರೀ ಕೆ. ಗೋವಿಂದ ರಾಜು:** ಮಾನ್ಯ ಸಭಾಪತಿಯವರೆ, ತಮಿಳುನಾಡಿನಲ್ಲಿ ನಿಮ್ಮ ಪಕ್ಷದವರೇ ವಿರೋಧ ಮಾಡುತ್ತಿದ್ದಾರಲ್ಲಾ?

**ಶ್ರೀ ಗೋವಿಂದ ಎಂ.ಕಾರಜೋಳ:** ಅದನ್ನು ಬಿಟ್ಟುಬಿಡಿ. ಏನು ಮಾಡುತ್ತೀರಿ? ಬಿಟ್ಟುಬಿಡಿ. ಮಾನ್ಯ ಗೋವಿಂದ ರಾಜುರವರೆ, ಒಂದು ವೇಳೆ ನೀವು ತಮಿಳುನಾಡಿನಲ್ಲಿ ಇದ್ದಿದ್ದರೆ ಅದೇ ರೀತಿ ಮಾತನಾಡುತ್ತಿದ್ದಿರಿ, ಆಂಧ್ರದಲ್ಲಿ ಇದ್ದಿದ್ದರೆ ಆ ರೀತಿಯೇ ಮಾತನಾಡುತ್ತಿದ್ದಿರಿ. ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದು ಬರುವುದಿಲ್ಲ. ಅವರವರ ರಾಜ್ಯದ ವಿಚಾರಗಳನ್ನು ಅವರವರು ಮಾಡಿಕೊಳ್ಳಲಿ. ನಾವು ಏಕೆ ಅವರಿಗೆ ಹೇಳುವುದು? ಅದು ಅವರ ವಿಚಾರ. ಅವರ ಬಗ್ಗೆ ನಾವು ಏಕೆ ಮಾತನಾಡುವುದು, ಈ ಸದನದಲ್ಲಿ ಅವರ ಬಗ್ಗೆ ಮಾತನಾಡುವ ಅವಶ್ಯಕತೆ ನಮಗಿಲ್ಲ. ನಮ್ಮ ಸಮಯ ಏಕೆ waste ಮಾಡುವುದು? ಅದರ ಬಗ್ಗೆಯೂ ಕೂಡ ನಾವು ಮಾಡಿದ್ದೇವೆ. ನಮಗೆ ಬೆಂಗಳೂರಿನಲ್ಲಿ ಕುಡಿಯವ ನೀರಿಗಾಗಿ ಮೇಕೆದಾಟಿನಲ್ಲಿ ನಮಗೆ ಸುಪ್ರೀಂಕೋರ್ಟ್ allocation ಮಾಡಿದೆ. ನಮ್ಮ ಪಾಲಿನ ನೀರಿನಲ್ಲಿ ನಾವು ಮಾಡಿಕೊಳ್ಳುವುದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಆದರೆ, ನಮಗೆ ಇರತಕ್ಕಂತಹ legal formalities ಅನ್ನು ನಾವು complete ಮಾಡಬೇಕಾಗುತ್ತದೆ. ಅಲ್ಲಿ ನಾವು ಡ್ಯಾಮ್ ಕಟ್ಟಿ ನೀರು ನಿಲ್ಲಿಸಬೇಕೆಂದರೆ ಇವತ್ತು Forest Department ದು environmental clearance ಅನ್ನು ನಾವು ಮಾಡಿಕೊಳ್ಳಲೇ ಬೇಕಾಗುತ್ತದೆ. ಆ ಕೆಲಸದಲ್ಲಿಯೂ ಕೂಡ ನಾವು ಮುಂದುವರೆಯುತ್ತಿದ್ದೇವೆ. Legal team ಜೊತೆಗೆ ಮಾತನಾಡಿದ್ದೇವೆ. ಅಷ್ಟೇ ಅಲ್ಲದೇ ಕೇಂದ್ರ ಜಲಸಂಪನ್ಮೂಲ ಮಂತ್ರಿಗಳ ಜೊತೆಗೂ ಸಹಿತ ಮಾತನಾಡಿ ಆದಷ್ಟು ಬೇಗ ಸಭೆ ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿದ್ದೇವೆ. ಆದಷ್ಟುಬೇಗ ಸಭೆಯಾಗುತ್ತದೆ ಎನ್ನುವಂತಹ ವಿಶ್ವಾಸ ನಮಗಿದೆ. ಇದೂ ಅಲ್ಲದೇ ಮಾನ್ಯ ಸಭಾಪತಿಯವರೆ, ನಾವು Upper Bhadra ದ ಬಗ್ಗೆ ಈಗಾಗಲೇ National Project ಆಗಬೇಕೆಂದು ಎಲ್ಲಾ formalities ಕೂಡ ಹೆಚ್ಚು ಕಡಿಮೆ ಮುಗಿದಿವೆ. ಸ್ವಲ್ಪವೇ ದಿನಗಳಲ್ಲಿ, ತಿಂಗಳುಗಳಲ್ಲಿ ಅಲ್ಲ, ಕೆಲವೇ ದಿನಗಳಲ್ಲಿ ಕೇಂದ್ರ ಸಚಿವ ಸಂಪುಟದ ಅನುಮೋದನೆಯಾಗಿ ನಮಗೆ ಆದೇಶ ಬರುತ್ತದೆ ಎನ್ನುವಂತಹ ನಿರೀಕ್ಷೆಯಲ್ಲಿ ನಾವಿದ್ದೇವೆ. Formalities ಎಲ್ಲಾ complete ಆಗಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಅಲ್ಲಿಗೂ ಬರುತ್ತೇನೆ. 10 ವರ್ಷಗಳಿಂದ ತುಂಗಭದ್ರ, ನವಲಿ, Balancing Reservoir, ಇದನ್ನೇ ಹೇಳಿಕೊಳ್ಳುತ್ತಾ ಕುಳಿತಿದ್ವಿರಿ. ಪ್ರತಿ ದಿನ ಮುಂಜಾನೆ ನಾನು ಮೊದಲನೇ ಕೆಲಸ ಮಾಡುವುದು newspaper ಓದುವುದು. ಅದಕ್ಕೆ ಮಾನ್ಯ ಸಭಾಪತಿಯವರೆ, ನಾವು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಪಾಲಿನ ನೀರು ಅಂತರ್ರಾಜ್ಯ ನದಿಗಳಲ್ಲಿ ಹಂಚಿಕೆಯಾಗಿರತಕ್ಕಂತಹ ನೀರನ್ನು ಉಪಯೋಗ ಮಾಡಿಕೊಳ್ಳುವಂತಹದ್ದೇ ನಮ್ಮ ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ಇದರ ಬಗ್ಗೆ ನಮ್ಮ ಮಾನ್ಯ ಬಸವರಾಜ್ ಇಟಗಿಯವರು suffering ಅಚ್ಚುಕಟ್ಟು ಇದೆ ಎಂದು ಬಹಳ ಅವಸರ ಮಾಡುತ್ತಿದ್ದಾರೆ. Suffering ಅಚ್ಚುಕಟ್ಟಿನಲ್ಲಿಯೇ ಇದೆ. ಆದರೆ, illegal schemes ಆಗಿವೆ. ಅದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇದರಲ್ಲಿ ನಮ್ಮ ರೈತರು ಹೆಚ್ಚಿಗೆ involvement ಆಗಿರುತ್ತಾರೆ. ನೀವೆಲ್ಲಾ ಅದರಲ್ಲಿ ಕಾಳಜಿ ವಹಿಸಿ ಅದನ್ನು ಸರಿ ಮಾಡಿಕೊಳ್ಳಬೇಕು. ಹೆಚ್ಚಿಗೆ ಇದರ ಬಗ್ಗೆ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಮಾನ್ಯ ಸಭಾಪತಿಯವರೆ, ತುಂಗಭದ್ರ ಜಲಾಶಯದಲ್ಲಿ ಸುಮಾರು 28 ಟಿ.ಎಂ.ಸಿ.ಗಿಂತಲೂ ಹೆಚ್ಚಿಗೆ ಊಳು ಸಂಗ್ರಹವಾಗಿದೆ, ನಮ್ಮ storage capacity ಕಡಿಮೆಯಾಗಿದೆ. ನಮ್ಮ estimated ಅಚ್ಚುಕಟ್ಟು ಏನಿತ್ತು ಅದಕ್ಕೆ notified ಅಚ್ಚುಕಟ್ಟಿಗೆ ಇವತ್ತು ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೊನೆಯ ಭಾಗದ ರೈತರು suffering ಅಚ್ಚುಕಟ್ಟಿನಲ್ಲಿದ್ದಾರೆ. ಮಾನ್ಯ ಸಭಾಪತಿಗಳೇ, ಅದಕ್ಕೆ ಹೇಳುತ್ತೇನೆ. ನಾವು ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಮುಂದೆ ಒಂದು ಜಲಾಶಯವನ್ನು ಕಟ್ಟಬೇಕು ಎನ್ನುವಂತಹ ಆಲೋಚನೆ ಮಾಡಿದ್ದೇವೆ, ಈ ಬಗ್ಗೆ ಕಳೆದ 10 ವರ್ಷಗಳಿಂದ ರೈತರ ಬೇಡಿಕೆಯಿತ್ತು. ಮತ್ತೆ 1998ರಲ್ಲಿ ಜನಪ್ರತಿನಿಧಿಗಳಾದಂತಹ ಮಾನ್ಯ ಬಸವರಾಜ್ ಪಾಟೀಲ್‌ಇಟಗಿಯವರು ಬಂದಾಗಿನಿಂದಲೂ ಸಹಿತ ಆವತ್ತಿನಿಂದ ಕೂಡ ನವಲಿ ಜಲಾಶಯ, ನವಲಿ ಜಲಾಶಯ ಎಂದು ಹೇಳುತ್ತಲೇ ಇದ್ದಾರೆ. ಅದಕ್ಕೆ DPR (Detailed Project Report) ತಯಾರು ಮಾಡುವುದಕ್ಕೆ ಬಜೆಟ್‌ನಲ್ಲಿ ರೂ.20 ಕೋಟಿಗಳನ್ನು ಕೊಟ್ಟಿದ್ದೇವೆ. ಮಾನ್ಯ ಬಸವರಾಜ್ ಪಾಟೀಲ್ ಇಟಗಿಯವರೆ, survey works ನಡೆಯುತ್ತಿದೆ, ಇದು ತಮಗೆ ಗೊತ್ತಿರಲಿ. ಅವಸರ ಮಾಡಬೇಡಿ. ಎಲ್ಲವನ್ನೂ ಮಾಡಬೇಕೆನ್ನುವ ತವಕದಲ್ಲಿಯೇ ಇದ್ದೇವೆ. ಬೇಗ ಪೂರ್ಣವಾಗಿ ಮುಗಿಸಿಬಿಡುತ್ತೇವೆ. . ಈಗ ತುಂಗಭದ್ರದ ವಿಷಯ ಹಿಡಿದಿದ್ದೇನೆ. ತುಂಗಭದ್ರದ ವಿಷಯ ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೆ, ನಮಗೆ ಅಲ್ಲಿ ಒಂದು reservoir ಕಟ್ಟುವಂತಹ ಅವಶ್ಯಕತೆಯಿದೆ. ಎರಡು ದೃಷ್ಟಿಯಿಂದ ಹೇಳುತ್ತೇನೆ. ಕೊಪ್ಪಳ ಜಿಲ್ಲೆಯು ವಿಜಾಪುರ ಜಿಲ್ಲೆ ಇದ್ದಹಾಗೆಯೇ ಇತ್ತು, ಒಣ ಪ್ರದೇಶ ಅದು, ನೀರಿಲ್ಲದಂತಹ ಪ್ರದೇಶವಾಗಿದೆ. ಇವತ್ತು ನಮ್ಮ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಗಳಾದ ಮಾನ್ಯ ಹಾಲಪ್ಪ ಆಚಾರ್ ರವರು ಇದ್ದಾರೆ, ಅವರ ತಾಲ್ಲೂಕಿನ ಇನಾಮ ಹಂಚಿನಾಳದಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ, ಅವರ ಗ್ರಾಮದಲ್ಲಿಯೇ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಅಂತಹ ಪರಿಸ್ಥಿತಿಯಿದೆ. ಅದಕ್ಕಾಗಿ ಅಲ್ಲಿಯೂ ಕೂಡ ಕೃಷ್ಣಾ ನದಿಯಿಂದ ಯೋಜನೆ ತೆಗೆದುಕೊಂಡಿದ್ದೇವೆ. ಮಾನ್ಯ ಹಾಲಪ್ಪ ಆಚಾರ್ ರವರು ಬಹಳ ಪ್ರಯತ್ನ ಮಾಡಿ ಒಂದೂವರೆ ಸಾವಿರ ಕೋಟಿಗಳ ಯೋಜನೆ ಮಾಡಿಸಿದ್ದಾರೆ. ಈಗಾಗಲೇ 50% ಕೆಲಸ ಮುಗಿದಿದೆ. ಅದಕ್ಕೆ ಅಲ್ಲಿಯೂ ಕೂಡ ಕೆಲಸ ಮಾಡುತ್ತೇವೆ. ಈಗ ನಮಗೆ ಇರತಕ್ಕಂತಹದ್ದು ಏನೆಂದರೆ, ತುಂಗಭದ್ರ ನದಿಗೆ ನವಲಿ ಮತ್ತು Balancing Reservoir ಕಟ್ಟಬೇಕಾಗಿದೆ. ಅಲ್ಲಿ ನಾವು ಮೂರು ರಾಜ್ಯಗಳ ಒಪ್ಪಿಗೆ ಪಡೆಯಬೇಕಾಗಿದೆ. ಅದೂ ಅಲ್ಲದೇ ಏನಾಗಿದೆ ಎಂದರೆ, ತುಂಗಭದ್ರ ನದಿ ಈಗ ನಮ್ಮ ಕೈಯಲ್ಲಿಲ್ಲ. Central Water Commission ನಲ್ಲಿದೆ, Thungabadra Board Constitute ಆಗಿದೆ. Thungabadra Board Constitute ಆದಾಗ ತುಂಗಭದ್ರ ಬೋರ್ಡ್‌ಗೆ Central Water Commission ಅಧಿಕಾರಿಗಳೇ Chairman ಆಗಿದ್ದಾರೆ, ಅಧಿಕಾರಿಗಳೇ Chairman ಆಗಿದ್ದಾರೆ, ಅವರ ಅಧ್ಯಕ್ಷತೆಯಲ್ಲಿಯೇ ಎಲ್ಲಾ ನಡೆಯುವುದು. ಅದಕ್ಕೆ ಇವೆಲ್ಲಾ ಸಮಸ್ಯೆಗಳಿವೆ. ನಾವು ಈಗಾಗಲೇ ತುಂಗಭದ್ರ ಬೋರ್ಡ್ ಮೀಟಿಂಗ್‌ನಲ್ಲಿ ಅಂದರೆ ನಮ್ಮ Additional Chief Secretary ರವರು ಸದಸ್ಯರಾಗಿದ್ದಾರೆ, ಅಂದರೆ ತುಂಗಭದ್ರ ಬೋರ್ಡ್‌ಗೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಸದಸ್ಯರಾಗಿದ್ದಾರೆ. ಈಗಾಗಲೇ ಎರಡು ಸಭೆಗಳಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಅವರಿಂದ ಇನ್ನೂ ನಮಗೆ clearance ಬರಬೇಕು. ಏಕೆಂದರೆ, ಅಂತರ್ರಾಜ್ಯ ಇದು. ತಾವೇ 35% ನೀರನ್ನು ಅವರಿಗೆ ಕೊಡಬೇಕೆಂದು ಹೇಳಿದ್ದೀರಿ. 30 ಟಿ.ಎಂ.ಸಿ. ನೀರನ್ನು ನಾವು ಅಲ್ಲಿ ಸಂಗ್ರಹ ಮಾಡಿದ್ದೇವೆ ಎಂದರೆ 35% ನೀರು ಕೊಡಬೇಕಾಗುತ್ತದೆ. ಕೊಡಬೇಕಾದಾಗ ಅವರ ಷೇರು ಕೊಡುವುದರ ಜೊತೆಗೆ ಒಪ್ಪಿಗೆಯನ್ನೂ ಸಹಿತ ಕೊಡಬೇಕಾಗುತ್ತದೆ. ಇದೆಲ್ಲಾ ಸಮಸ್ಯೆಗಳೂ ಇವೆ.

**(ಮುಂದು . . . .)**

**(715) 15.09.2021 04.50 ಎಸ್‌ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು):-**

ನಾವು ತುಂಗಭದ್ರಾ ಬೋರ್ಡ್ ಸಭೆಯಲ್ಲಿ ನಮ್ಮ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಸದಸ್ಯರಾಗಿದ್ದಾರೆ. ಈಗಾಗಲೇ ಎರಡು ಸಭೆಯಲ್ಲಿ ಆ ವಿಷಯ ಪ್ರಸ್ತಾಪವಾಗಿದೆ. ಅವರಿಂದ ಇನ್ನೂ ನಮಗೆ clearance ಬರಬೇಕು. ಏಕೆಂದರೆ ಇದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತರರಾಜ್ಯ ವಿಷಯವಾಗಿದೆ. ತಾವೇ ಹೇಳಿದಂತೆ 35% ನೀರು ಅವರಿಗೆ ಕೊಡಬೇಕು. 30 ಟಿ.ಎಂ.ಸಿ. ನೀರು ಅಲ್ಲಿ ಸಂಗ್ರಹ ಮಾಡಿದ್ದೇವೆಂದರೆ 35% ನೀರು ಕೊಡಬೇಕು. ಅವರ ಭಾಗವನ್ನು ಕೊಡುವುದರ ಜೊತೆಗೆ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಇದೆಲ್ಲಾ ಸಮಸ್ಯೆಗಳಿವೆ. ನಮ್ಮ ಸರ್ಕಾರ ನಮ್ಮ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ, ಕುಡಿಯುವ ನೀರಿನ ಯೋಜನೆಗಳ ಬಗ್ಗೆ ಮತ್ತು ಕೈಗಾರಿಕೆಗಳಿಗೆ ನೀರಿನ ಹಂಚಿಕೆ ವಿಷಯಗಳಲ್ಲಿ ಬಹಳ ಜಾಗ್ರತೆಯಿಂದ ಹೆಜ್ಜೆ ಇಡತಕ್ಕಂತಹ ಕೆಲಸ ಮಾಡುತ್ತದೆ. ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಕೃಷ್ಣಾ ನದಿ ಬಗ್ಗೆ ಮಾನ್ಯ ಎಸ್.ಆರ್.ಪಾಟೀಲರು ಹೇಳಿದಂತೆ ಅವರೂ ಸಂತ್ರಸ್ತರ ಕುಟುಂಬದಿಂದ ಬಂದವರೇ, ತಾವೂ ಸೇರಿದಂತೆ ಹೆಚ್ಚು ಕಡಿಮೆ ನಾವೆಲ್ಲರೂ ಸಂತ್ರಸ್ತರ ಕುಟುಂಬದಿಂದ ಬಂದವರೇ ಆಗಿದ್ದೇವೆ. ಏಕೆಂದರೆ ಇನ್ನೂ ಹಿನ್ನೀರಿನ ಸರ್ವೆ ನಡೆಯುತ್ತಿದೆ. ಆಲಮಟ್ಟಿ ಜಲಾಶಯದಲ್ಲಿ 519.6 ಮೀಟರ್‌ಗೆ ನೀರು ನಿಲ್ಲಿಸಿದ್ದು, ಅದನ್ನು 524.256 ಮೀಟರ್‌ಗೆ ನಿಲ್ಲಿಸಿದಾಗ ಹಿನ್ನೀರಿನ ಒತ್ತಡ ಎಷ್ಟು ಹೆಚ್ಚಾಗುತ್ತದೆ, ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ ಎಂದರೆ ಇಂದಿನ ಅಂದಾಜು ಪ್ರಕಾರ ಒಟ್ಟು ಆಲಮಟ್ಟಿ ಹಿನ್ನೀರಿನಲ್ಲಿ 188 ಹಳ್ಳಿಗಳು ಬಾಧಿತವಾಗುತ್ತವೆ. 20 ಹಳ್ಳಿಗಳು ಸಂಪೂರ್ಣವಾಗಿ ಮುಳುಗಡೆಯಾಗುತ್ತವೆ. ಒಂದು ಊರಿನಲ್ಲಿ 10 ಎಕರೆ ಹೋಗಬಹುದು, ಒಂದು ಊರಿನಲ್ಲಿ ಅರ್ಧ ಎಕರೆ ಹೋಗಬಹುದು, ಒಂದು ಊರಿನಲ್ಲಿ 500 ಎಕರೆ ಹೋಗಬಹುದು, ಒಂದು ಊರಿನಲ್ಲಿ ಸಾವಿರ ಎಕರೆ ಹೋಗಬಹುದು. ಸರ್ವೆ ಇನ್ನೂ ನಡೆಯುತ್ತಿದ್ದು, ಪೂರ್ಣಗೊಂಡಿರುವುದಿಲ್ಲ. ನಾನು ಮತ್ತೊಮ್ಮೆ ಸಭೆಯನ್ನು ನಡೆಸಿ ಅಧಿಕಾರಿಗಳಿಗೆ ಹೇಳಿದ್ದೇನೆ. ಸರ್ವೆ perfect ಆಗಿರಬೇಕು. ನಾಳಿನ ದಿನ ಡ್ಯಾಂ ಕಟ್ಟಿ ಮುಗಿದ ನಂತರ ಯಾರೂ ಯಾರ ಕಾಳಜಿಯನ್ನೂ ಮಾಡುವುದಿಲ್ಲ. ಏಕೆಂದರೆ ಜೋಗದ ಹೈಡ್ರೋಪವರ್ ಪ್ರಾಜೆಕ್ಟ್ ನಡೆದಾಗ ನಾವೆಲ್ಲಾ ಸಣ್ಣವರಿದ್ದೆವು. ಚಿಮಣಿ, ಕಂದೀಲು ಹಚ್ಚಿ ಕುಳಿತು ಕೊಳ್ಳುತ್ತಿದ್ದ ಆ ದಿನಗಳಲ್ಲಿ ಲೈಟ್ ಬರುತ್ತದೆ ಎಂದರೆ ಹೇಗೆ ಬರುತ್ತದೆ ಎಂದು ನೋಡುತ್ತಿದ್ದೆವು. ಆಗಲೂ ಅನೇಕ ಹಳ್ಳಿಗಳು ಮುಳುಗಡೆಯಾದವು. ಆಗ ಇಂದಿನಂತೆ ಸರಿಯಾದ ವ್ಯವಸ್ಥೆ ಇರಲಿಲ್ಲ. ಆಗಿನ ಕಾಲದಲ್ಲಿ ಸರ್ಕಾರದ ಆರ್ಥಿಕ ಪರಿಸ್ಥಿತಿಗಳು ಸಣ್ಣ ಬಜೆಟ್‌ನಲ್ಲಿ ಇತ್ತು. ಇಂದಿಗೂ ಕೂಡ ಅಲ್ಲಿ sufferers ಇದ್ದಾರೆ. ನಾನು ಹೋಗಿ ನೋಡಿ ಬಂದಿದ್ದೇನೆ. ಸ್ಥಳಾಂತರಗೊಂಡಂತಹ ಜನರಲ್ಲಿ ಇಂದಿಗೂ sufferers ಇದ್ದಾರೆ. ಒಂದಿಂಚು ನೆಲವೂ ಮುಳುಗಡೆಯಿಂದ ಉಳಿಯಬಾರದು ಎಂದು ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಒಂದು ಸಲ ಅಲ್ಲದಿದ್ದರೆ ನಾಲ್ಕು ಸಲ ಸರ್ವೆ ಮಾಡಿ. ಅಂತಿಮವಾಗಿ ನೀವು

ಗುರುತು ಮಾಡುವ ಜಾಗದಿಂದ ಒಂದಿಂಚು ನೀರು ಹೊರಗೆ ಬರಬಾರದು, ಯಾರಿಗೂ ತೊಂದರೆಯಾಗಬಾರದೆಂದು ಅಧಿಕಾರಿಗಳಿಗೆ ಹೇಳಿದ್ದೇನೆ.

ಆಲಮಟ್ಟಿ ಜಲಾಶಯದಲ್ಲಿ 519.6 ಮೀಟರ್‌ಗೆ ನೀರು ನಿಲ್ಲಿಸಿದಾಗ ಬಾಗಲಕೋಟೆ ನಗರದಲ್ಲಿ ಯಾವ ರೀತಿ ನೀರು ಬಂದಿತ್ತು ಎಂದು ಮಾನ್ಯ ಎಸ್.ಆರ್.ಪಾಟೀಲರಿಗೂ ತಿಳಿದಿದೆ. ಅದಕ್ಕಾಗಿ ನಾವು ತಕ್ಷಣ 521 ಮೀಟರ್‌ಗೆ payment ಕೊಡುವಂತಹ, acquisition ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಇನ್ನೂ ಕೆಲವರಿಗೆ ಬಹಳ ಭಯ ಇದೆ. ಅದಕ್ಕಾಗಿ ನಾವು ಮಾಡುವುದಕ್ಕಿಂತಲೂ ಮುಂಚೆ ಸರಿಯಾಗಿ ಸರ್ವೆ ಮಾಡಿಸಿ ಆ ಯೋಜನೆಯ ವ್ಯಾಪ್ತಿಯಲ್ಲಿ ಬರುವಂತಹ ಒಬ್ಬ ಸಂತ್ರಸ್ತರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುವಂತೆ ಹೇಳಿದ್ದೇನೆ. ಮಾನ್ಯ ಎಸ್.ಆರ್.ಪಾಟೀಲರು, ಮಾನ್ಯ ತಿಮ್ಮಾಪುರ ಅವರು, ಮಾನ್ಯ ಪ್ರಕಾಶ್ ಕೆ.ರಾಥೋಡ್ ಅವರು ಇಲ್ಲಿಯೇ ಇದ್ದಾರೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಯೋಜನೆಯ ಕೆಳಗಿದ್ದರೂ ಅವರನ್ನೂ ಸೇರಿಸಿಕೊಳ್ಳೋಣ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಚಿವರೇ, ನಾವೂ ಸಂತ್ರಸ್ತರೇ. ಏಕೆಂದರೆ Googal Barrage ನಿಂದ ಹೊಲಗಳು ಹೋಗಿವೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಇಟಗಿಯವರೇ, ನಾನು ಮಾತು ಮುಗಿಸುತ್ತೇನೆ. ನಂತರ ಮಾತನಾಡಿ.

ಮಾನ್ಯ ಸಭಾಪತಿಯವರೇ, ಅಖಂಡ ವಿಜಯಪುರ ಜಿಲ್ಲೆಯವರು ಆಲಮಟ್ಟಿ ಜಲಾಶಯ ಕಟ್ಟಿದಾಗಲೂ ಮುಳುಗಡೆಯಾದೆವು. ನಾರಾಯಣಪುರ ಜಲಾಶಯ ಕಟ್ಟಿದಾಗಲೂ ಮುಳುಗಡೆಯಾದೆವು. ಮೊದಲು ಆದಂತಹ ನಾರಾಯಣಪುರ ಜಲಾಶಯದ ಸಂತ್ರಸ್ತರಾದವರು ಇಂದಿಗೂ ಸಂತ್ರಸ್ತರಾಗಿಯೇ ಉಳಿದಿದ್ದಾರೆ. ಏಕೆಂದರೆ ಕೆಲವು ಊರುಗಳಲ್ಲಿ ನಾನು ನೋಡಿದ್ದೇನೆ. ಊರಿಗೇ ನೀರು ಬರುತ್ತದೆ. ಹುನಗುಂದ ಶಾಸಕರಾದ ಮಾನ್ಯ ದೊಡ್ಡನಗೌಡರು ಪದೇ ಪದೇ ಜಗಳವಾಡುತ್ತಿದ್ದರು. ಪುನಃ ಯಾವ ಯಾವ ಹಳ್ಳಿಗಳಿಗೆ ನೀರು ಬರುತ್ತದೆಯೋ ಅಂತಹ ಸುಮಾರು 10-11 ಹಳ್ಳಿಗಳಿಗೆ acquisition proceedings ಮುಖಾಂತರ ಮಾಡಿಕೊಡುವಂತಹ ಕೆಲಸ ಮಾಡಿಕೊಟ್ಟಿದ್ದೇವೆ. ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಕೆಲಸ ಮಾಡಬೇಕೆನ್ನುವುದು ನಮ್ಮ ಸರ್ಕಾರದ ಉದ್ದೇಶ ಮತ್ತು ನನ್ನ ಉದ್ದೇಶವೂ ಕೂಡ. ಏಕೆಂದರೆ ನಾನು ಬರೀ ಮಂತ್ರಿಯಲ್ಲ. ಅಕಸ್ಮಾತ್ ಮಾನ್ಯ ಶ್ರೀಕಂಠೇಗೌಡರು ಅಥವಾ ಮಾನ್ಯ ಮರಿತಿಬ್ಬೇಗೌಡರು ಏನಾದರೂ ಉತ್ತರ ಹೇಳಿದ್ದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಯುತ್ತಿತ್ತು. ನಾನೂ ಸಂತ್ರಸ್ತರ ಕುಟುಂಬದಿಂದ ಬಂದವನಾಗಿದ್ದೇನೆ. ಅವರ ಮಧ್ಯೆಯೇ ಬದುಕಬೇಕು. ಬದುಕಿರುವವರೆವಿಗೂ ಅವರ ಜೊತೆಯಲ್ಲಿಯೇ ಇರಬೇಕು.

ಮಾನ್ಯ ಸಭಾಪತಿಯವರೇ, ಅತ್ಯಂತ ಕಳಕಳಿ, ಕಾಳಜಿಯಿಂದ ನಾವು ನೀವು ಎಲ್ಲರೂ ಸೇರಿ ಈ ಕೆಲಸವನ್ನು ಮಾಡೋಣ. ಇದುವರೆವಿಗೂ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾತನಾಡುವಾಗ ಕೆಲವು ಸದಸ್ಯರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಮೇಕೆದಾಟು ವಿಷಯದ ಬಗ್ಗೆ ಹೇಳಿದ್ದೇನೆ. ಇನ್ನೇನು ಹೇಳಬೇಕಾಗಿಲ್ಲ. ಮಾನ್ಯ ರಾಥೋಡ್ ಅವರು ಕಾಲುವೆಗಳ ದುರಸ್ತಿ ಬಗ್ಗೆ ಮತ್ತು ಹೂಳು ತೆಗೆಸುವ ಬಗ್ಗೆ ಹೇಳಿದ್ದಾರೆ. ಅವು O & M (Operation and Maintenance) ಒಳಗೆ Maintenance Grant ನಲ್ಲಿ ಮಾಡುವ ಕೆಲಸಗಳಾಗಿದ್ದು, ಖಂಡಿತವಾಗಿ ಮಾಡೋಣ. ಇನ್ನು ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು NRBC (Narayanpur Right Bank Canal) ಯಲ್ಲಿ ಕೆರೆಗಳನ್ನು ತುಂಬಿಸಬೇಕೆಂದು ಕೇಳಿದ್ದಾರೆ. ಪ್ರಥಮ ಸಭೆಯಲ್ಲಿಯೇ ಈಗಾಗಲೇ ನಾನು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. Enroute ನಮ್ಮ canal ಗಳು ಎಲ್ಲೆಲ್ಲಿ ಹೋಗುತ್ತವೆಯೋ ಅಲ್ಲಿ ಯಾವ್ಯಾವ ಕೆರೆಗಳನ್ನು gravity ಮೇಲೆ ತುಂಬಿಸಲಿಕ್ಕೆ ಸಾಧ್ಯವಾಗುತ್ತದೆಯೋ ಅವುಗಳನ್ನು ತುಂಬಿಸಲಿಕ್ಕೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಅಂತಹ ಕೆರೆಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ಪಟ್ಟಿಯನ್ನು ಕೊಡಬಹುದು. Estimate ಮಾಡಿಸಿ ತರಿಸಿಕೊಂಡು ಖಂಡಿತವಾಗಿಯೂ ಅಂತಹ ಕೆರೆಗಳನ್ನು ತುಂಬಿಸುವ ಕೆಲಸ ಮಾಡಲಾಗುತ್ತದೆ. ಅದರಿಂದ ಕುಡಿಯುವ ನೀರಿಗೂ ಆಗುತ್ತದೆ, ರೈತರಿಗೂ ಅನುಕೂಲವಾಗುತ್ತದೆ. ಅಂತರ್ಜಲದ ಮಟ್ಟವೂ ಹೆಚ್ಚಾಗುತ್ತದೆ.

ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮತ್ತೊಂದು ವಿಷಯವನ್ನು ಪ್ರಸ್ತಾಪಿಸಿದ್ದರು. ದೇವದುರ್ಗ ಅತ್ಯಂತ ಒಣ ಪ್ರದೇಶ. ನೀರಾವರಿ ಸೌಲಭ್ಯ ಬಹಳ ಕಡಿಮೆ. ಅಲ್ಲಿ 28 ಕೆರೆಗಳನ್ನು ಕೃಷ್ಣಾ ನದಿಯಿಂದ lift ಮಾಡಿ ತುಂಬಿಸಬೇಕೆಂದು ಅವರು ಹೇಳಿದರು. ಅದನ್ನು ತಾಂತ್ರಿಕವಾಗಿ ಪರಿಶೀಲನೆ ಮಾಡಲಾಗುತ್ತದೆ. Gravity ಮೇಲೆ ಯಾವ್ಯಾವ ಕೆರೆಗಳನ್ನು ತುಂಬುವುದಕ್ಕೆ ಸಾಧ್ಯವಿದೆಯೋ ಅವುಗಳನ್ನು ತುಂಬಲಾಗುವುದು. Gravity ಮೇಲೆ ತುಂಬುವುದನ್ನು ಯಾವುದನ್ನೂ ನಿಲ್ಲಿಸುವುದಿಲ್ಲ. Canal ನಿಂದ ಅರ್ಧ ಕಿಲೋಮೀಟರ್ ಆಚೀಚೆ ಇದ್ದರೂ ಮಾಡಿಕೊಡಲಾಗುವುದು. ಗೆಜೆಟ್ ನೋಟಿಫಿಕೇಷನ್ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಪುನಃ ಪ್ರಸ್ತಾಪ ಮಾಡುವ ಅವಶ್ಯಕತೆಯಿಲ್ಲ. ಆರ್ & ಆರ್ ಬಗ್ಗೆಯೂ ತಮಗೆ ಹೇಳಿದ್ದೇನೆ. Land acquisition ಬಗ್ಗೆಯೂ ತಮಗೆ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, 2013ರ Land Acquisition Act ಏನಿದೆ ಅದು Central Act. ಇದಾದ ಮೇಲೆಯೇ ನಮಗೆ ಕೃಷ್ಣಾದಲ್ಲಿ project cost ಹೆಚ್ಚಾಗಿದೆ. ನಾವು ರೂ.17,702 ಕೋಟಿ ರೂಪಾಯಿ ಡಿಪಿಆರ್ ಮಾಡಿ ಅನುಮೋದನೆಯನ್ನು ಕೊಟ್ಟಂತಹ ಸಂದರ್ಭದಲ್ಲಿ onetime payment ಇತ್ತು. 2013 ರ Act ಬಂದ ಮೇಲೆ ನಾಲ್ಕು ಪಟ್ಟು ಕೊಡಬೇಕಾಯಿತು. ರೂ.5 ಲಕ್ಷ ಭೂಮಿ ಬೆಲೆ ಇದ್ದರೆ ರೂ.20 ಲಕ್ಷ ಕೊಡಬೇಕು. ಆದ್ದರಿಂದ ಹೆಚ್ಚಾಗಿದೆ.

ಇನ್ನು ಕೆಲವು ವಿಷಯಗಳನ್ನು ಬಹಿರಂಗವಾಗಿ ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. "ನಮ್ಮ ಸರ್ಕಾರದ ಅವಧಿಯಲ್ಲಿ ಹತ್ತು ಹೆಜ್ಜೆ ಮುಂದೆ ಹೋಗುತ್ತೇವೆ."

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು.)**

ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಕರಣಗಳು ಬಾಕಿಯಿವೆ. ಅಂತರರಾಜ್ಯ ವಿವಾದಗಳಿವೆ. ಅದಕ್ಕಾಗಿ ನಾನು ಹೆಚ್ಚು ಬಹಿರಂಗವಾಗಿ ಮಾತನಾಡುವುದಕ್ಕೆ ಬಯಸುವುದಿಲ್ಲ. ಎಲ್ಲಾ ಮಾನ್ಯ ಸದಸ್ಯರ ಸಹಕಾರವಿರಲಿ. ಇದರಲ್ಲಿ ಮುಚ್ಚುಮರೆ ಮಾಡುವುದೇನೂ ಇರುವುದಿಲ್ಲ. ಖಂಡಿತವಾಗಿ ನಿಮ್ಮೆಲ್ಲರ ಜೊತೆಯಲ್ಲಿ ಕಾಲಕಾಲಕ್ಕೆ ಸಭೆಗಳನ್ನು ಮಾಡಿ ಈ ಯೋಜನೆಯನ್ನು ಪೂರ್ಣಗೊಳಿಸಲಿಕ್ಕೆ ಪ್ರಯತ್ನಿಸಲಾಗುವುದು. ಅವಧಿ ಕಡಿಮೆಯಿರುವುದರಿಂದ ಯೋಜನೆಯು ಪೂರ್ಣವಾಗಲಿಕ್ಕಿಲ್ಲ. ಆದರೆ ಹತ್ತು ಹೆಜ್ಜೆ ಮುಂದೆ ಹೋಗುತ್ತೇವೆ ಎನ್ನುವ ಮಾತನ್ನು ಸೂಕ್ಷ್ಮವಾಗಿ ಹೇಳಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಬಹಳ ಕಳಕಳಿ, ಕಾಳಜಿಯನ್ನು ವ್ಯಕ್ತ ಪಡಿಸಿರುವುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(...ಮುಂದು)**

(716) 15-09-2021, 5.00 KG AK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಜಲಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳರವರು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರು Krishna Tribunal gazette notification ಬಗ್ಗೆ ವಿಶೇಷ ಕಾಳಜಿವಹಿಸಿ ಸ್ವತಃ ದೆಹಲಿಗೆ ಹೋಗಿ ಸಂಬಂಧಪಟ್ಟ ಸಚಿವರ ಮತ್ತು ಅಧಿಕಾರಿಗಳ ಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಡ ತಂದು gazette notification ಅನ್ನು ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದರ ಜೊತೆಗೆ ನ್ಯಾಯಾಲಯದಲ್ಲಿ ಇರುವಂತಹ hurdles ಏನಿದೆ, ಅದನ್ನು clear ಮಾಡುವುದಕ್ಕೂ ಸಹ legal experts ರವರ ಜೊತೆಗೆ ಚರ್ಚೆ ಮಾಡಿ ಅದನ್ನು ಆದಷ್ಟು ತ್ವರಿತಗತಿಯಿಂದ expedite ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೂ ಸಹ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರು 10 ಹೆಜ್ಜೆ ಮುಂದೆ ಹೋಗುತ್ತೇವೆಂದು ಹೇಳಿದ್ದಾರೆ. ಇದೊಂದು ಸಂತೋಷದಾಯಕವಾದ ವಿಚಾರ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರ 10 ಹೆಜ್ಜೆ ಏನೆಂದು ನಿಮಗೆ ಗೊತ್ತಿಲ್ಲ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, positive reply ಎಂದು ಹೇಳಿದ್ದೇನೆ. 519 ರಿಂದ 524 ಮೀಟರ್‌ಗಳ ಮಧ್ಯದಲ್ಲಿ 75 ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ, ಅದು ಮಹಾಪೂರ ಬಂದಾಗ ಪ್ರತಿವರ್ಷವು ಮುಳುಗುತ್ತದೆ. ಅದಕ್ಕೆ ಬೇಗ acquisition ಮಾಡಬೇಕು. 20 ಹಳ್ಳಿಗಳನ್ನು ಮತ್ತು 75 ಸಾವಿರ ಎಕರೆ ಭೂಮಿಯನ್ನು audit ಮಾಡಬೇಕು. ಅವರಿಗೆ permanent ಆಗಿ payment ಮಾಡಿಬಿಟ್ಟರೆ, ಪ್ರತಿವರ್ಷ ಹೋಗಿ ಅವರ ಎದುರುಗಡೆ ನಿಂತು ಕೊಳ್ಳುವಂತಹ ಅವಶ್ಯಕತೆ ಇರುವುದಿಲ್ಲ. 75 ಸಾವಿರ ಎಕರೆ ಭೂಮಿ ಮುಳುಗಡೆಯಾಗುತ್ತದೆ. 519.06 ಮತ್ತು 524.256 ಮೀಟರ್‌ಗಳ ಮಧ್ಯದಲ್ಲಿ once for all acquisition ಮಾಡಿದರೆ, 3ನೇ ಹಂತಕ್ಕೂ ಸಹಾಯವಾಗುತ್ತದೆ. ಇದರಿಂದ ಪ್ರತಿವರ್ಷ ಮಹಾಪೂರದಿಂದ ತಪ್ಪಿಸಿಕೊಂಡಂತೆ ಆಗುತ್ತದೆ. ಅದರ ಜೊತೆಗೆ 20 ಹಳ್ಳಿಗಳು ಸಂಪೂರ್ಣವಾಗಿ ಮುಳುಗುತ್ತವೆ, ಅದನ್ನು ಸ್ವಾಧೀನ ಪಡಿಸಿಕೊಂಡು Rehabilitation Centre quick ಆಗಿ ಈ ಸರ್ಕಾರದ ಅವಧಿಯೊಳಗೆ ಮುಗಿಸಿ ಎಂಬ ಮಾತನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಹಾದಾಯಿ ಮತ್ತು ಮೇಕೆದಾಟಿನ ಬಗ್ಗೆಯೂ ಚರ್ಚೆ ಮಾಡಿದ್ದಾರೆ. Upper Bhadra ಬಗ್ಗೆಯೂ ಚರ್ಚೆ ಮಾಡಿದ್ದಾರೆ. 3ನೇ ಹಂತದ ಜೊತೆಗೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಯ ಬಗ್ಗೆ ಚರ್ಚೆ ಮಾಡಿದ್ದಾರೆ. ಮಾನ್ಯ ಸಚಿವರು ಎತ್ತಿನಹೊಳೆಯನ್ನು ಬಿಟ್ಟು ಎಲ್ಲವನ್ನೂ ಚರ್ಚೆ ಮಾಡಿದ್ದಾರೆ. ಎತ್ತಿನಹೊಳೆಯ ಬಗ್ಗೆಯೂ ಸಹ ಕಾಳಜಿವಹಿಸುತ್ತಾರೆಂದು ಭಾವಿಸುತ್ತೇನೆ. ಮಾನ್ಯ ಸಚಿವರು ಒಂದು ಮಾತು ಹೇಳಿದರು. ನಾನು differ ಆಗುವುದು ಏನೆಂದರೆ, ಹೊಸಪೇಟೆಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡಲಸಂಗಮದವರೆಗೆ 142 ಕಿಲೋಮೀಟರ್‌ವರೆಗೆ ಕಾಂಗ್ರೆಸ್ ನಡೆಗೆ ಕೃಷ್ಣೆ ಬಳಿಗೆ ಎಂದು ನಾವು ಬಂದಾಗ, ಬಸವಣ್ಣನವರ ಐಕ್ಯ ಸ್ಥಳ, ವಿದ್ಯಾ ಭೂಮಿ ಮತ್ತು ತಪೋ ಭೂಮಿಯಲ್ಲಿ ಕೊನೆಯ ಸಭೆಯನ್ನು ಮಾಡಿದ್ದೇವೆ. ನಮ್ಮ ಹಿಂದಿನ ಮುಖ್ಯಮಂತ್ರಿಯವರು ಮತ್ತು ಈಗಿನ ಪ್ರತಿಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು, ನಾನು ಮತ್ತು ಡಾ||ಪರಮೇಶ್ವರವರು ಜೊತೆಯಾಗಿಯೇ ಹೇಳಿದ್ದೇವೆ. ಪ್ರತಿವರ್ಷ ನೀರಾವರಿ ಯೋಜನೆಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು 10 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಐದು ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳಿಗಿಂತ ಕಡಿಮೆ ಕೊಟ್ಟಿದ್ದರೆ, ಅವರು ಏನು ಹೇಳುತ್ತಾರೋ, ಆ punishment ಗೆ ready ಇದ್ದೇನೆ. I am ready.

**ಶ್ರೀ ಗೋವಿಂದ ಎಂ.ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ರಾಜ್ಯದ ನೀರಾವರಿ ಬಗ್ಗೆ ಹೇಳಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಹೇಳಿದ್ದೇನೆ. ಅದರ ಪರಿಣಾಮ ಏನಾಯಿತು ಎಂದರೆ, ಇಡೀ ಜಿಲ್ಲೆಯಲ್ಲಿ ಎಲ್ಲರೂ ಸೋತು ನಾನು ಒಬ್ಬನೆ ಒದ್ದಾಡಬೇಕೇ ಎಂದು ಹೇಳಿದೆ ಅಷ್ಟೇ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. I am a witness. I will never lie. ನಾವು ನೀರಾವರಿ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳಂತೆ, ಐದು ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೆವು. ಬಹುಶಃ ನನ್ನ ನೆನಪಿನ ಪ್ರಕಾರ, ಸುಮಾರು 53 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನೀರಾವರಿ ಯೋಜನೆಗೆ ಉಪಯೋಗ ಆಗಿದೆ. ಆದರೆ, ನಾವು ಕೃಷ್ಣಾ ಮೇಲ್ದಂಡೆ ಯೋಜನೆ ಎಂದು ಹೇಳಿಲ್ಲ ಎನ್ನುವ ಮಾತನ್ನು ತಮ್ಮ ಮುಖಾಂತರ ಶ್ರೀ ಗೋವಿಂದ ಕಾರಜೋಳರವರಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಗೋವಿಂದ ಎಂ. ಕಾರಜೋಳ (ಜಲಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಎತ್ತಿನಹೊಳೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಒಂದು important clarification ಗೆ ದಯವಿಟ್ಟು ಉತ್ತರ ಕೊಡಿ. ಅದು ಬಹಳ ಮುಖ್ಯವಾದ್ದದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ತಿಪ್ಪೇಸ್ವಾಮಿಯವರೇ, ತಮಗೆ ಮಾತನಾಡಿ ಎಂದು ಹೇಳುತ್ತಿದ್ದೇನೆ ಅಲ್ಲವೇ; ತಾವು ಮಾತನಾಡಬೇಕು. ಮಾತನಾಡದೆ ಸುಮ್ಮನೆ ಏಕೆ temper ತೆಗೆದುಕೊಳ್ಳುತ್ತೀರಿ?

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ದಿನಾಂಕ 03-12-2019 ರಂದು ಕೇಂದ್ರ ಜಲಶಕ್ತಿ ಸಚಿವರಾದ ಶ್ರೀ ಗಜೇಂದ್ ಸಿಂಗ್ ಶೆಕಾವತ್‌ರವರು ಒಂದು ಪತ್ರವನ್ನು ಬರೆದಿದ್ದಾರೆ. ಆಂಧ್ರ ಪ್ರದೇಶದ ಮರುವಿಂಗಡಣೆ ಕಾಯಿದೆ 2014 ರ ಕಲಂ.80 ರ ಪ್ರಕಾರ ಕೃಷ್ಣಾ ಜಲವಿವಾದ ಜಲಮಂಡಳಿಯ 2ನೇ ಅವಧಿಯನ್ನು ವಿಸ್ತರಿಸಲಾಗಿದೆ. ಈಗಿನಂತೆ ISRWD (Inter-State River Water Disputes) Act, 1950 ರ ಕಲಂ.53 ಅಡಿಯಲ್ಲಿ ನ್ಯಾಯ ಮಂಡಳಿಯ ಮುಂದಿನ ವರದಿ ನಿರ್ಧಾರವನ್ನು ನಿರೀಕ್ಷಿಸಲಾಗಿದೆ. ಅಂದರೆ, ನ್ಯಾಯಾಧೀಕರಣದಿಂದ ಬರುವಂತಹ ಆದೇಶವನ್ನು ನಿರೀಕ್ಷಣೆಯ ಮೇರೆಗೆ ನಾವು Krishna Water Dispute Tribunal ನ Award-2 ಅನ್ನು notify ಮಾಡುತ್ತೇವೆ. ಅಲ್ಲಿಯವರೆಗೂ ಮಾಡುವುದಕ್ಕೆ ಆಗುವುದಿಲ್ಲ ಅಥವಾ Supreme Court ನಲ್ಲಿ ಇರುವಂತಹ ವ್ಯಾಜ್ಯ ಮುಗಿಯುವರೆಗೂ ಇದನ್ನು ಇತ್ಯರ್ಥ್ಯ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ದಯಮಾಡಿ Supreme Court ಗೆ ಒಂದು ಅರ್ಜಿಯನ್ನು ಹಾಕಿ. ಕಾವೇರಿ ನದಿ ವಿವಾದದ ವಿಚಾರದಲ್ಲಿ ಬಂದಿರುವಂತೆ ಅದೇ ರೀತಿನಲ್ಲಿ ಬೇಕಾದರೆ, ತಾವು ಕೊಟ್ಟ ನಂತರ, ಆ ಆದೇಶಕ್ಕಾಗಿ ಬಾಧ್ಯತೆಯಾಗಿರುತ್ತೇವೆ, ಅದಕ್ಕಾಗಿ ತಾವು ದಯಮಾಡಿ ಇದನ್ನು ತೆರವುಗೊಳಿಸಿ ಇದರ ಬಗ್ಗೆ ಏನು ಕ್ರಮತೆಗೆದುಕೊಂಡಿದ್ದಾರೆ ಎಂದು clarification ಕೇಳಿದ್ದೇನೆ. ದಯವಿಟ್ಟು ಇದಕ್ಕೆ clarification ಕೊಡಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಕೇಳಿರುವಂತಹದ್ದನ್ನು ನಾವು ಈಗಾಗಲೇ legal team ಜೊತೆಗೆ ಮಾತನಾಡಿ Supreme Court ನಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಮಾಡಿದ್ದೇವೆ. ಹಾಗಾಗಿ, ನಾನು Supreme Court ನ ವಿಷಯದ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಮೊದಲನೆಯದಾಗಿ, ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ಈಗಾಗಲೇ ಮಾಡುತ್ತಿದ್ದೇವೆ. ಎರಡನೆಯದಾಗಿ ಎತ್ತಿನಹೊಳೆಯ ಬಗ್ಗೆ ಕೇಳಿದ್ದಾರೆ. ಕ್ಷಮಿಸಿ. ನಾನು ಎತ್ತಿನಹೊಳೆಯ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಏಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಲಿಲ್ಲವೆಂದರೆ, ನಿನ್ನೆ ದಿವಸ ಕೆಳಗಿನ ಮನೆಯಲ್ಲಿ ಅದರ ಬಗ್ಗೆ statement ಮಾಡಿದ್ದೆ. ಅದಕ್ಕಾಗಿ ಹೇಳಲಿಲ್ಲ.

ಮಾನ್ಯ ಸಭಾಪತಿಯವರೇ, 2014 ರಲ್ಲಿ 12,900 ಕೋಟಿ ರೂಪಾಯಿಗಳಿಗೆ DPR (Detailed Project Report) ಮಾಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಾರೆ. ನಮಗೆ ಎತ್ತಿನಹೊಳೆ ಯೋಜನೆಯೊಳಗೆ 24 ಟಿಎಂಸಿ ಅಷ್ಟು ಕುಡಿಯುವ ನೀರಿಗಾಗಿ ಇರುವಂಥದ್ದು, ದೊಡ್ಡಬಳ್ಳಾಪುರ ಮತ್ತು ಕೋಲಾರಕ್ಕೆ ಮತ್ತು ಗ್ರಾಮಾಂತರಕ್ಕೆ ಇರುವಂತಹ ನೀರಿನ ವ್ಯವಸ್ಥೆ. ಅದು ಏನಾಗಿದೆ ಎಂದರೆ, 2014 ರಲ್ಲಿ ಆದ ಮೇಲೆ ಭೈರಗೊಂಡ್ಲು ಜಲಾಶಯಕ್ಕೆ 200 ಎಕರೆಯಷ್ಟು ಭೂಮಿ ಬೇಕಾಗುತ್ತದೆ. ಭೈರಗೊಂಡ್ಲು ಜಲಾಶಯದ್ದು ಭೂಮಿಯನ್ನು land acquisition ಮಾಡಿಕೊಳ್ಳುವುದಕ್ಕೆ ಕಷ್ಟವಾಗಿದೆ. ಅದು ಎರಡು ಜಿಲ್ಲೆಗಳಿಗೆ ಬರುತ್ತದೆ. ಒಂದು ದೊಡ್ಡಬಳ್ಳಾಪುರದ್ದು ಮತ್ತು ಇನ್ನೊಂದು ತುಮಕೂರಿನ ಕೊರಟಗೆರೆಯದ್ದು ಬರುತ್ತದೆ. ಒಂದು ಕಡೆ 2400 ಎಕರೆಗಳಷ್ಟು ಬರುತ್ತದೆ. ಇನ್ನೊಂದು ಕಡೆ 2600 ಎಕರೆಗಳು ಬರುತ್ತದೆ. ಹಾಗಾಗಿ, ಎರಡು ಕಡೆಯ ರೈತರು ಒಂದೇ ದರವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ದೊಡ್ಡಬಳ್ಳಾಪುರದ guidance value ಜಾಸ್ತಿ ಇದೆ. ಅದಕ್ಕಾಗಿ ಅವರಿಗೆ ಜಾಸ್ತಿ ಪರಿಹಾರದ ಹಣ ಬರುತ್ತದೆ. ಇವರಿಗೆ ಅತ್ಯಂತ ಕಡಿಮೆ ಬರುತ್ತದೆ. ಆ ಕಾರಣಕ್ಕಾಗಿ, ಹಿಂದಿನ ಸರ್ಕಾರ ಒಂದು Cabinet Sub-Committee ಅನ್ನು Dr. Parameshwar ರವರ ನೇತೃತ್ವದಲ್ಲಿ ಮಾಡಿದ್ದರು. Dr. Parameshwar ರವರು ದಿನಾಂಕ 11-10-2018 ಕ್ಕೆ ಒಂದು ಸಭೆಯನ್ನು ಮಾಡಿ ಆ ಸಭೆಗೆ ರೈತರನ್ನು ಸಹ ಕರೆದಿದ್ದರು. ಅದಕ್ಕಿಂತಲೂ ಮುಂಚೆ ಡಿಸೆಂಬರ್ ತಿಂಗಳಿನಲ್ಲಿಯೂ ಒಂದು ಸಭೆಯನ್ನು ಮಾಡಿದ್ದಾರೆ. ಅದಕ್ಕಿಂತಲೂ ಮುಂಚೆ ಮಾನ್ಯ ಮುಖ್ಯಮಂತ್ರಿಯವರು ಒಂದು ಸಭೆಯನ್ನು ಮಾಡಿದ್ದಾರೆ. ಒಟ್ಟು ಮೂರು ಸಭೆಗಳು ಆಗುತ್ತವೆ. ಆದರೆ ಒಂದು ತೀರ್ಮಾನ ಮಾಡುವುದಕ್ಕಾಗಲಿಲ್ಲ. ಏಕೆಂದರೆ, ಎರಡು ಕಡೆಯ ರೈತರು ನಮಗೆ ಒಂದೇ ಬೆಲೆ ಬೇಕೆಂದು ಹೇಳುತ್ತಾರೆ. ಹೆಚ್ಚು ಇದ್ದಿದ್ದು 32 ಲಕ್ಷ ರೂಪಾಯಿಗಳು ಇದೆ. ಕಡಿಮೆ ಇದ್ದಿದ್ದು 15 ಲಕ್ಷ ರೂಪಾಯಿಗಳು ಇದೆ. ನಾನು ರೈತರ ಬಗ್ಗೆ ಏನೂ ಮಾತನಾಡುವುದಿಲ್ಲ. ಅದರ ಸಮಸ್ಯೆಯನ್ನು ಹೇಳಿದ್ದೇನೆ. ಅದಕ್ಕಾಗಿ ಅದು ತೀರ್ಮಾನವಾಗಿಲ್ಲ. ಅದು ತೀರ್ಮಾನವಾಗಲೇಬೇಕು ಎನ್ನುವ ಸಲುವಾಗಿ Dr. Parameshwar ರವರು ತುಮಕೂರು ಜಿಲ್ಲೆಯ ಕೊರಟಗೆರೆಯವರು ಎನ್ನುವ ಕಾರಣಕ್ಕೆ ಅವರ ನೇತೃತ್ವದಲ್ಲಿ Cabinet Sub-Committee ಆಗಿದೆ. ಆದರೂ ಸಹ, ಅವರು ಅದನ್ನು ಬಗೆಹರಿಸುವುದಕ್ಕೆ ಆಗಲಿಲ್ಲ. ಹಾಗಾಗಿ, ಅದು ಹಾಗೆಯೇ ಉಳಿದುಬಿಟ್ಟಿದೆ. ಅದನ್ನು ಬೇರೆ ಬೇರೆ ಆಯಾಮಗಳಿಂದ ಮಾಡಿದರೆ ಸರಿ ಹೋಗುತ್ತದೆ ಎನ್ನುವುದನ್ನು ನೋಡುತ್ತಿದ್ದೇವೆ. 2014

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಲ್ಲಿ 12,900 ಕೋಟಿ ರೂಪಾಯಿಗಳು ಆಗಿತ್ತು. ಅದರ Revised Estimate 2018-2019 ಕ್ಕೆ 23 ಸಾವಿರ ಕೋಟಿ ರೂಪಾಯಿಗಳು ಆಗುತ್ತದೆ. 23 ಸಾವಿರ ಕೋಟಿ ರೂಪಾಯಿಗಳಿಗೆ ಹೋಗಿದೆ. ಈಗ ಸಮಸ್ಯೆಯಾಗಿರುವುದು ಅದೇ, ಕೃಷ್ಣಾದಲ್ಲಿಯೂ ಅದೇ ಸಮಸ್ಸೆಯಾಗಿದೆ. 2012 ರಲ್ಲಿ ನಮ್ಮ ಸರ್ಕಾರ ಇತ್ತು. ಆಗ ನಾವೇ 2012 ರಲ್ಲಿ ಮಾಡಿದಾಗ 17 ಸಾವಿರ ಕೋಟಿ ರೂಪಾಯಿಗಳಿಗೆ ಹೋಗಿತ್ತು. ಈಗ ಅದು 65 ಸಾವಿರ ಕೋಟಿ ರೂಪಾಯಿಗಳಿಗೆ ಹೋಗಿದೆ. ಅಲ್ಲಿ land cost four times ಜಾಸ್ತಿಯಾಗಿದೆ. ಮತ್ತೆ ಅಲ್ಲಿ land acquisition ಜಾಸ್ತಿ ಇದೆ. ಒಂದು ಲಕ್ಷ ಮೂವತ್ತ ನಾಲ್ಕು ಸಾವಿರ ಎಕರೆ ಇದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತಂದೆ. ಮೊದಲನೆಯ ಹಂತದ ಎತ್ತಿನ ಹೊಳೆಗೆ ಸುಮಾರು 444 ಎಕರೆಗಳಷ್ಟು ಜಮೀನು ಬೇಕಾಗಿತ್ತು. ಅದನ್ನು delivery chamber ಗೆ ತಂದು, ಆ ಜಮೀನಿನಲ್ಲಿ ಸುಮಾರು 400 ಎಕರೆಯಷ್ಟು ಭೂಮಿಯನ್ನು ಹಾಸನ ಜಿಲ್ಲಾಧಿಕಾರಿಯವರು acquisition ಮಾಡಿಕೊಟ್ಟಿದ್ದಾರೆ. ಅದರಲ್ಲಿ ಸುಮಾರು 39 ಎಕರೆಗಳಷ್ಟು ಆಗಿರಲಿಲ್ಲ.

**(ಮುಂದು.,)**

**(717) 15-09-2021 (5.10) ಎಂವಿ-ಆರ್ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು..):-**

ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳು ಸುಮಾರು 400 ಎಕರೆಯಷ್ಟು ಜಮೀನನ್ನು ಭೂಸ್ವಾಧೀನ ಮಾಡಿಕೊಟ್ಟಿದ್ದಾರೆ. ಸುಮಾರು 39 ಎಕರೆಗಳಷ್ಟು ಜಮೀನು ಸ್ವಾಧೀನವಾಗಿರಲಿಲ್ಲ. ಅದಕ್ಕೆ ಮೊನ್ನೆಯ ದಿವಸ ಭೂಸ್ವಾಧೀನಾಧಿಕಾರಿಗಳು ಮತ್ತು ಇಂಜಿನಿಯರ್‌ಗಳನ್ನು ಅಲ್ಲಿಗೆ ಕರೆದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ಮಾಡಿದ್ದೇನೆ. ಅಲ್ಲಿ ಭೂಸ್ವಾಧೀನದ ಆರು ಪ್ರಕರಣಗಳು ಪೆಂಡಿಂಗ್ ಇದ್ದವು. ಈಗಾಗಲೇ ನಾಲ್ಕು ಪ್ರಕರಣಗಳನ್ನು ಮುಗಿಸಿದ್ದಾರೆ. ಇನ್ನು ಎರಡು ಬಾಕಿ ಉಳಿದಿದೆ. ಅದರಲ್ಲಿ ಹತ್ತು ಗುಂಟೆಯ ಕಾಫಿ ಪ್ಲಾಂಟರ್‌ಗೆ ಸಂಬಂಧಿಸಿದ್ದ ಪ್ರಕರಣ ಬಾಕಿ ಉಳಿಸಿದ್ದರು ನಾನು ಆ ಪ್ರಕರಣವನ್ನು ಮುಗಿಸಿದ್ದೇನೆ. ನಿನ್ನೆಯ ದಿವಸ ಮಾಜಿ ಸಚಿವರಾದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಸಹಾಯವನ್ನು ತೆಗೆದುಕೊಂಡು ಕಾಫಿ ಪ್ಲಾಂಟರ್‌ನವರನ್ನು ನನ್ನ ಚೇಂಬರ್‌ಗೆ ಕರೆಯಿಸಿ ಅವರನ್ನು ಒಪ್ಪಿಸಿದ್ದೇನೆ. ಅಲ್ಲಿಯೂ ಕೆಲಸ ಪ್ರಾರಂಭವಾಗುತ್ತದೆ. ಎರಡು ತಿಂಗಳ ಒಳಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊದಲನೇ ಹಂತವನ್ನು trial run ಮಾಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಖಂಡಿತವಾಗಿ ಮೊದಲನೇ ಹಂತ ಮುಗಿಯುತ್ತದೆ.

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎತ್ತಿನ ಹೊಳೆ ಯೋಜನೆಗೆ ಸಂಬಂಧಪಟ್ಟಂತೆ ಕೊರಟಗೆರೆ ಮತ್ತು ದೊಡ್ಡಬಳ್ಳಾಪುರ ಬೇರೆ ಬೇರೆ ಜಿಲ್ಲೆಗಳಾದರೂ ಕೂಡ. ಅದನ್ನು ಭೂಸ್ವಾಧೀನಪಡಿಸಿಕೊಳ್ಳುವ ಉದ್ದೇಶ ಒಂದೇ ಆಗಿರುವುದರಿಂದ ಆ Guidance Value ಏನೇ ಇದ್ದರೂ ಕೂಡ ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ, ಎರಡೂ ಜಿಲ್ಲೆಯ ರೈತರಿಗೂ ಒಂದೇ ಬೆಲೆ ಸಿಗುವ ರೀತಿ ಮಾಡಿಕೊಟ್ಟರೆ, ಈ ಯೋಜನೆ ಕೂಡ ಬೇಗ ಆಗುತ್ತದೆ. ಇದರಿಂದ ರೈತರಿಗೂ ಕೂಡ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುತ್ತೇನೆ. ಅಂದರೆ, ಅದನ್ನು ವಿಶೇಷ ಪ್ರಕರಣ ಎಂದು ಮಾಡುವುದಕ್ಕೆ ಅವಕಾಶವಿಲ್ಲ. Land Acquisition ಗೆ ಸಂಬಂಧಪಟ್ಟಂತೆ ದೇಶಕ್ಕೆ ಇರುವುದು ಒಂದೇ ಕಾನೂನು. ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ ಮತ್ತು ಮಾಡುವುದಕ್ಕೂ ಆಗುವುದಿಲ್ಲ. ಆ ರೀತಿ ಏನಾದರೂ ಸರ್ಕಾರ ತಪ್ಪು ಮಾಡಿದರೆ, ರಾಜ್ಯದಲ್ಲಿ ಒಂದು ಯೋಜನೆಯೂ ಸಹ ಜಾರಿಗೆ ಬರುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀರಾವರಿ ಸಚಿವರಾದಾಗ ಮುಧೋಳದ ಭಾಗ್ಯದ ಬಾಗಿಲು ತೆರೆಯುತ್ತದೆ ಎಂದು ನಾನು ಸಂತೋಷಪಟ್ಟಿದ್ದೆ. ಆದರೆ, ಮಾನ್ಯ ಸಚಿವರಿಗೆ ಮುಧೋಳ ನೆನಪು ಬರಲಿಲ್ಲ. ಅವರು ಮುಧೋಳ ಬಗ್ಗೆ ಚಕಾರವನ್ನೇ ಎತ್ತಲಿಲ್ಲ. ನಮಗೆ ಆಲಮಟ್ಟಿ ಜಲಾಶಯದಿಂದ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದೇನೆ., ಅಲ್ಲಿ 38 ಹಳ್ಳಿಗಳ ಜನರು ಸಾಯುತ್ತಿದ್ದೇವೆ ನಮ್ಮನ್ನು ರಕ್ಷಣೆ ಮಾಡಿ. ಅಲ್ಲಿ ಆರರಿಂದ ಎಂಟು ವಾರ್ಡ್‌ಗಳು ಮುಳುಗಡೆಯಾಗುತ್ತವೆ. ಪ್ರವಾಹ ಬಂದಾಗ ಮನೆ ಬಿಟ್ಟು ಓಡೋಡಿ ಹೋಗುತ್ತೇವೆ. ಅವರು ಅದರ ಬಗ್ಗೆ ಮಾತನಾಡದೇ ಇದ್ದರೆ ನಾನು ಏತಕ್ಕೆ ಸಂತೋಷಪಡಬೇಕು. ನಾನು ಸಂತೋಷಪಟ್ಟಿದ್ದು ಮುಧೋಳ ಅಭಿವೃದ್ಧಿಯಾಗುತ್ತಿದೆಯೆಂದು. ವಿಧಾನ ಸೌಧದಲ್ಲಿ ನಮ್ಮ ನೀರಾವರಿ ಸಚಿವರು ಏನು ಹೇಳಿದರು ಎಂದರೆ, ಮುಳುಗಡೆಯಾದಂತಹ ಪ್ರದೇಶದಲ್ಲಿ ಮುಧೋಳ ಬೇರೆ, ಬಿಳಗಿ, ಮತ್ತು ಜಮಖಂಡಿ ಈ ರೀತಿಯ ವ್ಯತ್ಯಾಸಗಳು ಇರಬಾರದು. ಭೂಮಿಗೆ ಬೆಲೆಯನ್ನು ಕೊಡಬೇಕು

ಎನ್ನುವುದಾದರೆ, ನೀರಾವರಿ ಭೂಮಿಗೆ ಐವತ್ತು ಲಕ್ಷ ರೂಪಾಯಿಗಳು ಮತ್ತು ಒಣ ಬೇಸಾಯಕ್ಕೆ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾನ್ಯ ಸಚಿವರೇ ಹೇಳಿದ ಮಾತು. ಅವರು ಮಾತನಾಡಿದ್ದನ್ನು ನೆನಪು ಮಾಡಿಕೊಂಡು, ಒಂದು ಎಕರೆಗೆ ಐವತ್ತು ಲಕ್ಷ ರೂಪಾಯಿ ಸಿಗುತ್ತದೆಂದು ಖುಷಿ ಪಟ್ಟಿದ್ದೆವು. ಒಂದು ಎಕರೆಗೆ ಐವತ್ತು ಲಕ್ಷ ರೂಪಾಯಿ ಕೊಟ್ಟರೆ ಏನು ತಪ್ಪಾಗುವುದಿಲ್ಲ. ಭೂಸ್ವಾಧೀನ Sub-Registrar guidance value ಮೇಲೆ ಆಗುತ್ತದೆ. ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ, ರೈತರ ಸಲುವಾಗಿ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿ. ರೈತರಿಗೆ ನೀಡಿದರೆ ಏನಾಗುತ್ತದೆ? ಅಧಿಕಾರ ಇಲ್ಲದಾಗ ಒಂದು ರೀತಿ ಮಾತನಾಡುವುದು ಮತ್ತು ಅಧಿಕಾರಕ್ಕೆ ಬಂದ ನಂತರ ಬೇರೆ ರೀತಿ ಮಾತನಾಡುವುದು ಎಂದರೆ, ಇದು ಎಂತಹ ರೀತಿ. ಅದಕ್ಕೆ ನಾನು ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ಮುಧೋಳಗೆ ಸೀಮಿತವಾಗಿ ಮಾತನಾಡುತ್ತಿದ್ದೇನೆ. ಮಾನ್ಯ ಸಭಾಪತಿಯವರೆ, ಇದನ್ನು ತಾವು ಅನುಭವಿಸಿದ್ದೀರಿ ಮತ್ತು ನಾನು ಸಹ ಅನುಭವಿಸಿದ್ದೇನೆ. ಇದಕ್ಕೆ ಮಾನ್ಯ ಸಚಿವರ ಬಳಿ ಉತ್ತರವಿಲ್ಲ. ಅಲ್ಲಿಗೆ ಪ್ರವಾಹ ಬಂದಿರುವುದು ಆಲಮಟ್ಟಿ ಜಲಾಶಯದ ಗೇಟ್ ಎತ್ತರ ಮಾಡುವುದರಿಂದ ನೀರಿನ ಮಟ್ಟ ಎತ್ತರವಾಗುತ್ತದೆ. ಆಗ ನೀರು ಸರಾಗವಾಗಿ ಹರಿದು ಹೋಗುವುದಿಲ್ಲ. ಅದಕ್ಕೆ ನಮಗೆ ಆಲಮಟ್ಟಿ affected area ಎಂದು ನಿರಾಶ್ರಿತರಂತೆ ನಮಗೂ ಅವಕಾಶ ಕಲ್ಪಿಸಿಕೊಡಿ. ನಮ್ಮನ್ನು ಸಹ ಸ್ಥಳಾಂತರ ಮಾಡಿ. ಏನೇನು ಅವಕಾಶಗಳಿವೆ ಅದನ್ನು ನಮಗೂ ಕೊಡಿ ಎಂದು ಕೇಳಿದ್ದೇನೆ. ನಾನು ಇನ್ನು ಒಂದು ಮಾತನ್ನು ಸಹ ಹೇಳಿದ್ದೇನೆ. ಅಂದರೆ, ಒಂದು ತಜ್ಞರ ಸಮಿತಿಯನ್ನು ಮಾಡಿ ಎಂದು. ಈಗ ಸಮಸ್ಯೆ ಆಲಮಟ್ಟಿ ಜಲಾಶಯದ ಪ್ರವಾಹ ಆಗುತ್ತದೋ ಇಲ್ಲವೋ ಎಂಬುದನ್ನು ಹೇಳಿ. ಮಾನ್ಯ ಸಚಿವರು ಅಲ್ಲಿನ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ. ಎಷ್ಟೋ ಹಳ್ಳಿಯವರು ಅನಾಥವಾಗಿ ಓಡಾಡಿಕೊಂಡು ಇರುತ್ತಾರೆ. ಪ್ರವಾಹ ಬಂದಾಗ ಗಂಜಿ ಕೇಂದ್ರಗಳನ್ನು ತೆಗೆಯುತ್ತಾರೆ. ಅಲ್ಲಿಗೆ ಪ್ರವಾಹ ಬಂದಾಗ ಟಿ.ಸಿ., ಮತ್ತು ಮೋಟರ್‌ಗಳು ಸುಟ್ಟು ಹೋಗುತ್ತವೆ. ಆ ಸಂದರ್ಭದಲ್ಲಿ ಆ ಪ್ರದೇಶಗಳಲ್ಲಿ ಡೆಂಗ್ಯೂ ಮತ್ತು ಮಲೇರಿಯಾದಂತಹ ರೋಗಗಳು ಕಾಡುತ್ತವೆ. ಬೇಕಾದರೆ ಸಚಿವರು ಕೇಳಲಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೆ, ಯಾರು ಮಾತನಾಡಿದರೂ ಸಹ ನಾನು ಉತ್ತರ ನೀಡುತ್ತೇನೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ, ಅಧಿಕಾರ ಇದ್ದಾಗ ಒಂದು ರೀತಿ, ಅಧಿಕಾರವಿಲ್ಲದಿರುವಾಗ ಒಂದು ರೀತಿಯಾಗಿ ಮಾತನಾಡುವಂತಹ ಮನುಷ್ಯನಲ್ಲ. ಅವರು ಮಾತನಾಡಿರುವುದನ್ನು ಸಂಯಮದಿಂದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಂಡು ಕೇಳಿದ್ದೇನೆ. 2013-19ರವರೆಗೆ ಆರು ವರ್ಷ ಕೆಲವು ತಿಂಗಳುಗಳ ಕಾಲ ಅಧಿಕಾರವನ್ನು ಅವರಿಗೆ ಬಿಟ್ಟುಕೊಟ್ಟಿದ್ದೆವು. ಅವರು ಮಂತ್ರಿಗಳಾಗಿದ್ದರು, ಹಾಗೂ ಅವರು ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು ಆಗ ಅವರೇ ಪೇಮೆಂಟ್ ಅನ್ನು ಕೊಡಬಹುದಾಗಿತ್ತು. ಆದರೆ, ಅವರು ಅದನ್ನು ಏಕೆ ಕೊಡಲಿಲ್ಲ. ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಲಿ, ಅವರು ಅವಸರ ಮಾಡುವುದು ಬೇಡ. ಇದರಲ್ಲಿ ಜುಗಲ್‌ಬಂಧಿ ಏನು ಇಲ್ಲ. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ತೊಂದರೆಯಾಗುತ್ತದೆ ಎಂದು ಹೇಳಿದರೆ, ಅದನ್ನು Technical Experts ಕಡೆಯಿಂದ ಒಂದು ಸರ್ವೇ ಮಾಡಿಸುತ್ತೇವೆ. ಅದರ ಸರ್ವೇ ಮಾಡಿಸಿ, ಅವರು ಏನು ವರದಿ ಕೊಡುತ್ತಾರೆ, ಅದನ್ನು ಸದನದ ಮುಂದೆ ಇಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ನೀರಾವರಿ ಸಚಿವರ ಬಳಿ ಒಂದು ಸ್ಪಷ್ಟೀಕರಣ ಕೇಳಬೇಕಾಗಿತ್ತು. ಇದಕ್ಕೆ ನಾನು ಸುಮಾರು ಹತ್ತು ಬಾರಿ ಕೈ ಎತ್ತಿದ್ದೇನೆ. ಅದಕ್ಕೆ ನೀವು ನನಗೆ ಅವಕಾಶವನ್ನೇ ಕೊಡಲಿಲ್ಲ.

**ಸಭಾಪತಿಯವರು:-** ನಾನು ಗಮನ ಸೆಳೆಯುವ ಸೂಚನೆ ಎಂದು ತಿಳಿದುಕೊಂಡಿದ್ದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮಗೂ ಕೂಡ ಉತ್ತರ ಕರ್ನಾಟಕದ ಬಗ್ಗೆ ಅಭಿಮಾನವಿದೆ. ಮಾನ್ಯ ಸಚಿವರು ಅಷ್ಟೊಂದು ಚೆನ್ನಾಗಿ ಉತ್ತರವನ್ನು ನೀಡುತ್ತಿದ್ದರು. ನಾನು ಅವರ ಹತ್ತಿರ ಸ್ವಲ್ಪ ಮಾತನಾಡುವುದು ಇತ್ತು. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮಾತನಾಡಿದ್ದು, ಒಂದು ರೀತಿ ಜುಗಲ್‌ಬಂಧಿಯ ರೀತಿ ಇತ್ತು. ಅದಕ್ಕೆ ನಾನು ಅದರ ಬಗ್ಗೆ ಎರಡು ಮಾತನಾಡಬೇಕಾಗಿತ್ತು. ನೀವು ನನಗೆ ಐದು ನಿಮಿಷ ಅವಕಾಶ ನೀಡಲಿಲ್ಲ.

**ಸಭಾಪತಿಯವರು:-** ಆಯಿತು. ಈಗ ಗಮನ ಸೆಳೆಯುವ ಸೂಚನೆ ಬಗ್ಗೆ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ಗಮನ ಸೆಳೆಯುವ ಸೂಚನೆ.**

**(ಅ)ವಿಷಯ:-** ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ಶಿಕ್ಷಕರು/ಸಿಬ್ಬಂದಿಗಳಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಒದಗಿಸಲು ವಿಧೇಯಕಕ್ಕೆ ತಿದ್ದುಪಡಿ ತರಲು ಹಾಗೂ ವಿಲೀನಗೊಳಪಟ್ಟು ಆದೇಶವಾಗದಿರುವ 28 ಬೋಧಕೇತರ ಸಿಬ್ಬಂದಿ ಮತ್ತು 11 ಜನ ಉಪನ್ಯಾಸಕರಿಗೆ ವಿಲೀನಾತಿ ಆದೇಶ ಹೊರಡಿಸುವುದರ ಜೊತೆಗೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಂಡ 90 ಉಪನ್ಯಾಸಕರಿಗೆ ಬಿ.ಎಡ್., ವಿನಾಯಿತಿ ನೀಡಿ ಖಾಯಂ ಪೂರ್ವ ಅವಧಿ ಘೋಷಣೆ ಮಾಡಿ ಸರ್ಕಾರಿ ಸೌಲಭ್ಯ ಒದಗಿಸುವ ಬಗ್ಗೆ.

-----

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ವಿವಿಧ ಇಲಾಖೆಗಳಲ್ಲಿ ವಿಲೀನಗೊಂಡಿರುವ ಶಿಕ್ಷಕರು/ಸಿಬ್ಬಂದಿಗಳಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಒದಗಿಸಲು ವಿಧೇಯಕಕ್ಕೆ ತಿದ್ದುಪಡಿ ತರಲು ಹಾಗೂ ವಿಲೀನಗೊಳಪಟ್ಟು ಆದೇಶವಾಗದಿರುವ 28 ಬೋಧಕೇತರ ಸಿಬ್ಬಂದಿ ಮತ್ತು 11 ಜನ ಉಪನ್ಯಾಸಕರಿಗೆ ವಿಲೀನಾತಿ ಆದೇಶ ಹೊರಡಿಸುವುದರ ಜೊತೆಗೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಂಡ 90 ಉಪನ್ಯಾಸಕರಿಗೆ ಬಿ.ಎಡ್., ವಿನಾಯಿತಿ ನೀಡಿ ಖಾಯಂ ಪೂರ್ವ ಅವಧಿ ಘೋಷಣೆ ಮಾಡಿ ಸರ್ಕಾರಿ ಸೌಲಭ್ಯ ಒದಗಿಸುವ ಕುರಿತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು...**

(718) 15.09.2021 05.20 LL-RN

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಸದರಿ ಉತ್ತರ ಬಹಳ ಉದ್ದವಾಗಿದ್ದು, ಓದುವುದಕ್ಕೆ ಸಮಯದ ಅಭಾವ ಇರುವುದರಿಂದ ಅದನ್ನು ಕಡತದಲ್ಲಿ ದಾಖಲಿಸಿ. ಈಗ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರೇ ತಾವು ಸರ್ಕಾರದ ಉತ್ತರದ ಮೇಲೆ ಸ್ಪಷ್ಟೀಕರಣ ಕೇಳಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ವೃತ್ತಿ ಶಿಕ್ಷಣ ಜೆ.ಓ.ಸಿ. ಕೋರ್ಸುಗಳನ್ನು ನಮ್ಮ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಡನೆ 1985-86ರಲ್ಲಿ ಪ್ರಾರಂಭ ಮಾಡಲಾಗಿತ್ತು. ತದನಂತರ, ಅವುಗಳನ್ನು ನಡೆಸುವುದಕ್ಕೆ ಆಗುವುದಿಲ್ಲವೆಂದು ಅವುಗಳನ್ನು ಮುಚ್ಚುವಂತಹ ಪರಿಸ್ಥಿತಿಗೆ ಹೋದಂತಹ ಸಂದರ್ಭದಲ್ಲಿ ಈಗಾಗಲೇ ಸುಮಾರು 10-15 ವರ್ಷಗಳ ಕಾಲ ಸೇವೆ ಮಾಡಿದಂತಹವರನ್ನು ಬೇರೆ ಇಲಾಖೆಗೆ ವಿಲೀನಗೊಳಿಸಬೇಕೆಂಬ ಪ್ರಸ್ತಾವನೆಯನ್ನು ನಾವೆಲ್ಲರೂ ಸಂಘಟನೆ ಮೂಲಕ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಸದರಿಯವರನ್ನು ಅವರ ಶೈಕ್ಷಣಿಕ ವಿದ್ಯಾರ್ಹತೆಗೆ ಅನುಗುಣವಾಗಿ, ಶಿಕ್ಷಣ ಇಲಾಖೆಯಲ್ಲಿಯೇ ಅವರನ್ನು ವಿಲೀನಗೊಳಿಸತಕ್ಕಂತಹ ಪ್ರಕ್ರಿಯೆಗೆ ಸರ್ಕಾರ 2011ರಲ್ಲಿ ಚಾಲನೆ ಕೊಟ್ಟಿರುತ್ತದೆ. ಇವರೆಲ್ಲರೂ ಕೂಡ 1986ರ ನಂತರದಲ್ಲಿ ಇಲಾಖೆಗೆ ನೇಮಕಗೊಂಡು ಕೆಲಸ ಮಾಡುತ್ತಾ ಬಂದಂತಹವರಾಗಿರುತ್ತಾರೆ. ಆದರೆ, ಇವರಲ್ಲಿ ಮೂಲತಃ ನೇಮಕಗೊಂಡ 162 ಮಂದಿಯನ್ನು ಉಪನ್ಯಾಸಕರಾಗಿ ಸಂಪೂರ್ಣವಾಗಿ ಖಾಯಂಗೊಳಿಸಲಾಗಿದೆ. ಅವರಿಗೆ ರಾಜ್ಯ ಸರ್ಕಾರಿ ನೌಕರರಿಗೆ, ಕೊಡತಕ್ಕಂತಹ ಎಲ್ಲಾ ಸವಲತ್ತುಗಳನ್ನು ಸಹ ಕೊಡಲಾಗಿದೆ. ಅವರೆಲ್ಲರೂ ಪ್ರಾರಂಭದಲ್ಲಿ ನೇಮಕಗೊಂಡಂತಹವರು. ಅವರ ಜೊತೆಯಲ್ಲಿಯೇ ಕೆಲಸ ಮಾಡುತ್ತಿದ್ದವರನ್ನು ಖಾಯಂ ಮಾಡಬೇಕೆಂದು ಒತ್ತಾಯ ಮಾಡಿದಾಗ 2011ರಲ್ಲಿ ನೋಟಿಫಿಕೇಷನ್ ಮಾಡಿ ವಿಲೀನ ಪ್ರಕ್ರಿಯೆಗೆ ಸರ್ಕಾರ ಚಾಲನೆ ಕೊಟ್ಟಿರುತ್ತದೆ. ಆಗ 2011ರಿಂದ 05 ವರ್ಷಗಳ ಹಿಂದೆ ಸುದೀರ್ಘವಾಗಿ ಮತ್ತು ನಿರಂತರವಾಗಿ ಸೇವೆ ಸಲ್ಲಿಸಿದವರನ್ನು ಮಾತ್ರ ಖಾಯಂಗೊಳಿಸಲಾಗುವುದು ಎಂಬ ಒಂದು ಸಮಿತಿಯ ವರದಿಯ ಆಧಾರದ ಮೇರೆಗೆ ತೀರ್ಮಾನವಾಗಿರುತ್ತದೆ.

ತಮಗೆಲ್ಲಾ ತಿಳಿದಿರುವಂತೆ, ದಿನಾಂಕ:01.04.2006ರ ನಂತರ ರಾಜ್ಯದಲ್ಲಿ ಹೊಸ ಪಿಂಚಣಿ ವ್ಯವಸ್ಥೆ ಜಾರಿಗೆ ಬಂದಿರುತ್ತದೆ. ಸದರಿಯವರನ್ನು ವಿಲೀನಗೊಳಿಸುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಕಾಯಿದೆ ಮಾಡುವಂತಹ ಸಂದರ್ಭದಲ್ಲಿ ವಿಲೀನಗೊಂಡಂತಹವರಿಗೆ ಹಳೆಯ ಪಿಂಚಣಿ ಯೋಜನೆ ಸಿಗಬಾರದು, ಅವರಿಗೆ ಹೊಸ ಪಿಂಚಣಿ ಯೋಜನೆ ಸಿಗಬೇಕೆಂಬ ಸದುದ್ದೇಶದಿಂದ ವಿಲೀನಗೊಳಿಸಲು 05 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕೆಂದು 02 ವರ್ಷಗಳ ಕಾಲ ಅಂದರೆ, 2006ರ ನಂತರ 05 ವರ್ಷಗಳ ನಿರಂತರ ಸೇವೆ ಸಲ್ಲಿಸಿರಬೇಕೆಂದು ವಿಲೀನಗೊಳಿಸಿರುತ್ತಾರೆ. ಅದರಿಂದಾಗಿ, ಇವರೆಲ್ಲರೂ ಸಹ ಹೊಸ ಪಿಂಚಣಿ ಯೋಜನೆಗೆ ಬಂದಿರುತ್ತಾರೆ. 1986ರಿಂದ ಕಾರ್ಯನಿರ್ವಹಿಸಿದರೂ ಸಹ ವಿಲೀನಗೊಂಡ ಪ್ರಕ್ರಿಯೆ 2011ಕ್ಕೆ ಆದುದರಿಂದ, ಇವರಿಗೆ ಯಾರಿಗೂ ಕೂಡ ಹಳೆಯ ಪಿಂಚಣಿ ಯೋಜನೆಗೆ ಸಿಕ್ಕಿರುವುದಿಲ್ಲ. ಇವರಿಗೆ ಹೊಸ ಪಿಂಚಣಿ ಯೋಜನೆ ಬಂದರೂ ಸಹ, ಅದರಲ್ಲಿ ವಿಲೀನಗೊಂಡ ಪ್ರತಿಯೊಬ್ಬರಿಗೂ ಸಹ ಹೊಸ ಪಿಂಚಣಿ ಸಿಕ್ಕಿರುವುದಿಲ್ಲ. ಇದರಲ್ಲಿ ಈಗಾಗಲೇ ಬಹಳಷ್ಟು ಜನ ನಿವೃತ್ತಿ ಆಗಿರುತ್ತಾರೆ ಮತ್ತು ಕೆಲವರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಆದರೆ, ಅವರ ಕುಟುಂಬ ವರ್ಗದವರಿಗೆ ಯಾವುದೇ ವಿಧವಾದಂತಹ ಪರಿಹಾರ ಸಿಕ್ಕಿರುವುದಿಲ್ಲ. ಬಡವರಿಗೆ, ವಯೋವೃದ್ಧರಿಗೆ ಕೊಡತಕ್ಕಂತಹ 2 ಸಾವಿರ ಅಥವಾ 1 ಸಾವಿರ ಪಿಂಚಣಿ ಕೂಡ ಸುದೀರ್ಘವಾಗಿ ಸೇವೆ ಸಲ್ಲಿಸಿದಂತಹ ಜೆ.ಓ.ಸಿ. ಶಿಕ್ಷಕರಿಗೆ ಸಿಗಲಿಲ್ಲ. ಇವೊತ್ತಿನ ದಿವಸ ಅವರ ಕುಟುಂಬಗಳು ಬೀದಿಪಾಲಾಗಿರುತ್ತವೆ. ಅದರಲ್ಲಿ ಕೆಲವು ಶಿಕ್ಷಕರು ಅಪಘಾತದಲ್ಲಿ, ಇನ್ನೂ ಕೆಲವರು ಕೋವಿಡ್-19 ಕಾಯಿಲೆಯಿಂದ ಮರಣ ಹೊಂದಿರುತ್ತಾರೆ. ಇವರೆಲ್ಲರ ಕುಟುಂಬಗಳು ಸಹ ನಿರಾಶ್ರಿತವಾಗಿರುತ್ತವೆ. ಅದಕ್ಕಾಗಿ, ನಾವು ಈ ವರ್ಗಕ್ಕೆ ಮೊದಲನೆಯದಾಗಿ, ಹೊಸ ಪಿಂಚಣಿ ಯೋಜನೆಯಲ್ಲಾದರೂ ಒಂದಿಷ್ಟು ನಿವೃತ್ತಿ ವೇತನ ಸಿಗುವಂತೆ ಮಾಡಬೇಕೆಂಬುದು ನಮ್ಮೆಲ್ಲರ ಒತ್ತಾಯ. ಇದಕ್ಕೇನಾದರೂ ಕಾನೂನಿನಲ್ಲಿ ಬದಲಾವಣೆ ತರಬೇಕೆಂದು ಇದ್ದರೆ ಅದರ ಬಗ್ಗೆ ಚಿಂತನೆ ಮಾಡಬೇಕೆನ್ನುವುದು ನಮ್ಮೆಲ್ಲರ ಒತ್ತಾಯವಾಗಿರುತ್ತದೆ.

ಎರಡನೆಯದಾಗಿ, 28 ಮಂದಿ ಮತ್ತು 11 ಮಂದಿಗೆ ವಿಲೀನದ ವಿಧೇಯಕವನ್ನು ಮಾಡಿದಂತಹ ಸಂದರ್ಭದಲ್ಲಿ ಅವರಿಗೆ ವಿಲೀನ ಪ್ರಕ್ರಿಯೆ ಆದೇಶ ಕೊಟ್ಟರೂ ಸಹ ಅವರು ಕೆಲಸ ಮಾಡುತ್ತಿದ್ದಂತಹ ಸಂಸ್ಥೆಯಲ್ಲಿ ಅವರಿಗೆ ಎನ್.ಓ.ಸಿ. ಸಿಕ್ಕಿರುವುದಿಲ್ಲ. ಅಂದರೆ, ಅವರು ಮೊದಲು ಕೆಲಸ ಮಾಡುತ್ತಿದ್ದಂತಹ ಸಂಸ್ಥೆಯಿಂದ ಎನ್.ಓ.ಸಿ. ತೆಗೆದುಕೊಂಡು ಬಂದು, ವಿಲೀನ ಪ್ರಕ್ರಿಯೆ ಪ್ರಕಾರ ಕೆಲಸಕ್ಕೆ ಹಾಜರಾಗಬೇಕಾಗಿತ್ತು. ಆ ಸಂದರ್ಭದಲ್ಲಿ ಸಂಬಂಧಪಟ್ಟ ಸಂಸ್ಥೆಯವರು ಇವರಿಗೆ ಎನ್.ಓ.ಸಿ. ನೀಡಿರುವುದಿಲ್ಲ. ಅದರಿಂದಾಗಿ, ಅವರು ತಡವಾಗಿ ಎನ್.ಓ.ಸಿ. ತೆಗೆದುಕೊಂಡು ಬಂದು ನಮ್ಮನ್ನು ವಿಲೀನ ಪ್ರಕ್ರಿಯೆ ಮಾಡಿರುವ ಕಡೆ ಕರ್ತವ್ಯಕ್ಕೆ ಹಾಜರಾಗುವುದಕ್ಕೆ ಅವಕಾಶ ನೀಡಬೇಕೆಂದು ಕೇಳಿರುತ್ತಾರೆ. ಆದರೆ, 2011ರಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

28 ಮಂದಿಗೆ ವಿಲೀನ ಪ್ರಕ್ರಿಯೆಗೆ ಅವಕಾಶ ಮಾಡಿರುವುದಿಲ್ಲ. ಇದು ದೊಡ್ಡ ದುರಂತವಾಗಿರುತ್ತದೆ. ಇದರಿಂದಾಗಿ, ಸದರಿ 28 ಮಂದಿ ಕುಟುಂಬಗಳು ಬೀದಿ ಪಾಲಾಗಿರುತ್ತವೆ. ಇದರ ಜೊತೆಗೆ, 11 ಮಂದಿ ಉಪನ್ಯಾಸಕರುಗಳು ಅವರುಗಳಿಗೆ, ವಿಲೀನ ಪ್ರಕ್ರಿಯೆಗೊಂಡಂತಹ ಸಂದರ್ಭದಲ್ಲಿ 110 ಮಂದಿ ಶೈಕ್ಷಣಿಕ ವಿದ್ಯಾರ್ಹತೆ ಇದ್ದುದರಿಂದ ಬಿ.ಇಡಿ. ಪದವಿ ಮಾಡದೇ ಉಪನ್ಯಾಸಕರುಗಳಾಗಿ ವಿಲೀನಗೊಂಡಿರುತ್ತಾರೆ. ಆದರೆ, 11 ಮಂದಿ ಉಪನ್ಯಾಸಕರುಗಳು ಎನ್.ಓ.ಸಿ. ಯನ್ನು ತಡವಾಗಿ ಪಡೆದುಕೊಂಡು ಬಂದು, ನಮ್ಮನ್ನು ಸಹ ವಿಲೀನ ಪ್ರಕ್ರಿಯೆಗೆ ಒಳಪಡಿಸಿ ಎಂದು ಕೇಳಿದಾಗ, “ತಮಗೆ ಬಿ.ಇಡಿ ಪದವಿ ಇರುವುದಿಲ್ಲ. ಹಾಗಾಗಿ, ತಮಗೆ ವಿಲೀನಗೊಳಿಸಲು ಸಾಧ್ಯವಿಲ್ಲ” ಎಂದು ಇಲಾಖೆಯ ಅಧಿಕಾರಿಗಳು ಹೇಳಿರುತ್ತಾರೆ. ಇದು ಎಷ್ಟು ಸರಿ? ಆದರೆ, ವಿಲೀನಗೊಳಿಸಿದ್ದಂತಹ ಸಂದರ್ಭದಲ್ಲಿ ಒಬ್ಬರಿಗೂ ಸಹ ಬಿ.ಇಡಿ ಪದವಿ ಇರುವುದಿಲ್ಲ. ಆ ಸಂದರ್ಭದಲ್ಲಿ 04 ವರ್ಷದೊಳಗೆ ಬಿ.ಇಡಿ ಪದವಿ ಪೂರ್ಣಗೊಳಿಸಬೇಕೆಂಬ ಷರತ್ತಿನ ಆಧಾರದ ಮೇರೆಗೆ ಅವರನ್ನು ವಿಲೀನಗೊಳಿಸಿರುತ್ತಾರೆ. ಆದರೆ, ತಡವಾಗಿ ಎನ್.ಓ.ಸಿ. ತೆಗೆದುಕೊಂಡು ಬಂದಂತಹ 11 ಮಂದಿ ಉಪನ್ಯಾಸಕರುಗಳಿಗೆ ಬಿ.ಇಡಿ ಪದವಿ ಇರಬೇಕೆಂದು ಹೇಳಿ ಅವರನ್ನು ವಿಲೀನ ಪ್ರಕ್ರಿಯೆಗೆ ಒಳಪಡಿಸಿರುವುದಿಲ್ಲ. ಇದು ಅಧಿಕಾರಿಗಳು ಮಾಡಿದಂತಹ ಮಲತಾಯಿ ಧೋರಣೆಯಿಂದ 28 ಮಂದಿ ಮತ್ತು 11 ಮಂದಿಗೆ ಇವೊತ್ತಿನ ದಿವಸ ಉದ್ಯೋಗ ಇಲ್ಲದೇ ಇವೊತ್ತಿನ ದಿವಸ ಕೋವಿಡ್-19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಇವರ ಜೀವನ ಬೀದಿಗೆ ಬಂದಿದ್ದು, ಇವರು ದೊಡ್ಡ ಭಿಕಾರಿಗಳ ರೀತಿ ಆಗಿರುತ್ತಾರೆ. ಆದುದರಿಂದ, ಈ 28 ಮಂದಿ ಮತ್ತು 11 ಮಂದಿಗೂ ಈಗ ಉದ್ಯೋಗದ ಅವಕಾಶಗಳನ್ನು ವಿಲೀನ ಪ್ರಕ್ರಿಯೆಯಲ್ಲಿ ನಿಯಮಾವಳಿಗಳ ಪ್ರಕಾರ ಕೊಡಿಸಬೇಕೆನ್ನುವುದು ನಮ್ಮ ಆಗ್ರಹವಾಗಿರುತ್ತದೆ.

ಮೂರನೆಯದಾಗಿ, ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗುವಂತಹವರು 2009ನೇ ಸಾಲಿನಿಂದ ಎನ್.ಸಿ.ಇ.ಆರ್.ಟಿ. ನಿಯಮಾವಳಿಗಳ ಪ್ರಕಾರ ಬಿ.ಇಡಿ ಪದವಿಯನ್ನು ಮಾಡಬೇಕು ಎಂದು ನಮ್ಮ ರಾಜ್ಯದಲ್ಲಿ ಜಾರಿಗೆ ತರಲಾಯಿತು. ಆದರೆ, ಆ ನಿಯಮಾವಳಿಯನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿ ಅಲ್ಲಿಂದ ಮುಂದಕ್ಕೆ ಯಾರು ನೇಮಕಗೊಳ್ಳುತ್ತಾರೆ, ಅವರೆಲ್ಲರಿಗೂ ಬಿ.ಇಡಿ ಪದವಿ ಇರಬೇಕೆಂದು ನಿಯಮ ಇತ್ತು. ಅದರಂತೆ, ಪದವಿ ಪೂರ್ವ ಶಿಕ್ಷಣಕ್ಕೆ 2009ರಲ್ಲಿ ಒಂದು ಬ್ಯಾಚ್ ಮತ್ತು 2013ರಲ್ಲಿ ಒಂದು ಬ್ಯಾಚ್ ಉಪನ್ಯಾಸಕರ ನೇರ ನೇಮಕಾತಿ ಆಗಿರುತ್ತದೆ.

(ಮುಂದು...)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(719) 15.09.2021 5.30 YL-VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು):-**

ಅದರಲ್ಲಿ ಶೇಕಡಾ 90 ರಷ್ಟು ಮಂದಿ ಬಿ.ಎಡ್ ಪದವಿಯನ್ನು ಪಡೆದಿರುವುದಿಲ್ಲ. ಆದರೂ ಉಪನ್ಯಾಸಕರ ಕೊರತೆ ಇದ್ದ ಪ್ರಯುಕ್ತ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾದೃಷ್ಟಿಯಿಂದ ಅವರೆಲ್ಲರಿಗೂ ಷರತ್ತು ಬದ್ಧವಾಗಿ ನೇಮಕಾತಿ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿ, ನಾಲ್ಕು ವರ್ಷಗಳೊಳಗೆ ಬಿ.ಎಡ್. ಪದವಿಯನ್ನು ಪಡೆದುಕೊಳ್ಳಬೇಕೆಂದು ಸೂಚಿಸಿತ್ತು. ಅದೇ ರೀತಿ 2009ನೇ ಸಾಲಿನಲ್ಲಿ ಇದ್ದಂಥವರು ಯಾರು ಬಿ.ಎಡ್. ಪದವಿಯನ್ನು ಪಡೆಯದೇ ಕೆಲಸಕ್ಕೆ ಸೇರಿದರೂ, ಅವರೆಲ್ಲರಿಗೂ ಎರಡು ವರ್ಷಗಳ ಕಾಲ ರಜೆ ಹಾಗೂ ವೇತನ ನೀಡಿ, ಬಿ.ಎಡ್. ಪದವಿಯನ್ನು ಪಡೆದುಕೊಳ್ಳಲು ಸರ್ಕಾರವು ಅನುಮತಿ ನೀಡಿತ್ತು. ಆದರೆ, 2013ನೇ ಸಾಲಿನಲ್ಲಿ ಇದ್ದಂಥವರಿಗೆ ರಜೆ ಆಗಲಿ ಮತ್ತು ಪೂರ್ಣ ಪ್ರಮಾಣದ ಸಂಬಳವಾಗಲಿ ನೀಡಲಿಲ್ಲ. ಭಾಗಶಃ ಸಂಬಳ ನೀಡಿದರೂ ರಜೆಯನ್ನು ನೀಡಲಿಲ್ಲ. ಇದು ಸರ್ಕಾರದ ಇಬ್ಬಗ್ಗೆಯ ಧೋರಣೆಯಾಗಿದೆ. 'Dies-non' ಎಂದು 2013ನೇ ಸಾಲಿನಲ್ಲಿ ಇದ್ದಂಥವರಿಗೆ ಬಹಳ ತೊಂದರೆಯಾಗಿದ್ದು, ಇಂದಿಗೂ ಸಹ ಆ ಸಮಸ್ಯೆ ಬಗೆಹರಿದಿಲ್ಲ. ಆದರೆ, ಜೆ.ಓ.ಸಿ. ರವರಿಗೂ ಸಹ ಬಿ.ಎಡ್. ಪದವಿ ಮಾಡಬೇಕೆಂದು ಷರತ್ತು ವಿಧಿಸಲಾಗಿತ್ತು. ಮೊದಲನೆ ಸಾಲಿನಲ್ಲಿ ನೇಮಕಗೊಂಡಂಥ 110 ಜನರಲ್ಲಿ ಈಗಾಗಲೇ 10 ಮಂದಿ ನಿವೃತ್ತಿ ಹೊಂದಿದ್ದು, 10 ಮಂದಿ ಮರಣ ಹೊಂದಿದ್ದು, ಕೇವಲ 90 ಮಂದಿ ಉಳಿದಿದ್ದಾರೆ. ಇವರು ಜೆ.ಓ.ಸಿ.ಯಿಂದ ನೇಮಕಗೊಂಡಿದ್ದು, ಅವರನ್ನು ವಿಲೀನ ಮಾಡಿರುವುದಿಲ್ಲ. ಈ ಉಳಿದುಕೊಂಡವರು ಯಾರೂ ಸಹ 5 ವರ್ಷಗಳು, 6 ವರ್ಷಗಳಷ್ಟು ಸೇವೆಯನ್ನು ಪೂರೈಸಿಲ್ಲ. ಆದರೂ ಅವರು ವಿಲೀನಗೊಂಡಾಗಲೇ 45 ವರ್ಷಗಳು ವಯೋಮಿತಿ ಮೀರಿದ ಮೇಲೆ ವಿಲೀನಗೊಂಡರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ತಮ್ಮ ನೇತೃತ್ವದಲ್ಲಿಯೇ ಶಾಸಕರೆಲ್ಲರೂ ಒಟ್ಟುಗೂಡಿ ವಿಧಾನಸೌಧದ ಗಾಂಧೀಜಿಯವರ ಪ್ರತಿಮೆ ಮುಂದೆ ಅಹೋರಾತ್ರಿ ಜಡಿ ಮಳೆಯಲ್ಲಿಯೇ ಧರಣಿ ಮಾಡಿದ್ದೆವು. ಆ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ನಡೆಯಿತು. 2009ನೇ ಸಾಲಿನಲ್ಲಿ ಇದ್ದಂಥವರಿಗೆ ಯಾವ ರೀತಿ ಅವಕಾಶ ಕಲ್ಪಿಸಲಾಗಿದೆ ಅದೇ ರೀತಿ 2013ನೇ ಸಾಲಿನಲ್ಲಿ ಇದ್ದಂಥವರಿಗೂ ಆರ್ಥಿಕ ಸವಲತ್ತನ್ನು ನೀಡಿದರು. ಅಂದಿನ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದಂಥ ಸಭೆಯಲ್ಲಿ ಜೆ.ಓ.ಸಿ. ಯಿಂದ ಬಂದವರಿಗೆ ವಿನಾಯಿತಿ ನೀಡುತ್ತೇವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಆ ಸಭೆಯಲ್ಲಿ ಅಧಿಕಾರಿಗಳು ಒಪ್ಪಿಗೆ ನೀಡಿದರು. ಆದರೆ, ಇಲ್ಲಿಯವರೆಗೂ ಸಹ ಯಾವುದೇ ವಿನಾಯಿತಿಯನ್ನು ಜಾರಿಗೊಳಿಸಲಿಲ್ಲ. ಇದರಿಂದಾಗಿ ಅವರು ಯಾರಿಗೂ Probationary Period declaration ಆಗಲಿಲ್ಲ. ಇದರಿಂದಾಗಿ ಅವರಿಗೆ ಯಾವುದೇ ರೀತಿಯ ಆರ್ಥಿಕ ಸವಲತ್ತುಗಳು ಸಿಗುತ್ತಿಲ್ಲ. ಈಗಾಗಲೇ 10 ಮಂದಿ ಅಪಘಾತದಲ್ಲಿ ಮರಣ ಹೊಂದಿದ್ದಾರೆ, 10 ಮಂದಿ ನಿವೃತ್ತಿ ಹೊಂದಿದ್ದಾರೆ. ಆದರೂ ಅವರ ಕುಟುಂಬದವರಿಗೆ ಯಾವುದೇ ರೀತಿಯ ಸವಲತ್ತುಗಳು ಸಿಗಲಿಲ್ಲ. ಆದ್ದರಿಂದ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ, ಇವರೆಲ್ಲರೂ ಬಹಳ ಚಿಂತಕಾಂತರಾಗಿದ್ದು, ಆರ್ಥಿಕವಾಗಿ ನೊಂದಿದವರಾಗಿದ್ದಾರೆ. ಸುಮಾರು 25 ರಿಂದ 35 ವರ್ಷಗಳವರೆಗೆ ನಿರಂತರವಾಗಿ ಜೆ.ಓ.ಸಿ. ಯಲ್ಲಿ ಭಿಕ್ಷಾ ಪಾತ್ರೆಯನ್ನಿಟ್ಟುಕೊಂಡ ಹಾಗೆ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ತಮ್ಮ ಗಮನಕ್ಕೆ ಒಂದು ಅಂಶವನ್ನು ತರಲು ಬಯಸುವುದೇನೆಂದರೆ, 2009ನೇ ಸಾಲಿನಿಂದ ನೇಮಕಗೊಂಡವರಿಗೆ ಮಾತ್ರ ಬಿ.ಎಡ್. ಪದವಿಯನ್ನು ಪಡೆಯಬೇಕೆಂದು ರಾಜ್ಯ ಸರ್ಕಾರ ಕಡ್ಡಾಯ ಮಾಡಿದೆ. ಆದರೆ, NCERT (National Council of Educational Research and Training) ನಿಯಮಾವಳಿ ಪ್ರಕಾರ 2009ನೇ ಸಾಲಿಗಿಂತ ಮೊದಲು ಯಾರು ನೇರ ನೇಮಕಾತಿಗೊಂಡಿದ್ದಾರೆ, ಅಂಥವರಿಗೆ ನೇರ ನೇಮಕಾತಿಯಾಗಲಿ, ಬಡ್ತಿಯಾಗಲಿ ನೀಡುವುದಕ್ಕೆ ಬಿ.ಎಡ್. ಅವಶ್ಯಕತೆ ಇಲ್ಲವೆಂದು ಸರ್ಕಾರ ತಿಳಿಸಿದ್ದು, ಅವರುಗಳು ಬಿ.ಎಡ್. ಪದವಿ ಪಡೆಯದೇ ಇದ್ದರೂ ಸಹ ಉಪನ್ಯಾಸಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಿಂದ ಜೆ.ಓ.ಸಿ. ಯಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿರುತ್ತಿರುವ 90 ಮಂದಿಗಳಿಗೂ ದಯಮಾಡಿ ಅಂದಿನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಏನು ನಿರ್ಣಯವಾಗಿದೆ ಅದರ ಪ್ರಕಾರ ವಿನಾಯಿತಿ ನೀಡಿ, ಕೂಡಲೇ PP declaration ಮಾಡಿ, ಪಿಂಚಣಿ ಸೌಲಭ್ಯವನ್ನು ಕಲ್ಪಿಸಲು ಸಹಾಯ ಮಾಡಲೇಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜೆ.ಓ.ಸಿ. ಶಿಕ್ಷಕರ ಸೇವಾ ಸಕ್ರಮಾತಿ ಕಾಯ್ದೆಯನ್ನು ಸರ್ಕಾರ ಏತಕ್ಕಾಗಿ ತಂದಿದೆ? ಸುಮಾರು 30 ವರ್ಷಗಳ ಕಾಲ ಸಾರ್ಥಕ ಸೇವೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಭಾಗವಾಗಿರುವಂಥ Job Oriented Courses ಮಾಡುವಲ್ಲಿ ಈ ಶಿಕ್ಷಕರು ಸೇವೆಯನ್ನು ಸಲ್ಲಿಸಿದ್ದು, ಅವರನ್ನು ಸಕ್ರಮಾತಿ ಮಾಡಬೇಕೆನ್ನುವ ಸದುದ್ದೇಶದೊಂದಿಗೆ ಈ ಕಾನೂನು ಮಾಡಲಾಗಿದೆ. ಪಿ.ಯು. ಬೋರ್ಡ್‌ನವರು ಅವರನ್ನು ಸಕ್ರಮಾತಿ ಮಾಡಲು ಅವರ ಅರ್ಹತೆ ಬಗ್ಗೆ ಮಾತನಾಡುತ್ತಿರುವುದರಿಂದ ನನ್ನ ಒಂದು ಪ್ರಶ್ನೆ ಏನೆಂದರೆ, ಜೆ.ಓ.ಸಿ. ಶಿಕ್ಷಕರಲ್ಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಕ್ರಮಾತಿಗೊಂಡವರು ಇವತ್ತು ಆರ್.ಟಿ.ಓ. ಇನ್ಸ್‌ಪೆಕ್ಟರ್ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಕೆ.ಪಿ.ಎಸ್.ಸಿ. ಪರೀಕ್ಷೆಯನ್ನು ಬರೆದರೂ, interview ಮಾಡದೆಯೇ ಅವರಿಗೆ ಅವಶ್ಯಕತೆ ಇರುವವರನ್ನು RTO Inspector, Assistant Executive Engineer, Executive Engineer, Assistant Director of Agriculture ಎಂದು ಈ ಸಮೂಹದಲ್ಲಿ ಹುದ್ದೆಗಳನ್ನು ಕಲ್ಪಿಸಲಾಗಿದೆ. ಆದರೆ, ಏತಕ್ಕಾಗಿ ಉಪನ್ಯಾಸಕರಾಗಿ ಬಂದಿರುವವರಿಗೆ 2008ರ ಪ್ರಕಾರ NCERT ನಿಯಮಾವಳಿ ಪ್ರಕಾರ ಬಿ.ಎಡ್. ಪದವಿ ಪಡೆಯಬೇಕೆಂದು ಇಲಾಖಾಧಿಕಾರಿಗಳು ಮಾಡಿದ್ದಾರೆ ಎಂಬುದರ ಸ್ಪಷ್ಟನೆಯನ್ನು ಮಾನ್ಯ ಸಚಿವರು ಪಡೆದುಕೊಳ್ಳಬೇಕು. ಬಿ.ಎಡ್. ಪದವಿ ಪಡೆಯಬೇಕೆಂದು 4 ವರ್ಷಗಳಿಗೆ ಷರತ್ತು ವಿಧಿಸುವಂಥ ಸ್ಥಿತಿಯಲ್ಲಿದ್ದೇವೆ. ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದ ಒಂದು ಸಂಗತಿಯೇನೆಂದರೆ, ನೇಮಕಾತಿ ಮಾಡಕೊಳ್ಳಬೇಕಾದರೆ PG with teachers training ಆಗಿರುವವರು ಅವಶ್ಯಕತೆ ಇರುವಷ್ಟು ಸಂಖ್ಯೆ ನಮ್ಮ ರಾಜ್ಯದಲ್ಲಿ ಇಲ್ಲದೇ ಇರುವ ಕಾರಣಕ್ಕಾಗಿ 4 ವರ್ಷಗಳಲ್ಲಿ ಬಿ.ಎಡ್. ಪೂರೈಸಬೇಕೆಂಬ ಷರತ್ತು ವಿಧಿಸಿರುವವರು ಸೇವಾ ಸಕ್ರಮಾತಿಗೊಂಡ ಶಿಕ್ಷಕರಿಗೂ ಅದೇ ರೀತಿ ಷರತ್ತನ್ನು ವಿಧಿಸುವುದು ಯಾವ ನ್ಯಾಯ ಎನ್ನುವುದು ನನ್ನ ಪ್ರಶ್ನೆ. ಎರಡನೆಯ ಸಂಗತಿಗೆ ಸಂಬಂಧಿಸಿದಂತೆ, ಪಿಂಚಣಿ ಸೌಲಭ್ಯಕ್ಕೆ ಹಿಂದಿನ ಸೇವೆಯನ್ನು ಪರಿಗಣಿಸಲಾಗುವುದು ಎಂದು ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. 30 ವರ್ಷಗಳು ಸೇವೆ ಸಲ್ಲಿಸಿರುವ ಕಾರಣಕ್ಕಾಗಿಯೇ ಸಕ್ರಮಾತಿ ಮಾಡಿ, ಹಿಂದಿನ ಸೇವೆ ಪರಿಗಣಿಸಿ ಪಿಂಚಣಿ ಸೌಲಭ್ಯವನ್ನು ನೀಡುವುದಿಲ್ಲ ಎಂದು ಹೇಳುವುದು ಮಾನವೀಯತೆಯ ದೃಷ್ಠಿಯಾಗಿದೆಯೇ? ಹಾಗಾಗಿ ಇದರ ಬಗ್ಗೆ ಮಾನವೀಯ ದೃಷ್ಠಿಯಿಂದ ಯೋಚನೆ ಮಾಡಿ. ಅವರುಗಳು ಸರ್ಕಾರಕ್ಕೆ ಸೇವೆ ಸಲ್ಲಿಸಿರುವುದು ನಿಜ. ದಯವಿಟ್ಟು ಅವರ ಹಿಂದಿನ ಸೇವೆಯನ್ನು ಪರಿಗಣಿಸಿ, ಪಿಂಚಣಿ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವನ್ನು ಬದಲಾಯಿಸಿ, ಪಿಂಚಣಿ ಸೌಲಭ್ಯವನ್ನು ಕಲ್ಪಿಸಬೇಕು. ಮೂರನೆಯ ಸಂಗತಿಯೇನೆಂದರೆ, ಬಾಕಿ ಉಳಿದಿರುವಂಥ 28 ಜನರಿಗೆ ತಮ್ಮ ಇಚ್ಛಾಶಕ್ತಿ ದೊರೆತ ನಂತರ ಆದೇಶ ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಅರುಣ ಶಹಾಪುರರವರೆ, ಮಾನ್ಯ ಮರಿತಿಬ್ಬೇಗೌಡರು ಮಾತನಾಡಿರುವ ವಿಚಾರವನ್ನು ಬಿಟ್ಟು ಮಾತನಾಡಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿರುವ ವಿಚಾರವನ್ನು ಬಿಟ್ಟೇ ಮಾತನಾಡುತ್ತಿರುವುದು. 28 ಜನರಿಗೆ ಸಂಬಂಧಿಸಿದಂತೆ ಇಲಾಖೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿಯವರೆಗೂ ಯಾವುದೇ ಸವಲತ್ತುಗಳನ್ನು ನೀಡಿಲ್ಲ. ದಿನಾಂಕ: 28.07.2021 ರಂದು ಕೌನ್ಸಿಲಿಂಗ್ ಮಾಡಿ ಎಂದು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಇಷ್ಟು ದಿವಸಗಳವರೆಗೂ ಇಲಾಖೆಯವರು ಏನು ಮಾಡುತ್ತಿದ್ದರು? ಅಂದರೆ ಅವರುಗಳ ಬಗ್ಗೆ ಮಾನವೀಯತೆಯನ್ನಿಟ್ಟುಕೊಂಡು ಕೆಲಸ ಮಾಡುವಂಥ ಮಾನಸಿಕತೆ ಇಲಾಖೆಯಲ್ಲಿ ಉಳಿದಿಲ್ಲ. ಹಾಗಾಗಿ ಈ 28 ಜನರಿಗೂ ಆದಷ್ಟು ಬೇಗ ಕೌನ್ಸಿಲಿಂಗ್ ಮಾಡಿ, ಆದೇಶ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು 2009 ಮತ್ತು 2013ನೇ ಸಾಲಿನಲ್ಲಿ ಹೊಸ ನೇಮಕಾತಿಗೊಂಡ ಶಿಕ್ಷಕರ ಬಗ್ಗೆ ಉಲ್ಲೇಖ ಮಾಡಿದರು. 2009ನೇ ಸಾಲಿನಲ್ಲಿ ನೇಮಕಗೊಂಡವರಿಗೆ 04 ವರ್ಷಗಳ ಕಾಲದಲ್ಲಿ ಬಿ.ಎಡ್. ಪಾಸ್ ಮಾಡಿಕೊಳ್ಳಬೇಕೆಂದು ಒಂದು ಆದೇಶ exemption ನೀಡಿದರು. ಅದೇ ರೀತಿ 2013ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಹೋರಾಟ ಮಾಡಿ, ನಂತರ ಅವರಿಗೂ ಅವಕಾಶ ಕಲ್ಪಿಸಲಾಯಿತು ಎಂದು ಹೇಳಿದರು. ಆದರೆ, 2012-13ನೇ ಸಾಲಿನಲ್ಲಿಯೇ ಜೆ.ಓ.ಸಿ. ಯವರನ್ನು regularise ಮಾಡಿರುವುದು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಮತ್ತು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಶಿಕ್ಷಣ ಸಚಿವರಾಗಿದ್ದಾಗ 3000 ಜನರನ್ನು regularise ಮಾಡಿರುವ ವಿಚಾರವನ್ನು ಮಾನ್ಯ ಮರಿತಿಬ್ಬೇಗೌಡರು ಏತಕ್ಕೆ ಹೇಳಲಿಲ್ಲ? ಅಂದರೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ 3000 ಮಂದಿಯನ್ನು regularise ಮಾಡಿ, ಬಹಳ ದೊಡ್ಡ ಕೆಲಸ ಮಾಡಿದರು. ಇದರ ಬಗ್ಗೆ ಏತಕೋ ಮಾನ್ಯ ಸದಸ್ಯರು ಹೇಳಲಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಸರ್ಕಾರದಲ್ಲಿ ನೇರ ನೇಮಕಾತಿ ಮಾಡಿಕೊಂಡ ವಿಚಾರವನ್ನು ಪ್ರಸ್ತಾಪ ಮಾಡಿದರು. ಆದರೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ 3000 ಮಂದಿಯನ್ನು regularise ಮಾಡಿದ ಬಗ್ಗೆಯು ಹೇಳಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು regular appointments ಬಗ್ಗೆ ಹೇಳಿದ್ದು.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ವಾದ ಮಾಡುತ್ತಿಲ್ಲ. ನಮ್ಮ ಸರ್ಕಾರವು ಬಹಳ ದೊಡ್ಡ ಕೆಲಸ ಮಾಡಿದೆ. ಬಹಳ positive point, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾಡಿದಂತಹ ಪುಣ್ಯದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸದ ಬಗ್ಗೆ ಇವತ್ತು ಮಾತನಾಡುತ್ತಿದ್ದೇವೆ. ಇಲ್ಲದಿದ್ದರೆ ಅವರು ಸಹ ಹಾಗೆಯೇ ಬಿಟ್ಟು ಮನೆಗೆ ಹೋಗುತ್ತಿದ್ದರು. ಅದನ್ನು ಮರೆಯಬಾರದು ಎಂದು ಹೇಳುತ್ತಿದ್ದೇನೆ.

(ಮುಂದು...)

(720) 15.09.2021/5.40/ ಎಸ್‌ಕೆ/ವಿಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ. ನಮೋಶಿ (ಮುಂದು):-**

ಇಲ್ಲದಿದ್ದರೆ, ಉಪನ್ಯಾಸಕರು ಮನೆಗೆ ಹೋಗಿರುತ್ತಿದ್ದರು. ಇದನ್ನು ಮರೆಯಬಾರದು. ಇದೀಗ ಏನೊಂದು ಉಲ್ಲೇಖ ಮಾಡಿದ್ದಾರೆಂದರೆ, ಇವತ್ತು 110 ಸರ್ಕಾರಿ ಪದವಿ ಪೂರ್ವ ಶಿಕ್ಷಣ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳಿಗೆ ಬಿ.ಎಡ್ ಅನ್ನು ಕಡ್ಡಾಯ ಮಾಡಿಲ್ಲ ಎಂದು ಅವರಿಗೆ PP declaration ಮಾಡುತ್ತಿಲ್ಲ. ಇಲ್ಲಿ ನನ್ನ ಮುಖ್ಯವಾದ ಅಂಶವೇನೆಂದರೆ, ಇದೇ ಇಲಾಖೆಯಲ್ಲಿ ಇದೇ occasional courses ಮಾಡಿದಂತಹ 130 ಜನ ಉಪನ್ಯಾಸಕರು ಪ್ರೈವೇಟ್ ಕಾಲೇಜಿನಲ್ಲಿದ್ದವರಿಗೆ regularise ಮಾಡುವುದಕ್ಕೆ ಬಿಎಡ್ ಮಾಡಿರುವ ಬಗ್ಗೆ ಕೇಳಲಿಲ್ಲ. Exempt ಮಾಡಿದಿರಿ. ಅಂದರೆ ಪ್ರೈವೇಟ್ ಕಾಲೇಜಿನ ಉಪನ್ಯಾಸಕರಿಗೆ exempt ಮಾಡಿದಿರಿ. ಆದರೆ ಸರ್ಕಾರಿ ಉಪನ್ಯಾಸಕರಿಗೆ ಏಕೆ ಮಾಡುತ್ತಿಲ್ಲ ಎಂಬುದು ನನ್ನ ಪ್ರಶ್ನೆಯಾಗಿದೆ. ಈಗಾಗಲೇ 130 ಜನ ಉಪನ್ಯಾಸಕರುಗಳು ಪ್ರೈವೇಟ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದಂತಹವರಿಗೆ exemption ಕೊಡುತ್ತೀರಿ. ಆದರೆ ಸರ್ಕಾರಿ ಉಪನ್ಯಾಸಕರುಗಳಿಗೆ exemption ಏಕೆ ಕೊಡುತ್ತಿಲ್ಲ ಎಂಬುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಅರುಣ ಶಹಾಪುರರವರು ಇದೇ ವಿಷಯವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರ ಹಳೆಯ ಸೇವೆಯನ್ನು consider ಮಾಡಿ, ಅವರನ್ನು ನಾವು regularise ಮಾಡಿದ್ದರ ಬಗ್ಗೆ ನಾವು ಮರೆಯಬಾರದು. And we have formed a special recruitment rule. ಹಳೆಯ ರೂಲ್ಸ್‌ನಿಂದ ಇದನ್ನು ಮಾಡಿಲ್ಲ. Special regularisation recruitment rules ಅನ್ನು ಮಾಡಿ, ಮಾಡಿದ್ದೇವೆ ಎಂದಾಗ, ಉಪನ್ಯಾಸಕರ ಹಳೆಯ ವಿದ್ಯಾರ್ಹತೆ ಏನಿತ್ತೋ, ಅವರು ಅರ್ಹರಿದ್ದು, ಈಗಾಗಲೇ ಜೆಓಸಿಯಲ್ಲಿ ಕೆಲಸ ಮಾಡಿದ್ದರಲ್ಲವೇ? ಈಗ ಏತಕ್ಕೆ ಇದು ಈ condition? ಒಂದು ಕಡೆ ಪ್ರೈವೇಟ್‌ನಲ್ಲಿ exempt ಮಾಡಿದಿರಿ. ಆದರೆ ಸರ್ಕಾರಿ ಉಪನ್ಯಾಸಕರುಗಳಿಗೆ ಏಕೆ ಇದನ್ನು ಮಾಡುತ್ತಿಲ್ಲ? ಬಹಳ ವರ್ಷಗಳಿಂದ ನಾವು ಇದೇ ಅಂಶವನ್ನು ಹೇಳುತ್ತಿದ್ದೇವೆ. ಇದು ಯಾಕೋ ಆಗಿಲ್ಲ. ಇದು ಮಾನ್ಯ ಸಚಿವರ ಕೈಯಿಂದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬೇಕಾಗಿದೆ ಎಂದು ಇಲ್ಲಿಯವರೆಗೂ ಬಂದಿದೆ ಎಂದು ನನಗೆ ಅನಿಸುತ್ತದೆ. ಮಾನ್ಯ ನಾಗೇಶ್‌ರವರಿಗೆ ಬಹಳ open minded ಇದೆ. ಈ ತರಹದ ವಿಚಾರವನ್ನು ದಯವಿಟ್ಟು, ಪರಿಗಣನೆ ಮಾಡಿ. ಎರಡ್ಮೂರು ವರ್ಷಗಳಲ್ಲಿ ಉಪನ್ಯಾಸಕರುಗಳು ನಿವೃತ್ತಿಯಾಗುತ್ತಾರೆ. ಅವರಿಗೆ ಬಿ.ಎಡ್. ಮಾಡುವುದಕ್ಕೆ ಈಗ ಹೇಗೆ ಆಗುತ್ತದೆ ಎಂದು ಹೇಳುತ್ತೀರಾ? ಅವರಿಗೆ ಬಿಎಡ್ ಮಾಡಿಸುವುದಕ್ಕಾಗುವುದಿಲ್ಲ. ಆ ಕಾರಣದಿಂದಾಗಿ, ತಪ್ಪದೇ ಅವರಿಗೆ exemption ಕೊಡಬೇಕು. ಆ 28 ಜನ ಉಪನ್ಯಾಸಕರುಗಳಿಗೂ ಕೂಡ consider ಮಾಡಿ, ತಕ್ಷಣ ಮಾಡಬೇಕು. ಇವರಿಗೆ ಪಿಂಚಣಿಯನ್ನು ಕೊಡಲಿಲ್ಲವೆಂದರೆ, ಎಲ್ಲೋ ಒಂದು ಕಡೆ ದೊಡ್ಡ ಅನ್ಯಾಯವಾಗುತ್ತದೆ ಎಂದು ನನಗೆ ಅನಿಸುತ್ತದೆ. ಇವರಿಗೆ ಏಕೆ ಪಿಂಚಣಿಯನ್ನು ಕೊಡಬೇಕೆಂದರೆ, definitely ಹಳೆಯ ಸೇವೆ ಮಾಡಿದ್ದಕ್ಕಾಗಿ, ಕೊಡಬೇಕು. ದಯವಿಟ್ಟು, ಮಾನ್ಯ ಸಚಿವರ ಎಲ್ಲಾ ವಿಚಾರವನ್ನು consider ಮಾಡಿ, ತಮ್ಮಿಂದ ಈ ಕೆಲಸವಾಗಲಿ. ಮಾನ್ಯ ಸಚಿವರು ತಕ್ಷಣ ಇದರ ಬಗ್ಗೆ ಕಾರ್ಯಪ್ರವೃತ್ತರಾಗಿ ಉಪನ್ಯಾಸಕರುಗಳಿಗೆ exemption ಕೊಡಿಸುವಂತಹ ಕೆಲಸ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಂಕನೂರ ಅವರೇ ತಾವು ಮಾತನಾಡಿ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಬೇರೆ ಇಲಾಖೆಯೊಳಗೆ ವಿಲೀನಗೊಂಡ ನಂತರ, ಇವತ್ತು ಏನೊಂದು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಮತ್ತು ಶಿಕ್ಷಕರಿಗೆ ಏನೇನೂ ಅನ್ಯಾಯವಾಗಿದೆಯೋ, ಅದನ್ನು ಸರಿಪಡಿಸುವುದಕ್ಕೆ ಗಮನ ಸೆಳೆಯುವ ಸೂಚನೆಯನ್ನು ಹಿರಿಯ ಸದಸ್ಯರಾಗಿರುವಂತಹ ಮಾನ್ಯ ಮರಿತಿಬ್ಬೇಗೌಡರು ಹಾಗೂ ಇತರ ಸ್ನೇಹಿತರೆಲ್ಲರೂ ಮಂಡಿಸಿದ್ದಾರೆ. ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್ ಆದ ಮಾನ್ಯ ಅಡಗೂರ್ ಹೆಚ್. ವಿಶ್ವನಾಥರವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಈ ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದಕ್ಕೆ ಪೂರ್ವದೊಳಗೆ, ಇದೀಗ ಮಾನ್ಯ ಸದಸ್ಯರಾಗಿರುವಂತಹ ಶ್ರೀ ಶಶೀಲ್ ಜಿ ನಮೋಶಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಮ್ಮ ರಾಜ್ಯದಲ್ಲಿ ಜೆ.ಓ.ಸಿ. ಕೋರ್ಸ್ ಮುಚ್ಚಿದ ನಂತರ, ಶಿಕ್ಷಕರೆಲ್ಲಾ ಬೀದಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಲಾಗಿ, ಬಹಳ ಸಮಸ್ಯೆಗಳನ್ನು ಎದರುಸುತ್ತಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮತ್ತು ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಇವತ್ತು ವಿಶೇಷವಾಗಿ ನೆನಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇದೊಂದು ಐತಿಹಾಸಿಕ ದಾಖಲೆ. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಬೀದಿ ಪಾಲಾಗಿದ್ದ ಶಿಕ್ಷಕರನ್ನು ಬೇರೆ ಇಲಾಖೆಯೊಳಗೆ ವಿಲೀನಗೊಳಿಸಿ, ಅವರನ್ನು ಸಕ್ರಮಗೊಳಿಸಿದರು. ಇವತ್ತು ನಾವು ಅದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಅರುಣ ಶಹಾಪುರ, ಶ್ರೀ ಶಶೀಲ್ ಜಿ ನಮೋಶಿಯವರು ತಿಳಿಸಿರುವಂತೆ ಇಲ್ಲಿರುವ ಮೂರು ಪ್ರಮುಖವಾದಂತಹ ಅಂಶವೇನೆಂದರೆ, ಜೆ.ಓ.ಸಿ. ಸಿಬ್ಬಂದಿ ವಿಲೀನಗೊಂಡ ನಂತರ ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ಅವರಿಗೆ ಪಿಂಚಣಿ ಸೌಲಭ್ಯ ಸಿಗುತ್ತಿಲ್ಲ. ಅದನ್ನು ಅವರಿಗೆ ಕೊಡಬೇಕು. ಇವರಿಗೆ ಮಾನವೀಯತೆಯ ದೃಷ್ಟಿಯಿಂದ, ಇವತ್ತು ವಿಶೇಷ ಅಧಿನಿಯಮವನ್ನು ರೂಪಿಸಿ, ಇವರನ್ನು ಸಕ್ರಮಗೊಳಿಸಿದ್ದಾರೆ. ಇವರು 2006 ರ ಪೂರ್ವದೊಳಗೆ ನೇಮಕಾತಿಯಾದಂತಹ ಹಿನ್ನೆಲೆಯೊಳಗೆ ದಯವಿಟ್ಟು, ಅವರನ್ನು ಯಾವ ರೀತಿ ಮಾನವೀಯತೆಯ ದೃಷ್ಟಿಯಿಂದ ಸಕ್ರಮಗೊಳಿಸಿದ್ದಿರೋ, ಅದೇ ಮಾನವೀಯತೆಯಿಂದ ಇವರಿಗೆ ಪಿಂಚಣಿ ಕೊಡಬೇಕು. ಅವರು ಸುಮಾರು 35 ವರ್ಷಗಳಿಂದ ದುಡಿದು, ಮನೆಗೆ ಖಾಲಿ ಕೈಯಲ್ಲಿ ಹೋದರೆ, ಅವರ ಜೀವನ ಬಹಳ ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ, ಇವರಿಗೆ ಪಿಂಚಣಿ ಸೌಲಭ್ಯವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇವರನ್ನು ಸಕ್ರಮಗೊಳಿಸುವಂತಹ ಸಂದರ್ಭದಲ್ಲಿ ಕೆಲವೊಂದು ಕಾರಣವನ್ನು ಕೊಟ್ಟು, ಸುಮಾರು 28 ಬೋಧಕೇತರರು ಮತ್ತು 11 ಜನ ಉಪನ್ಯಾಸಕರನ್ನು regularise ಮಾಡಿಲ್ಲ. ಹಾಗಾಗಿ ಅವರನ್ನು ಕೂಡ regularise ಮಾಡಬೇಕು. ಮೂರನೆಯ ಪ್ರಮುಖವಾದ ಅಂಶವೇನೆಂದರೆ, ಉಪನ್ಯಾಸಕರುಗಳಿಗೆ ಬಿಎಡ್ ಆಗಿಲ್ಲವೆಂದು PP declaration ಆಗಿಲ್ಲ. ನಮ್ಮ ರಾಜ್ಯದಲ್ಲಿ ಬಿಎಡ್ ಆಗದೇ ಇರುವ ಉಪನ್ಯಾಸಕರುಗಳು ತುಂಬಾ ಜನರಿದ್ದಾರೆ. ಇವರು ಕೂಡ 2010 ರ ಪೂರ್ವದೊಳಗೆ ನೇಮಕಾತಿಯಾದವರು. ದಯವಿಟ್ಟು, ಬಿಎಡ್ compulsory ಮಾಡದ ಹಾಗೇ ಇವರಿಗೆ ವಿನಾಯಿತಿಯನ್ನು ಕೊಡಬೇಕು. ಉಪನ್ಯಾಸಕರುಗಳಿಗೆ PP declaration ಆಗಿಲ್ಲ. ಅವರಿಗೆ PP declaration ಮಾಡಿ, ಸರ್ಕಾರದ ಸೌಲಭ್ಯವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ ಶ್ರೀ ಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಬಹಳ ನೋವಿನ ವಿಚಾರವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಜಂಟಿ ಸಭೆ ಮಾಡಿ, ಅವರು ಒಂದು ಮಾತು ಕೊಟ್ಟರು. ಕೆಳಮನೆಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಅನುಷ್ಠಾನ ಮಾಡುವುದಕ್ಕೆ, ಅದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರೂ ಕೂಡ ಅದು ಆಗಲಿಲ್ಲ. ಈ ಹಿಂದೆ ಇದ್ದಂತಹ ಮಾಜಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಮೂರ್ನಾಲ್ಕು ಸಭೆಯನ್ನು ಮಾಡಿ, ಅಕ್ಷರಶಃ ಒಪ್ಪಿಕೊಂಡರು. ಪಕ್ಷಾತೀತವಾಗಿ ಹದಿನಾಲ್ಕು ಜನ ಶಾಸಕರು ಆ ಸಭೆಗೆ ಹೋಗಿದ್ದೇವು. ಮಾನ್ಯ ಸಚಿವರೇ, ಇದರಲ್ಲಿ ನಾಲ್ಕು ವಿಚಾರಗಳಿವೆ. ಮೊದಲನೆಯದಾಗಿ, ಜೆ.ಓ.ಸಿ. ಯವರು ನಿನ್ನೆ-ಮೊನ್ನೆ ಬಂದವರಲ್ಲ. 1975-76 ರಿಂದಲೂ ಸೇವೆಯಲ್ಲಿ ಇದ್ದಾರೆ. ಆದರೆ ಜೆ.ಓ.ಸಿ. ಈಗ ಮುಚ್ಚಿಬಿಟ್ಟಿರಿ. ಮುಚ್ಚಿಬಿಡಿ ಎಂದು ಅವರು ಕೇಳಲಿಲ್ಲ. ಅಗತ್ಯವಿತ್ತು, ಅದನ್ನು ಮುಚ್ಚಿಬಿಟ್ಟಿರಿ. ಆದರೆ ಅದನ್ನು ಪದವಿ ಪೂರ್ವ ಶಿಕ್ಷಣ ಮಂಡಳಿಗೆ ವಿಲೀನ ಮಾಡಿದರೆ, ಮುಗಿದು ಹೋಗುತ್ತಿತ್ತು. ಆದರೆ ಜೆ.ಓ.ಸಿ. ಕೋರ್ಸ್‌ನ್ನು wind-up ಮಾಡಿದಿರಿ. Wind-up ಮಾಡುವ ಮುಂಚೆ ಯಾರೆಲ್ಲಾ ಹತ್ತು ವರ್ಷಗಳ ಕಾಲ ಸೇವೆ ಮಾಡುತ್ತಾರೋ, ಅವರನ್ನು ಖಾಯಂ ಮಾಡಿ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಒಂದು ನಿರ್ದೇಶನ ಬಂದಿತ್ತು. ಅದೇ ತರಹ ಅಂದರೆ, 2012, 2013, 2014 ಅಂದರೆ ಮೂರು ಬ್ಯಾಚ್‌ಗಳನ್ನು ಮಾಡಿದಿರಿ. ಆಮೇಲೆ ಅದನ್ನು ಏಕೋ ಮಾಡಲಿಲ್ಲ. ಹಾಗೆಯೇ ನಿಲ್ಲಿಸಿಬಿಟ್ಟಿರಿ. ಆಗ ಏನಾಯಿತು ಎಂದರೆ, ನಾವೆಲ್ಲ ಗಲಾಟೆ ಮಾಡಿದೆವು. Wind-up ಮಾಡಿದಿರಿ. ಅವರನ್ನು ಖಾಯಂ ಮಾಡಲಿಲ್ಲ ಎಂದು ಹೇಳಿ, ಮಾನ್ಯ ಹರೀಶ್ ಗೌಡರ ನೇತೃತ್ವದಲ್ಲಿ ಒಂದು ಸಮಿತಿಯಾಯಿತು. ಸಮಿತಿಯು ಇವರೆಲ್ಲರನ್ನೂ ಬೇರೆ ಬೇರೆ ಇಲಾಖೆಗಳಲ್ಲಿ ವಿಲೀನ ಮಾಡಿರಿ ಎಂದು ಶಿಫಾರಸ್ಸು ಮಾಡಿತು. ಐದು ವರ್ಷ ಸೇವೆ ಎಂದು condition ಹಾಕಿದಿರಿ. 3216 ಜನರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರಿ. ಅವರನ್ನು ಬೇರೆ ಬೇರೆ ಇಲಾಖೆಯಲ್ಲಿ ನೇಮಕಾತಿಯನ್ನು ಮಾಡಿದಿರಿ. ಈಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಏನು ತೀರ್ಮಾನ ಕೊಟ್ಟಿದೆ ಎಂದರೆ, ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ ಎಂದು ತೀರ್ಮಾನ ಕೊಟ್ಟಿದೆ. ಈಗ ಮಾನ್ಯ ಸಭಾಪತಿಯವರು ಸದನದಲ್ಲಿ ಇಲ್ಲ. ಅವರು ಈಗ ಹೊರಟು ಹೋಗಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಗಿದ್ದು, ಎರಡು ವರದಿಗಳನ್ನು ಕೊಟ್ಟಿದೆ. ಅದು ಏನೆಂದರೆ, ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ ಎಂದು ವರದಿ ಕೊಟ್ಟಿದೆ. ಇವರು ಹೊಸಬರಲ್ಲ. 2009 ರ ನಂತರ ಬಂದವರಲ್ಲ ಅಥವಾ 2006 ರ ನಂತರ ಪಿಂಚಣಿಗೆ ಮುಂಚೆ ಬಂದವರಲ್ಲ. ಇವರು ಅದರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ವದಲ್ಲಿ 20-25 ವರ್ಷಗಳ ಕಾಲ ಸರ್ಕಾರ ಸಂಬಳ ಕೊಟ್ಟಷ್ಟು ಅಂದರೆ, ರೂ. 2,000, ರೂ. 3,000 ಗಳಿಗೆ ಇವರು ಕೆಲಸ ಮಾಡಿದವರು. ಅವರ ಜೊತೆಯಲ್ಲಿದ್ದವರು ಕಾಯಂ ಆಗಿ ಹೋದರು. They are getting pension also. ಕೆಲವರು ಬಹಳ ನೆಮ್ಮದಿಯಾಗಿ ನಿವೃತ್ತಿಯಾಗಿದ್ದಾರೆ. ಇನ್ನು ಕೆಲವರು ಕೆಲಸ ಮಾಡುತ್ತಿದ್ದಾರೆ. ಆದರೆ ಇವರಿಗೆ ಏಕೆ ತೊಂದರೆ? ಶ್ರೀ ಶಶೀಲ್ ಜಿ. ನಮೋಶಿಯವರಿಗೆ ಧನ್ಯವಾದಗಳನ್ನರ್ಪಿಸಿ, ತಮಗೆ ಅಭಿನಂದಿಸಿ, ತಮ್ಮ ಎತ್ತರಕ್ಕೆ ದೊಡ್ಡದಾದ ಹೂವಿನ ಹಾರವನ್ನು ತಂದು ಹಾಕುತ್ತೇನೆ. ಆದರೆ ತಮ್ಮ ಪ್ರಕ್ರಿಯೆಯನ್ನು ಪೂರ್ಣ ಮಾಡಬೇಕಲ್ಲವೆ. 'ಮುದ್ದೆ ಕೊಟ್ಟುಬಿಟ್ಟು, ಸಾರು ಕೊಡದೇ ಹೋದರೆ, ಮುದ್ದೆಯನ್ನು ಹೇಗೆ ಊಟ ಮಾಡಬೇಕು'? ಈಗ ನಮ್ಮ ಪ್ರಶ್ನೆ ಏನೆಂದರೆ, ಅವರು ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ. ಈ ಹಿಂದೆ ಇದ್ದಂತಹ ಮಾಜಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್‌ಕುಮಾರ್‌ರವರು ಅವರನ್ನು relaxation ಮಾಡಿ, ಪಿಂಚಣಿಯನ್ನು ಕೊಡೋಣ ಎಂದು ಒಪ್ಪಿಕೊಂಡಿದ್ದರು. ಪಾಪ, ಅವರ ಜೊತೆಯಲ್ಲಿದ್ದ 168 ಜನರು ಪಿಂಚಣಿಯನ್ನು ತೆಗೆದುಕೊಳ್ಳುತ್ತಾರೆ, ಆದರೆ ಇವರು ಏನು ಅನ್ಯಾಯ ಮಾಡಿದ್ದಾರೆ? ಅವರಿಗೆ ಪಿಂಚಣಿ ಕೊಡಿ. ಅವರು ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ.

ಎರಡನೆಯದಾಗಿ, 3216 ಜನರಿಗೆ ಕೆಲಸಕ್ಕೆ ಒಪ್ಪಿಕೊಳ್ಳುವುದಕ್ಕೆ ಆ ಕಾಯಿದೆಯಲ್ಲಿ ದಿನಾಂಕ 06.04.2001 ರಲ್ಲಿ ನಿಯಮವನ್ನು ನಾವೆಲ್ಲರೂ ಮಾಡಿ, ಅದನ್ನು ಪಾಸು ಮಾಡಿದೆವು. ಅದರೊಳಗೆ 1985 ಜನರು ಬಂದವರು. ಇನ್ನು ಎನ್.ಓ.ಸಿ. ತೆಗೆದುಕೊಂಡು ಬರಬೇಕೆಂದು ಹೇಳಿಬಿಟ್ಟಿರಿ. ಇದನ್ನು ತಾವೇ ನೇರವಾಗಿ ಹಾಕಿಬಿಟ್ಟಿದ್ದರೆ ಆಗಿಬಿಡುತ್ತಿತ್ತು. ಎನ್.ಓ.ಸಿ. ಕೊಡಬೇಕೆಂದರೆ, ಹಣ ಕೊಡಬೇಕು. ಶಿಫಾರಸ್ಸು ಮಾಡಬೇಕು. ಇದು ತಮಗೆ ಗೊತ್ತಿಲ್ಲವೇ. ಆ ಕಾರಣಕ್ಕಾಗಿ 28 ಜನ ಬೋಧಕೇತರರು, 100 ಜನ ಬೋಧಕರ ಪಟ್ಟಿ ತಡವಾಗಿ ಹೋಯಿತು. Same batch ಅವರ ಜೊತೆಗೆ ಇದ್ದವರೆಲ್ಲಾ ಏಳು ವರ್ಷಗಳಿಂದ ಕಾಯಂ ಆಗಿ they are getting very good salary. 28 ಜನ ಬೋಧಕೇತರರು ಮತ್ತು ಬೋಧಕರಿಗೆ ಇನ್ನೂ ರೂ. 1500 ಮಾತ್ರ ಸಂಬಳ. ಆವೊತ್ತಿನ ದಿವಸ ಸೇವೆಗೆ ಸೇರಿದವರಿಗೆ ಬಿಎಡ್ ಬೇಕಾಗಿಲ್ಲ ಎಂದು ಹೇಳಿ ಕೊಟ್ಟಿರಿ. ಬಿಎಡ್ relaxation ಬಿಎಡ್ ಇಲ್ಲದೇ, ಶೇಕಡ 90 ರಷ್ಟು ಭಾಗ ಪಾಠವನ್ನು ಮಾಡುತ್ತಿದ್ದೇವೆ. I am from PU faculty. ಉಪನ್ಯಾಸಕನಾಗಿ ಏಳು ವರ್ಷ, 28 ವರ್ಷ ಪ್ರಾಂಶುಪಾಲರಾಗಿ ಕೆಲಸ ಮಾಡಿದವನಾಗಿದ್ದೇನೆ. ಈ ರಾಜ್ಯದ ಶೇಕಡ 95ರಷ್ಟು ಜನ ಉಪನ್ಯಾಸಕರು ಬಿಎಡ್ ಇಲ್ಲದೇ ಪದವಿ ಪೂರ್ವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು 9-10 merge ಮಾಡಲಿಲ್ಲ. Merge ಮಾಡಿದ ಮೇಲೆ ಬಿಎಡ್ ಬೇಕು. ಅಲ್ಲಿಯವರೆಗೆ ಇವರಿಗೆ ಅನುಭವ ಇದೆಯಲ್ಲಾ, ಅವರನ್ನು perfection ಆಗಿ ಪಾಠ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಲ್ಲರು. ಹಾಗಾಗಿ ಶೇಕಡ 95 ರಷ್ಟು ಜನ ಉಪನ್ಯಾಸಕರು ಈಗಾಗಲೇ ಬಿಎಡ್ ಇಲ್ಲದೇ, ಇವರು ಚೆನ್ನಾಗಿ ಪಾಠ ಮಾಡುತ್ತಿರುವಾಗ, ಬಿಎಡ್ relaxation ಕೊಡುವುದಕ್ಕೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ ಮತ್ತು ಮಾಜಿ ಶಿಕ್ಷಣ ಸಚಿವರಾದ ಶ್ರೀ ಸುರೇಶ್‌ಕುಮಾರ್ ಅವರು ಒಪ್ಪಿಕೊಂಡಿದ್ದರು. ಈ ಹನ್ನೊಂದು ಜನರಲ್ಲಿ ಒಬ್ಬರು ತೀರಿ ಹೋಗಿಬಿಟ್ಟರು. ಇನ್ನು ಉಳಿದ ಹತ್ತು ಜನರಿದ್ದಾರೆ. ಹತ್ತು ಜನರಿಗೆ order ಕೊಡದೇ ರೂ. 1500ರಲ್ಲಿ ಅವರು ಜೀವನ ಹೇಗೆ ಮಾಡುತ್ತಾರೆ? ಅವರಿಗೆ ಮಕ್ಕಳು ಮೊಮ್ಮಕ್ಕಳಿದ್ದಾರೆ. ಇನ್ನು ಆರೇಳು ವರ್ಷಗಳು ಮಾತ್ರ ಸರ್ವಿಸ್ ಇದೆ. ದಯವಿಟ್ಟು ಹತ್ತು ಜನರಿಗೆ ಕೊಡಿಸಿ. ಇನ್ನು ಬೋಧಕೇತರರಿಗೆ ಅಡ್ಡಿಯೇ ಇಲ್ಲ. ಹಾಗೇ counselling ಮಾಡಿ, appointment ಕೊಡಲಿಲ್ಲ. ಏಳು ವರ್ಷಗಳಾಗಿ ಹೋಯಿತು. ಅವರು ಜೀವನ ಮಾಡುವುದು ಹೇಗೆ ಮಾನ್ಯ ಸಭಾಪತಿಯವರೇ. ಆ 28 ಜನ ಬೋಧಕೇತರರಿಗೆ ಹತ್ತು ಜನ ಬೋಧಕರಿಗೆ relaxation ಮಾಡಿ, ಕ್ಯಾಬಿನೆಟ್‌ನಲ್ಲಿಟ್ಟು, ಕೂಡಲೇ order ಕೊಡಿಸಬೇಕು.

(ಮುಂದು)

(721) 15.09.2021,5.50, ಟಿಸಿಹೆಚ್-ಬಿಎನ್‌ಎಸ್ **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**:-

ಇನ್ನು ಮೂರನೆಯ ವಿಚಾರವೇನೆಂದರೆ, ತಾವು ವಿಲೀನಗೊಳಿಸಿದ ನಂತರ ಬಹಳ ಜನ ಶಿಕ್ಷಕರು ವಂಚಿತರಾಗಿದ್ದಾರೆ. ನೀವು 3216 ಜನಕ್ಕೆ ಪ್ರಾವಿಜನ್ ಮಾಡಿಕೊಂಡಿದ್ದೀರಿ. ಬರೀ 1985 ಜನ ಬಂದರು. 28+10 ಒಟ್ಟು 38 ಖಾಲಿ ಇದೆ. ನೀವು ಕನಿಷ್ಠ 5 ವರ್ಷಗಳ ಕಾಲ ಅವರು ಸೇವೆ ಮಾಡಿರಬೇಕು ಎಂದು ಹೇಳಿದಿರಿ. ಆ ಐದು ವರ್ಷ ಸೇವೆ ಸಲ್ಲಿಸಿದಂಥವರು ನಿಮ್ಮ cut off date ಕೆಳಗಿಂದ ಇನ್ನೂ 300 ರಿಂದ 350 ಜನ ಇದ್ದಾರೆ. ಅವರ ಬಗ್ಗೆ ಹಿಂದಿನ ಶಿಕ್ಷಣ ಸಚಿವರಾಗಿದ್ದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರು ಒಂದು ಸಭೆ ಮಾಡಿ ಮಾಹಿತಿಯನ್ನು ತರಿಸಿಕೊಂಡಿದ್ದಾರೆ. ಅದು ತಮ್ಮ ಕಡೆ ಇದೆ. ಪಾಪ, ಅವರಿಗೂ ಒಂದು ಲೈಫ್ ಕೊಡುವಂಥ ಕೆಲಸ ಮಾಡಬೇಕಲ್ಲವೇ? ನೀವು ನಾಲ್ಕು ಕೆಲಸ ಮಾಡಬೇಕಿದೆ. ಮೊದಲನೆಯದಾಗಿ, ಅವರಿಗೆ ಪೆನ್ಷನ್ ಕೊಡುವಂಥದ್ದು. ಎರಡನೆಯದಾಗಿ 28 ಜನ ಬೋಧಕೇತರ ಸಿಬ್ಬಂದಿ ಹಾಗೂ 10 ಜನ ಉಪನ್ಯಾಸಕರದ್ದು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ಆದೇಶ ಕೊಡಿಸಬೇಕು. ಆಮೇಲೆ ಈ ವಿಲೀನ ವಂಚಿತರಿಗೆ ಅವಕಾಶ ಮಾಡಿಕೊಡುವುದು. B.Ed., relaxation ಮಾಡುವುದು. ಇಷ್ಟು ಮಾಡಿದರೆ, ಮಾನ್ಯ ಶಶೀಲ್ ಜಿ.ನಮೋಶಿಯವರೇ, ನಾವು ನಿಮ್ಮ ಸರ್ಕಾರಕ್ಕೆ ದೊಡ್ಡ ಅಭಿನಂದನೆಗಳನ್ನು ಹೇಳುತ್ತೇವೆ. ಸಾಷ್ಟಾಂಗ ನಮಸ್ಕಾರವನ್ನೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆ. ಇಲ್ಲಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಬಂದರು. ಅವರು ಇವತ್ತು ನಮ್ಮ ನೆರವಿಗೆ ಬರುತ್ತಾರೆ ಅಂದುಕೊಂಡೆನು. ಆದರೆ ಅವರು ಈ ಸದನದಿಂದ ಹೊರಗೆ ಹೋಗಿಬಿಟ್ಟರು. ಮಾನ್ಯ ಮರಿತಿಬ್ಬೇಗೌಡರವರು ಸನ್ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಿದ್ದನ್ನು ಗಮನಿಸಲಿಲ್ಲವೆನಿಸುತ್ತದೆ. ಹೌದು, credit will go to you. ಅದರಲ್ಲಿ ಎರಡು ಮಾತಿಲ್ಲ. ಮಾನ್ಯ ಹರೀಶ್‌ಗೌಡರವರು ಇದ್ದರು, ನಾವೆಲ್ಲಾ ಅದಕ್ಕೆ ಒಂದು ಪ್ರಯತ್ನ ಮಾಡಿದ್ದೆವು. ಅದಕ್ಕೆ ಒಂದು ಸಮಿತಿಯನ್ನು ಕೂಡ ಮಾಡಿದ್ದೀರಿ. ಆ ವಿಲೀನ ಪ್ರಕ್ರಿಯೆಯನ್ನು ಮಾನ್ಯ ಶಶೀಲ್ ಜಿ.ನಮೋಶಿಯವರ ನೇತೃತ್ವದಲ್ಲೇ ಮಾಡಿದ್ದೀರಿ. ಅದರಲ್ಲಿ ಎರಡು ಅನುಮಾನವಿಲ್ಲ. ಆದರೆ ಆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರೆ, ನಾವು ನಿಮಗೆ ಧನ್ಯವಾದಗಳನ್ನು ಹೇಳುವುದಕ್ಕೆ ತಯಾರಿದ್ದೇವೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕು. ತಾವು ಕೊಟ್ಟಿರತಕ್ಕಂಥ ಉತ್ತರದಿಂದ ಏನೂ ಪರಿಹಾರ ಸಿಗುವುದಿಲ್ಲ. ಈ ರಾಜ್ಯದಲ್ಲಿ ಕಾನೂನು ಮಾಡುವುದಕ್ಕೆ ನಮ್ಮ ಎರಡೂ ಸದನಗಳಿವೆ. ವಿಶೇಷ ಕಾಯ್ದೆಗೆ ತಿದ್ದುಪಡಿ ತರಬಾರದೆಂದು ಯಾವ ನಿಯಮ ಹೇಳುತ್ತದೆ? ನಾನು ಅದನ್ನು ಓದಿಕೊಂಡು ಬಂದಿದ್ದೇನೆ. ಯಾವ ನಿಯಮದಲ್ಲೂಆ ರೀತಿ ಹೇಳಿಲ್ಲ. ಸ್ಪೆಷಲ್ ಕಾಯ್ದೆ ಮಾಡಿದಂಥವರಿಗೆ ಆ ಸ್ಪೆಷಲ್ ಕಾಯ್ದೆಯಲ್ಲಿ ಕೆಲವು ಅಮೆಂಡ್‌ಮೆಂಟ್ ಮಾಡುವುದಕ್ಕೆ ಅಡ್ಡಿ ಏನಿದೆ? ಅಧಿಕಾರಿಗಳು ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ. This is not good. They are working. ಅವರು ಬರೀ ರೂ.1500/-ಗಳಿಗೆ ಕೆಲಸ ಮಾಡುತ್ತಿದ್ದಾರೆ. ಇನ್ನುಳಿದವರು ಸುಮಾರು ರೂ.30,000/-ದಿಂದ ರೂ.40,000/-ಗಳವರೆಗೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ನಾವು ಇವರನ್ನು ಹಾಗೆಯೇ ಬಿಟ್ಟುಬಿಡುವುದೇ? ಇವತ್ತಿನ ದಿವಸ ಅವರು ರೂ.1500/-ಗಳ ಸಂಬಳ ತೆಗೆದುಕೊಂಡು ಬದುಕುವುದಕ್ಕೆ ಆಗುತ್ತದೆಯೆ. ನೀವು ದಿನಗೂಲಿಯವರಿಗೆ ಕನಿಷ್ಠ ವೇತನ ಕೊಡಬೇಕೆಂದು ಹೇಳುತ್ತೀರಿ. ಆ ದಿನಗೂಲಿಯವನಿಗೆ ದಿನಕ್ಕೆ ಇಷ್ಟು ದುಡ್ಡು ಕೊಡಬೇಕು. ಅವನಿಗೆ ತಿಂಗಳಿಗೆ ರೂ.12,000/- ರಿಂದ ರೂ.13,000/-ಗಳವರೆಗೆ ಸಂಬಳ ಕೊಡಬೇಕೆಂದು ಹೇಳುತ್ತೀರಿ. ಆದರೆ, ಇವರು ತಿಂಗಳಿಗೆ ರೂ.1500/-ಗಳಂತೆ ಸುಮಾರು 26 ರಿಂದ 27 ವರ್ಷಗಳ ಕಾಲ ಕೆಲಸ ಮಾಡುತ್ತಿದ್ದಾರೆಂದರೆ ನಾವೆಲ್ಲಾ ತಲೆ ತಗ್ಗಿಸಬೇಕಲ್ಲಾ! ಒಂದು ನಾಗರಿಕ ಸಮಾಜದ ಜವಾಬ್ದಾರಿ ಏನಿದೆ? ಹೌದು. ಅವರು ಕನಿಷ್ಠ ಕೂಲಿಗಿಂತ ಕಡಿಮೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರು ಎಂ.ಎ., ಬಿ.ಎಸ್ಸಿ., ಎಂ.ಎಸ್ಸಿ., ಓದಿದ್ದಾರೆ. ಅಷ್ಟು ಓದಿಕೊಂಡು ಬರೀ ರೂ.1500/-ಗಳಿಗೆ ಇನ್ನೂ ಕೆಲಸ ಮಾಡುತ್ತಿದ್ದಾರೆಂದರೆ; ಮಾನ್ಯ ಸದಸ್ಯರಾದ ಶಶೀಲ್ ಜಿ.ನಮೋಶಿಯವರು ಸದನದಿಂದ ಹೊರಗಡೆ ಹೋದರು ಎನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ನಾನು ಯಾರಿಗೆ ಅಭಿನಂದಿಸಬೇಕೆಂದು ಗೊತ್ತಾಗುತ್ತಿಲ್ಲ. ಹೇಗೆ ಅಭಿನಂದಿಸಬೇಕೆಂದು ಗೊತ್ತಾಗುತ್ತಿಲ್ಲ. ಅವರು ಎಲ್ಲಿಗೆ ಹೋದರು. ಅವರು ಇನ್ನೂ ರೂ.1500/-ಗಳಿಗೆ ಸುಮಾರು 26 ವರ್ಷಗಳಿಂದ ಅವರನ್ನು ದುಡಿಸಿಕೊಳ್ಳುತ್ತಿದ್ದೀರಲ್ಲಾ! ನಾನು ನಿಮಗೆ ಏನು ಸನ್ಮಾನ ಮಾಡಲಪ್ಪಾ, ನಾನು ಏನಂಥ ಸನ್ಮಾನ ಮಾಡಲಪ್ಪಾ; ಆಹಾ! ಅವರ ಮಗನಿಗೆ ಹಾಗೂ ಅವರ ಮೊಮ್ಮಗನಿಗೆ ಸ್ಕೂಲ್ ಫೀ ಕಟ್ಟುವುದಕ್ಕೆ ಆಗುತ್ತದೆಯೇ?

**ಶ್ರೀ ಶಶೀಲ್ ಜಿ.ನಮೋಶಿ (ಪದವೀಧರರ ಕ್ಷೇತ್ರ):-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ನಿಮ್ಮ ಸರ್ಕಾರ ಕೂಡ ಅಧಿಕಾರದಲ್ಲಿತ್ತು. ಆದರೆ ಆ ಕಾಲದಲ್ಲಿ ಆಗಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಎಲ್ಲಾ ಕೆಲಸ. . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಶ್ರೀಮತಿ ಭಾರತಿ ಶೆಟ್ಟಿಯವರೇ, ಅವರು ಏನು ಹೇಳಿದರೆಂದರೆ, ನಾವೆಲ್ಲಾ ವಿಲೀನ ಮಾಡಿದ್ದೇವೆ, ಅವರಿಗೆ ಲೈಫ್ ಕೊಟ್ಟಿದ್ದೇವೆ ಸನ್ಮಾನ ಮಾಡಿ ಥ್ಯಾಂಕ್ಸ್ ಹೇಳಿ ಎಂದರು. ನಾವು ಅದಕ್ಕೆ ರೆಡಿ ಇದ್ದೇವೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ನಾವು ಸುಮಾರು 3000 ಜನಕ್ಕೆ ಮಾಡಿದ್ದೇವೆ. ಕೆಲವು ಜನರಿಗೆ ಇನ್ನೂ ಆಗಿಲ್ಲ, ಅವರಿಗೂ ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಶ್ರೀಮತಿ ಭಾರತಿ ಶೇಟ್ಟಿಯವರೇ, ಅದನ್ನು ನಿಮ್ಮ ಸರ್ಕಾರ ಮಾಡಿದರೆ ನಾವು ಗುಲಾಬಿ ಹೂವಿನ ಹಾರವನ್ನೇ ಹಾಕುತ್ತೇವೆ. ಸೇಬು ಹಣ್ಣಿನಿಂದ ತುಲಾಬಾರ ಮಾಡುತ್ತೇವೆ. ಸರ್ಕಾರ ಆ ಜನಕ್ಕೆ ಲೈಫ್ ಕೊಡುತ್ತೇವೆಂದು ಮಾತು ಕೊಟ್ಟಿದೆ. ನಮಗೆ ಸನ್ಮಾನ್ಯ ಸಚಿವರಾದ ಶ್ರೀ ಬಿ.ಸಿ.ನಾಗೇಶ್‌ರವರ ಮೇಲೆ ಅಪಾರವಾದ ಗೌರವವಿದೆ. ಮಾನ್ಯ ಎಸ್.ಸುರೇಶ್‌ಕುಮಾರ್‌ರವರಷ್ಟೇ ಅವರ ಬಗ್ಗೆ ಅಭಿಮಾನ ಮತ್ತು ವಿಶ್ವಾಸ ಎರಡೂ ಇದೆ. ಅವರಿಗೆ ಮಾಡತಕ್ಕಂಥ ಶಕ್ತಿ ಇದೆ. ಆದರೆ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಿಂದ ಏನೂ ಪರಿಹಾರ ಸಿಗುವುದಿಲ್ಲ. ಶ್ರೀ ಶಶೀಲ್ ಜಿ.ನಮೋಶಿಯವರೇ, ನಾನು ನಿಮಗೆ ಒಂದು ಸತ್ಯ ಹೇಳುವುದೇನೆಂದರೆ, ಈ ರಾಜ್ಯದಲ್ಲಿ ಬಿ.ಜೆ.ಪಿಗೆ ಲೈಫ್ ಕೊಟ್ಟಂಥವರು ಪದವೀಧರರು ಮತ್ತು ಶಿಕ್ಷಕರು. ಒಂದು ಕಾಲದಲ್ಲಿ ನೀವು ಎಂ.ಎಲ್.ಎ. ಕೂಡ ಇರಲಿಲ್ಲ. ಬರೀ ಎಂ.ಎಲ್.ಸಿ.ಗಳಾಗಿ ಇರುತ್ತಿದ್ದಿರಿ. ಇವತ್ತು ಇಷ್ಟು ಎತ್ತರಕ್ಕೆ ಬೆಳೆದಿದ್ದೀರಿ. ಈಗ ಅವರನ್ನು ಮರೆತು ಒದ್ದುಬಿಟ್ಟರೆ ಹೇಗೆ. ನೀವು ಅವರನ್ನು ನೆನೆಸಿಕೊಳ್ಳಬೇಕಲ್ಲವೇ? ಅವರ ಕತಜ್ಞತೆಯನ್ನು ತೀರಿಸಬೇಕಲ್ಲವೇ? ಅವರು ಇವತ್ತಿಗೂ ನಿಮ್ಮನ್ನೇ ಇಲ್ಲಿಗೆ ಜಾಸ್ತಿ ಗೆಲ್ಲಿಸಿದ್ದಾರೆ. ಹಾಗಾಗಿ, ನೀವು ಅದನ್ನು ಮಾಡುವುದು ನಿಮ್ಮ ಧರ್ಮ. ನೀವು ನಿಮ್ಮ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ ಸರ್ಕಾರ ನೀಡಿರತಕ್ಕಂಥ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ B.Ed., relaxation ಮಾಡುವುದು ದೊಡ್ಡ ವಿಚಾರವೇ ಎಂದು ನೀವೇ ಹೇಳಬೇಕು. ನೀವು ತಮ್ಮ ಸಚಿವರಿಗೆ ಹೇಳಿ. ನಾವೆಲ್ಲಾ ಕುಳಿತುಕೊಂಡು ಅದರ ಬಗ್ಗೆ ಮಾತನಾಡೋಣ. This is not the way to answer. ಇದು ರೆಮಿಡಿ ಅಲ್ಲ, ಇದು ಪರಿಹಾರವಲ್ಲ. ಅವರು ಸೇವೆಗೆ ಸೇರಿದ ದಿನಾಂಕವನ್ನು ಒಪ್ಪಿಕೊಳ್ಳಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನೀವೇಕೆ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ನೀವು ಅದನ್ನು ಇಂಪ್ಲಿಮೆಂಟ್ ಮಾಡಬೇಕಲ್ಲವೇ? ಈಗ ಇರುವಂಥ 90 ಜನರಿಗೆ B.Ed., relaxation ಕೊಟ್ಟಿರುವುದಿಲ್ಲ. ಪಾಪ, ಈಗಾಗಲೇ 20 ಜನ ನಿವೃತ್ತಿಯಾಗಿದ್ದಾರೆ. ಅವರದ್ದು ಏನೂ settlement ಆಗಿಲ್ಲ. ಏಕೆಂದರೆ ಅವರದ್ದು ಪ್ರೊಬೇಷನ್ ಡಿಕ್ಲೇರ್ ಆಗಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ನಾಲ್ಕು ವಿಚಾರಗಳಿಗೆ ಸಕಾರಾತ್ಮಕವಾಗಿ ಉತ್ತರ ಕೊಟ್ಟರೆ, ಆ ದೇವರು ಮೆಚ್ಚುತ್ತಾನೆ, ಜನ ಮೆಚ್ಚುತ್ತಾರೆ ಮತ್ತು ಶಿಕ್ಷಕರು ಕೂಡ ಮೆಚ್ಚುತ್ತಾರೆ. ನಾವು ನಿಮ್ಮನ್ನೆಲ್ಲಾ ಅಭಿನಂದಿಸುತ್ತೇವೆ. ಆದ್ದರಿಂದ ದಯಮಾಡಿ ಪಾಸಿಟೀವ್ ಉತ್ತರ ಕೊಡಿ. ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿ. ಸರ್ ನಾನು ಹೇಳುವುದು ಸರಿಯಾಗಿದೆ, ಸತ್ಯವನ್ನು ಹೇಳಿದ್ದೇನೆ.

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮೆಲ್ಲಾ ಹಿರಿಯ ಶಾಸಕರುಗಳಾದ ಮಾನ್ಯ ಮರಿತಿಬ್ಬೇಗೌಡ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಶಶೀಲ್ ಜಿ.ನಮೋಶಿ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಅರುಣ ಶಹಾಪೂರ ರವರು ಬಹಳ ವಿವರವಾಗಿ ಮಾತನಾಡಿದ್ದಾರೆ. ನಾನು ಅದನ್ನು ಮತ್ತೇ ರಿಪೀಟ್ ಮಾಡುವುದಿಲ್ಲ. ಆದರೆ ಶಿಕ್ಷಣ ಇಲಾಖೆಯಲ್ಲಿ ತಾವು ಕೂಡ ಶಿಕ್ಷಣ ಸಚಿವರಾಗಿದ್ದವರು. ಅಧಿಕಾರಿಗಳ ವರ್ಗ ಏನಿದೆ, ಯಾರೇ eminent ಶಿಕ್ಷಣ ಸಚಿವರಾದರು ಕೂಡ ಅವರ ಕದಂಬ ಬಾಹುಗಳಲ್ಲಿ ಸಿಕ್ಕಿಹಾಕಿಕೊಂಡು ನಾವು ಈ ರೀತಿಯ ಉತ್ತರಗಳನ್ನು ನಿರೀಕ್ಷೆ ಮಾಡುತ್ತಿರುವುದು. ಹಾಗಾಗಿ, ನಮ್ಮ ಶ್ರೀ ಬಿ.ಸಿ.ನಾಗೇಶ್‌ರವರು ಹಲವಾರು ವಿಚಾರಗಳಲ್ಲಿ eminent ಇದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಒಂದು ಅಮೂಲಾಗ್ರವಾದ ಒಂದು ಹಿಡಿತ ಇದೆ, ಪ್ರತಿಯೊಂದಕ್ಕೂ ಕೂಡ ಅವರದೇ ಆದಂಥ ರೀತಿಯಲ್ಲಿ ಯಾವ ರೀತಿ ಅವಕಾಶಗಳನ್ನು ಕಡಿಮೆ ಮಾಡಬೇಕು ಎಂದು ನೋಡುತ್ತಾರೆಯೇ ಹೊರತು, ಅವರ ಹತ್ತಿರ ಸಮಸ್ಯೆಗೆ ಪರಿಹಾರ ಯಾವುದೂ ಇಲ್ಲ. ಹಾಗಾಗಿ, ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಶಿಕ್ಷಣ ಸಚಿವರಲ್ಲಿ ಒಂದು ಮನವಿ ಮಾಡುವುದೇನೆಂದರೆ, ಹಲವಾರು ವಿಚಾರಗಳನ್ನು ಬಹಳ ಸುಲಭವಾಗಿ ಬಗೆಹರಿಸಬಹುದಾದಂಥ ವಿಚಾರಗಳನ್ನು ದೊಡ್ಡ ಬೆಟ್ಟ ಮಾಡಿಟ್ಟಿದ್ದಾರೆ. ಈಗ ಇದಕ್ಕೆ ಸಂಬಂಧಪಟ್ಟಂತೆ, 3124 ಜನಕ್ಕೆ ಅವೊತ್ತಿನ ದಿನ ಎಫ್.ಡಿ. ಅನುಮೋದನೆ ಕೊಟ್ಟಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅದರಲ್ಲಿ ಸೇರಿಕೊಂಡಿರತಕ್ಕಂಥ 2600-2700 ಜನ ಇರಬಹುದು ಎಂದು ಹೇಳಿದರು. ಇನ್ನೂ ಕೂಡ ಇದೇ ವಿಚಾರಕ್ಕೆ 500-600 ಜನ ಏನು ಜೆ.ಓ.ಸಿ.ಯವರು ಇದ್ದಾರೆ, ಪ್ರತಿ ದಿನ ನಮ್ಮೆಲ್ಲಾ ಶಾಸಕರ ಮನೆ ಬಾಗಿಲುಗಳಿಗೆ ಬಂದು ಹೋಗುತ್ತಿದ್ದಾರೆ. ಅವರ ಸಮಸ್ಯೆಯೇನೆಂದರೆ, ಕೆಲವು ತಾಂತ್ರಿಕ ಕಾರಣಗಳಿಗಾಗಿ ಒಂದು ತಿಂಗಳು, ಎರಡು ತಿಂಗಳು ಮತ್ತು ಮೂರು ತಿಂಗಳು ಆ ಮ್ಯಾನೇಜ್‌ಮೆಂಟ್‌ನವರಿಗೆ ಕೊಡಬೇಕಾದಂಥ ದಾಖಲಾತಿಗಳನ್ನು ಕೊಡದಿರುವ ಕಾರಣಕ್ಕಾಗಿ ಅವರೆಲ್ಲಾ ವಂಚಿತರಾಗಿದ್ದಾರೆ. ಆದರೆ ಅವರೆಲ್ಲಾ ಇದೇ ಸರ್ವೀಸ್ ಮಾಡಿದ್ದಾರೆ. ಹಾಗಾಗಿ, ಒಂದು ಬಾರಿಗೆ ಇವೆಲ್ಲವನ್ನೂ ಕೂಡ ಸೇರಿಸಿಕೊಂಡು 500-600 ಜನಕ್ಕೆ ಏನು ಒಂದು ಒಳ್ಳೆಯ ನ್ಯಾಯಯುತವಾದ ಮರ್ಯಾದೆಯಿಂದ ಬದುಕುವಂತೆ ನಮ್ಮ ವಿದ್ಯಾರ್ಹತೆಗೆ ಗೌರವ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಮಾನ್ಯತೆ ನೀಡಿ ಮಾನ್ಯ ಶಿಕ್ಷಣ ಸಚಿವರು ಇದಕ್ಕೆ ಪರ್ಮನೆಂಟ್ ಆಗಿ ಒಂದು solution ಕಂಡುಹಿಡಿಯಬೇಕು. ಅವರೆಲ್ಲಾ ಸೇರಿದರೆ 500-600 ಜನ ಆಗುತ್ತಾರೆ ಅಷ್ಟೇ. ಈಗ ಏನು ಪಿಂಚಣಿ ಕೊಡಬೇಕೆಂದು ಮಾತನಾಡುತ್ತಿದ್ದಾರೆ, ಇದರ ಜೊತೆಗೆ ಅವರನ್ನೂ ಕೂಡ ತಮ್ಮ ಗಮನಕ್ಕೆ ತೆಗೆದುಕೊಂಡು ಈ ಸಮಸ್ಯೆಯನ್ನು ತಾವು ಬಗೆಹರಿಸಬೇಕೆಂದು ಮಾನ್ಯ ಸಭಾಪತಿಯವರ ಮುಖಾಂತರ ನಾನು ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಬಿ.ಸಿ.ನಾಗೇಶ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಈ ಚರ್ಚೆಯನ್ನು ಪ್ರಾರಂಭ ಮಾಡಿದರು. ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಶಶಿಲ್ ಜಿ.ನಮೋಶಿ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಅರುಣ ಶಹಾಪುರ ರವರು ಮತ್ತು ಶ್ರೀ ಚಿದಾನಂದ್ ಎಂ.ಗೌಡ ರವರು ಇವರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಸದನ ಈ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದೆ. ಅನೇಕ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅನೇಕ ಶಿಕ್ಷಣ ಸಚಿವರಿಂದ ಈ ಚರ್ಚೆ ಮುಂದುವರೆಯುತ್ತಲೇ ಇದೆ. ಇದರಲ್ಲಿ ಅನ್ಯಾಯವಾಗಿದೆ ಎನ್ನುವುದು ಎಲ್ಲರಿಗೂ ಅನಿಸುತ್ತದೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಅವರು ಬರೀ ರೂ.1500/-ಗಳಿಗೆ ದುಡಿಯುತ್ತಿದ್ದಾರೆಂದು ಹೇಳಿದಾಗ ಎಂಥವರ ಕರಳು ಸಹಿತ ಮಿಡಿಯುತ್ತದೆ. ಆದರೆ ಈ ಸಮಸ್ಯೆ ಇವತ್ತಿನದ್ದಲ್ಲ, ನಿನ್ನೆಯದ್ದಲ್ಲ. ಆದರೆ ಅನೇಕ ವರ್ಷಗಳಿಂದ ಈ ಸಮಸ್ಯೆ ಇದೆ. ಸನ್ಮಾನ್ಯ ಸಿದ್ದರಾಮಯ್ಯನವರಂಥ ಅನೇಕ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ಬಂದಿರುತ್ತದೆ. ಅನೇಕ ಶಿಕ್ಷಣ ಸಚಿವರ ಗಮನಕ್ಕೂ ಬಂದಿತ್ತು. ಅನೇಕ ಶಿಕ್ಷಕರ ಪರವಾಗಿ ಈ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವಂಥ ಎಂ.ಎಲ್.ಸಿ.ಗಳು ಸಾಕಷ್ಟು ವಿಚಾರ-ವಿನಿಮಯಗಳನ್ನು ಮಾಡಿರುವಂಥ ವಿಷಯವಾಗಿದೆ. ಆದರೆ pension ನ ವಿಚಾರದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏತಕ್ಕೆ ಏನು ತೊಂದರೆಯಾಗಿದೆ ಎಂದು ನಮಗೆ ಮತ್ತು ನಿಮಗೆಲ್ಲರಿಗೂ ಗೊತ್ತಿದೆ. ಅದಕ್ಕೆ National Education policy ಯ ಪ್ರಕಾರ ಅವರಿಗೆ B.Ed., compulsory ಮಾಡಬೇಕು ಎಂದು 2008ರ ನಂತರ ಬಂದಿರುವಂಥದ್ದು. 2008ರ ಮುಂಚೆ ಇರಲಿಲ್ಲ. ಇವರಿಗೆ ಕೆಲಸ ಕೊಡಬೇಕಾದಂಥ ಸಮಯದಲ್ಲೂ ಕೂಡ ಆ ಕಂಡಿಷನ್ ಹಾಕಿ ಕೊಟ್ಟಿರುವಂಥದ್ದು. ಆ ಕಂಡಿಷನ್‌ಗೆ ಒಪ್ಪಿಕೊಂಡೇ ಅವರೆಲ್ಲರೂ ಕೆಲಸಕ್ಕೆ ಬಂದಿರುವಂಥದ್ದು. ಆ ಒಂದೇ ಕಾರಣಕ್ಕೋಸ್ಕರವಾಗಿ B.Ed., exemption ಅನ್ನು ನಾವು ಕೊಡುವುದಕ್ಕೆ ಆಗಿರುವುದಿಲ್ಲ ಎನ್ನುವುದು ನಮಗೆ ಮತ್ತು ನಿಮಗೆಲ್ಲಾ ಗೊತ್ತಿದೆ. ಆದರೆ 11 ಜನ ಉಪನ್ಯಾಸಕರ ಬಗ್ಗೆ ಹೇಳಿದರು. ಅದು ನಮಗೂ ಕೂಡ ಗೊತ್ತಿದೆ, ಅವರದ್ದು ತುಂಬಾ ಕಠಿಣವಾದ ಸ್ಥಿತಿ. ಉಳಿದವರದ್ದೆಲ್ಲಾ ಸೆಟಲ್ ಆಗಿದ್ದು, ಈ 11 ಜನ ಉಪನ್ಯಾಸಕರದ್ದು ಆಗಲಿಲ್ಲ. ಆ 11 ಜನರಿಗೆ B.Ed. ಮಾಡಿಕೊಂಡು ಬನ್ನಿ ಎಂದು ಇಲಾಖೆ ಸಾಕಷ್ಟು ಬಾರಿ ಹೇಳಿದರೂ ಕೂಡ ಅವರು ಅದೇಕೆ B.Ed. ಮಾಡಲಿಲ್ಲವೆಂದು ನಮಗೆ ಮತ್ತು ನಿಮಗೆ ಗೊತ್ತಿಲ್ಲ. ಬಹುಶಃ ಅವರ ವಯೋಮಾನದ ಕಾರಣಕ್ಕೋಸ್ಕವೇನೋ ಅವರು B.Ed. ಮಾಡಿಕೊಳ್ಳದಂಥ ಸ್ಥಿತಿಯಲ್ಲಿ ಇರಬಹುದು. ಆದ್ದರಿಂದ 11 ಜನ ಉಪನ್ಯಾಸಕರ ಬಗ್ಗೆ ಎಲ್ಲಾ ಶಾಸಕರು ಮಾತನಾಡಿದ್ದು, ತಮ್ಮೆಲ್ಲರ ಕಳಕಳಿ ನಮಗೆ ಅರ್ಥವಾಗಿದೆ. 11 ಜನ ಉಪನ್ಯಾಸಕರದ್ದು ಏನು ಮಾಡಬೇಕು ಎನ್ನುವುದನ್ನು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ಶಾಸಕರಾದ ಶ್ರೀಕಂಠೇಗೌಡರವರು, 11 ಜನರಲ್ಲಿ ಒಬ್ಬರು ತೀರಿಕೊಂಡಿದ್ದು 10 ಜನ ಮಾತ್ರ ಉಳಿದುಕೊಂಡಿದ್ದಾರೆಂದು ಹೇಳುತ್ತಿದ್ದಾರೆ. ಅದನ್ನು ಪರಿಶೀಲಿಸಲು ಎಲ್ಲಾ ಎಂ.ಎಲ್.ಸಿ.ಗಳನ್ನು ಕರೆದು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಒಂದು ಸಭೆ ಮಾಡಿ ಅದಕ್ಕೆ ನಾವು ಏನಾದರು ಒಂದು solution ಕಂಡುಹಿಡಿಯುವಂಥ ಪ್ರಯತ್ನವನ್ನು ಮಾಡೋಣ. ಮಾನ್ಯ ಶಾಸಕರು 28 ಜನರ ಬಗ್ಗೆ ನಿಯಮಾನುಸಾರ ತೆಗೆದುಕೊಳ್ಳಬೇಕು ಎನ್ನುವಂಥದ್ದನ್ನು ಹೇಳಿದ್ದಾರೆ. ಆ 28 ಜನರಿಗೆ ಕೆಲಸ ಖಾಯಂ ಆಗುವಂಥದ್ದು ಸಹಿತ ಆಗುತ್ತದೆ. ಈ 10 ಜನರ ಬಗ್ಗೆ ವಿಶೇಷವಾಗಿ ಯೋಚನೆ ಮಾಡಲು ಮುಂದಿನ ದಿನಗಳಲ್ಲಿ ಇವತ್ತು ಯಾರ್ಯಾರು ಶಾಸಕರು ಮಾತನಾಡಿದರೊ ಅವರೆಲ್ಲರನ್ನೂ ಕರೆಯುತ್ತೇವೆ. ಮತ್ತೆ ಈ ವಿಚಾರದ ಬಗ್ಗೆ ಯೋಚನೆ ಮಾಡುವವರೆಲ್ಲರನ್ನೂ ಈ ಅಧಿವೇಶನದೊಳಗೆ ಒಂದುಕಡೆ ಸೇರಿಸಿ ಸಿ.ಎಂ.ರವರ ಜೊತೆ ಕೂತು ಮಾತನಾಡಿ ಇದಕ್ಕೆ ಏನಾದರೂ ಒಂದು ತೀರ್ಮಾನ ಮಾಡುವಂಥ ಪ್ರಯತ್ನ ಮಾಡೋಣವೆಂದು ಹೇಳುತ್ತಿದ್ದೇನೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(722)15.9.2021/6.00/ಎಂ.ಎಂ-ಬಿ.ಎನ್.ಎಸ್**

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಬಿ.ಸಿ. ನಾಗೇಶ್ [ಮುಂದು]:-**

ಮಾನ್ಯ ಯಡಿಯೂರಪ್ಪನವರ ಸರ್ಕಾರ ಅವತ್ತು ತುಂಬಾ ಮಾನವೀಯತೆಯ ಆಧಾರದ ಮೇಲೆ ಇಷ್ಟು ಜನರಿಗೆ ಮಾಡಿದೆ. ಎಲ್ಲರೂ ಕುಳಿತು ಇಷ್ಟು ಜನರಿಗೂ ಏನಾದರೂ ವ್ಯವಸ್ಥೆ ಮಾಡುವ ಬಗ್ಗೆ ಪರಿಶೀಲಿಸುತ್ತೇವೆ ಎಂದು ಮಾತು ಕೊಡುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ, ತಮಗೆ ತುಂಬಾ ಧನ್ಯವಾದಗಳು. ಆದಷ್ಟು ಬೇಗ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಇದನ್ನು ಮಾಡಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**02. ವಿಷಯ:- ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್, ಅಧ್ಯಕ್ಷರ/ಉಪಾಧ್ಯಕ್ಷರ ಚುನಾವಣೆ ನಡೆಸುವ ಕುರಿತು.**

- - - - -

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಚುನಾವಣೆ ಎರಡು ವರ್ಷಗಳ ಹಿಂದೆ ನಡೆದಿರುತ್ತದೆ. ಅದೇ ರೀತಿ ಸುಮಾರು 15-16 ಪಟ್ಟಣ ಪಂಚಾಯಿತಿಗಳು, ನಗರಸಭೆಗಳ ಚುನಾವಣೆಗಳು ಸಹ ಜರುಗಿ ಕಳೆದ ಏಪ್ರಿಲ್-27ಕ್ಕೆ ಈ ಚುನಾವಣಾ ಪ್ರಕ್ರಿಯೆಗಳೆಲ್ಲವೂ ಪೂರ್ಣಗೊಂಡಿರುತ್ತದೆ. ಆದಾಗ್ಯೂ, ಇಲ್ಲಿಯವರೆಗೆ ಅಧ್ಯಕ್ಷರು/ಉಪಾಧ್ಯಕ್ಷರು, ಮೇಯರ್/ಉಪಮೇಯರ್ ಚುನಾವಣೆಗಳು ನಡೆದಿರುವುದಿಲ್ಲ. ಇದರಿಂದ ಆಯ್ಕೆಯಾದಂಥ ಸದಸ್ಯರು ತಮ್ಮ ತಮ್ಮ ವಾರ್ಡ್‌ಗಳಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿಲ್ಲ. ಆದಕಾರಣ, ಮೇಯರ್/ಉಪಮೇಯರ್ ಮತ್ತು ಅಧ್ಯಕ್ಷ/ಉಪಾಧ್ಯಕ್ಷರ ಚುನಾವಣೆಗಳನ್ನು ನಡೆಸಬೇಕೆಂಬ ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಬಿ.ಎ. ಬಸವರಾಜ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ಕೋವಿಡ್ ಇರುವುದರಿಂದ ಸಚಿವ ಸಂಪುಟದಲ್ಲಿ ನಿರ್ಣಯವಾಗಿತ್ತು. ಆ ಕಾರಣದಿಂದ ಚುನಾವಣೆಗಳನ್ನು 06 ತಿಂಗಳ ಕಾಲ ಮುಂದೂಡಿದ್ದೇವೆ. ಅದರ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗ ಕೋವಿಡ್ ಪ್ರಕರಣಗಳು ಇಳಿಮುಖವಾಗಿರುವುದರಿಂದ ಚುನಾವಣೆಯನ್ನು ಪ್ರಾರಂಭ ಮಾಡಬೇಕೆಂದು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಿದ್ದೇವೆ. ನಂತರ ಮುಂದಿನ ಕ್ರಮವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಈ ಸರ್ಕಾರಕ್ಕೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಇಷ್ಟವಿಲ್ಲವೆಂದು ತಿಳಿಯುತ್ತದೆ. ಯಾವುದೇ ಆಗಲಿ ಕೋರ್ಟ್ ನಿರ್ದೇಶನ ಅಥವಾ pressurize ಮಾಡಿದರೆ ಮಾತ್ರ ಮಾಡುತ್ತಾರೆ. ಹಿಂದೆ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವಾಗಲೂ ಅದನ್ನು ನಡೆಸಬಾರದು ಎಂದು ಹೇಳಿದರು. ಆಗ ನಾನು ನನ್ನ ವತಿಯಿಂದ ಹೈಕೋರ್ಟ್‌ಗೆ ಪಿ.ಐ.ಎಲ್. ಹಾಕಿ ನಿರ್ದೇಶನ ಕೊಡಿಸಿ ಚುನಾವಣೆ ನಡೆಯುವ ಹಾಗೆ ಮಾಡಿದೆ. ಎರಡನೆಯದಾಗಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ನೋಟಿಫಿಕೇಷನ್ ಆಗಿದ್ದು, ಬಿಲ್ ಬಂದಿದ್ದು ಇವನ್ನೆಲ್ಲಾ ನೋಡಿದರೆ ಈ ಚುನಾವಣೆಯನ್ನು ಸಹ ಮುಂದೂಡಬೇಕೆಂಬ ಒಂದು ತಂತ್ರವಿರಬಹುದೆನಿಸುತ್ತದೆ. ಮೊನ್ನೆ ದಿವಸ ಮೈಸೂರಿನಲ್ಲಿ ಮೇಯರ್ ಮತ್ತು ಉಪ ಮೇಯರ್ ಚುನಾವಣೆ ನಡೆಯಿತು. ಅಲ್ಲಿ ಏನಾಯಿತು? ಹೈಕೋರ್ಟ್ ನಿರ್ದೇಶನ ಕೊಟ್ಟರೂ ಮಾಡಿದ್ದೀರಿ. ಅದಲ್ಲದೇ ಈ ಪ್ರಕ್ರಿಯೆಯಲ್ಲಿ ಮೂರು ನಗರಪಾಲಿಕೆ ಚುನಾವಣೆಗಳು ನಡೆದವು. ಕಲಬುರ್ಗಿ, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿಯಲ್ಲಿ ಚುನಾವಣೆ ನಡೆಯಿತು. ಆಗ ಈ ಸುತ್ತೋಲೆಗಳು, ಗೈಡ್‌ಲೈನ್ಸ್ ಇವೆಲ್ಲಾ ಏತಕ್ಕೆ ಅಡ್ಡ ಬರಲಿಲ್ಲ? ಕೊರೋನಾ ನಿಯಮಗಳ ಪ್ರಕಾರ 50ಕ್ಕಿಂತ ಹೆಚ್ಚು ಜನರು . . .

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ಹೇಳುತ್ತೇನೆ . . .

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಚಿವರೇ, ಒಂದು ಸ್ವಲ್ಪ ಇರಿ ಮುಗಿಸುತ್ತೇನೆ. ಕೊರೋನಾ ನಿಯಮಗಳ ಪ್ರಕಾರ 50ಕ್ಕಿಂತ ಹೆಚ್ಚು ಜನರು ಇರುವ ಹಾಗೆ ಇಲ್ಲ, ಶವಸಂಸ್ಕಾರಕ್ಕೆ ಇಷ್ಟು ಜನರು, ಮದುವೆ ಮಾಡುವುದಕ್ಕೆ 400 ಜನರು ಎಂದೆಲ್ಲಾ ಗೈಡ್‌ಲೈನ್ಸ್ ಹಾಕಿದ್ದೀರಿ. ಈಗ ನಮ್ಮ ನಗರ ಕಾರ್ಪೊರೇಷನ್ ಅನ್ನು ತೆಗೆದುಕೊಂಡರೆ 39 ಜನ ಸದಸ್ಯರಿದ್ದಾರೆ. ನೀವು ಒಂದು ಮೀಟಿಂಗ್ ಮಾಡಿ ಮೇಯರ್, ಉಪ ಮೇಯರ್‌ಗಳ ಆಯ್ಕೆ ಪ್ರಕ್ರಿಯೆ ಎರಡು ಗಂಟೆಯಲ್ಲಿ ಮುಗಿಯುತ್ತದೆ. ಆಗ ಅವನು ಅಧಿಕಾರ ವಹಿಸುತ್ತಾನೆ, ಕೆಲಸ ಮಾಡಲು ಅನುಕೂಲವಾಗುತ್ತದೆ. ನೀವು ರಿಪ್ಲೈ ಕೊಟ್ಟಿರುವುದು 'ಆಡಳಿತಾತ್ಮಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿತದೃಷ್ಟಿಯಿಂದ ಸರ್ಕಾರವು ಮುಂದಿನ ಆದೇಶದವರೆಗೆ ಆಡಳಿತಾಧಿಕಾರಿಗಳನ್ನು ನೇಮಿಸಿ ಆದೇಶಿಸಿರುತ್ತದೆ. ಇದರಿಂದ ಸ್ಥಳೀಯ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವುದೂ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸೂಕ್ತ ಕ್ರಮ ವಹಿಸಲಾಗಿರುತ್ತದೆ'. ಕಾರ್ಪೊರೇಟರ್‌ಗಳ ಚುನಾವಣೆ ನಡೆಯಿತು. ಮೇಯರ್, ಉಪ ಮೇಯರ್ ಬಂದಾಗ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು. ನೀವು ಚುನಾವಣೆಯನ್ನೇ ರದ್ದು ಮಾಡಬೇಕಾಗಿತ್ತು. ನಾನು ಹೇಳುವುದೇನೆಂದರೆ, ತಕ್ಷಣವೇ ಒಂದು ವಾರ ಅಥವಾ 10 ದಿವಸಗಳಲ್ಲಿ ಚುನಾವಣೆ ನಡೆಸದಿದ್ದರೆ ಇದು ಒಳ್ಳೆಯ ಪರಿಣಾಮವಲ್ಲ ಎಂದು ಹೇಳುತ್ತೇನೆ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, . . . .

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಮೂರು ಮಹಾನಗರ ಪಾಲಿಕೆ ಚುನಾವಣೆಗಳು ಹುಬ್ಬಳ್ಳಿ-ಧಾರವಾಡ, ಕಲಬುರ್ಗಿ ಮತ್ತು ಬೆಳಗಾವಿ ಈ ಜಿಲ್ಲೆಗಳಲ್ಲಿ ನಡೆದವು. ಆಗ ಕೋವಿಡ್ ಪ್ರಶ್ನೆ ಬರಲಿಲ್ಲವೇ? ಆಗ ಪಟ್ಟಣದ ತುಂಬಾ ಎಲ್ಲಾ ಜನರು, ಪಕ್ಷಗಳ ನಾಯಕರು ಬಂದು ಸಾರ್ವಜನಿಕ ಸಭೆ ಮಾಡಿ, ಭಾಷಣ ಮಾಡಿ ಜನರನ್ನು ಕೂರಿಸಿ ದೊಡ್ಡ ಪ್ರಮಾಣದಲ್ಲಿ general election ಮಾಡಿದ ಹಾಗೆ ಮಾಡಿದರು. ಈಗ ಮೇಯರ್ ಮತ್ತು ಉಪ ಮೇಯರ್‌ಗಳನ್ನು, ಚುನಾಯಿತ ಸದಸ್ಯರುಗಳು ಬಂದು ಒಂದು ಹಾಲ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಈಗ ಅಧಿವೇಶನ ನಡೆಯುತ್ತಿದೆ. ಈ ಸದನದಲ್ಲಿ ನಾವೇ ಇಷ್ಟು ಜನರಿದ್ದೇವೆ. ಅಲ್ಲಿ ಇಷ್ಟು ಜನರೂ ಇರುವುದಿಲ್ಲ. ಈ ಮೇಲ್ಮನೆಯಲ್ಲಿ 75 ಜನ ಸದಸ್ಯರಿದ್ದಾರೆ. ನಮ್ಮನ್ನು ಮತ್ತು ಮಂತ್ರಿಗಳನ್ನೆಲ್ಲಾ ಕೂಡಿದರೆ 100ರ ಸಮೀಪ ಜನರು ಈ ಹಾಲ್‌ನಲ್ಲಿ ಕುಳಿತಿದ್ದೇವೆ. ಮೇಯರ್ ಮತ್ತು ಉಪ ಮೇಯರ್ ಚುನಾವಣೆಯನ್ನು ಮಾತ್ರ ಮುಂದೂಡಿದ್ದಾರೆ. ಇದಕ್ಕೆ ಕಾರಣವೇನು? General election ತರಹ ಮಹಾನಗರಪಾಲಿಕೆ ಚುನಾವಣೆ ಮಾಡಿದ್ದಾರೆ. ಮೇಯರ್ ಮತ್ತು ಉಪ ಮೇಯರ್ ಹಾಗೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಕೋವಿಡ್ ಇದೆಯೆಂದು ಮುಂದೂಡುತ್ತೀರಿ. ಈಗ ಕೋವಿಡ್ ಸುಧಾರಣೆಯಾಗುತ್ತಿದೆ ಎಂದು ನೀವೇ ಹೇಳುತ್ತೀರಿ. ಈ ಅಧಿವೇಶನವನ್ನು ಏತಕ್ಕೆ ನಡೆಸುತ್ತಿದ್ದಾರೆ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

ನಿಮಗೆ ಆಡಳಿತಾಧಿಕಾರಿ ಮೇಲೆ ಮಾತ್ರ ನಂಬಿಕೆ ಇದೆ. ಚುನಾಯಿತ ಪ್ರತಿನಿಧಿ ಮೇಲೆ ನಿಮಗೆ ನಂಬಿಕೆ ಇಲ್ಲ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ನಿಮಗೆ ನಂಬಿಕೆ ಇದೆಯೋ

ಇಲ್ಲವೋ ಎಂಬ ಬಗ್ಗೆ ನಮಗೆ ಸಂಶಯವಾಗುತ್ತಿದೆ. ಇದು ಸಂವಿಧಾನ ವಿರೋಧಿ ಕೃತ್ಯವಾಗಿದೆ. ಇವರು ಈ ರೀತಿ ಮೇಯರ್, ಉಪ ಮೇಯರ್ ಮತ್ತು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡುತ್ತಾರೆ. ಆದರೆ ಸದಸ್ಯರ ಚುನಾವಣೆಯನ್ನು ಮಾಡುತ್ತಾರೆ. ಎಲ್ಲಾ ಸಭೆ ಮಾಡಿದ್ದಾರೆ, ಎಲ್ಲಾ ಪಕ್ಷಗಳ ನಾಯಕರು ಬಂದಿದ್ದಾರೆ, ಭಾಷಣ ಮಾಡಿದ್ದಾರೆ. ಮಹಾನಗರದ ತುಂಬ ಬೇಕಲ್ಲೆಲ್ಲಾ ಸುತ್ತಾಡಿ ಮಾಡಿದ್ದಾರೆ. ಒಂದು ಹಾಲ್‌ನಲ್ಲಿ 30-40 ಜನ ಸದಸ್ಯರು ಮತ್ತು ಒಬ್ಬ ಚುನಾವಣಾ ಅಧಿಕಾರಿ ಇರುತ್ತಾರೆ. ಅವರು ಬಂದು ಸಭೆ ನಡೆಸಿ ಮೇಯರ್, ಉಪ ಮೇಯರ್‌ಗಳನ್ನು ಘೋಷಣೆ ಮಾಡುತ್ತಾರೆ. ಈಗಾಗಲೇ ಅವರು ಚುನಾಯಿತರಾಗಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಿಸಿ ಅವರನ್ನು ಮನೆಯಲ್ಲಿ ಕೂರಿಸುತ್ತೀರಾ? ಇವರು ಯಾವ ಪುರುಷಾರ್ಥಕ್ಕೆ ಚುನಾವಣೆ ಮಾಡಿದರು? ಇವರು ಕೊಟ್ಟಿರುವ ಉತ್ತರ ಅರ್ಥವೇ ಆಗುತ್ತಿಲ್ಲ. ಈ ಸದನದಲ್ಲಿ ಇಷ್ಟು ಜನರಿದ್ದೇವೆ, ಅಧಿಕಾರಿಗಳ ಗ್ಯಾಲರಿಯಲ್ಲಿ ಇಷ್ಟು ಜನರಿದ್ದಾರೆ, ಪ್ರೆಸ್ ನವರು ಇದ್ದಾರೆ, ನಾವೇ 75 ಜನ ಸದಸ್ಯರಿದ್ದೇವೆ ಹಾಗೂ ಮಂತ್ರಿಗಳಿದ್ದಾರೆ. ಇದಕ್ಕೇನು affect ಆಗುವುದಿಲ್ಲವೇ? ಮೇಯರ್, ಉಪ ಮೇಯರ್ ಚುನಾವಣೆ ಮಾಡಿದರೆ affect ಆಗುತ್ತದೆಯೇ? ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ಅರ್ಥವೇನು? ಇವರಿಗೆ ಅದರಲ್ಲಿ ನಂಬಿಕೆ ಇದೆಯೋ ಇಲ್ಲವೋ? ಈಗಾಗಲೇ ಸದಸ್ಯರು ಚುನಾಯಿತರಾಗಿದ್ದಾರೆ. ಚುನಾಯಿತರಾದವರಿಗೆ ಅಧಿಕಾರ ಕೊಡಲಿ. ಯಾವ ಪಕ್ಷದವರಾದರೂ ಮೇಯರ್, ಉಪ ಮೇಯರ್ ಆಗಲಿ. ಮಾನ್ಯ ಸಭಾನಾಯಕರೇ, ನಿಮಗೇನು ತೊಂದರೆಯಾಗಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಇಲ್ಲಿ ಯಾವ ವ್ಯಾಧಿ ಇದೆ? ಈ ಸದನದಲ್ಲಿ ನನಗೆ ಸಖೇದಾಶ್ಚರ್ಯವೆನಿಸುತ್ತಿದೆ. ಇದು ಬಹಳ ಆಶ್ಚರ್ಯಕರವಾದ ನಿರ್ಣಯವಾಗಿದೆ.

(ಮುಂದು)

(723) 15-09-2021/ 06-10/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರೇ, ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬಳ್ಳಾರಿ ಜಿಲ್ಲೆಯಲ್ಲಿ ಬಹಳ ಶಾಂತಿಯುತವಾಗಿ ಚುನಾವಣೆಯಾಯಿತು. ಎಲ್ಲಾ ಕಡೆಗಳಲ್ಲಿ ಮೇಯರ್ ಮತ್ತು ಉಪ ಮೇಯರ್‌ಗಳ ಚುನಾವಣೆಯಾಯಿತು. ಗ್ರಾಮ ಪಂಚಾಯಿತಿಗಳ ಚುನಾವಣೆಯಾಯಿತು. ಈ ಸರ್ಕಾರದ ಹೊಸ ಮುಖ್ಯಮಂತ್ರಿಗಳ ಚುನಾವಣೆ ಕೂಡ ಆಯಿತು. ಅಲ್ಲಿ ಯಾವುದೇ ಕೋವಿಡ್-19 ಬರಲಿಲ್ಲ. ಬಹುತೇಕವಾಗಿ ಇದಕ್ಕೆ ಕೋವಿಡ್-19 ಇದೆ ಎಂದು ಏಕೆ ಹೇಳುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಒಂದು ಕಾರಣವೇನೆಂದರೆ, ಅಲ್ಲಿ ಕಾಂಗ್ರೆಸ್‌ನವರ ಸಂಖ್ಯೆ ಹೆಚ್ಚಾಗಿ ಇದೆ. ಕಾಂಗ್ರೆಸ್ ಪಕ್ಷದಲ್ಲಿರುವವರು ಮೇಯರ್ ಮತ್ತು ಉಪ ಮೇಯರ್ ಆಗುತ್ತಾರೆ ಎಂಬ ದೃಷ್ಟಿಯನ್ನಿಟ್ಟುಕೊಂಡು ಅಲ್ಲಿ ಚುನಾವಣೆ ಮಾಡುತ್ತಿಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಇದನ್ನು ನಿಯಮಾವಳಿ ಹಾಗೂ ಕಾರ್ಯರೂಪದಲ್ಲಿ ತರುತ್ತಾರೆ ಎಂದರೆ, ನಾಳೆಯ ದಿವಸ ಹುಬ್ಬಳ್ಳಿ, ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಡಿಸೆಂಬರ್‌ನವರೆಗೂ ಮೇಯರ್ ಮತ್ತು ಉಪಮೇಯರ್ ಚುನಾವಣೆಯನ್ನು ಮಾಡಬಾರದು. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೇರೆ ಯಾರಾದರೂ ಈ ರೀತಿಯ ಉತ್ತರ ಕೊಟ್ಟಿದ್ದರೆ ನಾನು ಮಾತನಾಡುತ್ತಿರಲಿಲ್ಲ. ಮಾನ್ಯ ಸಚಿವರಾದ ಬಿ.ಎ.ಬಸವರಾಜುರವರು ಬೆಂಗಳೂರು ನಗರ ಪಾಲಿಕೆಯ ಸದಸ್ಯರಾಗಿ, ಎಂ.ಎಲ್.ಎ., ಆಗಿ, ಮಂತ್ರಿಯಾಗಿರುವಂತಹವರು. ಬೆಂಗಳೂರು ನಗರದ ಕಾರ್ಪೊರೇಷನ್‌ನಲ್ಲಿರುವಾಗ ಒಂದೇ ಒಂದು ದಿವಸ ಅದನ್ನು lapse ಆಗುವುದಕ್ಕೆ ಬಿಡುತ್ತಿರಲಿಲ್ಲ. ಅಲ್ಲಿ ಮೇಯರ್ ಇರಬಹುದು, ಉಪ ಮೇಯರ್ ಇರಬಹುದು ಅಥವಾ Standing Committees ಇರಬಹುದು. ವರ್ಷದಲ್ಲಿ 365 ದಿವಸ ಇದ್ದರೆ 365 ದಿವಸಗಳ ಕಾಲವೂ ಅಲ್ಲಿಯೇ ಇರಬೇಕು. ಆದ್ದರಿಂದ, ಇವರು ತೆಗೆದುಕೊಂಡಿರುವಂತಹ ತೀರ್ಮಾನ, ಸಾಂವಿಧಾನದ ತಿದ್ದುಪಡಿ ಏನು ಮಾಡಿದ್ದಾರೆ. ಅನುಚ್ಛೇದ 73 ಮತ್ತು 74 ಅದರ ತದ್ವಿರುದ್ಧವಾಗಿ ಮಾಡಿರುವಂತಹ ಕೆಲಸ ಇದು. ಸಂವಿಧಾನದ ವಿರುದ್ಧ ಹೋಗುವಂತಹದ್ದು ಸರಿಯಲ್ಲ. ಭಾರತ ಜನತಾ ಪಕ್ಷದ ಸರ್ಕಾರಗಳಿಗೆ ಎಲ್ಲೂ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಾಗಲಿ ನ್ಯಾಯಾಲಯದಿಂದ ಕಪಾಳಮೋಕ್ಷವಾದರೆ ಮಾತ್ರ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ನ್ಯಾಯಾಲಯಗಳು intervene ಆಗುವುದಕ್ಕಿಂತ ಮೊದಲು ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಏನು ಚುನಾವಣೆ ಮಾಡಲಾಗಿದೆ. ಅದರಲ್ಲಿ ಮೇಯರ್ ಮತ್ತು ಉಪ ಮೇಯರ್ ಚುನಾವಣೆಯನ್ನು ಆದಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಗ ಮಾಡಿ ಇದಕ್ಕೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಸಭಾಪತಿಯವರ ಮೂಲಕ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಬಿ.ಎ.ಬಸವರಾಜ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಳಗಾಂ, ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗಾ ಮಹಾನಗರ ಪಾಲಿಕೆಗಳಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೆ ನ್ಯಾಯಾಲಯದಿಂದ ಆದೇಶ ಬಂದಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರ ಬಗ್ಗೆ ನಾವು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡುವುದಕ್ಕಿಂತ ಮುಂಚೆಯೇ ಇದು ನ್ಯಾಯಾಲಯದಲ್ಲಿ ಇತ್ತು. ಹಾಗಾಗಿ ಇದಕ್ಕೆ ಆದೇಶವನ್ನು ಕೊಟ್ಟಿದ್ದಾರೆ. ಈಗ ನಾನೇನು ಚುನಾವಣೆ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿಲ್ಲ. ಅತಿ ಶೀಘ್ರದಲ್ಲಿಯೇ ಚುನಾವಣೆಗಳನ್ನು ಮಾಡುತ್ತೇವೆ. ಸರ್ಕಾರ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎನ್ನುವಂತಹ ಮಾತುಗಳನ್ನು ಹೇಳುತ್ತಿದ್ದೇನೆ. ನಾನು ಇದಕ್ಕೆ ಸಮಯಾವಕಾಶ ಜಾಸ್ತಿ ಕೂಡ ಹೇಳುತ್ತಿಲ್ಲ. ಇದರ ಬಗ್ಗೆ ನಾಳೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಇದಕ್ಕೆ ದಿನಾಂಕವನ್ನು ನಿಗದಿ ಮಾಡುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಚಿವರು ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿಯುವುದರೊಳಗೆ ನೋಟಿಫಿಕೇಶನ್ ಮಾಡಿ ಎಂದು ಮಾನ್ಯ ಸಚಿವರಿಗೆ ತಿಳಿಸಿ. ಚುನಾವಣೆಯಾಗಿ 6 ತಿಂಗಳಾದರೂ ಸುಮ್ಮನೆ ಬಿಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರು ಅತಿ ಶೀಘ್ರದಲ್ಲಿಯೇ ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿಯುವುದರೊಳಗೆ ದಿನಾಂಕವನ್ನು ನಿಗದಿ ಮಾಡಿ ಎಂದು ಮಾನ್ಯ ಸಚಿವರಿಗೆ ತಿಳಿಸಿ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಅತಿ ಶೀಘ್ರದಲ್ಲಿಯೇ ಮಾಡುತ್ತೇನೆ ಎಂದು ಹೇಳಿದ ಮೇಲೂ ಇನ್ನೇನು ಹೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರು 6 ತಿಂಗಳಿನಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಸದನ ಮುಗಿಯುವುದರೊಳಗೆ ದಿನಾಂಕವನ್ನು ನಿಗದಿ ಮಾಡಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಹೇಳುತ್ತಾರೆ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಎರಡು ಬಾರಿ ಬಳ್ಳಾರಿ ಜಿಲ್ಲೆಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪನವರು ಮತ್ತು ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರು ಇದ್ದರು. ಇವರುಗಳ ಜೊತೆಯಲ್ಲಿ ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಆ ಸಂದರ್ಭದಲ್ಲಿಯೂ ಕೂಡ ಇವರು ಪ್ರಸ್ತಾಪ ಮಾಡಿಲ್ಲ. ಇದರ ಬಗ್ಗೆ ಇವತ್ತು ಪ್ರಸ್ತಾಪ ಮಾಡುತ್ತಿದ್ದಾರೆ. ಇಷ್ಟು ದಿನಗಳಾದರೂ ಏಕೆ ನನ್ನ ಗಮನಕ್ಕೆ ತಂದಿಲ್ಲ?

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಚಿವರೇ, ಇದರ ಬಗ್ಗೆ ತಮ್ಮ ಇಲಾಖೆಯ ಅಧಿಕಾರಿಗಳನ್ನು ಕೇಳಿ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರು ಹಿರಿಯ ಸದಸ್ಯರಾಗಿದ್ದಾರೆ. ನಮ್ಮ ಜೊತೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಇವರೇ ನನ್ನ ಬೆನ್ನು ತಟ್ಟಿ ಕಳುಹಿಸಿದ್ದಾರೆ. ಎಲ್ಲೋ ಒಂದು ಕಡೆ ಆ ಸಂದರ್ಭದಲ್ಲಿ ನನ್ನ ಕಿವಿಗೆ ಈ ಮಾತನ್ನು ಹಾಕಿದ್ದರೆ ಸರಿ ಇರುತ್ತಿತ್ತು. ಈಗ ನಮ್ಮ ಸರ್ಕಾರ ಚುನಾವಣೆ ನಡೆಸುವುದಕ್ಕೆ ಬದ್ಧವಾಗಿದೆ ಎಂದು ಹೇಳುತ್ತಿದ್ದೇನೆ. ಎಲ್ಲಾ ರೀತಿಯಲ್ಲಿಯೂ ಚುನಾವಣೆ ಎದುರಿಸುವುದಕ್ಕೆ ಸಮರ್ಥರಿದ್ದೇವೆ. ಇದನ್ನು ಖಂಡಿತವಾಗಿಯೂ ಮಾಡುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ 5 ತಿಂಗಳಿನಲ್ಲಿ ಬಳ್ಳಾರಿ ಜಿಲ್ಲೆಗೆ ಒಂದು ಬಾರಿಯೂ ಭೇಟಿ ನೀಡಿಲ್ಲ. ಆದರೆ, ನಾನು ತಮ್ಮ ಅಧಿಕಾರಿಗಳನ್ನು ನಾನು ಭೇಟಿಯಾಗಿದ್ದೇನೆ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಕೋವಿಡ್-19 ಇರುವುದರಿಂದ ನಾನು ಅ ಜಿಲ್ಲೆಗೆ ಭೇಟಿ ನೀಡಿಲ್ಲ. ಮುಂದಿನ ವಾರ ಅಥವಾ ಈ ಸದನ ಮುಗಿದ ತಕ್ಷಣವೇ ಭೇಟಿ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಚಿವರು ಆಗಲೇ ಮಾತನಾಡುವಾಗ ಭೇಟಿ ನೀಡಿದ್ದೇವೆ ಎಂದು ಹೇಳಿದರು.

**ಸಭಾಪತಿಯವರು:-** ಮಾನ್ಯ ಕೆ.ಸಿ.ಕೊಂಡಯ್ಯನವರೇ ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಒಂದು time bound ಹೇಳಲಿ.

**ಸಭಾಪತಿಯವರು:-** ಮಾನ್ಯ ಕೆ.ಸಿ.ಕೊಂಡಯ್ಯನವರೇ, ಆಯಿತು. ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾವು ಮಾಡುತ್ತೇವೆ ಎಂದು ಹೇಳಿದ್ದೇವೆ. ಸದನ ಮುಗಿಯುವುದರೊಳಗೆ ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪ ಮತ್ತು ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರನ್ನು ನನ್ನ ಕಛೇರಿಗೆ ಕರೆದು, ಇದರ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, 8 ಮುನಿಸಿಪಾಲಿಟಿ ಬಗ್ಗೆಯೂ ಮಾಡಬೇಕು.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಎಲ್ಲಾ ವಿಷಯಗಳ ಬಗ್ಗೆಯೂ ಹೇಳಿದ್ದೇನೆಯಲ್ಲವೇ?

**ಸಭಾಪತಿಯವರು:-** ಮಾನ್ಯ ಸಚಿವರಾದ ಬಿ.ಎ.ಬಸವರಾಜುರವರೇ ಆಯಿತು. ಕುಳಿತುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

(ಅ) ವಿಷಯ:ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಹಾಗೂ ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಬಡ್ತಿ ಹೊಂದಿದ ಉಪನ್ಯಾಸಕರಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಬಡ್ತಿ ಪಡೆಯದೆ ಇರುವ ಉಪನ್ಯಾಸಕರಿಗೆ 10, 15, 20, 25 ವರ್ಷಗಳ ಕಾಲಮಿತಿ ಬಡ್ತಿ ಮಂಜೂರು ಮಾಡದೇ ಇರುವ ಕುರಿತು.

***

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಕರಾಗಲಿ ಅಥವಾ ಇವತ್ತು ಯಾರೇ ವ್ಯಕ್ತಿಯಾಗಲಿ ಸರ್ಕಾರಿ ನೌಕರಿ ಸಲ್ಲಿಸಬೇಕೆಂದು ಪ್ರಯತ್ನ ಮಾಡುತ್ತಿರುತ್ತಾನೆ. ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ, ಸಮಯಕ್ಕೆ ಸರಿಯಾಗಿ ಸಂಬಳ ಸಿಗುತ್ತದೆ. ಪೆನ್ಷನ್ ಸಿಗುತ್ತದೆ. ಕಾಲಕಾಲಕ್ಕೆ ಪ್ರಮೋಷನ್ ಸಿಗುತ್ತದೆ. ಏಕೆಂದರೆ, ಎಲ್ಲರಿಗೂ ಈ ರೀತಿಯ ಸೌಭಾಗ್ಯ ಇರುವುದಿಲ್ಲ. ವಿಶೇಷವಾಗಿ Private Management ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ನೋಡಿದರೆ, ಅಲ್ಲಿ ಅವರಿಗೆ ಹೆಚ್ಚಿನ ಪ್ರಮಾಣದ ಸ್ಕೇಲ್ ಕೂಡ ಇರುವುದಿಲ್ಲ ಮತ್ತು ಈಗ ಪೆನ್ಷನ್ ಎನ್ನುವುದು ಇಲ್ಲವೇ ಇಲ್ಲ. ಅಲ್ಲಿ ಪ್ರಮೋಷನ್ ಅಂತೂ ಬಹಳ ಕಷ್ಟ ಹಾಗೂ ಸರ್ಕಾರಿ ನೌಕರಿಯ ಬೇರೆ ಬೇರೆ ಹುದ್ದೆಗಳಲ್ಲಿ ನಾವೇನು ಕಾಣುತ್ತೇವೆ ಎಂದರೆ, ಒಬ್ಬ ಎಸ್.ಡಿ.ಎ., ಹುದ್ದೆಗೆ ಸೇರಿ ಅಸಿಸ್ಟೆಂಟ್ ಕಮೀಷನರ್‌ಯಾಗಿರುವ ಉದಾಹರಣೆಗಳು ಇವೆ. ಆದರೆ, ನಾವು ಸರ್ಕಾರಿ ಸೇವೆಯಲ್ಲಿ ನೋಡುತ್ತಿರುವ ಹಾಗೆ ಶಿಕ್ಷಕರಿಗೆ ಆ ಪ್ರಮಾಣದ ಪ್ರಮೋಷನ್‌ಗಳ ಅವಕಾಶ ಇಲ್ಲ. ಇತ್ತೀಚೆಗೆ ಯಾರೋ ಒಬ್ಬರು 1999 ರಲ್ಲಿ ಕೆ.ಇ.ಎಸ್., ಗೆ ಸೇರಿದರು. ಇವರು ಕೆ.ಇ.ಎಸ್.,ಗೆ ಸೇರಿದರೆ ಇವರು ಉನ್ನತ ಮಟ್ಟಕ್ಕೆ ಡೈರಕ್ಟರ್ ಆಗಬಹುದು, ಮತ್ತೊಂದು ಆಗಬಹುದೆನ್ನುವ ಆಸೆಯನ್ನಿಟ್ಟುಕೊಂಡು ಅವರು ಹಾಗೆಯೇ ನಿವೃತ್ತಿ ಹೊಂದಿದ್ದಾರೆ. ಅವರಿಗೆ ಯಾವುದೇ ಪ್ರಮೋಷನ್ ಇಲ್ಲ. ಇಲ್ಲಿ ಬಹಳ ಮುಖ್ಯವಾದದ್ದು ಏನೇಂದರೆ, ಬೇರೆ ಇಲಾಖೆಯಲ್ಲಿ ಪ್ರಮೋಷನ್ ಯಾವಾಗ ಸಿಗುತ್ತದೆ ಎಂದರೆ, based on their seniority, roster ಇತ್ಯಾದಿ ಎಲ್ಲಾ ನೋಡಿ ಕೊಡುತ್ತಾರೆ. ಆದರೆ, ಶಿಕ್ಷಣ ಇಲಾಖೆಯಲ್ಲಿ ನಾವು ನೋಡಿದ ಹಾಗೆ ಎಲ್ಲಿಯವರೆಗೆ higher qualification attain ಮಾಡುವುದಿಲ್ಲ. ಅವನಿಗೆ ಯಾವ ಪ್ರಮೋಷನ್ ಇಲ್ಲ. ಅವನಿಗೆ ಪ್ರಮೋಷನ್ ಸಿಗಬೇಕಾದರೆ higher qualification ಅನ್ನು attain ಮಾಡುತ್ತಾರೆ. ಉದಾಹರಣೆಗೆ ಶಿಕ್ಷಕರು ಪ್ರೈಮರಿ ಶಾಲೆಗೆ ಸೇರುತ್ತಾರೆ. ಆಗ ಎಸ್.ಎಸ್.ಎಲ್.ಸಿ., ಮಾಡಿ ಡಿ.ಎಡ್., ಮಾಡುತ್ತಿದ್ದರು. ಈಗ ಪಿ.ಯು.ಸಿ., ಮಾಡಿ ಡಿ.ಎಡ್., ಮಾಡುತ್ತಾರೆ. ಆದರೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರು ಡಿಗ್ರಿ ಪಡೆಯಬೇಕು. ನಂತರ ಡಿ.ಎಡ್., ಮಾಡಿಕೊಳ್ಳಬೇಕು. ಇದೆಲ್ಲಾ ಮಾಡಿ ಹೈಸ್ಕೂಲ್‌ಗೆ ಬರುತ್ತಾರೆ. ಆದರೆ, ಇಲ್ಲಿ ಪ್ರಮುಖವಾದ ವಿಷಯವೇನೆಂದರೆ time bound promotion (T.B.P.,) ಅಂದರೆ ಕಾಲಮಿತಿಯಲ್ಲಿ ಮುಂಬಡ್ತಿಯನ್ನು ತೆಗೆದುಕೊಳ್ಳಬೇಕು ಎನ್ನುವುದಾಗಿದೆ. ಅದರಲ್ಲಿ ಎಲ್ಲೋ ಒಂದು ಕಡೆ ಅನ್ಯಾಯವಾಗಿದೆ ಎನ್ನುವಂತಹದ್ದು ಕಂಡು ಬರುತ್ತಿದೆ. ಇದರಲ್ಲಿ ಬಹಳ ಸೇವೆ ಸಲ್ಲಿಸಿದ ನಂತರ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಅವರಿಗೆ 1983 ಮುಂಚಿತವಾಗಿಯೇ 10 ರಿಂದ 15 ವರ್ಷ ಮಾನವೀಯತೆಯ ಆಧಾರದ ಮೇಲೆ ಅವರನ್ನು ಏಕೆ ಪರಿಗಣಿಸಬಾರದು ಎಂದು ಒಂದು ಇಂಕ್ರಿಮೆಂಟ್ ಕೊಡುವಂತಹ ಕೆಲಸ ಮಾಡಿದ್ದಾರೆ. 10 ರಿಂದ 15 ವರ್ಷ time bound promotion ಕೊಟ್ಟಿದ್ದಾರೆ. ತದನಂತರ ಇನ್ನು ಬಹಳ ಬೇಡಿಕೆ ಬಂದು 20 ವರ್ಷವಾಯಿತು. ನಮಗೆ ಪ್ರಮೋಷನ್ ಇಲ್ಲ. ನಮಗೆ ಏಕೆ ಇನ್ನೊಂದು ಇಂಕ್ರಿಮೆಂಟ್ ಕೊಡಬಾರದು ಎಂದು ಬೇಡಿಕೆ ಇಟ್ಟಾಗ 2002 ರಲ್ಲಿ 20 ವರ್ಷ ಪೂರೈಸಿದವರಿಗೆ ಆರ್ಥಿಕ ಇಲಾಖೆಯಿಂದ ಎಫ್.ಡಿ/13/ಎಸ್.ಆರ್.ಪಿ/2002, ದಿನಾಂಕ:09-05-2002ಕ್ಕೆ ಅವರಿಗೆ 20 ವರ್ಷಗಳ time bound promotion ಕೊಡುವಂತಹ ಒಂದು ನಿಯಮವನ್ನು ತಂದಿದ್ದಾರೆ. ಇದಲ್ಲದೆ ತದನಂತರ ಇನ್ನೊಂದು ಆದೇಶವಾದ ಎಫ್.ಡಿ/12/ಎಸ್.ಆರ್.ಪಿ/2012, 8 ರ ಪ್ರಕಾರ ದಿನಾಂಕ:16-04-2012ಕ್ಕೆ 25 ವರ್ಷ ಮತ್ತು 30 ವರ್ಷ ಪೂರೈಸಿದವರಿಗೆ ಒಂದು time bound increment ಕೊಡುವಂತಹ ನಿಯಮವನ್ನು ಸರ್ಕಾರ ತರುತ್ತದೆ. ನಿಜವಾಗಿಯೂ ಏನಾಗಿದೆಯೆಂದರೆ, ಇದೊಂದು ಮರಣ ಶಾಸನ. ಇದನ್ನು ಮರಣ ಶಾಸನ ಎಂದು ಏಕೆ ಹೇಳುತ್ತೇವೆ ಎಂದರೆ, ಅವರು ಎಲ್ಲಿಯೋ ಒಂದು ಕಡೆ ಬಡ್ತಿ ತೆಗೆದುಕೊಂಡರೆ ನಾವು ಕೊಡುವುದಿಲ್ಲ.

(ಮುಂದು)

**(724) 6:20 ಎಸ್‌ಪಿಆರ್-ಜಿಆರ್ 15/09/2021**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ.ನಮೋಶಿ(ಮುಂದು):-**

ಬಡ್ತಿ ಪಡೆದ ಶಿಕ್ಷಕರುಗಳು ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ ಬರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಶಿಕ್ಷಣ ಸಚಿವರಿಗೆ ಹೇಳಬಯಸುತ್ತೇನೆ. ಇದು ಕೇವಲ ಒಂದು ಹಂತದಲ್ಲಿ ಮಾತ್ರವಲ್ಲ, ಎಲ್ಲಾ ಕಡೆಗಳಲ್ಲಾಗುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ, ಮುಖ್ಯಶಿಕ್ಷಕರಾಗಿ ಬಡ್ತಿ ಪಡೆದರೆ, ಅವರ ಜೊತೆಗೆ ಸೇವೆಗೆ ಸೇರಿದವರು ಇನ್ನೂ ಹೆಚ್ಚಿನ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಳವನ್ನು ಪಡೆಯುತ್ತಿರುತ್ತಾರೆ. ಅದೇ ರೀತಿ ಪ್ರಾಥಮಿಕ ಶಾಲೆಯಿಂದ ಪದವಿ ಪಡೆದ ಮುಖ್ಯ ಶಿಕ್ಷಕರಾಗುತ್ತಾರೆ; ಅವರಿಗೂ ಸಹ ಇದೇ ರೀತಿಯ ಸಮಸ್ಯೆಯಾಗುತ್ತದೆ. ಇಲ್ಲಿ ಅವರಿಗೆ ಒಂದು ಇಂಕ್ರಿಮೆಂಟ್ ಮಾತ್ರವೇ ದೊರೆಯುತ್ತದೆ. ಆದರೆ ಅವನ ಜೊತೆಗೆ ಸೇವೆಗೆ ಸೇರಿದವರು ಇನ್ನೂ ಹೆಚ್ಚಿನ ಸಂಬಳವನ್ನು ಪಡೆಯುತ್ತಿರುತ್ತಾರೆ. ಆದರೆ ಬಡ್ತಿ ಹೊಂದಿದರೂ ಸಹ ಇವನಿಗೆ ಯಾವುದೇ ಆರ್ಥಿಕ ಸೌಲಭ್ಯಗಳು ದೊರೆಯುವುದಿಲ್ಲ. ಬಹಳ ದೊಡ್ಡ ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗೆ ಸೇರಿದವರು, ಪ್ರೌಢ ಶಾಲೆಗೆ ಬಡ್ತಿಯನ್ನು ಪಡೆಯುತ್ತಾರೆ. ಅವರುಗಳು ಪದವಿ ಮತ್ತು ಬಿ.ಎಡ್., ಪದವಿಗಳನ್ನೂ ಸಹ ಪಡೆಯುತ್ತಾರೆ; ಆದರೆ, ಅವರುಗಳಿಗೆ ಸಂಬಳ ಕಡಿಮೆ ಇರುತ್ತದೆ. ಅದೇ ರೀತಿಯಾಗಿ ಪ್ರೌಢ ಶಾಲೆಯಲ್ಲಿ ಸಹಾಯಕ ಶಿಕ್ಷಕರಾಗಿ ಸೇವೆಗೆ ಸೇರಿದವರು ಬಡ್ತಿ ಪಡೆದು ಮುಖ್ಯ ಶಿಕ್ಷಕರಾಗುತ್ತಾರೆ. ಆಗ ಅವರಿಗೆ ಒಂದು ಇಂಕ್ರಿಮೆಂಟ್ ದೊರೆಯುತ್ತದೆ ಹೊರತು ಅವರಿಗೆ ಹೆಚ್ಚಿನ ವೇತನ ದೊರೆಯುವುದಿಲ್ಲ. ಇವನ ಜೊತೆಗೆ ಸೇವೆಗೆ ಸೇರಿದ ಶಿಕ್ಷಕರಿಗೆ ಇನ್ನೂ ಹೆಚ್ಚಿನ ವೇತನ ದೊರೆಯುತ್ತದೆ. ಈ ವಿಚಾರವಾಗಿ ನಾನು ಎರಡು ಉದಾಹರಣೆಗಳನ್ನು ನೀಡಲಿಚ್ಛಿಸುತ್ತೇನೆ.

ಶ್ರೀ ಜಯದೇವ ಎನ್ನುವ ಶಿಕ್ಷಕರು 1994 ನೇ ಸಾಲಿನ ಸೆಪ್ಟಂಬರ್ ಮಾಹೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸೇವೆಗೆ ಸೇರಿ, ಅಲ್ಲಿಯೇ ತಮ್ಮ ಸೇವೆಯನ್ನು ಮುಂದುವರೆಸುತ್ತಾರೆ. ಅವರು ಪಡೆಯುವ ಮೂಲ ವೇತನದ ಲೆಕ್ಕಾಚಾರವನ್ನು ಮಾತ್ರವೇ ನಾನು ಹೇಳುತ್ತಿದ್ದು, ಇನ್ನುಳಿದ ಸಂಗತಿಗಳನ್ನು ನಾನು ಹೇಳುತ್ತಿಲ್ಲ. ಉದಾಹರಣೆಗೆ ಅವರು ಪಡೆಯುವ ಮೂಲ ವೇತವನ್ನು ಒಟ್ಟು ಲೆಕ್ಕ ಹಾಕಿದಾಗ 30,400/- ರೂಪಾಯಿಗಳಿರುತ್ತವೆ. ಅದೇ ಸಮಯದಲ್ಲಿಯೇ ಅವರೊಂದಿಗೆ ಸೇವೆಗೆ ಸೇರಿದ ಶ್ರೀ ದೇವರಾಜು ಎಂಬುವವರು ಪ್ರಾಥಮಿಕ ಶಾಲೆಯಲ್ಲಿ ಸೇವೆಗೆ ಸೇರುತ್ತಾರೆ. 13 ವರ್ಷಗಳ ನಂತರ 2007 ನೇ ಇಸ್ವಿಯಲ್ಲಿ ಅವರು ಪ್ರೌಢ ಶಾಲೆಗೆ ಬಡ್ತಿ ಪಡೆದ ನಂತರ ಅವರಿಗೆ ನೀಡಲಾಗುತ್ತಿದ್ದ ಕಾಲಿಕ ವೇತನ ಬಡ್ತಿಯನ್ನು ಸ್ಥಗಿತಗೊಳಿಸುತ್ತಾರೆ. ಈ ಕಾರಣಕ್ಕಾಗಿ ಇವತ್ತಿನ ದಿವಸ ಅವರ ಮೂಲ ವೇತನವು 28,100/- ರೂಪಾಯಿಗಳಾಗಿರುತ್ತದೆ. ಪ್ರಾಥಮಿಕ ಶಾಲೆಯಲ್ಲಿಯೇ ಮುಂದುವರೆಯುವ ಶಿಕ್ಷಕನಿಗೆ 30,400/- ಮೂಲ ವೇತನವಾಗಿರುತ್ತದೆ. ಇದು ಬಹಳ ಮುಖ್ಯವಾದ ವಿಷಯವಾಗಿದೆ. ಯಾವುದೇ ಶಿಕ್ಷಕ ಬಡ್ತಿಯನ್ನು ಪಡೆದು ಉನ್ನತ ಸ್ಥಾನಕ್ಕೆ ಹೋದರೆ ಅಂದರೆ, ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗೆ ಹೋದರೆ, ಅವನಿಗೆ ಅದೇ ದೊಡ್ಡ ವಿಷಯವಾಗಿರುತ್ತದೆ. ಒಂದು ಬಡ್ತಿಯನ್ನು ಪಡೆದು ಪ್ರೌಢ ಶಾಲೆಗೆ ಹೋದರೆ, ಅವರಿಗೆ ಬರುವ ಸಂಬಳವು ಕಡಿಮೆಯಾದರೆ, ಇದು ಎಲ್ಲಿಯ ನ್ಯಾಯ? ಎಲ್ಲಿಯೋ ಒಂದು ಈ ಕಡೆ ಈ ವ್ಯವಸ್ಥೆಯು ಸರಿ ಇಲ್ಲ; ಇದರಲ್ಲಿ ತಪ್ಪಾಗಿದೆ ಎಂದು ಹೇಳಲಾಯಿತು. ಇದು 'ಬಿನ್ ಪಗಾರ್ ಫುಲ್ ಅಧಾರಿಟಿ'

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವ ಉದಾಹರಣೆಯಂತಾಗಿದೆ. ಈ ವಿಚಾರದಲ್ಲಿ Promotee High School Teachers' Association ನವರು ಸುಮಾರು ವರ್ಷಗಳ ತಮ್ಮ ಬೇಡಿಕೆಯನ್ನು 6ನೇ ವೇತನ ಆಯೋಗದ ಅಧ್ಯಕ್ಷರಾದ ಶ್ರೀ ಶ್ರೀನಿವಾಸಮೂರ್ತಿರವರಿಗೆ ಸಲ್ಲಿಸಿದರು. ಇವರು ಬಹಳ ವರ್ಷಗಳ ಕಾಲ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳಾಗಿ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಿದ್ದು, ಬಹಳ ದಕ್ಷ ಆಡಳಿತಗಾರರಾಗಿದ್ದರು. ಇದರ ಬಗ್ಗೆ ಏಕೆ ಉಲ್ಲೇಖಿಸಬೇಕೆಂದರೆ, ಸುಮಾರು ವರ್ಷಗಳ ಕಾಲ ಈ ರೀತಿಯ ಸಮಸ್ಯೆ ಎದುರಿಸುವವರ ಸಂಘಟನೆಯನ್ನು ಹುಟ್ಟುಹಾಕಿದ ಶ್ರೀ ಯಲ್ಲಪ್ಪಗೌಡ ಮತ್ತು ಅವರ ಅನೇಕ ಸಂಘಟಕರು ಹೋಗಿ ವೇತನ ಆಯೋಗದ ಅಧ್ಯಕ್ಷರಿಗೆ ಮನವಿಯನ್ನು ಸಲ್ಲಿಸುತ್ತಾರೆ; ಇದಕ್ಕೆ ಮುಂದುವರೆದು ಶಾಸಕರಾದ ನಾವುಗಳೆಲ್ಲರೂ ಸಹ ಮನವಿಯನ್ನು ಸಲ್ಲಿಸಿ, ಈ ಸಮಸ್ಯೆಯನ್ನು ಸರಿಪಡಿಸುವಂತೆ ಬೇಡಿಕೆ ಇಡಲಾಯಿತು. 6 ನೇ ವೇತನ ಆಯೋಗವು ದಿನಾಂಕ 30/04/2018 ರಂದು ಸಲ್ಲಿಸಿರುವ ವರದಿಯ ವಾಲ್ಯೂಂ 2 ಚಾಪ್ಟರ್ 8 ರಲ್ಲಿ ಇದರ ಬಗ್ಗೆ ಉಲ್ಲೇಖಿಸಲಾಗಿದೆ. ಸದರಿ ವರದಿಯ ಮುಖ್ಯಾಂಶವನ್ನು ನಾನು ಹೇಳಲಿಚ್ಛಿಸುತ್ತೇನೆ. It reads:

> "The Commission recommends that this anomaly of promoted employees receiving lower pay than those who are not promoted is to be corrected ...."

ಇದರರ್ಥ ಬಡ್ತಿಯನ್ನು ಪಡೆದುಕೊಂಡ ನಂತರ ಅವನಿಗೆ . . .

**ಸಭಾಪತಿಯವರು:-** ಶಿಕ್ಷಣ ಸಚಿವರೇ, ನಿಮ್ಮ ಇಲಾಖೆಯ ಅಧಿಕಾರಿಗಳು ಯಾರು ಪ್ರಸ್ತುತ ಸದನದಲ್ಲಿದ್ದಾರೆ ಎಂದು ತಿಳಿಸಿ. ಅವರು ಸದನದಲ್ಲಿ ಉಪಸ್ಥಿತರಿರಬೇಕು. ಸದಸ್ಯರು ಹೇಳುತ್ತಾರೆ ನೀವು ಕೇಳುತ್ತೀರಾ? ಇಲಾಖಾಧಿಕಾರಿಗಳು ಇಲ್ಲವೆಂದಾದರೆ ಹೇಗೆ? ಅವರುಗಳು ಏಕೆ ಸದನಕ್ಕೆ ಬಂದಿಲ್ಲ? ಇಲಾಖೆಯ ವಿಷಯ ಪ್ರಸ್ತಾಪವಾದಾಗ, ಇಲಾಖಾಧಿಕಾರಿಗಳು ಸದನದಲ್ಲಿ ಉಪಸ್ಥಿತರಿಲ್ಲವೆಂದಾದರೆ ಹೇಗೆ? ಇಲಾಖೆಯ ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಲಾಖಾಧಿಕಾರಿಗಳು ಸದನದಲ್ಲಿ ಇಲ್ಲದಿರುವ ಸಂಗತಿಯು ಈಗ ನನಗೆ ಗೊತ್ತಾಗಿದ್ದು, ಈ ಕೂಡಲೇ ಅವರುಗಳನ್ನು ಸದನಕ್ಕೆ ಬರಲು ಈಗ ತಿಳಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಇಲಾಖಾಧಿಕಾರಿಗಳಿಲ್ಲದೇ, ಸಚಿವರು ಈಗ ಏನು ಮಾಡಬೇಕು? ಹೀಗಾಗಿ ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕು.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖೆಗೆ ಸಂಬಂಧಿತ ವಿಚಾರಗಳಲ್ಲಿ ಆರ್ಥಿಕ ಇಲಾಖಾಧಿಕಾರಿಗಳು ಉಪಸ್ಥಿತರಿರಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅವರೇ ಕಿರಿಕಿರಿಗಳನ್ನು ಮಾಡಿರುತ್ತಾರೆ. ಹೀಗಾಗಿ ಅವರೂ ಸಹ ಇಲ್ಲಿ ಹಾಜರಿರಬೇಕು.

**ಸಭಾಪತಿಯವರು:-** ಒಟ್ಟಾರೆಯಾಗಿ ಇಲಾಖಾಧಿಕಾರಿಗಳು ಸದನದಲ್ಲಿರಬೇಕು. ಈ ರೀತಿಯಾಗಿ ಇರುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯವು ಬಹಳ ಗಂಭೀರವಾಗಿದ್ದು, ಹಲವಾರು ವರ್ಷಗಳಿಂದ ಬಾಕಿಯಿದೆ. ಹೀಗಾಗಿ ಆರ್ಥಿಕ ಇಲಾಖೆಯ ಅಧಿಕಾರಿಗಳಿರಲೇಬೇಕು.

**ಸಭಾಪತಿಯವರು:-** ಸಂಕನೂರ್‌ರವರೇ, ಇಲಾಖಾಧಿಕಾರಿಗಳ ಗೈರುಹಾಜರಿಯ ಬಗ್ಗೆ ಸದಸ್ಯರುಗಳಾದ ನೀವುಗಳೆಲ್ಲರೂ ಸುಮ್ಮನೆ ಕುಳಿತಿದ್ದೀರಿ; ಆದರೆ, ನಾನು ಈ ಬಗ್ಗೆ ಪ್ರಸ್ತಾಪಿಸಿದೆನು. ಆದರೆ ಈಗ ನೀವು ಈ ವಿಚಾರದ ಬಗ್ಗೆ ಪ್ರಸ್ತಾಪಿಸುತ್ತಿದ್ದೀರಿ. ಶಿಕ್ಷಣ ಸಚಿವರೇ, ನಿಮ್ಮ ಇಲಾಖಾಧಿಕಾರಿಗಳು ಸದನದಲ್ಲಿ ಉಪಸ್ಥಿತರಿರಬೇಕು. ಸದಸ್ಯರು ಈಗ ಏನಾದರೂ ವಿವರಗಳನ್ನು ಕೇಳಿದರೆ, ನೀವೇನು ಮಾಡುತ್ತೀರಿ? ನೀವು ಎಲ್ಲಾ ವಿಷಯಗಳನ್ನು ನೋಡಿಕೊಂಡು ಸದನಕ್ಕೆ ಬಂದಿದ್ದೀರಾ? ಇಂತಹ ಇಲಾಖಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಸಹ ಕ್ರಮ ತೆಗೆದುಕೊಳ್ಳಲಾಗುವುದು.

**ಸಭಾಪತಿಯವರು:-** ಈ ವಿಷಯವನ್ನು ನಾಳೆಯ ದಿನ ಚರ್ಚೆಗೆ ತೆಗೆದುಕೊಳ್ಳೋಣ. ಸದಸ್ಯರು ಏನಾದರೂ ಪ್ರಶ್ನೆಗಳನ್ನು ಕೇಳಿದರೆ, ಅವರಿಗೆ ಉತ್ತರಿಸಲು ಮಾಹಿತಿಯು ಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾಳೆಯ ದಿನವಾದರೂ ಶಿಕ್ಷಣ ಮತ್ತು ಆರ್ಥಿಕ ಇಲಾಖಾಧಿಕಾರಿಗಳು ಸದನದಲ್ಲಿ ಹಾಜರಿರಲಿ.

**(ಗೊಂದಲ)**

**ಸಭಾಪತಿಯವರು:-** ಯಾರಾದರೂ ಒಬ್ಬರು ಮಾತನಾಡಿ. ಸಚಿವರಿಗೆ ತೊಂದರೆಯಾಗಬಾರದೆಂದು ನಾನು ಇದನ್ನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶಿಕ್ಷಣ ಇಲಾಖಾಧಿಕಾರಿಗಳು ಬಹಳ ಬೇಜವಾಬ್ದಾರರಾಗಿದ್ದಾರೆ. Hon'ble Minister needs their assistance.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾಳೆಯ ದಿನ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಶಿಕ್ಷಣ ಮತ್ತು ಆರ್ಥಿಕ ಇಲಾಖಾಧಿಕಾರಿಗಳು ಸದನದಲ್ಲಿ ಹಾಜರಿರಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಈಗ ಏನು ಮಾಡೋಣವೆಂದು ಸಚಿವರು ಹೇಳಲಿ. ಸದಸ್ಯರು ಕೇಳುವ ಪ್ರಶ್ನೆಗೆ ಉತ್ತರಿಸಲು ನಿಮಗೆ ಯಾವುದೇ ತೊಂದರೆ ಇಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಸರಿಯಾದ ಕ್ರಮವಲ್ಲ.

**ಶ್ರೀ ಬಿ.ಸಿ.ನಾಗೇಶ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು):-** ಮಾನ್ಯ ಸಭಾಪತಿಯವರೇ, ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಹೇಳುವ ಕೆಲಸಗಳನ್ನು ಮಾಡೋಣ. ಎಲ್ಲಾ ಸದಸ್ಯರ observation ಸರಿಯಿದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ, ಮೂರು ಇಲಾಖೆಗಳು ಈ ವಿಷಯವನ್ನು ವಿಶೇಷವಾಗಿ ಗಮನಿಸಲಿ.

**ಸಭಾಪತಿಯವರು:-** ನೋಡಿ, it depends upon you only.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ರಾತ್ರಿ 7-9 ಗಂಟೆಯವರೆಗೆ ಇವರುಗಳಿಗೆ ಕೆಲಸವಿಲ್ಲದೆ ಸದನ ನಡೆಸುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಇಲಾಖಾಧಿಕಾರಿಗಳು ಬಂದಿದ್ದಾರೆ ಎಂದು ನನಗನ್ನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನನಗೂ ಸಹ ಹೌದು ಎನ್ನಿಸುತ್ತಿದೆ. ನಾನೂ ಸಹ ಇದನ್ನೇ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಷ್ಟೊಂದು ಬೇಜವಾಬ್ದಾರಿ ಅಧಿಕಾರಿಗಳನ್ನು ನಾನು ನೋಡಿಲ್ಲ.

**ಸಭಾಪತಿಯವರು:-** ಅವರುಗಳಿಗೆ ಹೇಳುವವರು-ಕೇಳುವವರು ಯಾರೂ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾಳೆಯ ದಿನ ಈ ವಿಚಾರವನ್ನು ತೆಗೆದುಕೊಳ್ಳೋಣ. ಇದರಿಂದಾಗಿ ಅಧಿಕಾರಿಗಳಿಗೆ ಸಂದೇಶ ಹೋಗಲಿ.

**ಸಭಾಪತಿಯವರು:-** ಯಾರದೋ ತಪ್ಪಿಗೆ ಸದನದ ಕಾರ್ಯಕಲಾಪಗಳು ಕುಂಠಿತಗೊಳ್ಳುತ್ತವೆ.

**Sri S.R.PATIL:-** Mr.Chairman Sir, Hon'ble Minister may be capable and he may answer. ಆದರೆ ಇಲಾಖಾಧಿಕಾರಿಗಳು ಹಾಜರಿಲ್ಲದಿರುವುದು ಅಕ್ಷಮ್ಯ ಅಪರಾಧವಾಗಿದೆ.

**ಸಭಾಪತಿಯವರು:-** ಇದನ್ನೇ ನಾನು ಹೇಳುತ್ತಿರುವುದು.

**ಶ್ರೀ ಬಿ.ಸಿ.ನಾಗೇಶ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಸಹ ತಾವು ಗಮನಿಸಿರುವ ಅಂಶವು ಸರಿಯಾಗಿದ್ದು, ಇದನ್ನು ನಾಳೆಯ ದಿನ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮುಂದಿನ ವಿಷಯಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳು ಮತ್ತು ಇಲಾಖಾಧಿಕಾರಿಗಳು ಸದನದಲ್ಲಿದ್ದಾರೆಯೇ?

**ಸಭಾಪತಿಯವರು:-** ಈ ವಿಷಯಕ್ಕೆ ಸಂಬಂಧಿತ ಮಂತ್ರಿಗಳು ಸದನದಲ್ಲಿ ಈಗ ಉಪಸ್ಥಿತರಿಲ್ಲ. ಯಾವುದೇ ಮಂತ್ರಿಗಳು ಇನ್ನೊಬ್ಬರಿಗೆ ವಹಿಸಿಕೊಟ್ಟಾಗ ನಾವು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಲಾಖಾಧಿಕಾರಿಗಳು ಸದನದಲ್ಲಿದ್ದಾರೆಯೇ ಎನ್ನುವುದು ಸಚಿವರಿಗೆ ತಿಳಿದಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನಕ್ಕೆ ಬರಬೇಕಾಗಿತ್ತು; ಅವರು ಈ ದಿನ ಪೂರ್ವಾಹ್ನ ಸದನದಲ್ಲಿ ಉಪಸ್ಥಿತರಿದ್ದರು. ಆದರೆ ಈಗ ನಾನು ಅವರ ಪರವಾಗಿ ಉತ್ತರಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಷಯವಾಗಿದ್ದು, ಸದಸ್ಯರು ಮಹತ್ವದ ಪ್ರಶ್ನೆಯನ್ನು ಕೇಳಿದ್ದಾರೆ. ಇದರಲ್ಲಿ ಎಲ್ಲಾ ಚುನಾಯಿತ ಪ್ರತಿನಿಧಿಗಳ ವೇತನ, ಭತ್ಯೆ ಮತ್ತು ಪಿಂಚಣಿ ಇತ್ಯಾದಿ ವಿಷಯಗಳನ್ನೊಳಗೊಂಡಿವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸರ್ಕಾರದಿಂದ ನಾನು ಉತ್ತರಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, Hon'ble Leader of House has got the capacity to answer. ಸಭಾನಾಯಕರು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಗೊಂಡವರಾಗಿದ್ದು, ಅವರ ಬಗ್ಗೆ ನಮಗೆ ಗೌರವವಿದೆ. ಆದರೆ ವಿಷಯಕ್ಕೆ ಸಂಬಂಧಿತ ಮಂತ್ರಿಗಳು ಸದನದಲ್ಲಿ ಉಪಸ್ಥಿತರಿರಬೇಕು.

**ಸಭಾಪತಿಯವರು:-** ಇಲಾಖಾಧಿಕಾರಿಗಳು ಈಗ ಸದನಕ್ಕೆ ಹಾಜರಾಗಿರುವುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್‌ರವರೇ ಮುಂದುವರೆಸಿ.

**ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಇಲಾಖೆಯ ಮಂತ್ರಿಗಳು ಬಂದ ಮೇಲೆ ತೆಗೆದುಕೊಳ್ಳೋಣ. ಈ ವಿಷಯದ ಬಗ್ಗೆ ಬೇರೆಯವರು ಉತ್ತರಿಸಿದರೆ, ಸರಿಹೋಗುವುದಿಲ್ಲ.

**ಸಭಾಪತಿಯವರೇ:-** ಇದಕ್ಕೆ ಸಭಾನಾಯಕರು ಉತ್ತರಿಸುವುದರಿಂದ, ನೀವು ಪ್ರಾರಂಭಿಸಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಆ) ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳ ಗೌರವಧನವು ಅತ್ಯಂತ ಕಡಿಮೆ ಇರುವುದರಿಂದ ಸದರಿಯವರುಗಳ ಗೌರವಧನವನ್ನು ಪರಿಷ್ಕರಿಸಿ ನಿಗದಿಪಡಿಸುವುದರ ಜೊತೆಗೆ ಉಚಿತ ಬಸ್‌ಪಾಸ್ ಹಾಗೂ ಪಿಂಚಣಿ ಸೌಲಭ್ಯವನ್ನು ನೀಡುವುದರ ಕುರಿತು.**

**ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಅಹವಾಲುಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ – 330 ರಡಿ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಸ್ಥಳೀಯ ಸ್ವಯಂ ಆಡಳಿತವನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ. ಪಂಚಾಯತಿಗಳಲ್ಲಿ ಚುನಾಯಿತರಾಗಿ ಬರುವ ಪ್ರತಿನಿಧಿಗಳು ಗ್ರಾಮದ ಅಭಿವೃದ್ಧಿಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ರಾಜ್ಯದ ಪಂಚಾಯತ್‌ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಲ್ಲಿ ಚುನಾಯಿತರಾಗಿ ಬರುವ ಎಲ್ಲಾ ಸದಸ್ಯರು ಶ್ರೀಮಂತರಾಗಿರುವುದಿಲ್ಲ; ಬಹಳಷ್ಟು ಜನರು ಬಡವರಾಗಿದ್ದಾರೆ. ಇವರುಗಳಿಗೆ ಪ್ರಸ್ತುತ ನೀಡುತ್ತಿರುವ ಗೌರವ ಧನ ಬೆಲೆ ಏರಿಕೆಯಂತಹ ಪರಿಸ್ಥಿತಿಯಲ್ಲಿ ಅತ್ಯಂತ ಕಡಿಮೆಯಾಗಿದೆ.

**(ಮುಂದು)**

(725)15-09-2021(06-35)cs(bsd)-md

**ಶ್ರೀ ಸುನಿಲ್ ಗೌಡ ಬಿ. ಪಾಟೀಲ್ (ಮುಂದು)**

ದಿನಾಂಕ ೧೯-೦೩-೨೦೨೧ ರಂದು ಈ ಪ್ರಶ್ನೆಯನ್ನು ಕೇಳಿದ್ದು, ಈಗ ಸುಮಾರು ರೂ. ೧ ಸಾವಿರ ಗೌರವ ಧನ ಇದೆ. ಈಗಿನ ದಿನಮಾನಗಳಲ್ಲಿ ಒಂದು ಸಾವಿರ ರೂಪಾಯಿಗಳು mobile currency ಗೆ ಆಗುವುದಿಲ್ಲ. For example, ಮಹಲಿಂಗಪುರದಿಂದ ಬಾಗಲಕೋಟೆಗೆ ಬರಲು petrol ಬೆಲೆ ಒಂದು litre ಗೆ ನೂರು ರೂಪಾಯಿಗಳು ಇದೆ. ಬಂದು ಹೋದರೆ ಎರಡು litre petrol ಬೇಕಾಗುತ್ತದೆ. ಅಲ್ಲಿ ಅವರು ಊಟ ಮಾಡಿದರೆ ಒಂದು ದಿನದಲ್ಲಿ ಅವರ ಪಗಾರ ಒಂದು ಸಾವಿರ ಮುಗಿದುಹೋಗುತ್ತದೆ. ಇವತ್ತು ಖಾನಾವಳಿಯಲ್ಲಿ ಊಟ ಮಾಡಿದರೂ ಇನ್ನೂರು-ಮುನ್ನೂರು ರೂಪಾಯಿಗಳಾಗುತ್ತದೆ, ತಿಂಡಿ ತಿಂದರೆ ಮಾಡಿದರೆ ಎರಡು ನೂರು ರೂಪಾಯಿಗಳಾಗುತ್ತದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ರೂ. ೫ ಸಾವಿರ, ಉಪಾಧ್ಯಕ್ಷರಿಗೆ ರೂ.೪ ಸಾವಿರ ಮತ್ತು ಸದಸ್ಯರಿಗೆ ರೂ.೩ ಸಾವಿರಗಳಿಗೆ ಗೌರವ ಧನ ಹೆಚ್ಚಿಸಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವನ್ನು ಒತ್ತಾಯಿಸುತ್ತೇನೆ. ಅವರುಗಳಲ್ಲಿ ಸಾಕಷ್ಟು ಬಡವರು ಇದ್ದು, ಬಿಜಾಪುರ ಅಥವಾ ಬಾಗಲ ಕೋಟೆಗೆ ಅವರ ತಾಲ್ಲೂಕುಗಳಿಂದ ಬರಲು ವಾಹನದ ಮೇಲೆ ಬಂದರೆ ಸುಮಾರು ನೂರು-ಇನ್ನೂರು ರೂಪಾಯಿಗಳು petrol ಗೆ ಖರ್ಚಾಗುತ್ತದೆ. ಅವರಿಗೆ ಉಚಿತ bus pass ಕೊಟ್ಟರೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಅವರು ನಮ್ಮ ರೀತಿ ಅಂದರೆ ಶಾಸಕರು ಇರಬಹುದು, ಸಂಸದರು ಇರಬಹುದು, ಆ ರೀತಿ ಚುನಾಯಿತ ಪ್ರತಿನಿಧಿಗಳಾಗಿರುವ ಅವರಿಗೂ ಕನಿಷ್ಠ ಮಾಸಿಕ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ವಿನಂತಿಸುತ್ತೇನೆ. ಈ ಪ್ರಶ್ನೆಯನ್ನು ಮಾರ್ಚ್‌ನಲ್ಲಿಯೂ ಕೇಳಿದ್ದು ಸಮರ್ಪಕವಾದ ಉತ್ತರ ಸಿಕ್ಕಿರಲಿಲ್ಲ. ಇವತ್ತು ಮಾನ್ಯ ಸಚಿವರು ಇಲ್ಲ, ಹಾಗಾಗಿ ಬರೀ ಉತ್ತರ ಕೊಡುವುದು ಬೇಡ, ಇದನ್ನು ಯಾವಾಗ implement ಆಗುತ್ತದೆ ಎಂಬ ಮಾಹಿತಿಯನ್ನು ಸರ್ಕಾರ ಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರುಃ-** ಒಂದು ಬಾರಿ ಮಾನ್ಯ ಸಭಾನಾಯಕರು ಈ ಪ್ರಶ್ನೆಯನ್ನು ಕೇಳಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ ಮಾನ್ಯ ಸುನೀಲ್ ಗೌಡರನ್ನು ಅಭಿನಂದಿಸುತ್ತೇನೆ, ಏಕೆಂದರೆ ಸದನದಲ್ಲಿ ಮೂರನೆಯ ಒಂದಂಶ ಅಂದರೆ ೨೫ ಜನ ಸದಸ್ಯರು ಸ್ಥಳೀಯ ಸಂಸ್ಥೆಗಳಿಂದ ಬಂದಿದ್ದೇವೆ. ಅಪರೂಪಕ್ಕೆ ವರ್ಷಕ್ಕೆ ಇಂತಹ ಒಂದು ಪ್ರಶ್ನೆ ಬರುವುದು ಬಿಟ್ಟರೆ ಬೇರೆ ಎಲ್ಲವೂ ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಶ್ರೀಕಂಠೇಗೌಡರು ಹಾಗೂ ಮಾನ್ಯ ನಮೋಶಿಯವರ ಪ್ರಶ್ನೆಗಳ ಆರ್ಭಟದಲ್ಲಿ ಈ ಸದನ ಇರುವುದನ್ನು ಗಮನಿಸುತ್ತೇವೆ, ಅದು ಸರಿಯಿದೆ, ತಪ್ಪೇನೂ ಇಲ್ಲ. ಮೂರನೆಯ ಒಂದಂಶ ಇರುವ ಸದಸ್ಯರು ಅತ್ಯಂತ ಕಡಿಮೆ ಸಮಯವನ್ನು ಸ್ಥಳೀಯ ಸಂಸ್ಥೆಗಳಿಂದ ಬಂದವರು ಎನ್ನುವ ಕಾರಣಕ್ಕೆ ಮಾನ್ಯ ಸದಸ್ಯರು ಬಹಳ ಮಹತ್ವದ ಪ್ರಶ್ನೆ ಕೇಳಿದ್ದಾರೆ. ನಾನು ಅವರಿಗೆ ಅಭಿನಂದಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿರುವ ೬,೦೨0 ಗ್ರಾಮ ಪಂಚಾಯಿತಿಗಳ ಪೈಕಿ ೯೦ ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಇದರಲ್ಲಿ ಶೇ.೫೦ ರಷ್ಟು ಅಂದರೆ ೪೫ ಸಾವಿರಕ್ಕೂ ಹೆಚ್ಚು ಮಹಿಳೆಯರು ಇರುತ್ತಾರೆ. ೨೨ ರಿಂದ ೨೩ ಸಾವಿರ ಜನ ಪರಿಶಿಷ್ಟ ಜಾತಿ/ಪಂಗಡದವರಿದ್ದಾರೆ. ಸಮಾಜಕ ಅತ್ಯಂತ ಕಡು ಬಡವರ ಮಧ್ಯೆ ಈ ದೇಶದಲ್ಲಿ ಯಾರಾದರೂ ಕೆಲಸ ಮಾಡುವವರು ಇದ್ದಾರೆ ಎಂದರೆ ಅವರು ಗ್ರಾಮ ಪಂಚಾಯಿತಿ ಸದಸ್ಯರು ಎನ್ನುವುದನ್ನು ನಾವೆಲ್ಲರೂ ಒಪ್ಪಿರುವ ವಿಚಾರ. ಅವರಿಗೆ ಕೊಡುವ ಗೌರವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧನವನ್ನು ಪರಿಷ್ಕರಣೆ ಮಾಡಬೇಕು, ಉಚಿತ bus pass ಕೊಡಬೇಕು, ಪಿಂಚಣಿ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಹಾಗೂ ಸದನದ ಪ್ರಸ್ತಾಪವೂ ಆಗಿದೆ. ಬೇರೆ ಬೇರೆ ಕಾರಣಕ್ಕೆ ೨೦೧೦-೧೧ ರಲ್ಲಿ ರೂ.೨೫೦ ಇರುವುದನ್ನು ರೂ.೫೦೦ ಹಾಗೂ ರೂ.೧೦೦೦ ಗಳಿಗೆ ಹೆಚ್ಚಿಸಲಾಗಿತ್ತು. ಅದೇ ಸಂದರ್ಭದಲ್ಲಿ ಉಪಾಧ್ಯಕ್ಷರಿಗೆ ರೂ.೩೦೦, ಅಧ್ಯಕ್ಷರಿಗೆ ರೂ೫೦೦ ಗೌರವಧನ ಇರುವುದನ್ನು ೨೦೧೮-೧೯ ರಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ರೂ.೧೦೦೦, ಉಪಾಧ್ಯಕ್ಷರಿಗೆ ರೂ.೨೦೦೦ ಮತ್ತು ಅಧ್ಯಕ್ಷರಿಗೆ ರೂ.೩೦೦೦ ಗೌರವಧನ ಕೊಡಲಾಗಿದೆ. ಈಗ ಸದಸ್ಯರಿಗೆ ರೂ.೩೦೦೦ ಮಾಡಬೇಕೆಂಬ ಪ್ರಶ್ನೆ ಇದೆ. ಒಂದೆರಡು ವರ್ಷಗಳಿಂದ ಆರ್ಥಿಕ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಕನಿಷ್ಠ ದುಪ್ಪಟ್ಟು ಅಂದರೆ ರೂ.೨೦೦೦ ಕ್ಕೆ ಮಾಡಬೇಕು ಎಂದು ಇದೆ. ಗ್ರಾಮ ಪಂಚಾಯುತಿ ಸದಸ್ಯರ ಗೌರವ ಧನವನ್ನು ರೂ.೨೦೦೦ ಮಾಡಿದಾಗ ಸಹಜವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಗೌರವ ಧನವೂ ದುಪ್ಪಟ್ಟಾಗುತ್ತದೆ. ಆ ಪ್ರಸ್ತಾಪ ಇವತ್ತು ಪರಿಶೀಲನಾ ಹಂತದಲ್ಲಿದ್ದು, ಆರ್ಥಿಕ ಇಲಾಖೆಯವರ ಜೊತೆ ಮಾತನಾಡಿ, ಆದಷ್ಟು ಬೇಗ ಇದನ್ನು ತೀರ್ಮಾನ ಮಾಡಬೇಕು. ಸಮಾಜದ ಕೊನೆಯ ಮನುಷ್ಯನ ಮಧ್ಯೆ ಬಡಿದಾಡಿ ಬದುಕುತ್ತಿರುವ ಗ್ರಾಮ ಪಂಚಾಯಿತಿ ಸದಸ್ಯರ ಗೌರವ ಧನ ಹೆಚ್ಚಿಸಬೇಕು ಎನ್ನುವ ವಿಚಾರದಲ್ಲಿ ನಮ್ಮ ಸರ್ಕಾರ ಶ್ರಮ ವಹಿಸಿ ದುಡಿಯುತ್ತದೆ, ಅದರಲ್ಲೇನೂ ಆತಂಕ ಬೇಡ. ಆದಷ್ಟು ಬೇಗ ತೀರ್ಮಾನಿಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆರ್ಥಿಕ ಇಲಾಖೆಯವರ ಜೊತೆ ಮಾತನಾಡುತ್ತಿದ್ದೇವೆ.

ಇನ್ನು ಎರಡನೆಯದಾಗಿ bus pass ಗಳನ್ನು ಕೊಡಬೇಕೆಂದು ಇದ್ದು, ಗ್ರಾಮ ಪಂಚಾಯಿತಿ ನಿಯಮಗಳ ಪ್ರಕಾರ ನಿರ್ದಿಷ್ಟ ಕಾರಣಗಳಿಗೋಸ್ಕರ ಹೊರಗೆ ಹೋದಾಗ ಪ್ರಯಾಣ ಭತ್ಯೆ ಪಡೆಯಲು ಅವರಿಗೆ ಅವಕಾಶ ಇದೆ. ಮಾನ್ಯ ಸದಸ್ಯರು bus pass ಕೊಡುವ ಬಗ್ಗೆ ಕೇಳುತ್ತಿದ್ದು, ಅದೂ ಕೂಡ ಒಂದು ಸಾರಿ ಪ್ರಸ್ತಾಪವಾಗಿತ್ತು. ಇದರ ಬಗ್ಗೆ KSRTC ಜೊತೆ ಒಂದೆರಡು ಮೂರು ಬಾರಿ ಮಾತನಾಡಿದ್ದು, ಈ ಬಗ್ಗೆ ಇನ್ನೊಮ್ಮೆ ಮಾತನಾಡುತ್ತೇವೆ. ಗ್ರಾಮ ಪಂಚಾಯಿತಿ ಸದಸ್ಯರಿಗೆ ಇಡೀ ರಾಜ್ಯ ಓಡಾಡಿದಾಗ ಕೊಡುವುದು ಕಷ್ಟ, ಏಕೆಂದರೆ ಅವರೇ ೯೦೦೦೦ ಜನ ಇರುತ್ತಾರೆ. ತಾಲ್ಲೂಕಿಗೆ ಅಥವಾ ಜಿಲ್ಲೆಗೆ ಸೀಮಿತಗೊಳಿಸಿ KSRTC ಜೊತೆ ಮಾತನಾಡುತ್ತೇವೆ. ಏಕೆಂದರೆ ಅವರು ತಾಲ್ಲೂಕು ಮತ್ತು ಜಿಲ್ಲಾ office ಗಳಿಗೆ ಹೋಗುತ್ತಾರೆ. ಆ ಕಾರಣಕ್ಕೆ ಕೊಡಬಹುದೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಇನ್ನು ಮಾಸಿಕ ಪಿಂಚಣಿ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದು, ಶಾಸಕರಿಗೆ, MP ಗಳಿಗೆ ಪಿಂಚಣಿ ಸಿಗುತ್ತಿರುವ ರೀತಿ ಗ್ರಾಮ ಪಂಚಾಯಿತಿ ಸದಸ್ಯರಿಗೂ ಕೊಡಬೇಕೆಂದು ಕೇಳುತ್ತಿದ್ದು, ಇದು ಬಹಳ ಕಠಿಣ ಪರಿಸ್ಥಿತಿಯಲ್ಲಿ ಇದೆ. ಒಂದಂತೂ ಸತ್ಯವಾಗಿದ್ದು, ಅವರ ಗೌರವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧನವನ್ನು ಹೆಚ್ಚು ಮಾಡಲು ಮತ್ತು ಉಚಿತ bus pass ಕೊಡಲು ಸರ್ಕಾರ ಶ್ರಮ ಹಾಕಿ ಕೆಲಸ ಮಾಡಿ, ಅವರಿಗೆ ಬೇಕಾದ ಅವಕಾಶಗಳನ್ನು ಮಾಡಿಕೊಡಲು ಪ್ರಯತ್ನ ಮಾಡುತ್ತೇನೆ. ಇದೆಲ್ಲವೂ ಪರಿಶೀಲನೆ ಹಂತದಲ್ಲಿದೆ. ಪಿಂಚಣಿ ಕೊಡುವುದು ಈಗ ಲಭ್ಯವಾದ ವಿಚಾರವಲ್ಲ ಎಂಬುದನ್ನು ಅವರ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರು ಅತ್ಯಂತ ಪರಿಣಾಮಕಾರಿಯಾಗಿ ಪ್ರಶ್ನೆಯನ್ನು ಕೇಳಿದ್ದು, ಸಮಾಜನ ನಡುವೆ ಬದುಕಿ ಬಾಳುವಂತಹ ಮತ್ತು ಸಮಾಜದ ಕೊನೆಯ ಮನುಷ್ಯನ ಜೊತೆ ಸಂಬಂಧ ಇಟ್ಟುಕೊಂಡಿರುವ ಹಾಗೂ ಬಡವರಿಗೆ ಕುಡಿಯುವ ನೀರು, ration card ಇತ್ಯಾದಿ ಸಮಸ್ಯೆಗಳಿಗೆ ಸ್ಪಂದಿಸುವಂತಹ ಗ್ರಾಮ ಪಂಚಾಯಿತಿ ಸದಸ್ಯರಿಗೆ ಗೌರವ ಧನ ಹೆಚ್ಚು ಮಾಡಲು ಸರ್ಕಾರ ಕ್ರಮ ವಹಿಸುತ್ತದೆ.

**ಶ್ರೀ ಆರ್. ಧರ್ಮಸೇನಾಃ-** ಖಾಲಿ bus ಗಳು ಓಡಾಡುವ ಬದಲು ಗ್ರಾಮ ಪಂಚಾಯಿತಿ member ಗಳನ್ನು ಕರೆದುಕೊಂಡು ಓಡಾಡಬಹುದು.

**ಶ್ರೀ ಮರಿತಿಬ್ಬೇಗೌಡಃ-** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರು ಸದನದಲ್ಲಿ ಇದ್ದರೆ ಬಹಳ ಚೆನ್ನಾಗಿರುತ್ತಿತ್ತು. ಮಾನ್ಯ ಸಚಿವರ ಉತ್ತರವನ್ನು ನಾವು ಸ್ವಾಗತ ಮಾಡುತ್ತೇವೆ. ಅವರು ಆ ಕ್ಷೇತ್ರದಿಂದ ಬಂದಿದ್ದು, ಅವರಿಗೆ ಕಾಳಜಿ ಇದೆ. ಆದರೆ ಹೊಸದಾಗಿ ರಚನೆಯಾದ ಗ್ರಾಮ ಪಂಚಾಯಿತಿ ಸದಸ್ಯರಿಗೆ ಈಗ ಕೊಡುತ್ತಿರುವ ಗೌರವ ಧನ ೬ ತಿಂಗಳಿಂದ ಬಾಕಿ ಇದೆ. ಅದನ್ನು ಮೊದಲು ತಲುಪಿಸಲು ವ್ಯವಸ್ಥೆ ಮಾಡಿ, ಪರಿಷ್ಕರಣೆ ಆಮೇಲೆ ಇರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಮೊದಲು ಗ್ರಾಮ ಪಂಚಾಯಿತಿ ಸದಸ್ಯರಿಗೆ ಸರ್ಕಾರದಲ್ಲಿ ೬ ತಿಂಗಳಿಗೆ ಒಂದು ಸಾರಿ ಹಣ ಬಿಡುಗಡೆ ಆದ ನಂತರ ಕೊಡುವ ಪರಿಪಾಟ ಇತ್ತು. ಈಗ ಸುತ್ತೋಲೆ ಕೊಟ್ಟು, ಆ ಗ್ರಾಮ ಪಂಚಾಯಿತಿಯಲ್ಲಿರುವ ಅನುದಾನವನ್ನು ಬಳಸಿಕೊಂಡು ಪ್ರತಿ ತಿಂಗಳು ಅವರ ಖಾತೆಗೆ ಜಮಾ ಮಾಡಬೇಕೆಂದು ಹೇಳಿದ್ದೇವೆ. ಸರ್ಕಾರ ಆ ಹಣ ಕೊಟ್ಟಾಗ ಮರುಹೊಂದಾಣಿಕೆ ಮಾಡಬೇಕೆಂದು ಹೇಳಿದ್ದೇವೆ. ಯಾವುದಾದರೂ ನಿರ್ದಿಷ್ಟ ಪ್ರಕರಣದಲ್ಲಿ ಕೊಡದಿದ್ದಾಗ ಅಥವಾ ಅದನ್ನು ಗಮನಿಸಿ ಇಲಾಖೆಯಿಂದ ಹೊಸ ಆದೇಶ ಕೊಡುತ್ತೇವೆ. ಪ್ರತಿ ತಿಂಗಳು ಅವರ ಗೌರವ ಧನ ಕೊಡುವ ಆದೇಶವನ್ನು ಹೊರಡಿಸುತ್ತೇವೆ.

**ಶ್ರೀ ಮರಿತಿಬ್ಬೇಗೌಡಃ-** ಮಾನ್ಯ ಸಭಾಪತಿಯವರೇ, ಹೊಸದಾಗಿ ಆದೇಶ ಮಾಡಿದ್ದಾರೆ, ಆದರೆ ಇನ್ನೂ ಎಲ್ಲಿಯೂ ಜಾರಿಗೆ ಬಂದಿಲ್ಲ. ಈಗಲೂ ಗ್ರಾಮ ಪಂಚಾಯಿತಿಯಿಂದ ಹೇಳುವುದೇನೆಂದರೆ, ಸರ್ಕಾರದಿಂದ ಹಣ ಬಂದಿಲ್ಲ, ಆದ್ದರಿಂದ ಕೊಡುವುದಿಲ್ಲ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದಾರೆ. ಬಂದ ಕೂಡಲೇ ಕೊಡುವ ಬಗ್ಗೆ ಹೇಳುತ್ತಿದ್ದಾರೆ. ಇದುವರೆಗೂ ಆದೇಶ ಜಾರಿಯಾಗಿಲ್ಲ. ಹೊಸದಾಗಿ ಆಯ್ಕೆಯಾಗಿರುವವರಿಗೆ ಗೌರವ ಧನ ತಲುಪಿಲ್ಲ, ದಯಮಾಡಿ ಅದನ್ನು ಕೊಡಿಸಬೇಕು, ಪಂಚಾಯಿತಿ ಅಥವಾ ಸರ್ಕಾರದಿಂದ ಕೊಡಿಸುತ್ತಾರೋ, ಆದಷ್ಟು ಬೇಗ ಕೊಡಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಹೊಸದಾಗಿ ಚುನಾವಣೆಯಲ್ಲಿ ಆಯ್ಕೆಯಾಗಿರುವ ಗ್ರಾಮ ಪಂಚಾಯಿತಿ ಸದಸ್ಯರನ್ನು ಗಮನದಲ್ಲಿಟ್ಟುಕೊಂಡು ಮೊದಲನೆಯ ಕಂತು ಅಂದರೆ ೬ ತಿಂಗಳಿಗೆ ಒಂದು ಸಾರಿ ಹಣ ಬಿಡುಗಡೆಯಾಗುವ ಬಗ್ಗೆ ಹೇಳಿದೆ. ಮೊದಲನೆಯ ಕಂತು ರಾಜ್ಯ ಸರ್ಕಾರದಿಂದ ರೂ.೩೪ ಕೋಟಿಗಳು ಹಣಕಾಸಿನ ಇಲಾಖೆಯಿಂದ ಬಿಡುಗಡೆಯಾಗಿದ್ದು, ಎರಡನೆಯ ಕಂತು ರೂ.೩೪ ಕೋಟಿಗಳ ಬಿಡುಗಡೆ ಬಗ್ಗೆ Finance Department ನಲ್ಲಿದ್ದು, ಅದನ್ನು ಬಿಡುಗಡೆ ಮಾಡುತ್ತಾರೆ. ಈಗಿರುವ ಚರ್ಚೆಯಂತೆ ಹಣ ಬಂದರೆ ಮಾತ್ರ ಕೊಡುತ್ತೇವೆ ಎನ್ನುವ ಬಗ್ಗೆ PDO (Panchayat Development Officer), EO (Executive Officer) ಅಥವಾ ಯಾರಾದರೂ ಹೇಳಿದ್ದರೆ, ಅದಕ್ಕೆ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಕೊಡುವ ಬಗ್ಗೆ ಹೇಳಿ, ನಂತರ ಮರು ಹೊಂದಾಣಿಕೆ ಮಾಡಲು ಹೇಳುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಪಂಚಾಯಿತಿ ಸದಸ್ಯರ ವೇತನ-ಭತ್ಯೆ ಹೆಚ್ಚು ಮಾಡುವ ಬಗ್ಗೆ, bus pass ಬಗ್ಗೆ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ ಎಂದು ಅಭಿನಂದಿಸಲಾಗಿದೆ. ಕೊನೆಗೆ ಈ ಕಾರ್ಯವನ್ನು ಮಾಡುವ ಬಗ್ಗೆ ಸರ್ಕಾರವು ಹೇಳಬಹುದೇ? ಯಾವಾಗ ಕೇಳಿದರೂ ಪರಿಶೀಲನೆಯ ಹಂತದಲ್ಲಿದೆ, it is under consideration ಎನ್ನುತ್ತಾರೆ. ಅದನ್ನು ಮಾಡುತ್ತೇವೆ ಎಂದು ಹೇಳಬೇಕು. How long you will prolong this, you take a decision. We are also elected representatives. ಇವತ್ತು ಮೇಲ್ಮನೆ ಮತ್ತು ಕೆಳಮನೆಯ ಶಾಸಕರು, ದೆಹಲಿಯ ಲೋಕಸಭೆ ಹಾಗೂ ರಾಜ್ಯ ಸಭೆಗಳ ಸದಸ್ಯರು ಚುನಾಯಿತ ಪ್ರತಿನಿಧಿಗಳು. ಪಂಚಾಯಿತಿ members ಗಳು ಚುನಾಯಿತ ಪ್ರತಿನಿಧಿಗಳು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯವರೆಲ್ಲರೂ ಚುನಾಯಿತ ಸದಸ್ಯರಾಗಿದ್ದಾರೆ. PDO and Secretary ಗಳು ಮಾತು ಕೇಳುವುದಿಲ್ಲ, ಚುನಾಯಿತ ಪ್ರತಿನಿಧಿಗಳ ಬಗ್ಗೆ ಗೌರವ ಇಲ್ಲ ಎಂದು ಕೊನೆ ಪಕ್ಷ ದಿವಸಕ್ಕೆ ೧೦ ಪಂಚಾಯಿತಿಗಳಿಂದ phone ಮಾಡುತ್ತಾರೆ. ಅವರಿಗೆ ಸರಿಯಾಗಿ instructions ಕೊಡಿ. They are all elected representatives. They should listen to the elected representatives.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(726)/ 15.09.2021/6.40/ಹೆಚ್‌ವಿ:ಎಂಡಿ

( ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್(ಮುಂದು...):-**

ಸನ್ಮಾನ್ಯ ಸಭಾಪತಿಯವರೇ, after all he is a panchayat secretary. ಪಂಚಾಯಿತಿ ಅಧ್ಯಕ್ಷರು ಪಂಚಾಯಿತಿ ಕಾರ್ಯದರ್ಶಿಗಳ ಮನೆಗೆ ಹೋಗಿ, 'ಸೆಕ್ರೆಟರಿ ಸಾಹೇಬರೇ ನಮ್ಮ ಕೆಲಸ ಮಾಡಿಕೊಡಿ' ಎಂದು ಕೇಳಿಕೊಳ್ಳಬೇಕೇ? ಪ್ರತಿದಿನ ಒಂದಲ್ಲ ಒಂದು ಗ್ರಾಮ ಪಂಚಾಯಿತಿ ಅಧ್ಯಕ್ಷರು ಫೋನ್ ಮಾಡಿ, 'ನಮ್ಮ ಪಿ.ಡಿ.ಓ. ಸರಿಯಿಲ್ಲ, ಸಿ.ಇ.ಓ.ಗೆ ಹೇಳಿ ಅವರನ್ನು ವರ್ಗಾವಣೆ ಮಾಡಿಸಿ, ನಮ್ಮ ಮಾತು ಕೇಳುವುದಿಲ್ಲ, ನಾವು ಹೇಳಿದ ಅಭಿವೃದ್ಧಿ ಕೆಲಸ ಒಂದೂ ಮಾಡುವುದಿಲ್ಲ. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ಎನ್.ಆರ್.ಇ.ಜಿ) ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ನಾವು ಹೇಳಿದಂತಹ ಕ್ರಿಯಾ ಯೋಜನೆಯನ್ನು ಮಾಡುವುದಿಲ್ಲ. ನಮಗೆ ಮತ ಹಾಕಿ ಜನರು ನಮ್ಮನ್ನು ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರನ್ನಾಗಿ ಚುನಾಯಿಸಿ ಕಳುಹಿಸಿಕೊಟ್ಟಿರುತ್ತಾರೆ. ಇಲ್ಲಿಗೆ ಬಂದು ಒಂದೂ ಕೆಲಸ ಮಾಡಿಸದಿದ್ದರೆ ನಮಗೆ ಮತ ಹಾಕಿರುವವರು ಶಾಪ ಹಾಕುತ್ತಾರೆ' ಎಂದು ಕನಿಷ್ಠ ಪಕ್ಷ ದಿನಕ್ಕೆ 10 ಪಂಚಾಯಿತಿಗಳ ಅಧ್ಯಕ್ಷರಿಂದ ದೂರು ಬರುತ್ತದೆ. Why is it happening? ಈ ವಿಚಾರದಲ್ಲಿ ಮಾನ್ಯ ಸಭಾನಾಯಕರಿಗೆ ಆರ್.ಡಿ.ಪಿ.ಆರ್. ಮಂತ್ರಿಗಳಿಗಿಂತ ಹೆಚ್ಚಿನ ಅನುಭವವಿದೆ. I appreciate your knowledge and experience. ಮಾನ್ಯ ಸದಸ್ಯರು ಇದಕ್ಕೆ ಸಂಬಂಧಪಟ್ಟಂತೆ ಎರಡೆರಡು ಬಾರಿ ಪ್ರಶ್ನೆ ಕೇಳಿದ್ದಾರೆ. ಎರಡೂ ಬಾರಿ ಮಾನ್ಯ ಸಭಾನಾಯಕರು 'ಪರಿಶೀಲಿಸಲಾಗುತ್ತದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಪರಿಶೀಲನೆ ಮಾಡುತ್ತಾ, ನಮ್ಮ ಅವಧಿ ಮತ್ತು ಅವರ ಅವಧಿಯೂ ಮುಕ್ತಾಯಗೊಳ್ಳುತ್ತದೆ. ಬರೀ ಪರಿಶೀಲನೆ ಮಾಡುವುದರಲ್ಲಿಯೇ ಸಮಯ ಕಳೆದು ಹೋಗಬಾರದು. You take a bold step. ಈ ವಿಷಯದ ಬಗ್ಗೆ ಮಾನ್ಯ ಸಭಾನಾಯಕರು ಖಡಾಖಂಡಿತವಾಗಿ ಹೇಳಬೇಕಾಗುತ್ತದೆ. You are representing the Government. ಮೇಲ್ಮನೆಯಲ್ಲಿ ಅವರ ಸ್ಥಾನ ಮಾನ್ಯ ಮುಖ್ಯಮಂತ್ರಿಗಳ ಸ್ಥಾನ ಇದ್ದಂತೆ. ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ ಅವರೇ ಉತ್ತರವನ್ನು ನೀಡುತ್ತಾರೆ. ಅವರ ಗೈರು ಹಾಜರಿಯಲ್ಲಿ ಸಭಾನಾಯಕರು, you are the Leader of the House. ಅವರು ಹೇಳುವುದನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕಾಗುತ್ತದೆ, ಸರ್ಕಾರವೂ ಕೇಳಬೇಕಾಗುತ್ತದೆ. ಸಭಾನಾಯಕರು ಹೇಳಿದರೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಗುತ್ತದೆ. ಹೊಸ ಸದಸ್ಯರಾಗಿರುವ ಮಾನ್ಯ ಸುನೀಲ್ ಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಸನಗೌಡ ಪಾಟೀಲ್‌ರವರು, ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವರ ಭತ್ಯೆಯನ್ನು ಹೆಚ್ಚು ಮಾಡಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ ಮತ್ತು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕಾಗಿ ಸಕಾರಾತ್ಮಕವಾಗಿ ಅವರನ್ನು ಅಭಿನಂದಿಸುತ್ತಿದ್ದೇನೆ. ಆದ್ದರಿಂದ ಅವರ ಬಗ್ಗೆ ಗೌರವ ಮೂಡುತ್ತಿದೆ. ಮಾನ್ಯ ಸಭಾ ನಾಯಕರು, 'ಭತ್ಯೆಯನ್ನು ಹೆಚ್ಚಿಸುತ್ತೇವೆ' ಎಂದು ಹೇಳಿಬಿಟ್ಟರೆ ವಿಷಯ ಇಲ್ಲಿಯೇ ಮುಕ್ತಾಯಗೊಳ್ಳುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಪಿ.ಡಿ.ಓ., panchayat secretary ಗಳಿಗೆ ಸರಿಯಾದ ಸೂಚನೆಗಳನ್ನು ನೀಡಬೇಕಾಗಿದೆ. They have to respect the elected representative. ಚುನಾಯಿತ ಪ್ರತಿನಿಧಿಗಳಿಗೆ ಪಿ.ಡಿ.ಓ.ಗಳು ಗೌರವವನ್ನು ನೀಡಬೇಕಾಗುತ್ತದೆ. ಅವರುಗಳು 'don't care master'ಗಳಾಗಿದ್ದಾರೆ. ಪಂಚಾಯಿತಿ ಅಧ್ಯಕ್ಷರು ಕೆಲವೊಂದು ಕಡೆಗಳಲ್ಲಿ ಮಹಿಳೆಯರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು ಹಾಗೂ ಅನಕ್ಷರಸ್ಥರು ಇರುತ್ತಾರೆ. ಇವರುಗಳ ಮಾತನ್ನು ಪಿ.ಡಿ.ಓ.ಗಳು ಕೇಳುವುದೇ ಇಲ್ಲ. ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ತಾವು ಆಯ್ಕೆಹೊಂದಿದ ಕ್ಷೇತ್ರದಲ್ಲಿ ಯಾವುದಾದರೊಂದು ಕೆಲಸವಾಗಬೇಕಾದರೆ, ಸಾಮಾನ್ಯ ಜನರು ಹೋಗುವಂತೆ ಪಂಚಾಯಿತಿ ಕಛೇರಿಗೆ ಹೋಗುತ್ತಾರೆ. ಚುನಾಯಿತ ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮಾತುಗಳನ್ನು ಪಿ.ಡಿ.ಓ.ಗಳು ಕೇಳುವುದೇ ಇಲ್ಲ. He will not listen to the elected representative. ಯಾವ ರೀತಿಯಲ್ಲಿ ಸಾಮಾನ್ಯ ಜನರು ಹೋಗಿ ಪಿ.ಡಿ.ಓ. ಮತ್ತು ಸೆಕ್ರೆಟರಿಗಳ ಜೊತೆಗೆ ಮಾತನಾಡುತ್ತಾರೆ ಅದೇ ರೀತಿಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮಾತನಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಅವರಿಗೆ ಸರಿಯಾದ ರೀತಿಯಲ್ಲಿ ಪಾಠ ಕಲಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾವು ಯಾವ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳಾಗಿದ್ದೇವೆ, ನಾವು ಹೇಗೆ ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದೇವೆ ಅದೇ ರೀತಿಯಲ್ಲಿ ಅವರುಗಳು ಸಹ ಚುನಾಯಿತ ಪ್ರತಿನಿಧಿಗಳು, ಅವರಿಗೂ ಸಹ ಪಿಂಚಣಿಯನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸಭಾನಾಯಕರು ತಮ್ಮ ಸಹಮತವನ್ನು ವ್ಯಕ್ತಪಡಿಸಬೇಕಾಗಿದೆ. We have all come from local bodies. ಯಾರು ಅವರ ಪರವಾಗಿ ಧ್ವನಿ ಎತ್ತುತ್ತಾರೆ? ನಾನು ಮಾನ್ಯ ಸಭಾನಾಯಕರ ಸ್ಥಾನದಲ್ಲಿದ್ದು ಇಂತಹ ಪ್ರಶ್ನೆ ಬಂದಿದ್ದರೆ, 'yes, done' ಎಂದು ಹೇಳುತ್ತಿದ್ದೆ. ಅವರು ಅದೇರೀತಿ ಹೇಳಿಬಿಡಲಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸುನೀಲ್‌ಗೌಡ ಬಸನಗೌಡ ಪಾಟೀಲ್‌ರವರು ಪ್ರಸ್ತಾಪಿಸಿರುವ ವಿಚಾರ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡಿರುವ 25 ಜನರಿಗೂ ಅನ್ವಯವಾಗುತ್ತದೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಾವು ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡವರು 25 ಜನ ಇದ್ದರೂ ನಮ್ಮ ಕೂಗು ಕೇಳಿಸುವುದಿಲ್ಲ. ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಗೊಂಡಿರುವ 12 ಜನರ ಗಲಾಟೆಯ ಮುಂದೆ ನಮ್ಮದೇನೂ ನಡೆಯುವುದಿಲ್ಲ. ನಾವು ಹಳ್ಳಿಗಳಿಂದ ಬಂದಿದ್ದೇವೆ ಅವರು ಪಟ್ಟಣದಿಂದ ಬಂದಿದ್ದಾರೆ. ಆದ್ದರಿಂದ ಅವರ ಧ್ವನಿ ಜೋರಾಗಿದೆ. ಗ್ರಾಮ ಸಚಿವಾಲಯದ ಅಧ್ಯಕ್ಷರು ಮುಖ್ಯಮಂತ್ರಿಗಳಿದ್ದಂತೆ, ಪಿ.ಡಿ.ಓ. ಮುಖ್ಯ ಕಾರ್ಯದರ್ಶಿ ಇದ್ದಂತೆ ಎಂದು ಹೇಳುತ್ತಾರೆ. ಅವರಿಗೆ ಪಿಂಚಣಿ ಕೊಡುವುದರಲ್ಲಿ ತಪ್ಪಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಸಭಾನಾಯಕರು ಅವರಿಗೆ ಪಿಂಚಣಿ ಕೊಡುವುದಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, 'ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಮಾತುಗಳನ್ನು ಪಿ.ಡಿ.ಓ.ಗಳು ಕೇಳುವುದಿಲ್ಲ' ಎನ್ನುವ ಮಾತನ್ನು ಹೇಳಿದರು. ಇದಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ರಾಷ್ಟ್ರದ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳನ್ನು ತರಲಾಗಿದೆ. ಆದರೆ, ಗ್ರಾಮಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯಾಧಿಕಾರವನ್ನು ಕೊಟ್ಟೇ ಇಲ್ಲ. ಕಾರ್ಯಾಧಿಕಾರವೆಂದರೆ, ಕನಿಷ್ಠ ಪಕ್ಷ ಪಿ.ಡಿ.ಓ.ಗಳ ರಜೆ ಮಂಜೂರು ಮಾಡುವುದು, ಅವರ ಸಂಬಳ ಸರ್ಟಿಫೈ ಮಾಡುವುದು ಮತ್ತು ಪ್ರತಿ ವರ್ಷ ಗೌಪ್ಯತಾ ವರದಿಯನ್ನು ಗ್ರಾಮಪಂಚಾಯಿತಿಯ ಅಧ್ಯಕ್ಷರೇ ಬರೆಯುವಂತಾದರೆ ಮಾತ್ರ ಪಿ.ಡಿ.ಓ.ಗಳು ಅವರುಗಳ ಮಾತನ್ನು ಕೇಳುತ್ತಾರೆ. ನಮ್ಮ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಕಾರ್ಯಾಧಿಕಾರವನ್ನು ಗ್ರಾಮಪಂಚಾಯಿತಿಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿ ಸಮನ್ವಯತೆಯಿಂದ ಕಾರ್ಯಗಳು ನಡೆಯುತ್ತಿವೆ. ಆದರೆ, ನಮ್ಮ ರಾಜ್ಯದಲ್ಲಿ ಆ ರೀತಿಯಿಲ್ಲ. 'ನೀನು ಯಾರಿಗೆ ರಿಪೋರ್ಟ್ ಮಾಡುತ್ತಿಯಾ?' ಎಂದು ಪಿ.ಡಿ.ಓ.ನ ಕೇಳಿದರೆ, ಆತ 'ನಾನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ರಿಪೋರ್ಟ್ ಮಾಡುತ್ತೇನೆ' ಎಂದು ಹೇಳುತ್ತಾನೆ. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ವ್ಯಾಪ್ತಿಗೆ ಸುಮಾರು 20-30 ಗ್ರಾಮ ಪಂಚಾಯಿತಿಗಳು ಬರುತ್ತವೆ. ಎಲ್ಲಿಯವರೆಗೆ ಗ್ರಾಮಪಂಚಾಯಿತಿಯ ಅಧ್ಯಕ್ಷರಿಗೆ ಅಧಿಕಾರವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆ. ದಿನ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಳಿಗ್ಗೆ ನಾವು ನಮ್ಮ ಆಫೀಸ್‌ಗೆ ಹೋಗಿ ಕುಳಿತರೇ, ಒಂದಲ್ಲೊಂದು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಬಂದು 'ಪಿ.ಡಿ.ಓ. ಸರಿಯಿಲ್ಲ. ಕ್ರಿಯಾ ಯೋಜನೆಯನ್ನು ಮಾಡುವುದಿಲ್ಲ. ಎಲ್ಲಿಗೆ ಹೋಗುತ್ತಾನೆಯೋ ನಮಗೆ ಗೊತ್ತಾಗುವುದೇ ಇಲ್ಲ' ಎನ್ನುವ ಮಾತನ್ನು ಹೇಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಈ ಅಧಿವೇಶನದಲ್ಲಿ ಕನಿಷ್ಠಪಕ್ಷ ಒಂದು ದಿನವನ್ನು ಸ್ಥಳೀಯ ಸಂಸ್ಥೆಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಮೀಸಲಿಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯಾಧಿಕಾರವನ್ನು ನೀಡಬೇಕೆಂದು ಕಾನೂನಿನಲ್ಲಿ ಇದೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಅನ್ನು ಫ್ರೇಂ ಮಾಡಿಲ್ಲ. ಮಾನ್ಯ ಸಭಾನಾಯಕರು ಈ ಒಂದು ಕೆಲಸವನ್ನು ಮಾಡಿದರೆ ಒಳ್ಳೆಯದಾಗುತ್ತದೆನ್ನುವುದು ನನ್ನ ಅಭಿಪ್ರಾಯವಾಗಿದೆ.

**ಶ್ರೀ ಸುನೀಲ್‌ಗೌಡ ಬಸನಗೌಡ ಪಾಟೀಲ್(ಸ್ಥಳಿಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸಹ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡವರಾಗಿದ್ದಾರೆ. ಗೌರವಧನವನ್ನು ಹೆಚ್ಚು ಮಾಡುತ್ತೇನೆ ಎನ್ನುವ ಭರವಸೆಯನ್ನು ನೀಡಿದ್ದಾರೆ ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ವಿಚಾರದ ಬಗ್ಗೆ ನಾನು ಮೂರನೆಯ ಬಾರಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಪ್ರತಿಬಾರಿಯೂ ಚರ್ಚೆ ನಡೆಯುತ್ತದೆಯೇ ಹೊರತು ಭರವಸೆ ಅನುಷ್ಠಾನಗೊಳ್ಳುತ್ತಿಲ್ಲ. ದಯವಿಟ್ಟು ಅದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಏಕೆಂದರೆ, ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಗ್ರಾಮಗಳಲ್ಲಿ ತಳಮಟ್ಟದಲ್ಲಿ ಕೆಲಸ ಮಾಡುತ್ತಾರೆ. ಸರ್ಕಾರದ ಹೊಸಹೊಸ ಯೋಜನೆಗಳಾದ, ನರೇಗಾ ಯೋಜನೆ ಮತ್ತು ಜಲಜೀವನ ಮಿಶನ್ ಮುಂತಾದವುಗಳನ್ನು ಅನುಷ್ಠಾನಗೊಳಿಸುವವರು ನಮ್ಮ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದಾರೆ. ಆದ್ದರಿಂದ ಗ್ರಾಮ ಪಂಚಾಯಿತಿ ಸದಸ್ಯರಿಗೆ ಕನಿಷ್ಠ ಮೂರು ಸಾವಿರ ರೂಪಾಯಿಗಳು ಮತ್ತು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಗೌರವಧನವನ್ನು ನಾಲ್ಕು ಸಾವಿರ ರೂಪಾಯಿಗಳಿಗೆ ಹೆಚ್ಚಳ ಮಾಡಬೇಕೆಂದು ಒತ್ತಾಯಿಸುತ್ತಿದ್ದೇನೆ. ಸದಸ್ಯರ ಗೌರವಧನ ನೇರವಾಗಿ ಅವರ ಅಕೌಂಟ್‌ಗೆ ಹಾಕುವಂತಹ ವ್ಯವಸ್ಥೆ ಮಾಡಿದರೆ ಸೂಕ್ತವಾಗಿರುತ್ತದೆನ್ನುವುದು ನನ್ನ ಭಾವನೆಯಾಗಿದೆ. ಮಾನ್ಯ ಸಚಿವರು ಪಿ.ಡಿ.ಓ. ಮತ್ತು ಇ.ಓ. ಅವರಿಗೆ ಸೂಚನೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಪಿ.ಡಿ.ಓ. ಪ್ರತಿ ದಿನ ಗ್ರಾಮಪಂಚಾಯಿತಿಗೆ ಬರುವುದೇ ಇಲ್ಲ. ಅವರನ್ನು ಹುಡುಕುವುದೇ ದೊಡ್ಡ ಕೆಲಸವಾಗಿದೆ. ಇವರಿಗೆ 3-4 ಗ್ರಾಮ ಪಂಚಾಯಿತಿಗಳನ್ನು ವಹಿಸಿಕೊಟ್ಟಿರುವುದರಿಂದ ಇವರುಗಳು ಹದಿನೈದು ದಿನಗಳಿಗೊಮ್ಮೆ ಒಂದು ಗ್ರಾಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿಗಳಿಗೆ ಹೋಗುತ್ತಿದ್ದಾರೆ. ಅವರಿಗೆ ಹೆಚ್ಚುವರಿ ಕೆಲಸವಾಗಿದೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಶ್ರೀ ಕೆ.ಸಿ.ಕೊಂಡಯ್ಯನವರು ಹೇಳಿದಂತೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ನಮಗೆ ಬೆಳಗ್ಗೆ ಎದ್ದರೆ, ಗ್ರಾಮ ಪಂಚಾಯಿತಿಗಳ ಪಿ.ಡಿ.ಓ. ಮತ್ತು ಅಧ್ಯಕ್ಷರ ನ್ಯಾಯ ಪಂಚಾಯತಿ ಮಾಡುವುದೇ ಆಗುತ್ತದೆ. ಪಿ.ಡಿ.ಓ.ಗಳಿಗೆ ಕೊಟ್ಟಿರುವ ಓವರ್ ಚಾರ್ಜ್ ಅನ್ನು ಕಡಿಮೆ ಮಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಪಿ.ಡಿ.ಓ.ಗಳನ್ನು ನೇಮಕ ಮಾಡಬೇಕೆನ್ನುವುದು ನನ್ನ ಮನವಿಯಾಗಿದೆ. ಸದಸ್ಯರ ಗೌರವಧನ ನೇರವಾಗಿ ಸದಸ್ಯರ ಖಾತೆಗೆ ಹೋಗುವಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಕಾರ್ಯಾಧಿಕಾರವನ್ನು ಕೊಡಬೇಕೆನ್ನುವ ಅಂಶವನ್ನು ಉಲ್ಲೇಖ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. 1987ರಲ್ಲಿ ಕರ್ನಾಟಕ ರಾಜ್ಯದಲ್ಲಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಜಾರಿಗೆ ಬಂದಂತಹ ಸಂದರ್ಭದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ನಜೀರ್ ಸಾಬ್‌ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾಗಿದ್ದರು. ಆಗ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಕಾರ್ಯಾಧಿಕಾರವನ್ನು ಕೊಟ್ಟಿದ್ದರು. ಆಗಿನ ಜಿಲ್ಲಾ ಪರಿಷತ್ತನ್ನು ಈಗ ಜಿಲ್ಲಾ ಪಂಚಾಯತ್ ಎಂದು ಕರೆಯಲಾಗುತ್ತಿದೆ. ಆಗ ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿ ಆ ಜಿಲ್ಲೆಯ ಜಿಲ್ಲಾಧಿಕಾರಿಗಿಂತ ಸೀನಿಯರ್ ಆಗಿರುತ್ತಿದ್ದರು. ಆಗ ಚೀಫ್ ಸೆಕ್ರೆಟರಿ ಎನ್ನುತ್ತಿದ್ದರು ಈಗ ಸಿ.ಇ.ಓ. ಎಂದು ಹೇಳುತ್ತಾರೆ. ಸೀನಿಯರ್ ಆಗಿರುವ ಚೀಫ್ ಸೆಕ್ರೆಟರಿಗೆ ರಜಾ ಮಂಜೂರು ಮಾಡುವುದು ಮತ್ತು ಗೌಪ್ಯತಾ ವರದಿ ಬರೆಯುವಂತಹ ಕಾರ್ಯಾಧಿಕಾರವನ್ನು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಕೊಟ್ಟಿದ್ದರು. ಚೀಫ್ ಸೆಕ್ರೆಟರಿಯನ್ನು ಅಧ್ಯಕ್ಷರು ಕರೆದರೆ ಎಲ್ಲಿದ್ದರೂ ಬರಬೇಕಾಗಿತ್ತು. ಚೀಫ್ ಸೆಕ್ರೆಟರಿ ಅಧ್ಯಕ್ಷರ ಕೊಠಡಿಗೆ ಬಂದು ಜಿಲ್ಲೆಯ ಸಮಸ್ಯೆಗಳು ಏನಿವೆ ಎಂದು ಮಾತಾಡಿಕೊಂಡು ಹೋಗುತ್ತಿದ್ದರು. ಈಗ ಅಧ್ಯಕ್ಷರೇ ಸಿ.ಇ.ಓ. ಕೊಠಡಿಗೆ ಹೋಗಬೇಕಾಗಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಂಚಾಯಿತಿ ಅಧ್ಯಕ್ಷರನ್ನೇ 'don't care master' ಎನ್ನುವವರು ಇನ್ನೂ ಪಂಚಾಯಿತಿ ಸದಸ್ಯರನ್ನು ಯಾವ ರೀತಿ ಕಾಣಬಹುದೆಂದು ತಾವು ಊಹಿಸಿಕೊಳ್ಳಬೇಕಾಗಿದೆ. ದಿನಾ ಬೆಳಗಾದರೆ, 'ಪಿ.ಡಿ.ಓ. ಮಾತು ಕೇಳುವುದಿಲ್ಲ. ಸೆಕ್ರೆಟರಿ ಮಾತು ಕೇಳುವುದಿಲ್ಲ' ಎಂದು 10-15 ದೂರುಗಳು ಬರುತ್ತಲೇ ಇರುತ್ತವೆ. ಮಾನ್ಯ ಸುನೀಲ್‌ಗೌಡರು ಹೇಳಿದಂತೆ, ಒಬ್ಬ ಪಿ.ಡಿ.ಓ.ಗೆ 8-10 ಗ್ರಾಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಂಚಾಯಿತಿಗಳನ್ನು ವಹಿಸಿಕೊಡುವುದರಿಂದ ಆತ ಪ್ರತಿ ಗ್ರಾಮ ಪಂಚಾಯತಿಗೆ 15-20 ದಿನಗಳಿಗೊಮ್ಮೆ ಬರುತ್ತಾನೆ. ಈ ರೀತಿಯಾದರೆ, ಅಭಿವೃದ್ಧಿ ಕೆಲಸಗಳು ನಡೆಯುವುದು ಹೇಗೆ? ಗ್ರಾಮ ಸ್ವರಾಜ್ಯ ಎನ್ನುವುದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಕಂಡಂತಹ ಕನಸು, ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎನ್ನುವ ಪರಿಕಲ್ಪನೆಯ ಮೇರೆಗೆ ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಪಂಚಾಯಿತಿಯಲ್ಲಿ ಕೆಲಸಗಳು ಆಗದಿದ್ದರೆ ಗ್ರಾಮದ ಅಭಿವೃದ್ಧಿಯಾಗುವುದು ಹೇಗೆ ಸಾಧ್ಯ?

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಪಿ.ಡಿ.ಓ. ಮತ್ತು ಸೆಕ್ರೆಟರಿಗಳಿಗೆ ಒಮ್ಮೆ ಪಾಠ ತೆಗೆದುಕೊಂಡು ಚುನಾಯಿತ ಪ್ರತಿನಿಧಿಗಳಾದ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರೊಂದಿಗೆ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಭಾ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದುವರಿದಿದೆ)

(727) 15.9.2021 6.50 ಪಿಕೆ:ಎಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದಿದೆ)**

ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಬೇಕು. ಚುನಾಯಿತ ಪ್ರತಿನಿಧಿಗಳು ವೈಯಕ್ತಿಕ ಕೆಲಸಕ್ಕೆ ಬಂದಿರುವುದಿಲ್ಲ. ಅವರು ಆಯಾ ಗ್ರಾಮದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವುದಕ್ಕೆ ಬಂದಿರುತ್ತಾರೆ. ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಕ್ರಿಯಾ ಯೋಜನೆಗಳ ಮಂಜೂರಾತಿಗೆ ಬಂದಿರುತ್ತಾರೆ. ಹೊಸ ಕಾರ್ಯಕ್ರಮಗಳು ಬಂದಾಗ ಪಿಡಿಓ ಗಳು, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳನ್ನು ಕರೆದು, ಆ ಬಗ್ಗೆ ತಿಳಿಸಿ ಹೇಳಬೇಕು. ಆದರೆ ಅವರು ಹಾಗೆ ಮಾಡುವುದಿಲ್ಲ. The PDO will act like a boss. ಪಂಚಾಯಿತಿಗಳಿಗೆ ಪಿಡಿಓ ಗಳೇ ಬಾಸ್ ಆಗಿರುತ್ತಾರೆ. ಆ ವ್ಯವಸ್ಥೆ ಸರಿ ಮಾಡಿ. ಗೌರವಧನ ಬಗ್ಗೆ 'under active consideration' ಎಂದು ಏನು ಹೇಳಿದರೋ, ಅದು 'yes' ಎಂದು ಹೇಳುವ ಹಾಗೆ ಮಾಡುತ್ತೀರಿ ಎನ್ನುವ ವಿಶ್ವಾಶ ಇದೆ. ಮುಂದಿನ ಚುನಾವಣೆ ಬರುವ ಮೊದಲೇ ಈ ಕೆಲಸವನ್ನು ಮಾಡಿಸಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳನ್ನು ಕರೆಸಿ. You summon the Principal Finance Secretary. ನೀವು ಇಬ್ಬರು ಮಂತ್ರಿಗಳು ಕೂಡಿ ಮಾಡಿಬಿಡಿ; ಇದು ಅಸಾಧ್ಯವಾದುದಲ್ಲ. ನಿಮ್ಮಿಂದ ಹೊಸ ಇತಿಹಾಸ ಸೃಷ್ಟಿಯಾಗಲಿ. I hope the Minister will do it.

**ಡಾ: ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಆಯ್ಕೆಯಾದವರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸುನೀಲ್ ಗೌಡರವರು ಅತ್ಯಂತ ಮಹತ್ವದ ವಿಚಾರವನ್ನು ತಂದಿದ್ದಾರೆ. ಅದಕ್ಕೆ ಅವರಿಗೆ ಧನ್ಯವಾದಗಳು. ಪ್ರಜಾಪ್ರಭುತ್ವದಲ್ಲಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹೆಣ್ಣು ಮಕ್ಕಳು ಶೇಕಡ 50 ರಷ್ಟು ಭಾಗವಹಿಸಿದರೆ ಅದು ಅಭಿನಂದನಿಯ ಮತ್ತು ಹೆಮ್ಮೆ ಪಡಬೇಕಾದಂತಹ ವಿಚಾರವಾಗಿದೆ. ಹಾಗೆಯೇ, ಸೋಷಿಯಲ್ ಇನ್‌ಜಸ್ಟೀಸ್ ಅಥವಾ ದುರ್ಬಲ ವರ್ಗದಿಂದ ಬಂದಂಥ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು, ವಿಶೇಷವಾಗಿ ಕೂಲಿ ಮಾಡುವಂಥವರು ಪಂಚಾಯತಿ ಸದಸ್ಯರಾಗಿರುವಂತಹ ಸನ್ನಿವೇಶಗಳನ್ನು ನಾವು ನೋಡುತ್ತಿದ್ದೇವೆ. ಖಂಡಿತವಾಗಿ ಅವರಿಗೆ ತಿಂಗಳಿಗೆ ರೂ. 3000 ಕೊಟ್ಟರೂ ದಿನಕ್ಕೆ ರೂ. 100 ಆಗುತ್ತದೆ. ಎಷ್ಟೋ ಸಾರಿ ಅವರು ಕೂಲಿ ಬಿಟ್ಟು ಇಲ್ಲಿಗೆ ಬರುವುದೇ ದೊಡ್ಡ ವಿಚಾರವಾಗಿರುತ್ತದೆ. ಪಂಚಾಯಿತಿ ಸದಸ್ಯರಾದ ತಕ್ಷಣ ಅವರ ಸ್ಥಾನ-ಮಾನವೇನೂ ಬದಲಾಗಿಲ್ಲ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಮಾನ್ಯ ಎಸ್.ಆರ್.ಪಾಟೀಲ್ ರವರು ಹೇಳಿದ ವಿಚಾರವನ್ನು ನಾನು ಎರಡು ದೃಷ್ಟಿಕೋನದಿಂದ ನೋಡುತ್ತೇನೆ. I have experienced, Sir, with due respect. ಒಂದು ಕಡೆ ಸುಶಿಕ್ಷಿತ ಜಿಲ್ಲೆಗಳ ಪಂಚಾಯಿತಿಗಳಲ್ಲಿ ಎಲ್ಲವೂ ಚೆನ್ನಾಗಿ ನಡೆದುಕೊಂಡು ಹೋಗುತ್ತದೆ. ಕೆಲವು ಕಡೆ ಅನಕ್ಷರಸ್ಥ ಪ್ರತಿನಿಧಿಗಳಿರುತ್ತಾರೆ; ಅಂತಹ ಕಡೆ ಅವರೇ ಕಿರುಕುಳಕ್ಕೆ ಒಳಗಾಗುವುದನ್ನು ನಾವು ನೋಡುತ್ತೇವೆ. ಪಿಡಿಓ ಗಳು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳನ್ನೂ ಕೂಡ ನಾವು with concern ಉಲ್ಲೇಖ ಮಾಡಬೇಕಾಗುತ್ತದೆ. ಇದರ ಬಗ್ಗೆ concern ಅಷ್ಟೆ. ಕೆಲವು ಕಡೆ ದುರುಪಯೋಗಗಳಾದರೆ ಜೈಲಿಗೆ ಮೊದಲು ಅಧಿಕಾರಿಗಳು ಹೋಗುತ್ತಾರೆ, ನಂತರ ಇವರೂ ಹೋಗುತ್ತಾರೆ. ಯಾವುದೇ ಯೋಜನೆಗಳಿಗೆ ಹೊಣೆಗಾರಿಕೆ ಇರುತ್ತದೆ. ಮಾನ್ಯ ಸಭಾಪತಿಯವರ ನೇತೃತ್ವದಲ್ಲಿ ಒಂದು ಸಭೆ ನಡೆಯಿತು. ಯೋಜನೆಗಳ ಅಭಿವೃದ್ಧಿ ಕೆಲಸಗಳು ಕಾರ್ಯಗತ ಆಗಲಿಲ್ಲ ಎಂದರೆ, ಸಂಬಂಧಪಟ್ಟ ಡಿಸಿ ಯವರನ್ನು ಕರೆಯುತ್ತಾರೆ; ಡಿಸಿ ಯವರು ಸಿಇಓ ಗಳನ್ನು ಕರೆಯುತ್ತಾರೆ ನಂತರ ಸಭೆಗಳಲ್ಲಿ ಅವರು ಬೈಗಳನ್ನು ತಿನ್ನಬೇಕಾಗುತ್ತದೆ. ಎಂಪಿ ಚುನಾವಣೆ ಎನ್ನುವುದು ದೇಶ ಮಟ್ಟದ ವಿಚಾರಧಾರೆಗಳ ಹಿನ್ನೆಲೆಯಲ್ಲಿ ಆಗುತ್ತದೆ, ಶಾಸಕರ ಚುನಾವಣೆಗಳಂತೂ ಅಗ್ನಿ ಪರೀಕ್ಷೆಯೇ ಆಗಿರುತ್ತದೆ. ಇದಕ್ಕೂ ಕೆಳ ಮಟ್ಟದ ಚುನಾವಣೆಗಳು ಎಂದರೆ ವಾತಾವರಣ ಹೇಗಿರುತ್ತದೆ ಎನ್ನುವುದು ನಮಗೆ ಗೊತ್ತಿದೆ. ಇಲ್ಲಿ ಚುನಾವಣೆಗಳು ಬಹಳ ಕಠಿಣ ಪರಿಸ್ಥಿತಿಯಲ್ಲಿ ನಡೆಯುತ್ತದೆ. ಒಂದು ಪಂಚಾಯಿತಿ ಚುನಾವಣೆ ಒಂದು ಊರನ್ನೇ ವಿಭಜನೆ ಮಾಡುವಂತಹ, ಜಿದ್ದಿನ ಚುನಾವಣೆಗಳಾಗುತ್ತವೆ. ಮಾನ್ಯ ಪೂಜಾರಿಯವರು ವಿಶೇಷವಾಗಿ ಈ ವಿಚಾರದಲ್ಲಿ ಬಹಳ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಳಜಿ ಹೊಂದಿದವರಾಗಿದ್ದಾರೆ. ಮಾನ್ಯ ಸುನೀಲ್ ಗೌಡರವರು ಹೇಳಿದ ಹಾಗೆ, ಪಂಚಾಯಿತಿ ಸದಸ್ಯರಿಗೆ ತಿಂಗಳಿಗೆ 5000 ರೂಪಾಯಿಗಳ ಗೌರವ ಧನವನ್ನು ಕೊಟ್ಟರೂ ದಿನಕ್ಕೆ ರೂ 200 ಕೂಡ ಆಗುವುದಿಲ್ಲ. ನರೇಗಾ ಯೋಜನೆಯಲ್ಲಿಯೇ ದಿನಕ್ಕೆ ರೂ.250 ಗಳ ಕೂಲಿ ಕೊಡುತ್ತೇವೆ. ಇಲ್ಲಿ ದುಡ್ಡಿನ ಪ್ರಶ್ನೆಯಲ್ಲ. ಯಾವ ಖರ್ಚನ್ನು ಕಡಿಮೆ ಮಾಡುತ್ತೀರೋ ನನಗೆ ಗೊತ್ತಿಲ್ಲ. ಸರ್ಕಾರಕ್ಕೆ ತುಂಬಾ ಖರ್ಚುಗಳು ಇರುತ್ತವೆ ಎನ್ನುವುದು ನಮಗೆ ಗೊತ್ತಿದೆ. ಆದರೆ, ತಿಂಗಳಿಗೆ ರೂ. 5000 ಕೊಟ್ಟರೂ ದಿನಕ್ಕೆ ರೂ. 200 ಕೂಡ ಆಗುವುದಿಲ್ಲ. ಆ ಪ್ರತಿನಿಧಿಗಳ ಅವಧಿಯಲ್ಲಿ ಕೇವಲ ಅವರಿಗೆ ಅಧಿಕಾರ ಮಾತ್ರ ಕೊಡುವುದಲ್ಲ; ಅವರು ಕೆಲಸ ಮಾಡುವ ನಿಟ್ಟಿನಲ್ಲಿ ಅವರನ್ನು ಸಬಲೀಕರಣಗೊಳಿಸಬೇಕು ಮತ್ತು ಚೈತನ್ಯ ನೀಡುವಂತಹ ಕೆಲಸ ಮಾಡಬೇಕಾಗುತ್ತದೆ. ಇದು ಪ್ರಜಾಪ್ರಭುತ್ವದ ಆಶಯ ಕೂಡ ಆಗಿದೆ. ಇನ್ನೂ ಕೆಲವು ಕಡೆ ಪುರಷರ ದಬ್ಬಾಳಿಕೆ ಇದೆ. ಯಜಮಾನರುಗಳು ಬಂದು ಆಡಳಿತ ನಡೆಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಅಷ್ಟು ವಿದ್ಯಾಭ್ಯಾಸ ಇರುವುದಿಲ್ಲ ಮತ್ತು ತಿಳಿದುಕೊಳ್ಳಲು ಅವರಿಗೂ ಸ್ವಲ್ಪ ಸಮಯ ಬೇಕಾಗುತ್ತದೆ. ಅಂತಹ ಕಡೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಒಂದು understanding ನಲ್ಲಿ ಹೋಗಬೇಕಾಗುತ್ತದೆ. ಇವರ ಮೇಲೆ ಜಿಲ್ಲಾ ಪಂಚಾಯತಿ ಸದಸ್ಯರಿರುತ್ತಾರೆ; ಅವರ ಮೇಲೆ ಎಂಎಲ್ಎ ಗಳಿರುತ್ತಾರೆ, ಇಓ ಗಳಿರುತ್ತಾರೆ. ಹೀಗೆ ಅವರನ್ನು checkmate ಮಾಡುವುದಕ್ಕೆ ಸಾಕಷ್ಟು ವ್ಯವಸ್ಥೆಗಳಿವೆ. ಮತ್ತೆ, ಆ ಪ್ರತಿನಿಧಿಗಳಿಗೆ ತಾಲ್ಲೂಕು ಮಟ್ಟದಲ್ಲೋ ಅಥವಾ ಜಿಲ್ಲಾ ಮಟ್ಟದಲ್ಲಿ Bus Pass ಕೊಡಬೇಕು. ತಾಲ್ಲೂಕು ಮಟ್ಟದಲ್ಲಿ ಕೊಟ್ಟರೂ ಅವರು ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಅವರ ಅವಧಿಯಲ್ಲಿ ಸಂಬಳ ಕೊಟ್ಟರೆ ಅವರಿಗೆ ಒಂದಿಷ್ಟು ಉತ್ತೇಜನ ನೀಡಿದ ಹಾಗೆ ಆಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಂಡರೆ ಅದು ನಾವೆಲ್ಲಾ ಹೆಮ್ಮೆ ಪಡುವಂತಹ ತೀರ್ಮಾನ ಆಗುತ್ತದೆ. ಸಹೃದಯದಿಂದ ಇದನ್ನು ಪರಿಗಣಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):**- ಮಾನ್ಯ ಸಭಾಪತಿಗಳೆ, ಒಂದು ವೇಳೆ ದೇಶದ ಪ್ರಧಾನ ಮಂತ್ರಿ ಆಗುವುದು ಸರಳವಾಗಬಹುದು, ಆದರೆ ಪಂಚಾಯಿತಿ ಸದಸ್ಯರಾಗುವುದು ಅಷ್ಟು ಸುಲಭದ ಕೆಲಸವಲ್ಲ. ನೀವು ಒಬ್ಬ ಎಂಪಿ ಯನ್ನು ಒಂದು ವಾರ್ಡ್‌ನಲ್ಲೋ, ಓಣಿಯಲ್ಲೋ ಚುನಾವಣೆಗೆ ನಿಲ್ಲಿಸಿ ನೋಡಿ; ಅಲ್ಲಿ ಆತ ಸೋತರೂ ಆಶ್ಚರ್ಯ ಆಗುವುದಿಲ್ಲ. ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗುವುದು ಎಂದರೆ ಅದು herculean task ಆಗಿರುತ್ತದೆ. ನಮ್ಮ ಅನುಭವದಿಂದ ಹೇಳುತ್ತಿದ್ದೇನೆ. ಮತ್ತೆ, ಸೋತರೆ ಅಲ್ಲಿ ಜನ ಆತನಿಗೆ, ಪಂಚಾಯತಿ ಚುನಾವಣೆಯಲ್ಲಿ ಬಿದ್ದನಲ್ಲಪ್ಪ ಎಂದ ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಆಯ್ಕೆಯಾದವರು)**:- ಮಾನ್ಯ ಸಭಾಪತಿಗಳೆ, ಮಾಸಾಶನವನ್ನು ಯಾವ ನಿಯಮದ ಅಡಿ ಫಿಕ್ಸ್ ಮಾಡಬೇಕು ಎನ್ನುವುದು ಸರ್ಕಾರದ ಸಮಸ್ಯೆ ಆಗಿರಬಹುದು. ಕೂಲಿ ಕೆಲಸ ಮಾಡುವವರು ಗ್ರಾಮ ಪಂಚಾಯಿತಿಯ ಸದಸ್ಯರೂ ಆಗುತ್ತಾರೆ ಮತ್ತು ಅಧ್ಯಕ್ಷರು ಆಗುತ್ತಾರೆ. ಬಹಳಷ್ಟು ಜನ ತಮ್ಮ ಕೂಲಿ ಮಿಸ್ ಆಗುತ್ತದೆ ಎಂದು ಮೀಟಿಂಗ್‌ಗೆ ಬರುವುದೇ ಇಲ್ಲ. ಅವರು ಅಷ್ಟು ಬಡವರಾಗಿರುತ್ತಾರೆ. ಇವತ್ತು ನಾವು ನೂರಾರು ಜನಕ್ಕೆ ನರೇಗಾ ಯೋಜನೆಯಲ್ಲಿ ಹಣ ಕೊಡುತ್ತೇವೆ. Minimum employment guarantee ಮತ್ತು minimum wages ಕೊಡುತ್ತೇವೆ. ಆ ನೂರಾರು ಜನಕ್ಕೆ ಕೊಡಲು ಸರ್ಕಾರದ ಹತ್ತಿರ ಹಣ ಇದೆ; ಆದರೆ ಇವರಿಗೆ ತಿಂಗಳಿಗೆ ಇಂತಿಷ್ಟು ಎಂದು ಕೊಡುವ ವ್ಯವಸ್ಥೆ ಏಕೆ ಮಾಡಬಾರದು? ನರೇಗಾದಲ್ಲಿ ಕೊಡುವ ಮೊತ್ತವನ್ನೇ ಇವರಿಗೂ ಕೊಡಿ. ಆಗ ಅವರು ಪಬ್ಲಿಕ್ ಸರ್ವಿಸ್ ಮಾಡುವುದಕ್ಕೆ ಅವಕಾಶ ಆಗುತ್ತದೆ ಮತ್ತು ಬೇರೆ ಸಮಯದಲ್ಲಿ ತಮ್ಮ ಪಾಡಿಗೆ ತಾವು ದುಡಿದುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ದಯವಿಟ್ಟು ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಹಿರಿಯರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಮಾನ್ಯ ಕೊಂಡಯ್ಯನವರ ಸಹಿತ ಅನೇಕ ಮಾನ್ಯ ಸದಸ್ಯರು ಈ ಕುರಿತು ಮಾತನಾಡಿದ್ದಾರೆ. ಮುಖ್ಯವಾಗಿ ಇಲ್ಲಿ ಅವರ ಗೌರವಧನದ ಹೆಚ್ಚಳದ ಬಗ್ಗೆ ಚರ್ಚೆ ಆಗುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಪಿಡಿಓ ಗಳು ಪಂಚಾಯಿತಿ ಸದಸ್ಯರ ಮತ್ತು ಅಧ್ಯಕ್ಷರ ಮಾತುಗಳನ್ನು ಕೇಳುವುದಿಲ್ಲ ಎಂಬ ಮಾತುಗಳನ್ನು ಹೇಳಿದರು. ಅನೇಕ ಸಲ ಅವರ ಅಭಿಪ್ರಾಯಗಳಿಗೆ ಬೆಲೆ ಕೊಡುತ್ತಿಲ್ಲ ಎಂದು ಹೇಳಿದರು. ಮಾನ್ಯ ಕೊಂಡಯ್ಯನವರೂ ಕೂಡ ಅದೇ ಮಾತುಗಳನ್ನು ಹೇಳಿದರು. ನಮ್ಮಲ್ಲಿ 25 ಜನ ಸ್ಥಳೀಯ ಸಂಸ್ಥೆಗಳ ಸದಸ್ಯರಿದ್ದಾರೆ. ಪಂಚಾಯಿತಿಗಳಲ್ಲಿ ಸಮಸ್ಯೆಗಳು ಬಂದಾಗ ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ಏನು ಮಾಡುತ್ತಾರೆ ಎಂದರೆ, ಒಂದು ದಿವಸಕ್ಕೆ 4-5 ಗ್ರಾಮ ಪಂಚಾಯಿತಿಗಳಿಗೆ ಭೇಟಿ ಕೊಡುತ್ತಿರುತ್ತಾರೆ. ಅದು ಅವರ ಹವ್ಯಾಸ ಮತ್ತು ಆಸಕ್ತಿಯಾಗಿದೆ. ಅವರ ಜೊತೆಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಬರುತ್ತಾರೆ. ಅವರ ಸಂಗಡ ಆಯಾ ಗ್ರಾಮ ಪಂಚಾಯಿತಿ ಸದಸ್ಯರ ಜೊತೆ ಸುಮಾರು ಒಂದೂ-ಒಂದೂವರೆ ಗಂಟೆ ಕಾಲ ಮಾತನಾಡುತ್ತಾರೆ. ಯಾವ ಪಿಡಿಓ ಕೂಡ, ಒಬ್ಬ ಎಂಎಲ್‌ಸಿ ಅಥವಾ ಒಬ್ಬ ಎಂಎಲ್‌ಎ ಹೋದಾಗ, ನಮ್ಮ ಗ್ರಾಮ ಪಂಚಾಯಿತಿ ಸದಸ್ಯರ ಮಾತುಗಳನ್ನು, ಅಧ್ಯಕ್ಷರ ಮಾತುಗಳನ್ನು ನಿಯಮದ ಚೌಕಟ್ಟಿನಲ್ಲಿ ಕೇಳುವುದಿಲ್ಲ ಎಂದಾದರೆ ಅಂಥವರ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರ ಸರ್ಕಾರಕ್ಕಿರುತ್ತದೆ. ನಾವು ಸ್ಥಳೀಯ ಸಂಸ್ಥೆಯ ಸದಸ್ಯರು ಕಾಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲಕ್ಕೆ ಪಂಚಾಯಿತಿಗಳಿಗೆ ಭೇಟಿ ಕೊಟ್ಟಾಗ ಅನೇಕ ಸಮಸ್ಯೆಗಳನ್ನು ಕಾಣುತ್ತೇವೆ. ಆಗ ಅವರಿಗೆ, ಹೀಗೀಗಿರಬೇಕು ಎಂದು ತಾಕೀತು ಮಾಡುತ್ತೇವೆ. ಮಾನ್ಯ ಸಭಾಪತಿಗಳೆ, 90 ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ ಸದಸ್ಯರಿದ್ದಾರೆ. ಅನೇಕರು ಪ್ರಥಮವಾಗಿ ಚುನಾವಣೆಗೆ ನಿಂತಿರುತ್ತಾರೆ. ಯಾವುದೋ ಕಾರಣಕ್ಕೆ ಒಂದು ರಾಜಕೀಯ ಪಕ್ಷದವರು ಅಂಥವರ ಹತ್ತಿರ ಹೋಗಿ, ನಿನಗೆ ಒಳ್ಳೆಯ ಹೆಸರು ಇದೆ, ನಿಮ್ಮದು ಮಹಿಳಾ ಮೀಸಲಾತಿ ಕ್ಷೇತ್ರವಾಗಿರುವುದರಿಂದ ನಿನ್ನ ಹೆಂಡತಿಯನ್ನು ನಿಲ್ಲಿಸಿದರೆ ನಾವು ಗೆಲ್ಲುತ್ತೇವೆ ಎಂದು ಹೇಳಿ ಆತನನ್ನು ಒಪ್ಪಿಸಿ, ಗೆಲ್ಲಿಸಿ ಬಿಡುತ್ತಾರೆ. ಯಾವುದೋ ಒಂದು ಕೌಟುಂಬಿಕ ಜೀವನದಲ್ಲಿರಬಹುದಾದ ಒಬ್ಬ ಮಹಿಳೆ ಗ್ರಾಮ ಪಂಚಾಯಿತಿ ಸದಸ್ಯರಾಗುತ್ತಾರೆ. ಕೆಲವು ಸಲ ಅವರು ಅಧ್ಯಕ್ಷರೂ ಆಗಿಬಿಡುತ್ತಾರೆ. ಆದರೆ ಅವರಿಗೆ, ನಮ್ಮ ಬಜೆಟ್ ಹೇಗಿರಬೇಕು; ನಮ್ಮ ಕ್ರಿಯಾ ಯೋಜನೆ ಹೇಗಿರಬೇಕು; ನಮ್ಮ ಗ್ರಾಮ ಸಭೆ ಹೇಗಿರಬೇಕು; ನಮ್ಮ ವಾರ್ಡ್ ಸಭೆ ಹೇಗಿರಬೇಕು; ಕೆಡಿಪಿ ಸಭೆಯನ್ನು ಹೇಗೆ ನಡೆಸಬೇಕು ಎನ್ನುವುದರ ಬಗ್ಗೆ ತಿಳುವಳಿಕೆಯ ಕೊರತೆ ಇರುತ್ತದೆ. ಅದು ಸಹಜ ಕೂಡ. ನಮ್ಮ ಸರ್ಕಾರ ಸೇರಿದಂತೆ ಎಲ್ಲಾ ಸರ್ಕಾರಗಳೂ ಕೂಡ ಆಯ್ಕೆಯಾದ ಜನ ಪ್ರತಿನಿಧಿಗಳಿಗೆ ತಾಲ್ಲೂಕು ಮಟ್ಟದಲ್ಲಿ 3 ಪೂರ್ಣ ದಿವಸಗಳ ಕಾಲ ತರಬೇತಿ ಕೊಡುತ್ತದೆ. ನಾನು ನೋಡಿದ ಹಾಗೆ ಆ ತರಬೇತಿ ಕಾರ್ಯಕ್ರಮದಲ್ಲಿ ಹೆಚ್ಚು ಮಹಿಳೆಯರೇ ಭಾಗವಹಿಸುತ್ತಾರೆ. ಬೆಳಗ್ಗೆ ಹತ್ತು ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಅವರು ತರಬೇತಿ ಕಾರ್ಯಕ್ರಮದಲ್ಲಿ ಹಾಜರಿರುತ್ತಾರೆ. ಅವರು ಗ್ರಾಮ ಸಭೆಗಳನ್ನು, ವಾರ್ಡ್ ಸಭೆಗಳನ್ನು ಚೆನ್ನಾಗಿ ಮಾಡುತ್ತಾರೆ. ಮಾನ್ಯ ಕೃಷ್ಣ ಭೈರೇಗೌಡರು ಸಚಿವರಾಗಿದ್ದಾಗ ನಾನೇ, ಕೆಡಿಪಿ ಸಭೆಗಳಾಗಬೇಕು, ಗ್ರಾಮ ಪಂಚಾಯಿತಿ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಆಗಬೇಕು ಎಂದು ಒತ್ತಾಯ ಮಾಡಿದ್ದೆ. ಆಗ ನನ್ನ ದನಿಗೆ ಮಾನ್ಯ ಕೊಂಡಯ್ಯನವರು ಮತ್ತು ತಾವೆಲ್ಲರೂ ದನಿಗೂಡಿಸಿದಿರಿ. ಆಗ ಅವರು, 3 ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿಯಲ್ಲೇ ಕೆಡಿಪಿ ಸಭೆಯನ್ನು ಮಾಡಬೇಕು ಎಂದು ಹೇಳಿದ್ದರು. ಈಗ ಅನೇಕ ಕಡೆ ಕೆಡಿಪಿ ಸಭೆ ಆಗುತ್ತಿದೆ. ಆದರೆ ಅದು ವ್ಯವಸ್ಥಿತವಾಗಿ ಆಗುತ್ತಿಲ್ಲ. ಏಕೆಂದರೆ, ಅಧಿಕಾರಿಗಳ ಮೇಲೆ ಹಿಡಿತ ಇರುವಂತಹ ಪಂಚಾಯಿತಿ ಅಧ್ಯಕ್ಷರ ಸಂಖ್ಯೆ ಕಡಿಮೆ ಎಂದು ನಮಗನಿಸುತ್ತದೆ. ಅದಕ್ಕೋಸ್ಕರ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಅನುಭವದ ಸಾಮರ್ಥ್ಯ ಹೆಚ್ಚಾಗಬೇಕೆಂದು ಅವರಿಗೆ ತರಬೇತಿ ಕೊಡಲಾಗುತ್ತದೆ.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(728) 15-9-2021 7.00 DS-AK

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ನಾನು ಕುತೂಹಲಕ್ಕಾಗಿ ಹೇಳುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ಮಂಗಳೂರಿನಲ್ಲಿರುವಂತಹ ಒಂದು ಗ್ರಾಮ ಪಂಚಾಯಿತಿಯಲ್ಲಿ ೧೮ ವರ್ಷಗಳಿಂದ ಶೇಕಡ ನೂರರಷ್ಟು ತೆರಿಗೆಯನ್ನು ವಸೂಲಿ ಮಾಡುತ್ತಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವುದೋ ಗ್ರಾಮ ಪಂಚಾಯಿತಿ ಒಂದು ವರ್ಷಕ್ಕೆ ಶೇಕಡ ಒಂದೂವರೆಯಷ್ಟು ತೆರಿಗೆಯನ್ನು ವಸೂಲಿ ಮಾಡಿದೆ. ನಾನು ಅಧ್ಯಕ್ಷರಿಗೆ ಹೇಳಿದೆ, ಸದಸ್ಯರು ತೆರಿಗೆಯನ್ನು ಕಟ್ಟಿದ್ದರೆ ಶೇಕಡ ಎರಡರಷ್ಟು ಆಗುತ್ತಿತ್ತಲ್ಲಾ ಎಂದು ಹೇಳಿದೆ. ಅಂದರೆ, ಆಡಳಿತದ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡಂತಹ ಉದಾಹರಣೆಗಳು ನಮ್ಮ ಪಂಚಾಯಿತಿ ಪ್ರತಿನಿಧಿಗಳಲ್ಲಿ ಇದೆ. ನಾವು ಎಂ.ಎಲ್.ಸಿ.,ಗಳು ಗ್ರಾಮ ಪಂಚಾಯಿತಿಯಲ್ಲಿ ಕುಳಿತುಕೊಂಡು ಅವರಿಗೆ ಒಂದಿಷ್ಟು ಸಹಕಾರವನ್ನು ಕೊಟ್ಟರೆ ಅವರಿಗೂ ಶಕ್ತಿ ಬರುತ್ತದೆ ಎಂಬುದು ನನ್ನ ಅಭಿಪ್ರಾಯ. ನಮ್ಮ ಎಂ.ಎಲ್.ಎ.,ಗಳು ಗ್ರಾಮ ಪಂಚಾಯಿತಿಗಳಿಗೆ ಹೋಗುತ್ತಿದ್ದಾರೆ. ಆದರೆ ಪರಿಸ್ಥಿತಿ ಈ ರೀತಿ ಇದೆ ಎಂದು ತಮ್ಮೆಲ್ಲರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಇನ್ನು ವಾರ್ಡ್ ಸಭೆಗಳು, ಗ್ರಾಮ ಸಭೆಗಳು ಯಾವ ರೀತಿ ನಡೆಯುತ್ತಿದೆ ಎಂಬುದು ಗೊತ್ತಿದೆ. ಒಂದು ಮಾತು ಮಾತ್ರ ಸತ್ಯ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಂಚಾಯತ್‌ರಾಜ್ ಸಬಲೀಕರಣವಾದರೆ ಅದು ಸಮಾಜಕ್ಕೆ ಹಿತವಾಗುತ್ತದೆ ಎಂಬುದು ನಾವು ಕಂಡುಕೊಂಡಿರುವಂತಹ ಸತ್ಯ. ಅವೆಲ್ಲಾ ಒಟ್ಟಾಗಿ ಮಾಡುವಂತಹ ಅವಶ್ಯಕತೆ ಇದೆ. ಈಗ ತಾವೆಲ್ಲಾ ಪಿ.ಡಿ.ಓ. ಗಳು ನಮ್ಮ ಮಾತು ಕೇಳುತ್ತಿಲ್ಲ ಎಂದು ಹೇಳುತ್ತಿದ್ದೀರಿ. ಅಂತಹ ಘಟನೆಗಳು ಬಂದಾಗ ಎಲ್ಲಾ ಸರ್ಕಾರಗಳು ಕೂಡ ಅಲ್ಲೋ ಇಲ್ಲೋ ತಪ್ಪುಗಳಾದರೂ ನಾವು ಜನಪ್ರತಿನಿಧಿಗಳ ಪರವಾಗಿ ನಿಲ್ಲುತ್ತಿದ್ದೇವೆ. ನಾನು ಒಂದು ಗ್ರಾಮ ಪಂಚಾಯಿತಿಗೆ ಹೋಗಿದ್ದೆ, ಯಾವುದೋ ಒಂದು ಕಾರಣಕ್ಕೆ ಮಹಿಳಾ ಅಧ್ಯಕ್ಷರಿಗೆ ವಾಹನ ಸೌಲಭ್ಯ ಇರಲಿಲ್ಲ, ಅವರು ಬರುವುದಕ್ಕೆ ಸ್ವಲ್ಪ ತಡವಾಯಿತು. ನಾನು ಹೋಗಿ ಮೊದಲೇ ಕುಳಿತುಕೊಂಡಿದ್ದೆ. ಎಲ್ಲಾ ಸದಸ್ಯರು ಬಂದಿದ್ದರು. ಅಲ್ಲಿ ಪಿ.ಡಿ.ಓ. ಕೂಡ ಇದ್ದರು. ಆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಒಳಗೆ ಬಂದ ತಕ್ಷಣ ಇಡೀ ತಂಡ ಎದ್ದು ನಿಂತೆವು. ಏಕೆಂದರೆ, ಗ್ರಾಮ ಪಂಚಾಯಿತಿ ಅಧ್ಯಕ್ಷರು ಪ್ರಥಮವಾಗಿ ಸಭೆಗೆ ಬರುವಾಗ ಸರ್ಕಾರದ ಸಿಬ್ಬಂದಿಗಳು ಮತ್ತು ಅಲ್ಲಿರುವಂತಹ ವ್ಯವಸ್ಥೆಯಲ್ಲಿ ಇದು ಅವರಿಗೆ ನಾವು ಕೊಡಬೇಕಾಗಿರುವಂತಹ ಗೌರವ. ಅನೇಕ ಕಡೆ ಇದು ಅನುಷ್ಠಾನವಾಗುತ್ತಿಲ್ಲ. ಅದಕ್ಕೆ ಅನುಭವದ ಕೊರತೆಗಳು ಇರಬಹುದು ಎಂದು ನನಗನಿಸುತ್ತಿದೆ. ಹಾಗಾಗಿ ಗ್ರಾಮ

ಪಂಚಾಯಿತಿಗಳನ್ನು ಸಬಲೀಕರಣ ಮಾಡುವುದಕ್ಕೆ ಯಾವುದೇ ಅಧಿಕಾರಿಗಳಿಂದ ಲೋಪದೋಷವಾದರೆ ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ executive power ಕೊಟ್ಟಲ್ಲಿ ಆಟೊಮ್ಯಾಟಿಕ್ ಆಗಿ ಎಲ್ಲಾ ಸರಿ ಹೋಗುತ್ತದೆ. ಅದು ಇಲ್ಲದಿದ್ದರೆ ಯಾರೂ ಅಧ್ಯಕ್ಷರ ಮಾತು ಕೇಳುವುದಿಲ್ಲ. ನಾನು ಪಂಚಾಯಿತಿಗಳಿಗೆ ಭೇಟಿ ನೀಡಿದಾಗ ಕೆಲವು ಪಂಚಾಯಿತಿಗಳಲ್ಲಿ ಪಿ.ಡಿ.ಓ. ಅಧ್ಯಕ್ಷರಿಗೆ 'ನೀನು ಏನು ಮಾಡುತ್ತೀಯೋ ಮಾಡಿಕೋ ಹೋಗು' ಎಂದು ಹೇಳುತ್ತಾರೆ. ಇವತ್ತು ಪಿ.ಡಿ.ಓ.ಗಳಿಗೆ ಯಾರಿಗೆ ರಿಪೋರ್ಟ್ ಮಾಡುತ್ತೀರಿ ಎಂದು ಕೇಳಿದರೆ, ಈ ತಾಲ್ಲೂಕು ಪಂಚಾಯಿತಿ ಇ.ಓ. ಗೆ ಮಾಡುತ್ತೇನೆಂದು ಹೇಳುತ್ತಾರೆ. ಅಧ್ಯಕ್ಷರಿಗೆ ಅಲ್ಲ. ೨೫-೨೬ ಮಂದಿ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳು ಇರುತ್ತಾರಲ್ಲಾ, ಪ್ರತಿ ತಿಂಗಳು ಕಪ್ಪಕಾಣಿಕೆ ಕೊಟ್ಟ ಹಾಗೆ ತಾಲ್ಲೂಕು ಪಂಚಾಯಿತಿ ಇ.ಓ. ಗೆ ಸುಮಾರು ಹತ್ತು ಸಾವಿರ ರೂಪಾಯಿ ಕೊಡುತ್ತಾರೆ. ಅವನಿಗೆ ಸುಮ್ಮನೆ ಮನೆಯಲ್ಲಿ ಕುಳಿತರೂ ಸುಮಾರು ಎರಡೂವರೆ ಲಕ್ಷ ರೂಪಾಯಿ ಬರುತ್ತದೆ. ಇವರು ತಾಲ್ಲೂಕು ಪಂಚಾಯಿತಿ ಇ.ಓ. ಗೆ ದೂರು ಕೊಡಬೇಕು. ಆದರೆ, ಅವನು ಕೇರ್ ಮಾಡುವುದಿಲ್ಲ. ಕೇರಳದಲ್ಲಿ executive power ಕೊಟ್ಟಿದ್ದಾರೆ. Executive power ಕೊಡಬೇಕೆಂದು ನಮ್ಮ ಆಕ್ಟ್‌ನಲ್ಲಿದೆ. ಆದರೆ ಸರ್ಕಾರ ಅನುಷ್ಠಾನ ಮಾಡುತ್ತಿಲ್ಲ. Executive power ಕೊಟ್ಟರೆ ಆಟೊಮ್ಯಾಟಿಕ್ ಆಗಿ ಪಿ.ಡಿ.ಓ. ಅಧ್ಯಕ್ಷರು ಹೇಳಿದ ಹಾಗೆ ಕೇಳುತ್ತಾರೆ. ಮಂಡಲ ಪಂಚಾಯಿತಿಯಲ್ಲಿ, ಜಿಲ್ಲಾ ಪಂಚಾಯಿತಿಯಲ್ಲಿ ಇತ್ತು. ಗ್ರಾಮ ಪಂಚಾಯಿತಿ ಬಂದ ಮೇಲೆ ಅದನ್ನು dilute ಮಾಡಿದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರು ಹೇಳಿರುವುದನ್ನು ಮತ್ತು ವಿರೋಧ ಪಕ್ಷದ ನಾಯಕರು ಹೇಳಿರುವುದನ್ನು ಗಮನಿಸಿದ್ದೇವೆ. ಗೌರವಧನವನ್ನು ದುಪ್ಪಟ್ಟು ಮಾಡುವುದಕ್ಕೆ ಕ್ರಮ ಕೈಗೊಳ್ಳಿ ಎಂದು ಹೇಳಿದ್ದಾರೆ. ನಾವು ಈಗಾಗಲೇ ಹಣಕಾಸು ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇವೆ. ನನಗೆ ವಿಶ್ವಾಸ ಇದೆ, ಆದಷ್ಟು ಬೇಗ ಅದನ್ನು ಹೆಚ್ಚು ಮಾಡುವಂತಹ ಕೆಲಸ ಮಾಡುತ್ತೇವೆ. ಬಸ್ ಪಾಸ್ ಬಗ್ಗೆ ಕೆ.ಎಸ್.ಆರ್.ಟಿ.ಸಿ.ಯವರ ಜೊತೆ ಮಾತನಾಡಿ ಏನು ಮಾಡಬೇಕೆಂದು ಯೋಚನೆ ಮಾಡೋಣ. ತಾಲ್ಲೂಕು ಮಟ್ಟದಲ್ಲಿ ಮಾಡುವುದು ಒಳ್ಳೆಯದು ಅನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ನಾನು ಸಲಹೆ ಕೊಡುವುದೇನೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ೨೫ ಜನ ಸದಸ್ಯರನ್ನು ಕರೆದು ಸಭೆ ಮಾಡಿದರೆ ಒಳ್ಳೆಯದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಸದನ ಮುಗಿದ ತಕ್ಷಣ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ೨೫ ಜನ ಸದಸ್ಯರ ಒಂದು ಸಭೆಯನ್ನು ಸ್ಥಳೀಯ ಸಂಸ್ಥೆ ಚುನಾವಣೆ ಘೋಷಣೆ ಆಗುವುದಕ್ಕಿಂತ ಮುಂಚೆ ಕರೆಯುತ್ತೇವೆಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ.

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗುವುದು.

**(ಸದನವು ಸಂಜೆ 7 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:16ನೇ ಸೆಪ್ಟೆಂಬರ್ ಮಾಹೆ 2021 ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"